ಡಿಗರ ಮನೆ ಮನೆಯ ವಾರಪತ್ರಿಕೆ 21-6-92, ರೂ. 4-50



ಈ ವಾರದ

ಸಂಪೂರ್ಣ ಕಾದಂಬರಿ

ನವಜೀವನ ಗಾನ

ಸದಾನಂದ

ರಾಗಸಂಗಮ

ಕನ್ನಡಿಗರ ಮನೆ ಮನೆಯ ವಾರಪತ್ರಿಕೆ

ಸಂಗಮ : 15 | 21–6–92 | ರಾಗ : 17

ಕಾದಂಬರಿ ವಿಭಾಗ

	ಪುಟ
ಸದಾನಂದ ಅವರ ನವಜೀವನ ಗಾನ	6

ಮ್ಯಾಗಜಿನ್ ವಿಭಾಗ

	ಪುಟ
ಯು. ವಿ. ತಾರಿಣಿ ರಾವ್ ಚೈತ್ರ ಚಂದನ –ಧಾರಾವಾಹಿ–೬	84
ಎಚ್. ಕೆ. ಅನಸೂಯ ಸಂಪತ್ ಚಿನ್ನದ ಪುತ್ಥಳಿ –ಧಾರಾವಾಹಿ–೧೪	90
ಜೆ.ಕೆ. ಪ್ರಭಾಕರ್ / ಕಲ್ಯಾಣಿ ಮೂರ್ತಿ ರಾಮನಾಥಪುರ ಸ್ವಚ್ಛಂದ ಸ್ವಪ್ನಗಳು –ಧಾರಾವಾಹಿ–೨೧	98
ಬಿ. ಆರ್. ಕುಲಕರ್ಣಿ ಅನಿರೀಕ್ಷಿತ – ಸಣ್ಣ ಕತೆ	82

ಸ್ಥಿರ ಶೀರ್ಷಿಕೆಗಳು	ಪುಟ
ರಂಗೋಲಿ	89
'ರಾಗಸಂಗಮ' ಲಾಟರಿ	95
ಕವನ	97
ಪ್ರಶ್ನೋತ್ತರ	104
ಮಕ್ಕಳ ಕಥೆ	106
ಸಿನಿಮಾ	108
ಕ್ರೀಡಾಂಗಣ	111
ನಿಮ್ಮ ಭವಿಷ್ಯ	112
ನಿಮ್ಮ ಪತ್ರಗಳು	114

ಪ್ರಧಾನ ಸಂಪಾದಕ ಎನ್. ಸುಂದರ್ ರಾಜನ್	ಕಲೆ ಜೆ...
ಸಂಪಾದಕಿ ಕಮಲಾ ಸುಂದರ್ ರಾಜನ್	ಮುಖಪುಟ ಅಂಜನಾ
ಸಹಾಯಕ ಸಂಪಾದಕಿ ಎಸ್. ರೇಖಾ	ವರ್ಣ ಪಾರದರ್ಶಿಕೆ ಕೆ. ಪ್ರವೀಣ ನಾಯಕ್

ಸಂಗಮ ಪ್ರಕಾಶನ


ಅಂಚೆ ಪೆಟ್ಟಿಗೆ 6646,
41, ಕೋಟೆ 'ಬಿ' ಬೀದಿ
ಬೆಂಗಳೂರು–560 002
ದೂರವಾಣಿ : 625004

ಅಂಚೆ ವೆಚ್ಚ ಸೇರಿದ ಚಂದಾ ವಿವರ

52 ಸಂಚಿಕೆಗಳು (1 ವರ್ಷ)	ರೂ. 225
26 ಸಂಚಿಕೆಗಳು (6 ತಿಂಗಳು)	ರೂ. 117
13 ಸಂಚಿಕೆಗಳು (3 ತಿಂಗಳು)	ರೂ. 60
ಬಿಡಿ ಪ್ರತಿಯ ಬೆಲೆ	ರೂ. 4.50

ಕಾದಂಬರಿ

ವಿಭಾಗ



ಸದಾನಂದ

ಸಂಪೂರ್ಣ ಕಾದಂಬರಿ

ಸದಾನಂದ

ನವಜೀವನ ಗಾನ



"ನಮ್ಮಿಬ್ಬರ ನಡುವೆ ಸಾಕಷ್ಟು ವಯಸ್ಸಿನ ಅಂತರವಿದೆ. ಆದರೆ ನಾವು ಒಬ್ಬರನ್ನೊಬ್ಬರು ಬಯಸಿದೆವು. ಅವಳು ಈ ದೇಶವನ್ನೂ ಬಿಟ್ಟು ಹೋಗಬಹುದು. ನಾನು ಅವಳಿಗಾಗಿ ನನ್ನ ಹೆಂಡತಿ ಮಗನನ್ನು ಬಿಟ್ಟು ಹಿಂದೆ ಹೋಗಬೇಕಾದೀತು.''

"ನೀವು ನನ್ನನ್ನು ಎಂದೂ ವಂಚಿಸುವುದು ಸಾಧ್ಯವಿಲ್ಲ. ನಿಮ್ಮ ಕಳ್ಳಪ್ರೇಮವನ್ನು ನಾನು ಪ್ರತ್ಯಕ್ಷ ಪ್ರಮಾಣಿಸಿ ಕಂಡುಕೊಂಡಿದ್ದೇನೆ. ಆದರೆ ನಾವು ನಮ್ಮ ಮಗನಿಗಾಗಿ ಇನ್ನು ಮುಂದೆಯೂ ಗಂಡ ಹೆಂಡಿರಾಗಿಯೇ ನಟಿಸೋಣ.''





"ನಾನು ಸಾಯುತ್ತಿದ್ದೇನೆ. ನಾನು ನಿಮ್ಮ ನಡುವೆ ಬರಬಾರದಿತ್ತು. ಪ್ರಿಯಾ ನನಗೊಂದು ಮಾತು ಕೊಡಿ. ನನ್ನ ವಿಷಯವಾಗಿ ನೀವು ರೋಹಿತ್‌ನೊಡನೆ ಎಂದೂ ಜಗಳವಾಡುವುದಿಲ್ಲ ಎಂದು.''

ಈ ಪ್ರಮುಖ ಪಾತ್ರಗಳ ಕಥೆಯೇ ಈ ಕಾದಂಬರಿ.

ಹೆಡ್‌ಮಾಸ್ತರ್ ಮೇಜಿನ ಮೇಲಿರುವ ಗಡಿಯಾರದ ಕಡೆ ಕಣ್ಣು ಹೊರಳಿಸಿದರು. ಗಂಟೆ ಹನ್ನೆರಡನ್ನು ಸಮೀಪಿಸುತ್ತಲಿದೆ. ಒಂದಿಷ್ಟು ವಿರಮಿಸಲು ಹೊತ್ತು. ಬೆಳಿಗ್ಗೆಯೆಲ್ಲ ತುಂಬ ಕೆಲಸವಾಗಿತ್ತು. ಆದೊಂದು ಶಿಸ್ತಿನ ಶಾಲೆಯೆಂದು ಹೆಸರು ಪಡೆದಿದ್ದರೆ ಅದು ಹೆಡ್‌ಮಾಸ್ತರ್ ಅವರ ಶ್ರಮದಿಂದಲೇ ಆಗಿತ್ತು. ಅದು ಅವರಿಗೂ ಗೊತ್ತು. ಬಾಗಿಲ ಬಳಿ ಯಾರೋ ನಿಂತಂತೆನಿಸಿ ಅತ್ತ ನೋಡಿದರವರು. ತೆಳ್ಳಗಿನ ಹುಡುಗನೊಬ್ಬ ನಿಂತಿದ್ದ. ಹನ್ನೆರಡು ವರ್ಷ ವಯಸ್ಸಿನವನು: ಅಪ್ಪಟ ಬಿಳಿಯ ಶರ್ಟ್ ಮತ್ತು ಆಕಾಶ ನೀಲಿಯ ಚಡ್ಡಿ. ಒಳ ಬರುವಂತೆ ಸನ್ನೆ ಮಾಡಿದರು ಹೆಡ್‌ಮಾಸ್ತರ್ ಅವನಿಗೆ.

"ಅಂದಹಾಗೆ ನಿನ್ನ ಹೆಸರು?'' ನೆನಪಿಸಿಕೊಳ್ಳಲೆತ್ನಿಸಿದರು ಹೆಡ್‌ಮಾಸ್ತರ್. "ಗೌತಮ್ ಎಂದಲ್ಲವೇ, ಹಾ ಹೌದು, ಏನು ಮಗೂ?''

"ತಮ್ಮ ಬಳಿ ಒಂದಿಷ್ಟು ಮಾತನಾಡಲಿಕ್ಕಿದೆಯೆಂದು ಬಂದೆ ಸರ್. ತಾವು ಅನುಮತಿ ಇತ್ತರೆ...''

"ಅಗತ್ಯವಾಗಿ. ಬಾ ಕೂತು ಮಾತಾಡು.''

ಗೌತಮ್‌ನ ಹೆಸರನ್ನವರು ತತ್‌ಕ್ಷಣವೇ ಜ್ಞಾಪಿಸಿಕೊಳ್ಳಲು ಕಾರಣ ಆತ ಈ ವರ್ಷದ ಕೊನೆಯಲ್ಲಿ ಆ ಶಾಲೆಯನ್ನು ಬಿಡಲಿದ್ದ ಬ್ಯಾಚಿನಲ್ಲಿನ ಬುದ್ಧಿವಂತ ವಿದ್ಯಾರ್ಥಿಯಾಗಿದ್ದುದು. ಆಟ ಪಾಟಗಳಲ್ಲಿ ಸಮಾನಾಸಕ್ತಿ ಬೆಳೆಸಿಕೊಂಡಿದ್ದವನು. ಅವನ ಕ್ಲಾಸ್ ಟೀಚರ್ ಮೂಲಕ ತಿಳಿದಿತ್ತವರಿಗೆ ಆತ ಜಾಣ ವಿದ್ಯಾರ್ಥಿಯೆಂದು. ಎಂದೇ ಹೆಡ್‌ಮಾಸ್ತರ್ ಮತ್ತವರ ಪತ್ನಿಗೂ ಗೌತಮ್ ಬಗ್ಗೆ ಪ್ರೀತಿಗೆ ಹತ್ತಿರವಾದ ಭಾವನೆಗಳಿದ್ದುದು. "ಏನು ತೊಂದರೆ ಮಗು?'' ಕೇಳಿದರವರು ನಸುನಗುತ್ತ.

"ನಾನು ನನಗಾಗಿ ಬಂದದ್ದಲ್ಲ, ಭರತ್‌ಗಾಗಿ ಸರ್.'' ಹೆಡ್‌ಮಾಸ್ತರ್ ಅವರ ಹುಬ್ಬುಗಳು ಮೇಲೇರಿದುವು.

"ಯಾವ ಭರತ್, ಓಹ್ ಹೌದು.'' ಆ ಐದನೇ ಕ್ಲಾಸಿನಲ್ಲಿ ಕಲಿಯುತ್ತಿರೋ ಹುಡುಗನೇ?''

"ಹೌದು ಸರ್.''

"ಆದರೆ ನೀನು ಯಾಕಾಗಿ ಬರಬೇಕು ಆತನ ವಿಷಯವಾಗಿ ಕೇಳಲು ಎನ್ನುವುದೇ ನನಗೆ ಅರ್ಥವಾಗುವುದಿಲ್ಲ. ಅವ ತನ್ನ ವಿಷಯವನ್ನು ನೋಡಿಕೊಳ್ಳಲಾರನೇ?''

ಗೌತಮ್‌ನ ಮುಖ ಕೆಂಪೇರಿತು. ಮೊದಲೇ ಕೆಂಪು ಕೆಂಪಗಾದ ಮೈಬಣ್ಣದವನು ಗೌತಮ್. ನಾಚಿಕೊಂಡಾಗ ಮತ್ತೂ ಕೆಂಪಗಾಗಿ ಸುಂದರನಾಗಿ ಕಾಣುತ್ತಿರುವುದರಿಂದಲೇ ಇರಬೇಕು ಶಾಲೆಯ ಎಲ್ಲ ಶಿಕ್ಷಕ ವರ್ಗದವರೂ ಆತನನ್ನು ಮೆಚ್ಚಿಕೊಳ್ಳಲು ಕಾರಣ. ಹೆಡ್‌ಮಾಸ್ತರ್ ಅವರಿಗೆ ಅವನನ್ನು ಕಂಡಾಗಲೆಲ್ಲ ಅವನ ತಾಯಿಯ ನೆನಪೂ ಆಗುತ್ತದೆ. ಅವರಿಗೆ ಆಕೆಯ ಬಗ್ಗೆ ಒಳ್ಳೆಯ ಅಭಿಪ್ರಾಯವೇ ಇದೆ. ತುಂಬ ಚೆಂದದ ಮಹಿಳೆ. ಆದರೆ ಗೌತಮ್‌ನ ತಂದೆ ಗೌತಮ್‌ನ ವಿಷಯದಲ್ಲೆಂದೂ ತಲೆಕೆಡಿಸಿಕೊಂಡವರಲ್ಲ ತಾಯಿಯಷ್ಟು ಆಕೆಯೇ ತನ್ನ ಮಗನ ವಿಷಯವಾಗಿ ಮಾತನಾಡಲು ಶಾಲೆಗೆ ಬರುವುದು.

ಗೌತಮ್ ಹೇಳಿದ. "ಹೌದು ಸರ್, ಅವನ ವಿಷಯವಾಗಿ ಹೇಳಲು ನಾನು

ಬರಬಾರದು. ಅವನೇ ಬರಬೇಕಾಗಿತ್ತು. ಆದರೆ ಅವನಿಗೆ ತಮ್ಮ ಬಳಿ ಮಾತನಾಡಲು ಸಂಕೋಚ ಸರ್. ಅದಕ್ಕಾಗಿ ಅವ ನನ್ನನ್ನು ಕಳಿಸಿದ್ದಾನೆ.''

"ಇರಲಿ, ವಿಷಯ ಏನೆಂದು ಹೇಳು?''

"ತಮಗೆ ಗೊತ್ತಿರಬಹುದು ಸರ್, ಭರತ್‌ನ ತಂದೆ ತಾಯಿ ಬೇರೆಯಾಗಿದ್ದಾರೆ. ಅದು ಅವನನ್ನೊಂದಿಷ್ಟು ಘಾಸಿಗೊಳಿಸಿದೆ ಅವನ ಮನಸ್ಸನ್ನು.''

ಅದು ಹೆಡ್‌ಮಾಸ್ತರ್ ಅವರಿಗೂ ತಿಳಿದ ವಿಷಯವಾಗಿತ್ತು. ಭರತ್‌ನ ತಂದೆ ತಾಯಿ ಕಾನೂನು ರೀತ್ಯಾ ಬೇರೆಯಾದುದು. ಅದು ಮಕ್ಕಳ ಮನಸ್ಸಿನ ಮೇಲೆ ಯಾವ ಪರಿಣಾಮವನ್ನುಂಟು ಮಾಡುತ್ತದೆನ್ನುವುದನ್ನು ಅವರು ಅರ್ಥ ಮಾಡಿಕೊಳ್ಳದವರೇನಲ್ಲ. ಭರತ್ ಕ್ಲಾಸಿನಲ್ಲಿ ಕಲಿಯುವುದರಲ್ಲಿ ಹಿಂದೆ ಉಳಿದಿರುವುದಕ್ಕೆ ಇದೇ ಆಗಿದೆ. ಪ್ರಮುಖವಾದ ಕಾರಣ ಎನ್ನುವುದನ್ನವರು ಅರ್ಥಮಾಡಿಕೊಂಡಿದ್ದರು. ಮುರಿದ ಮನೆಯಿಂದ ಬಂದ ಹುಡುಗನಾಗಿದ್ದ ಕಾರಣ ಕ್ಲಾಸಿನಲ್ಲಿ ಕೂಡ ಅವನ ನಡವಳಿಕೆಗಳು ಅಷ್ಟು ತೃಪ್ತಿದಾಯಕವಾಗಿರಲಿಲ್ಲ. ಆದರೆ ಆಟಗಳಲ್ಲಿ ಸದಾ ಮುಂದೆ ಇರುವವನು. ಅವನ ತಂದೆ ಹಿಂದೆ ಒಮ್ಮೆ ಬಂದು ಹೆಡ್‌ಮಾಸ್ತರ್ ಜೊತೆ ಮಾತನಾಡಿದ್ದರು. ಮಾತಿನ ಮಧ್ಯೆ ತಾವಿಬ್ಬರೂ ಅಂದರೆ ಗಂಡ ಹೆಂಡತಿ ಬೇರೆಯಾಗಲಿದ್ದ ವಿಚಾರವಾಗಿ ಹೇಳಿದ್ದರು. ಆಕೆ ಬೇರೊಬ್ಬನ ಜೊತೆ ಸ್ನೇಹವಿದೆ ಎನ್ನುವುದಾಗಿತ್ತು ಆತ ಕೊಟ್ಟ ಕಾರಣ. ನಿಜವೋ ಸುಳ್ಳೋ ಯಾರು ಬಲ್ಲರು?

"ಹುಂ ಹೇಳು, ಭರತ್ ಏನು ಮಾಡಿದ, ಏನಂತೆ ಅವನಿಗೆ?'' ಕೇಳಿದರವರು ಗೌತಮ್‌ನನ್ನು.

"ಅವ ಏನು ಹೇಳಿದನೆಂದರೆ ತಾವು ಅವನ ತಂದೆ ತಾಯಿಗೆ ಪತ್ರ ಬರೆದು ಹಾಗೆ ಬೇರೆಯಾಗಬಾರದೆಂದು ತಿಳಿಸಬೇಕಂತೆ ಸರ್. ಅವ ಅವರಿಬ್ಬರನ್ನೂ ಸಮಾನವಾಗಿ ಪ್ರೀತಿಸ್ತಾನೆ ಸರ್. ಅವರಿಬ್ಬರನ್ನೂ ಜೊತೆಯಾಗಿ ಕಾಣಲು ಮತ್ತು ಅವರಿಬ್ಬರೊಂದಿಗೂ ಬದುಕಲು ಇಚ್ಛಿಸ್ತಾನೆ ಸರ್ ಅವನು.''

"ನಾನೇನಾದರೂ ಹೇಳಿದೆನೆಂದರೆ ನನಗೆ ಬೈದುಬಿಟ್ಟಾರು ಆತ.'' ಹೆಡ್‌ಮಾಸ್ತರ್ ವಿಷಾದದ ನಗೆ ನಕ್ಕರು. "ಅವರು ನನ್ನ ಮಾತನ್ನು ಕೇಳುತ್ತಾರೆನ್ನುವುದರಲ್ಲಿ ನನಗೆ ವಿಶ್ವಾಸವಿಲ್ಲ. ಒಮ್ಮೆ ನಾನವರಿಗೆ ಹೇಳಿಯೂ ಇದ್ದೆ, ಆತನ ತಂದೆಯ ಜೊತೆ. ಆದರೆ ಅವರು ಅದನ್ನು ತಲೆಗೆ ಹಾಕಿಕೊಳ್ಳಲಿಲ್ಲ. ಇದರಲ್ಲಿ ಅವನ ತಾಯಿಯದೂ ತಪ್ಪಿರಬೇಕೆನಿಸುತ್ತಿದೆ. ಆಕೆಯೇ ಮನೆ ಬಿಟ್ಟು ಹೋಗುತ್ತಾರಂತಲ್ಲವೇ?''

"ಹೌದು ಸರ್. ಆದರೆ ಭರತ್ ಹೇಳಿದ ಇನ್ನೂ ಬಿಟ್ಟು ಹೋಗಿಲ್ಲವಂತೆ ಅವರು ಮನೆಯನ್ನು. ಆದರೆ ಯಾವಾಗಲಾದರೂ ಬಿಡಬಹುದು ಎನ್ನುತ್ತಾನೆ. ಅದು ತುಂಬ ನೋವಿನ ಸಂಗತಿಯಾಗಿದೆ ಭರತ್ ಪಾಲಿಗೆ.''

"ಆದರೆ ಮನಸ್ಸುಗಳು ಒಡೆದುವೆಂದರೆ ಅವನ್ನು ಮತ್ತೆ ರಿಪೇರಿಸುವುದು ಸಾಧ್ಯವಾಗುವುದಿಲ್ಲ ಗೌತಮ್. ನೀನಿನ್ನೂ ಚಿಕ್ಕ ಹುಡುಗ. ನಿನಗಿದೆಲ್ಲ ಅರ್ಥವಾಗುವುದಿಲ್ಲ.''

"ಆದರೆ ಭರತ್ ತಮ್ಮನ್ನೇ ನಂಬಿಕೊಂಡಿದ್ದಾನೆ ಸರ್.''

"ಆಯ್ತು ಗೌತಮ್.'' ನಸುನಕ್ಕರು ಹೆಡ್‌ಮಾಸ್ತರ್. "ನನ್ನಿಂದ ಏನೆಲ್ಲ ಸಾಧ್ಯವೋ ಅದನ್ನಷ್ಟೆ ಮಾಡಬಲ್ಲೆ. ನಾನೇನು ಮಾಡುತ್ತೇನೆಂದರೆ ಭರತ್‌ನ ಮನದಾಳದ ನೋವಿನ

ಮಾತುಗಳನ್ನು ಅವನ ತಾಯಿಗೆ ತಲುಪಿಸುವ ಯತ್ನ ಮಾಡುತ್ತೇನೆ. ನಿನಗೆ ಗೊತ್ತಿಲ್ಲ ಅದರಿಂದ ಒಂದಿಷ್ಟು ಒಳ್ಳೆಯ ಪರಿಣಾಮವನ್ನು ನಿರೀಕ್ಷಿಸಬಹುದು.''

"ಥ್ಯಾಂಕ್ಸ್ ಸರ್'' ಎಂದ ಗೌತಮ್ ಎದ್ದುನಿಂತು ವಂದಿಸಿ ಸಮಾಧಾನದಿಂದ ಆ ಕೋಣೆಯನ್ನು ಬಿಟ್ಟು ಹೊರ ನಡೆದ.


ಹೆಡ್‌ಮಾಸ್ತರ್ ಅವರು ತಮ್ಮ ರಿವಾಲ್ವಿಂಗ್ ಚೇರಿನ ಮೇಲೆ ಕೂತು ಒಂದಿಷ್ಟು ಹೊತ್ತು ಆಚೆ ಈಚೆ ತೂಗಿಕೊಂಡರು. ಅವರಿಗೆ ಆಗ ಭರತ್‌ನ ತಂದೆ ತಾಯಿ ಬೇರೆಯಾಗುವ ವಿಷಯದಲ್ಲೇನಂಥ ಕನಿಕರವಾಗಲಿಲ್ಲ. ಬದಲಾಗಿ ನೆನಪಿಗೆ ಬಂದವರೆಂದರೆ ಗೌತಮ್ ತಾಯಿ ಮತ್ತು ತಂದೆ ಅವರೇನೂ ಹೆಡ್‌ಮಾಸ್ತರ್ ಅವರಿಗೆ ಅಂಥ ತಲೆನೋವು ತಂದವರಲ್ಲ.

ಗೌತಮ್‌ನ ತಾಯಿ ತನ್ನ ಮಗನ ವಿಷಯವಾಗಿ ಕೇಳಿಕೊಂಡು ಶಾಲೆಗೆ ಬಂದು ಅವರನ್ನು ಕಂಡಾಗಲೆಲ್ಲ ಒಂದು ಬಗೆಯ ಆಕರ್ಷಣೆಗೊಳಗಾಗಿದ್ದರವರು. ಆಕೆ ತುಂಬ ಜಾಣೆಯಾಗಿದ್ದಳಲ್ಲದೆ ತನ್ನ ಮಗನ ವಿಷಯದಲ್ಲಿ ತುಂಬ ಕಾಳಜಿ ವಹಿಸುತ್ತಿದ್ದಳು. ಅವರು ಅದನ್ನು ಗುರುತಿಸಿಕೊಂಡಿದ್ದರು. ಅಂದಹಾಗೆ ಆಕೆಯ ಹೆಸರು ಪ್ರಿಯಾ ಎಂದಲ್ಲವೇ?

* * * * *

ಪ್ರಿಯಾಗೆ ಆಕೆಯ ಅತ್ತೆಯ ಟೆಲಿಫೋನ್ ಕರೆ ಬಂದಿತೆಂದರೆ ಅವೇ ಮಾತುಗಳಿಂದ ಆರಂಭಗೊಳ್ಳುತ್ತಿತ್ತು ಸಂಭಾಷಣೆ. "ಓಹ್ ಪ್ರಿಯಾ, ದಯವಿಟ್ಟು ಸ್ವಲ್ಪ ಈಕಡೆ ಬರ್ತೀಯಾ ನನ್ನನ್ನು ನೋಡಲು?'' ಎಂದು. ಅದರ ಅರ್ಥವೇನೆಂಬುದು ಪ್ರಿಯಾಗೆ ಚೆನ್ನಾಗಿ ಗೊತ್ತು. ಇಂಥ ಕರೆಗಳು ದಿನವೂ ಬರುತ್ತವೆ ಮುದುಕಿಯಿಂದ 'ಸ್ವಲ್ಪ ಹಣದೊಂದಿದೆ ಬರ್ತೀಯಾ' ಎನ್ನುವುದೇ ಆಗಿರುತ್ತದೆ ಅರ್ಥ. ಆದರೂ ಪ್ರಿಯಾಗೆ ಬೇಸರವೇನೂ ಆಗುವುದಿಲ್ಲ. ಯಾಕೆಂದರೆ ಆಕೆ ರೋಹಿತ್‌ನ ತಾಯಿಯಲ್ಲವೇ ಏನಿದ್ದರೂ. ಪ್ರಿಯಾಳನ್ನೂ ಚೆನ್ನಾಗಿ ಪ್ರೀತಿಸುವ ಮುದುಕಿ ಆಕೆ. ರೋಹಿತ್ ಪಾಲಿಗೆ ಆಕೆಯೊಬ್ಬಳು ಅರ್ಥಹೀನ ಮಾತುಗಳನ್ನಾಡುವ ಮುದುಕಿ. ಆದರೆ ಆತ ಹಾಗೆಂದಾಗಲೆಲ್ಲ ಮುದುಕಿಯ ಪರವಾಗಿ ವಾದಿಸುವವಳು ಪ್ರಿಯಾ. "ನಿಮ್ಮ ತಂದೆ ತೀರಿಕೊಂಡನಂತರ ಏಕಾಂಗಿಯಾಗಿ ಜೀವನ ಸವೆಸಿದ ಆಕೆಯ ಮಾನಸಿಕ ನೋವು ನೀವೇನು ಬಲ್ಲಿರಿ?'' ಎಂದು. ಆದಕ್ಕವ ತಣ್ಣಗೆ ಉತ್ತರಿಸುತ್ತಿದ್ದ. "ನೀನವಳ ಪಾಲಿಗೆ ದೇವತೆಯಾಗುತ್ತೀಯಾದರೆ ನನ್ನ ಅಭ್ಯಂತರವೇನಿಲ್ಲ. ಆದರೆ ನನಗೆ ಪುರುಸೊತ್ತಿಲ್ಲ.''

ರೋಹಿತ್‌ನ ರೀತಿಯೇ ಹಾಗೆ. ಬೇರೆಯವರ ಮಟ್ಟಿಗಾದರೂ ಅವನ ಬಳಿ ಸಮಯವಿದ್ದೀತು. ಆದರೆ ತಾಯಿಯ ಮಟ್ಟಿಗೆ ಇಲ್ಲ. ಆಕೆಯ ಅತ್ತೆಯನ್ನು ನೋಡಲು ಹೋಗುವಾಗ ಪ್ರಿಯಾ ಯೋಚಿಸಿದಳು ಎಂದಿನಂತೆ ತನ್ನ ಗಂಡನ ವಿಷಯವಾಗಿ. ಆಕೆಗೆ ಈಗಲೂ ಅದೇ ಭಾವುಕತೆಯಿದೆ ತನ್ನ ಗಂಡನ ಬಗ್ಗೆ. ಅದೇ ಹೊಸದಾಗಿ ಮದುವೆಯಾಗಿದ್ದಾಗ ಇದ್ದಂತೆ ಅವನ ಸುಂದರ ನಿಲುವಿನ ಒಳಗೆ ಇರುವ ಕರಗದ ಸ್ವಪ್ರತಿಷ್ಠೆ, ಹುಚ್ಚು ಆತ್ಮವಿಶ್ವಾಸಗಳೇ ಆಕೆಗೆ ಆಗದುದೆಂದರೆ. "ನನಗೆ ಗೊತ್ತಿದೆ ನೀನೇನು ತಿಳಿದುಕೊಂಡಿದ್ದೀ ನನ್ನ ಬಗ್ಗೆ ಎಂದು. ಆದರೂ ನನ್ನನ್ನು ಪ್ರೀತಿಸುವುದನ್ನು ಮರೆಯಬೇಡ ಪ್ರಿಯಾ'' ಎನ್ನುವವ ಆತ. ಆದರೆ ಪ್ರಿಯಾ ಮನಸ್ಸಿನಲ್ಲಿಯೇ ಆತನನ್ನು ಪ್ರೀತಿಸುತ್ತಲಿದ್ದಾಳಾದರೂ ಅದನ್ನೆಂದೂ ಬಹಿರಂಗವಾಗಿ ತೋರಿಸಿದವಳಲ್ಲ. ಯಾಕೆಂದರೆ ಗಂಡಸರ ಗುಣ ಅವಳಿಗೆ ಗೊತ್ತಿತ್ತು. ಅವರೊಂದಿಗೆ ಮಿತವಾಗಿ ವ್ಯವಹರಿಸಿದರಷ್ಟೇ ಆಕರ್ಷಣೆಯನ್ನು ಉಳಿಸಿಕೊಳ್ಳಬಹುದು ಸ್ತ್ರೀ ಎಂದು.



ಕಾಲ ಬದಲಾಗುತ್ತಲೇ ಇರುತ್ತದೆ. ಹಾಗೇ ಅವರೂ ಬದಲಾದರು.

ಹದಿನಾಲ್ಕು ವರ್ಷಗಳಷ್ಟು ಹಿಂದೆಯೇ "ಅವರು ಪರಸ್ಪರರನ್ನು ಮೊದಲ ಬಾರಿಗೆ ಸಂಧಿಸಿದ್ದರು. ಪ್ರಿಯಾಗಿಂತ ನಾಲ್ಕು ವರ್ಷವಷ್ಟೇ ಹಿರಿಯನಾಗಿದ್ದ ರೋಹಿತ್. ಆಗ ಆಕೆ ತೀರಾ ತೆಳ್ಳಗಿದ್ದಳು. ಚೂಪಾದ ಗಡ್ಡ, ಉರುಟುರುಟಾದ ಸುಂದರ ಮುಖ. ದೊಡ್ಡ ಕಣ್ಣುಗಳು, ಕಡುಕಪ್ಪಗಿನ ತಲೆಗೂದಲು ಅನಂತರ ಪರಿಚಯವಾಯಿತು ಪರಸ್ಪರರಿಗೆ. ಪರಿಚಯ ಆತ್ಮೀಯತೆಗೆ ದಾರಿ ಮಾಡಿಕೊಟ್ಟಿತ್ತು. ಸಂಜೆಗಳಲ್ಲಿ ಇಬ್ಬರೂ ಜೊತೆಯಾಗಿಯೇ ಬೆಟ್ಟವನ್ನೇರಿ ಹೋಗಿ ಬರಲಾರಂಭಿಸಿದರು. ಎಂಥ ಪ್ರೀತಿಯಾಗಿತ್ತದು! ಪ್ರತಿದಿನವೂ ಬರುವಾಗ ಗಮಗಮಿಸುವ ಮಲ್ಲಿಗೆ ಹೂವನ್ನು ತರುತ್ತಿದ್ದನವ ಆಕೆಗಾಗಿ.

ದೀರ್ಘವಾದ ಪತ್ರಗಳನ್ನು ಬರೆದಳಾಕೆ ತನ್ನ ತಂದೆಗೆ. ತಾಯಿ ತೀರಿಕೊಂಡನಂತರ ಮರು ಮದುವೆಯಾಗಿ ನೇಜಾರು ಹಿಲ್ಸ್‌ನಲ್ಲಿ ವಾಸವಾಗಿದ್ದ ಬೇರೆಯೇ ಆದ ಸಂಸಾರ ಹೂಡಿದ್ದ ತಂದೆ ಆಕೆಯ ಪತ್ರವನ್ನು ಹೇಗೆ ಸ್ವೀಕರಿಸಿದರೋ. ಅಪರೂಪಕ್ಕೊಮ್ಮೆಯಷ್ಟೆ ಬರೆಯುತ್ತಿದ್ದರು. ಒಪ್ಪಿಗೆಯಂತೂ ಸಿಕ್ಕಿತ್ತು ಪ್ರಿಯಾಗೆ ರೋಹಿತ್‌ನನ್ನು ಮದುವೆಯಾಗಲು. ರೋಹಿತ್ ಕಡೆಯಿಂದ ಯಾವುದೇ ವಿರೋಧವಿಲ್ಲದ್ದರಿಂದ ಮದುವೆ ನಡೆದೂ ಹೋಯಿತು ಸರಳವಾಗಿ. ಮದುವೆಯನಂತರ ಸಂಸಾರ ಹೂಡಿದರು ಕರಿಕಲಂನಲ್ಲಿ. ಮೊದಲಿಗೆ ಹುಟ್ಟಿದವನು ಗೌತಮ್. ಬದುಕು ಸರಳವಾಗಿತ್ತು ಮತ್ತು ಸುಂದರವಾಗಿತ್ತು ಗೌತಮ್ ಹುಟ್ಟಿದ ಮೂರು ವರ್ಷಗಳನಂತರ ಗೌರಿ ಹುಟ್ಟುವವರೆಗೆ. ಒಂದು ವರ್ಷದ ಹೆಣ್ಣು ಮಗು ಗೌರಿ ಒಂದು ದಿನ ಹಠಾತ್ ತೀರಿಕೊಂಡಾಗ ಬದುಕೆಲ್ಲ ಕತ್ತಲೆಯಲ್ಲೇ ಕೆಡವಲ್ಪಟ್ಟಿತ್ತು ಆ ದಂಪತಿಗಳದು. ಗೌರಿಯ ನೆನಪನ್ನಂತೂ ಅವರಿಬ್ಬರಿಂದಲೂ ತಳ್ಳಿ ಹಾಕಲು ಸಾಧ್ಯವಾಗದೇ ಹೋಯಿತು. ಅದರಲ್ಲೂ ರೋಹಿತ್ ಸದಾಕಾಲ ಗೌರಿಯನ್ನು ನೆನೆಸಿಕೊಂಡು ಅಳುತ್ತ ಕೊಡುವುದನ್ನು ಪರಿಪಾಠವಾಗಿಸಿಕೊಂಡ. ಹಾಗೇ ಗೌತಮ್‌ನನ್ನು ನಿರ್ಲಕ್ಷಿಸಲಾರಂಭಿಸಿದ್ದ. ಇದು ತಾಯಿಯಾದ ಪ್ರಿಯಾಗೆ ಗಾಯದ ಮೇಲೆ ಬರೆಯೆಳೆದ ಅನುಭವವನ್ನುಂಟು ಮಾಡಿತು. ಗೌರಿಯ ಸಾವಿಗೆ ತಾಯಿ ಪ್ರಿಯಾಳೇ ಕಾರಣ ಎನ್ನುವವನಂತೆ ಆತ ನಡೆದುಕೊಂಡಿದ್ದೂ ಇತ್ತು. ಅದು ಇನ್ನಷ್ಟು ದುಃಖದ ಸಂಗತಿಯಾಗಿತ್ತು ಪ್ರಿಯಾಳ ಪಾಲಿಗೆ. ಹೀಗೆ ಅವರಿಬ್ಬರ ನಡುವೆ ಮೌನ ಹೆಪ್ಪುಗಟ್ಟಿತ್ತು ಎಷ್ಟೋ ವರ್ಷ. ಈಗ ಪ್ರಿಯಾ ಅದೆಲ್ಲವನ್ನೂ ಮರೆಯಲೆತ್ನಿಸಿ ಗೆದ್ದಿದ್ದಾಳೆ.

*   *   *   *   *

"ನೀನು ತುಂಬ ಸೊರಗಿದಂತೆ ಕಾಣ್ತಾ ಇದ್ದೀಯಲ್ಲ. ಯಾಕೆ ಹೀಗೆ?''

ಪ್ರಿಯಾ ಹಾಗೆ ಕೇಳಿದ ಅತ್ತೆಯ ಮುಖ ನೋಡದಾದಳು. ಅವರ ಕಣ್ಣುಗಳನ್ನು ಎದುರಿಸದಾದಳು. "ಹಾಗೇನಿಲ್ಲ, ಹೊರಗೆ ತುಂಬ ಬಿಸಿಲಿದೆಯಲ್ಲ ಅತ್ತೆ, ಹೀಗಾಗಿ ನಿಮಗೆ ಹಾಗೆ ಕಾಣಿಸುತ್ತಿರಬಹುದು ನಾನು ಬಳಲಿದವಳಂತೆ. ನಾನು ಆರೋಗ್ಯವಾಗಿಯೇ ಇದ್ದೇನೆ.''

"ನೀನು ಹೇಳುವುದು ನಿಜವೆಂದು ನಾನಂತೂ ನಂಬುವುದಿಲ್ಲ'' ಎಂದರು ಅತ್ತೆ ಆಕೆಯ ಬೆನ್ನು ತಟ್ಟುತ್ತ. ಇಬ್ಬರೂ ಕೂತು ಊಟ ಮುಗಿಸಿದರು. ಒಮ್ಮೆ ಅಂದರೆ ಪ್ರಿಯಾಳ ಅತ್ತೆಗೀಗ ಎಪ್ಪತ್ತೈದು ವರ್ಷಗಳಾಗಿರಬಹುದು ಖನಿದ್ದರೂ. ಆದರೆ ಬೊಜ್ಜು ಬೆಳೆಸಿಕೊಂಡುದರಿಂದ ಇನ್ನೂ ಹೆಚ್ಚು ವಯಸ್ಸಾದವರಂತೆ ಕಾಣುತ್ತಾರೆ. ಪ್ರಿಯಾಳ ಡ್ರೆಸಿಂಗ್ ರೂಮಿನಲ್ಲಿ ತೂಗು ಹಾಕಿದ್ದ ಆ ಫೋಟೋದಲ್ಲಿದ್ದ ಅಂಬುಜಮ್ಮನವರೇ ಇವರು ಎಂದು ಯಾರಾದರೂ ಆಶ್ಚರ್ಯ

ವಕೀಲ

ಒಮ್ಮೆ ಇತ್ತ
ಇನ್ನೊಮ್ಮೆ ಅತ್ತ
ಹೀಗೇಯೇ ನಿರಂತರ
ತೂಗುವ ಶೆಟ್ಟರ
ಅಂಗಡ್ಯಾಗಿನ
ತಕ್ಕಡಿ ಇದ್ದಂತೆ.

— ಬಿ. ಜಿ. ಗಾಣಿಗೇರ



ವ್ಯಕ್ತಪಡಿಸಲೇಬೇಕು. ಅದೇ ತಾನೆ ಮದುವೆಯಾದ ಹೊಸತರಲ್ಲಿ ಆಕೆ ತನ್ನ ಗಂಡ ಅರ್ಥಾತ್ ರೋಹಿತ್‌ನ ತಂದೆಯೊಡನೆ ನಿಂತು ತಗೆಸಿದ ಫೋಟೋ ಅದು. ಆಗ ಎಷ್ಟೊಂದು ರೂಪವಂತೆಯಾಗಿದ್ದರು ಅಂಬುಜಮ್ಮ.

ಒಂದಿಷ್ಟು ಹೊತ್ತು ತನ್ನ ಅತ್ತೆಯೊಂದಿಗಿದ್ದ ಪ್ರಿಯಾ ಮರಳಿ ಬಂದಳು. ದಾರಿಯುದ್ಧಕ್ಕೂ ಅಂಬುಜಮ್ಮ ತನ್ನ ಮಗನ ಕುರಿತಾಗಿ ಹೇಳಿದ ಮಾತುಗಳನ್ನು ಮೆಲುಕು ಹಾಕುತ್ತಿದ್ದಳು. "ಅವನೇಕೆ ಬರುತ್ತಾನೆ ನನ್ನನ್ನು ನೋಡಲು? ಈ ಗಂಡು ಮಕ್ಕಳೆಂದರೆ ಹಾಗೆಯೇ. ಹೊತ್ತು ಹೆತ್ತು ಸಾಕಿ ದೊಡ್ಡವರನ್ನಾಗಿ ಮಾಡಿದ ತಂದೆ ತಾಯಿಯನ್ನು ಮರೆತುಬಿಡುತ್ತಾರೆ ಹೆಂಡತಿಯೊಬ್ಬಳು ಸಿಕ್ಕಿದ ತಕ್ಷಣದಿಂದ. ಆದರೆ ನನ್ನ ಅದೃಷ್ಟ ಈಗಿನ ಕಾಲದ ಎಲ್ಲ ಸೊಸೆಯಂತಲ್ಲ ನೀನು. ನನ್ನ ಮೇಲಿನ್ನೂ ಪ್ರೀತಿ ಇರಿಸಿಕೊಂಡಿದ್ದೀ. ನಾನೇ ಹೆರದ ಮಗಳಿಗಿಂತ ಹೆಚ್ಚಾಗಿ'' ಎಂದಳು.

ಮನೆ ತಲುಪಿದಾಗ ರೋಹಿತ್ ಇರಲಿಲ್ಲ. ಇನ್ನೂ ಬಂದಿರಲಿಲ್ಲ. ಸಂಜೆ ತಡವಾಗಿ ಬಂದ. ಅಷ್ಟು ಹೊತ್ತಿಗಾಗಲೇ ಪ್ರಿಯಾ ಸ್ನಾನ ಮಾಡಿ ಡ್ರೆಸ್ ಮಾಡಿ ಕೂತಿದ್ದಳು. ಬಂದ ಕೂಡಲೇ ಆತನಿಗೆ ನೆನಪಿಸಿದಳು. "ನಿಮಗೆ ನೆನಪಿದೆಯಲ್ಲ ನಾವಿವತ್ತು ಅನಂತ್ ಮನೆಗೆ ಡಿನ್ನರ್‌ಗೆ ಬರುತ್ತೇವೆಂದು ಒಪ್ಪಿಕೊಂಡದ್ದು'' ಎಂದಳು. ರೋಹಿತ್ ತಲೆಯಾಡಿಸಿದ. "ನಾನಿನ್ನೂ ಶೇವ್ ಮಾಡಿಕೊಂಡಿಲ್ಲ. ಎಷ್ಟು ಬೇಗ ಇಡುತ್ತಾರವರು ಡಿನ್ನರ್.''

"ಅನಂತ್ ನಮ್ಮಂತಲ್ಲ ಗೊತ್ತಾ.'' ಪ್ರಿಯಾ ಛೇಡಿಸಿದಳು. "ಒಬ್ಬ ಕುಕ್ ಇಟ್ಟುಕೊಂಡಿದ್ದಾರವರು. ಮತ್ತೆ ಆ ಕುಕ್‌ಗೆ ಏನು ಆಸೆ ಇರುತ್ತದೆಯೆಂದರೆ ಬೇಗ ಅಡುಗೆ ಕೆಲಸ ಮುಗಿಸಿ ರಾತ್ರಿ ಒಂಬತ್ತರ ಹೊತ್ತಿಗೆಲ್ಲ ರೆಡಿಯಾಗಿ ನಿಲ್ಲುತ್ತಾಳೆ. ತನಗೆ ಪ್ರಿಯವಾದ ಟೀವಿ ಸೀರಿಯಲ್ ನೋಡಲು.''

"ಆದರೆ ನಿನಗೆ ಆ ಹುಚ್ಚು ಇಲ್ಲವಲ್ಲ?''

"ನನ್ನನ್ನೇನು ನೀವು ನಿಮ್ಮ ಕುಕ್ ಎಂದು ಅಂದುಕೊಂಡಿರಾ?'' ಹುಸಿ ಮುನಿಸು ತೋರಿದಳು ಪ್ರಿಯಾ. "ನೀವು ಅದೃಷ್ಟವಂತರೆನ್ನಬೇಕು. ಹಾಗಾದರೆ ಇಷ್ಟೊಂದು ಸಹನೆಯ ಕುಕ್‌ಳನ್ನು ಪಡೆದದ್ದಕ್ಕೆ.''

"ನೀನು ಕುಕ್ ಮಾತ್ರವಲ್ಲ, ಆಲ್ ಇನ್ ಒನ್.'' ತುಂಟ ನಗು ನಕ್ಕನವ. ತುಂಬ

ದಿನಗಳನಂತರ ನೋಡಿದ್ದು ಆಕೆ ಅತ ಅಷ್ಟು ಗೆಲುವಾಗಿರುವುದನ್ನು.

ಅನಂತ್ ಮನೆಯಲ್ಲಿ ಡಿನ್ನರ್ ಮುಗಿದಾದನಂತರ ಆ ದಂಪತಿಗಳೊಂದಿಗೆ ಬ್ರಿಜ್ ಆಡಲು ಕೂತರು ಪ್ರಿಯಾ ಮತ್ತು ರೋಹಿತ್. ಅನಂತ್ ಮತ್ತವನ ಹೆಂಡತಿ ಗಾಯತ್ರಿ ಒಳ್ಳೆ ಆಟಗಾರರು. ರೋಹಿತ್ ಅವರಿಬ್ಬರನ್ನೂ ಮೀರಿಸುವ ಆಟಗಾರ. ಆದರೆ ಪ್ರಿಯಾಗೆ ಸರಿಯಾಗಿ ಆಡಲಿಕ್ಕೇ ಬಾರದು. ಅವಳು ಆದಿನ ಆಡಿದ ಕೆಟ್ಟ ಆಟ ಆಕೆಯ ಗಂಡನನ್ನು ನಿರಾಶೆಯಲ್ಲಿಯೇ ಕೆಡವಿತೆನ್ನಬೇಕು.

ಮತ್ತೆ ತಮ್ಮ ಫ್ಲಾಟ್‌ಗೆ ಮರಳಿದ ಮೇಲೆ ಪ್ರಿಯಾ ತನ್ನ ಗಂಡನನ್ನು ಕೇಳಿದ ಮೊದಲ ಪ್ರಶ್ನೆಯೆಂದರೆ "ಯಾವಾಗ ಹೋಗುತ್ತೀರಿ ನೀವು ನಿಮ್ಮ ತಾಯಿಯನ್ನು ನೋಡಲು?" ಎಂಬುದಾಗಿತ್ತು.

"ಓಹ್ ಈಗ ನೀನು ಆ ಕುರಿತಾಗಿ ಒತ್ತಾಯಿಸಬೇಡ ನನ್ನ. ಹೀಗೇ ಒಂದು ದಿನ ಹೋಗಿ ಬಂದರಾಯಿತು" ಎಂದು ಬಟ್ಟೆ ಬದಲಿಸಲು ಹೋದ. ಪ್ರಿಯಾ ಒಳ್ಳೆಯ ಮೂಡ್‌ನಲ್ಲಿದ್ದಳು. ಹೋಗಿ ಅವನ ಹತ್ತಿರ ನಿಂತು ಬಿಟ್ಟಳು. ಆದರೆ ಆತನ ಪ್ರತಿಕ್ರಿಯೆಯೇನೂ ಕಾಣದಾದಾಗ ಮತ್ತುಷ್ಟು ಹತ್ತಿರ ಹೋಗಿ ಅವನನ್ನು ತಬ್ಬಿಕೊಂಡಳು. ಹಾಗೇ ಪ್ರತಿಯಾಗಿ ಆಕೆಯನ್ನು ತಬ್ಬಿಕೊಂಡವನ ಕಿವಿಗಳಲ್ಲಿ ಪಿಸುಗುಟ್ಟಿದಳು.

"ನನ್ನ ಈ ಸುಂದರ ಪತಿಗೆ ಯಾಕೆ ಭಾವನೆಗಳ ತೀವ್ರತೆಯೇ ಇಲ್ಲ?" ಎಂದು.

ಹಾಗೆಂದವಳ ತಲೆಗೂದಲಿನಲ್ಲಿ ಬೆರಳಾಡಿಸಿ ಕೆನ್ನೆಗೊಂದು ಮುತ್ತುಕೊಟ್ಟ ರೋಹಿತ್ ಹೇಳಿದ "ನೀನು ನಿಜಕ್ಕೂ ನನ್ನ ಚಿನ್ನ ಪ್ರಿಯಾ, ನನಗಾಗಿ ನೀನು ಮಾಡುತ್ತಿರುವ ತ್ಯಾಗ ಮತ್ತು ಜಗಳಗಂಟಿಯಾದ ನಮ್ಮ ತಾಯಿಯೊಂದಿಗೆ ಹೊಂದಿಕೊಂಡು ಹೋಗುತ್ತಲಿರುವ ನಿನ್ನ ಜಾಣ್ಮೆಗಾಗಿ ನಾನು ನಿನ್ನನ್ನೆಷ್ಟು ಹೊಗಳಿದರೂ ಸಾಲದು."

"ನನಗೆ ನಿಮ್ಮ ತಾಯಿಯೆಂದರೆ ತುಂಬ ಅಭಿಮಾನ" ಎಂದಳು ಪ್ರಿಯಾ ಮೆಲುದನಿಯಲ್ಲಿ. "ಮತ್ತು ಅವರು ನಿಮ್ಮ ತಲೆಯಲ್ಲಿರುವ ಪ್ರತಿಯೊಂದು ಕೂದಲನ್ನೂ ಪ್ರೀತಿಸುತ್ತಾರೆ ಅದನ್ನು ಮರೆಯಬೇಡಿ."

"ಅದಕ್ಕೆ ಇರಬೇಕು ನನ್ನ ತಲೆಗೂದಲೆಲ್ಲ ಉದುರಲಿಕ್ಕೆ ಆರಂಭವಾದದ್ದು ಇತ್ತೀಚೆಗೆ." ಆಕೆಯ ಗಮಗಮಿಸುವ ತಲೆಗೂದಲಿನಲ್ಲಿ ಮೂಗನ್ನಿರಿಸಿದ. "ಯಾವ ಪರ್‌ಫ್ಯೂಮ್ ಇದು?"

"ನೀವು ಮರೆತು ಬಿಟ್ಟಿರಾ, ಬೆಂಗಳೂರಿಗೆ ಹೋಗಿದ್ದಾಗ ಅಂದೊಮ್ಮೆ ನೀವೇ ತಂದದ್ದಲ್ಲವಾ ಇವನ್ನು?"

ಆದರೆ ಅವಳಿಗೆ ಹೇಗೆ ಗೊತ್ತಾಗಬೇಕು ಬೆಂಗಳೂರು ಎಂದ ತಕ್ಷಣ ಅವನ ಭಾವನೆಗಳಿಗೆ ಕಚಗುಳಿಯಿಟ್ಟಂತಾದುದು? ಪ್ರತಿಮಾಳ ನೆನಪು ನುಗ್ಗಿ ಬಂದು ಕೆಲವು ಕ್ಷಣಗಳಾದರೂ ಅವ ಭಾವಪರವಶನಾದದ್ದು.

*   *   *   *   *

ಅದು ಪ್ರಿಯಾ ಮತ್ತು ಪುಟ್ಟ ಗೌತಮ್. ಪ್ರಿಯಾಳ ಅತ್ತೆಯ ಮನೆಯಲ್ಲಿ ಕೆಲಕಾಲ ಇದ್ದಾಗ ನಡೆದ ಸಂಗತಿಯಾಗಿತ್ತು. ಆಗಲೇ ರೋಹಿತ್ ಪ್ರತಿಮಾಳನ್ನು ಮೊದಲ ಬಾರಿಗೆ ಭೇಟಿಯಾದುದು. ತನ್ನ ಇಡಿಯ ಜೀವಮಾನವೆಲ್ಲ ಇಂಥ ಒಂದು ಹೆಣ್ಣಿಗಾಗಿ ತಾನು

ಅತಿಯಾದ ಆತ್ಮಶ್ಲಾಘನೆ ಸುಸಂಸ್ಕೃತಿಗೆ ಸಲ್ಲದೆಂದು ಒಪ್ಪಿಕೊಂಡರೂ ಆತ್ಮಾವಹೇಳನ, ಆತ್ಮ ತಿರಸ್ಕಾರ, ಆತ್ಮ ತೇಜೋವಧೆಗಳು ಅದಕ್ಕಿಂತ ಹೆಚ್ಚಿನ ಅಪಾಯಕ್ಕೆ ನಮ್ಮನ್ನು ಗುರಿ ಮಾಡುತ್ತದೆ.

— ಕುವೆಂಪು

ಅದೃಷ್ಟ ಸಂದರ್ಭಕ್ಕೆ ಅಥವಾ ಜನತೆ ಇವು ನಿಮಗೆ ಅಧೀನವಾಗುವಂತೆ ಪ್ರಯತ್ನಿಸಬೇಕಲ್ಲದೆ, ನೀವು ಅದಕ್ಕೆ ತುತ್ತಾಗಬಾರದು.

— ಎ. ಎಂ. ಜೋಸೆಫ್

ಸಂಗ್ರಹ : ವೈ. ಹೆಚ್. ಎಸ್.



ಕಾದಿದ್ದೇನೇನೋ ಎನ್ನುವ ಭ್ರಮೆಯನ್ನು ಹುಟ್ಟಿಸಿದ್ದಳಾಕೆ ಅವನಲ್ಲಿ

ಪ್ರಿಯಾ ತನ್ನ ಆ ಸೋದರತ್ತೆಯ ಮನೆಗೆ ಹೋಗುವುದು ವರ್ಷಕ್ಕೊಂದಾವರ್ತಿ ಮಾತ್ರ. ಇಂಥ ಸಂದರ್ಭಗಳಲ್ಲಿ ಆಕೆ ತನ್ನ ಗಂಡನನ್ನೊಬ್ಬನನ್ನೇ ಬಿಟ್ಟು ಹೋಗಲು ಇಷ್ಟ ಪಡುವುದಿಲ್ಲ. ಮಗನ ಸಲುವಾಗಿಯಾದರೂ ತನ್ನ ಜೊತೆ ಬರಬೇಕೆಂದು ಆಕೆ ಅವನನ್ನು ಒತ್ತಾಯಿಸುತ್ತಿದ್ದಳು.

ಹೆಂಡತಿ ಊರು ಬಿಟ್ಟಾಗಲೆಲ್ಲ ರೋಹಿತ್ ತನ್ನ ಸ್ವಾತಂತ್ರ್ಯದ ಸವಿಯನ್ನು ಸರಿಯಾಗಿಯೇ ಸವಿಯುವ ಜಾಯಮಾನದವನು. ತನ್ನ ಹಳೆಯ ಸ್ನೇಹಿತ, ಸ್ನೇಹಿತೆಯರೊಂದಿಗೆ ಕಳೆಯುತ್ತಾನೆ. ಆದರೆ ಆ ಒಂದು ಸನ್ನಿವೇಶ ಮಾತ್ರ ಸ್ವಲ್ಪ ಮಟ್ಟಿಗೆ ಭಿನ್ನವಾದುದಾಗಿತ್ತು.

ಪ್ರಿಯಾ ತನ್ನ ಅತ್ತೆಯ ಮನೆಗೆ ಹೋದ ದಿನವೆಲ್ಲ ಆತನಿಗೆ ತುಂಬ ಕೆಲಸಗಳಿದ್ದುವು ಮಾಡಲು. ಮಿತ್ರರಿಗೆಲ್ಲ ಬರೆಯಬೇಕಾಗಿದ್ದ ಪತ್ರಗಳು ಇತ್ಯಾದಿ. ಪ್ರಿಯಾ ಇಲ್ಲದ ಮನೆ ಬಿಕೋ ಅನ್ನುತ್ತಿತ್ತು ಅವನ ಪಾಲಿಗೆ. ಒಂದು ಬಗೆಯ ಶೂನ್ಯತೆ ಆವರಿಸಿಕೊಂಡಂತೆ ಮನಸ್ಸಿನ ತುಂಬ. ಏಕಾಂತದಲ್ಲಿರುವಾಗ ಅವನ ಮನಸ್ಸೇ ವಿಚಿತ್ರವಾಗಿ ಕಾಣುತ್ತಲಿತ್ತು ಅವನಿಗೆ ಕೆಲವೊಮ್ಮೆ.

ಗೌರಿಯ ಸಾವಿನನಂತರವಂತೂ ಜೀವನವೆಲ್ಲ ಬರಿದಾಗಿ ಕಂಡಿತ್ತವನಿಗೆ. ದೇವರು ಎಷ್ಟೊಂದು ಕ್ರೂರಿ ಎಂದುಕೊಳ್ಳುವಂತಾಗಿತ್ತು. ಪ್ರಿಯಾಳ ನಿರ್ಲಕ್ಷ್ಯಕ್ಕೊಳಗಾಗಿಯೇ ಗೌರಿಯ ಸಾವು ಸಂಭವಿಸಿತೆನ್ನುವ ಭಾವನೆಯೊಂದು ಬಲವಾಗಿ ಬೇರೂರಿತ್ತು ಅವನ ತಲೆಯಲ್ಲಿ. ಹಾಗೆಂದು ಅದಕ್ಕಾಗಿ ಪ್ರಿಯಾಳನ್ನು ದ್ವೇಷಿಸಬೇಕೆಂದಾಗಲೀ ದೂಶಿಸಬೇಕೆಂದಾಗಲೀ ರೋಹಿತ್‌ಗೆ ಅನಿಸಲಿಲ್ಲ. ಆದರೆ ಒಂದು ಬಗೆಯ ನಿರ್ಲಿಪ್ತತೆ ತಾನೇ ತಾನಾಗಿ ಆವರಿಸಿಕೊಂಡು ಬಿಟ್ಟಿತ್ತು ಮನಸ್ಸಿನ ತುಂಬ. ಮದುವೆಗೆ ಮುನ್ನ ರೋಹಿತ್ ಹೆಣ್ಣುಗಳ ವಿಷಯದಲ್ಲಿ ಸಂಭಾವಿತನೇನೂ ಆಗಿರಲಿಲ್ಲ ಎನ್ನುವುದು ಅವನ ಸ್ನೇಹವರ್ತುಲದವರ ಮಾತು. ಅಲ್ಲಿಯ ತೋಳತೆಕ್ಕೆಯಿಂದ ಜಾರಿದನಂತರ ಮದುವೆಯಾದ ಪ್ರಿಯಾಳ ತೋಳ್ತೆಕ್ಕೆಗೆ ಬಂದಿದ್ದ. ಅಲ್ಲಿ ಸಂಸಾರ ಹೂಡಿ ಎರಡು ಮಕ್ಕಳನ್ನು ಪಡೆದು ಒಂದನ್ನು ಕಳೆದುಕೊಂಡಿದ್ದ. ದುಃಖದಲ್ಲೇ ಮತ್ತೆ ಮನುಷ್ಯನಾಗಬೇಕೆಂದು ಹೆಂಡತಿಯ ಒಳ್ಳೆಯ ಗಂಡನಾಗಬೇಕೆಂದು ಗೌತಮ್‌ಗೆ ಒಳ್ಳೆಯ ತಂದೆಯಾಗಬೇಕೆಂದು

ಬದುಕಿದ್ದ. ಆದರೆ ಅದೊಂದು ದಿನ ಕಾಲೇಜು ಸ್ನೇಹಿತನೊಬ್ಬನೊಂದಿಗೆ ಆಶಿಯಾನಗರ್‌ಗೆ ಹೋದಾಗೊಮ್ಮೆ ಅವಳ ಪರಿಚಯವಾಗಿತ್ತು ಪ್ರತಿಮಾಳದು. ನಿಜಕ್ಕೂ ಆ ಹೆಸರು ಅವಳಿಗೆ ಅನ್ವರ್ಥಕವಾಗಿ ಕಂಡಿತ್ತವನಿಗೆ ಮೊದಲ ಬಾರಿಗೆ ಅವಳನ್ನು ನೋಡಿದಾಗ. ಇನ್ನೂ ಇಪ್ಪತ್ತೆರಡರಂಚಿನ ಚೆಲುವೆ. ಆಕರ್ಷಕ ರೂಪಿನವಳು. ಹಾಗೇ ಜಾಣೆಯಂತೆ ಕೂಡ ಕಾಣುತ್ತಿದ್ದಳು. ಹಿಂದೆಲ್ಲ ರೋಹಿತ್ ಜಾಣೆಯರಾದ ಹೆಣ್ಣುಗಳ ಸಹವಾಸ ಮಾಡುತ್ತಿರಲಿಲ್ಲ. ಆದರೆ ಪ್ರತಿಮಾ ಆತನನ್ನು ಆಯಸ್ಕಾಂತದ ಹಾಗೆ ಸೆಳೆದುಕೊಂಡಿದ್ದಳು. ಅಲ್ಲೊಂದು ಆಫೀಸಿನಲ್ಲಿ ಕಂಪ್ಯೂಟರ್ ಅನಾಲಿಸ್ಟ್ ಆಗಿದ್ದಾಳೆನ್ನುವುದು ಅನಂತರ ತಿಳಿಯಿತು. ಅವನನ್ನು ಕರೆದುಕೊಂಡು ಹೋಗಿದ್ದ ಸ್ನೇಹಿತನೇ ಆಕೆಯನ್ನು ಪರಿಚಯಿಸಿದ್ದ. ಒಟ್ಟಿಗೆ ಸಿನಿಮಾಕ್ಕೆ ಹೋಗುವ ಪ್ರೋಗ್ರಾಂ ಹಾಕಿದ್ದನವ. "ಆದರೆ ನನಗೆ ಕೆಲಸವಿದೆ"ಯೆಂದು ಜಾರಿಕೊಳ್ಳಲೆತ್ನಿಸಿದ್ದಳವಳು. "ಕೆಲಸ ಯಾವಾಗಲೂ ಇರುತ್ತದೆ. ನಾವೆಲ್ಲ ಹೀಗೆ ಜೊತೆಗೂಡುವುದು ಮಾತ್ರ ಅಪರೂಪದ ಸಂಗತಿ. ಸ್ವಲ್ಪ ಮಟ್ಟಿನ ರಿಲಾಕ್ಸೇಶನ್‌ಗಾಗಿಯಾದರೂ ಬರಬಾರದೇ ನಮ್ಮ ಜೊತೆ?" ಎಂದು ಕೇಳಿದ್ದ ರೋಹೀತ್. ಆಕೆ ತನಗೆ ವರ್ಷಗಳಷ್ಟು ಕಾಲದಿಂದ ಪರಿಚಿತಳು ಎನ್ನುವಂಥ ಆತ್ಮೀಯ ಸ್ವರದಲ್ಲಿ. ಆಕೆ ಅವನತ್ತ ನೋಡಿ ತನ್ನ ದೊಡ್ಡ ಕಣ್ಣುಗಳನ್ನರಳಿಸಿ ನಕ್ಕಳು. "ಐ ಎಂಜಾಯ್ ಮೈ ವರ್ಕ್ ಜಸ್ಟ್ ಆ್ಯಸ್ ಮಚ್ ಆ್ಯಸ್ ಮೈ ಫನ್" ಎಂದಳು.

"ಓ ದೇವರೆ, ನಾನು ಅದಕ್ಕೆ ವಿರುದ್ಧವಾಗಿಯೇನೂ ಹೇಳಲಿಲ್ಲ" ಅಂದಾಕೆಯನ್ನು ಕಳಿಸಿ ಆ ಸಂಜೆಯೆಲ್ಲ ತನ್ನ ಸ್ನೇಹಿತನೊಂದಿಗೆ ರಮ್ಮಿ ಆಡುತ್ತ ಕಳೆದ. ಮರುದಿನ ಆ ಸ್ನೇಹಿತ ಅದೇ ಪ್ರತಿಮಾಳನ್ನು ಮಧ್ಯಾಹ್ನದ ಹೊತ್ತಿಗೆ ಆತ ಊಟ ಮಾಡುವ ಹೋಟೇಲಿನ ಡೈನಿಂಗ್ ಹಾಲ್‌ಗೇ ಅಂದರೆ ಅವನು ಕೂತಲ್ಲಿಯೇ ಕರೆತಂದಾಗ ಮಾತ್ರ ಆಶ್ಚರ್ಯವಾಗಿತ್ತವನಿಗೆ. ನಗುತ್ತಿದ್ದಳಾಕೆ ತನ್ನ ಕಣ್ಣುಗಳಲ್ಲಿಯೇ, ಯಾಕೋ ಮಗಳು ಗೌರಿಯ ನೆನಪಾಯಿತವನಿಗೆ ಆ ಕ್ಷಣದಲ್ಲಿ. ಆಕೆಯ ಕಣ್ಣುಗಳನ್ನೇ ಹೋಲುತ್ತಿವೆ ಈಕೆಯದೂ. ಕಡು ನೀಲಿ ಕಣ್ಣುಗಳು. ಅಗಲ ವಿಶಾಲವಾದ ಕಣ್ಣುಗಳು. ಅವನ ಟೇಬಲ್ ಬಳಿಯೇ ಆಕೆಯನ್ನು ಬಿಟ್ಟು ಆತನ ಸ್ನೇಹಿತ ಬೇರೊಬ್ಬ ಸ್ನೇಹಿತ ತನ್ನನ್ನು ಕರೆಯುತ್ತಿದ್ದಾನೆಂದು ಹೇಳಿಕೊಂಡು ಆ ಕಡೆ ನಡೆದ. ಅವನಿಗಾಗಿ ಕಾಯದೇ ಪ್ರತಿಮಾಳ ಜೊತೆ ಊಟ ಮುಗಿಸಿದ ರೋಹಿತ್. ಯಾಕೋ ಅವನಿಗೆ ಆಗ ಆಕೆ ತನಗಿಂತ ತುಂಬ ಚಿಕ್ಕವಳಾಗಿ ಕಂಡಳು.

"ನಿನ್ನನ್ನು ನೋಡುತ್ತಿದ್ದರೆ ತುಂಬ ಹಿರಿಯನಾಗಿದ್ದೇನೆನಿಸುತ್ತಿದೆ ನನಗಂತೂ." ಹಾಗಂದು ನಕ್ಕ ರೋಹಿತ್.

"ಎಷ್ಟು ಹಿರಿಯರೆಂದು?" ಅವೇ ಜೋಡಿ ಕಣ್ಣುಗಳನ್ನರಳಿಸಿ ಕೇಳಿದಳವಳು.

ರೋಹಿತ್ ಆಕೆಗೆ ತನ್ನ ವಯಸ್ಸು ಹೇಳಿದಾಗ ಆಕೆ ನಕ್ಕಳಷ್ಟೇ. ಮತ್ತು ಮೇಜಿನ ಮೇಲಿರಿಸಲಾಗಿದ್ದ ನೀರಿನ ಗ್ಲಾಸನ್ನೆತ್ತಿಕೊಂಡು ಕುಡಿದಳು. ಆಕೆಯ ಕುತ್ತಿಗೆ ಉದ್ದವಾಗಿದ್ದುದನ್ನವ ಗಮನಿಸಿದ ಆಗ.

"ನನ್ನ ವಯಸ್ಸು ಅತಿಯಾಯಿತೆಂದೇನೂ ಅನಿಸುವುದಿಲ್ಲವಾ, ಆ ಬಗ್ಗೆ ಏನೂ ಹೇಳಲಿಲ್ಲ ಮತ್ತೆ."

"ಹೇಳಲಿಕ್ಕೇನೂ ಇಲ್ಲ."

"ವಯಸ್ಸಿನ ವಿಷಯದಲ್ಲಿ ಮೂವತ್ತೆಂಟಕ್ಕಿಂತ ಕಡಿಮೆ ಹೇಳಿ ನಿನ್ನನ್ನು ನಂಬಿಸುವಂತೆ

"ಗಾಂಧೀಜಿ ಯಾವಾಗ, ಎಲ್ಲಿ ಹುಟ್ಟಿದ್ರು ಹೇಳೋ ಗುಂಡ?"

"ದೇಶಕ್ಕೆ ಸ್ವಾತಂತ್ರ ಬರುವ ಮುನ್ನ ಭಾರತದಲ್ಲಿ ಹುಟ್ಟಿದ್ರು ಸಾರ್!"

–ರಬ್ಲು, ಕೆ. ವೆಂಕಟೇಶಮೂರ್ತಿ



ಮಾಡುತ್ತಿದ್ದೇನೆಂದುಕೊಳ್ಳುತ್ತೀಯೇನು ಮತ್ತೆ?''

ಆಕೆ ತತ್‌ಕ್ಷಣ ಮಾತನಾಡಲಿಲ್ಲ. ಬದಲಿಗೆ ಅವನನ್ನು ಆಟವಾಡಿಸುವವಳಂತೆ ತುಂಟ ನಗು ನಕ್ಕಳು.

"ನಿಮಗೊಂದಿಷ್ಟು ಅಹಂಕಾರ ಇದೆ ಎನಿಸುವುದಿಲ್ಲವಾ?''

ಆಕೆಯ ಅನೇಕ ಪ್ರಶ್ನೆ ಆತನ್ನೊಂದಿಷ್ಟು ಶಾಕ್‌ನಲ್ಲಿ ಕೆಡವಿದ್ದು ಸುಳ್ಳಲ್ಲ. ಅದನ್ನವನೇ ಬಲ್ಲ ಅಹಂಭಾವವಿರುವುದು. ಪ್ರಿಯಾಳೇ ಹೇಳಿದ್ದಾಳೆ ಅವನಿಗೆ ಹಾಗೆಂದು ಎಷ್ಟೋ ಬಾರಿ. ಆದರೆ ಅಷ್ಟು ಪರಿಚಿತಳಲ್ಲದ ಹೆಣ್ಣು ಹೀಗೆ ಹೇಳುವಷ್ಟು ತನ್ನೊಳಗಿನ ಅಹಂಭಾವ ಹೊರಗಿಣುಕಿತೇ?

"ಹಾಗೆ ನೋಡಿದರೆ ಪ್ರತಿಯೊಬ್ಬ ಗಂಡಸಿಗೂ ಆತನದೇ ಆದ ಅಹಂಕಾರವಿರುತ್ತದೆ ಆತ್ಮಾಭಿಮಾನದ ಮುಖವಾಡ ಹಾಕಿಕೊಂಡಾದರೂ.''

"ಈ ವಿಷಯವಾಗಿ ನಾನು ಕಂಪ್ಯೂಟರನ್ನು ಕೇಳಿ ಉತ್ತರ ಪಡೀತೇನೆ.'' ಆಕೆಯೆಂದಳು.

"ನೀನು ಮತ್ತು ನಿನ್ನ ಕಂಪ್ಯೂಟರ್‌ಗಳು. ಇಂಥ ಇಲೆಕ್ಟ್ರಾನಿಕ್ ಉಪಕರಣಗಳನ್ನು ಸದಾಕಾಲ ಅವಲಂಬಿಸಿರುವುದರಿಂದಲೇ ಇರಬೇಕು ಅಂಥದೇ ಮನಸ್ಸು ಹೊಂದಿದ್ದೀಯೆನಿಸುತ್ತದೆ.''

"ಆದ್ರೆ ನಾನು ಇಲೆಕ್ಟ್ರಾನಿಕ್ ಉಪಕರಣಗಳನ್ನು ದ್ವೇಷಿಸ್ತೇನೆ.''

"ಮತ್ತೆ ಹೇಗೆ ಅದರೊಂದಿಗೆ ಕೆಲಸ ಮಾಡಿಕೊಂಡಿದ್ದೀ? ಅಂಥ ಉಪಕರಣಗಳಂತೆಯೇ ಎಲ್ಲವೂ ಯಾಂತ್ರಿಕವಾಗಿರುತ್ತದೆ ಎಂದುಕೊಂಡಿದ್ದೀಯಾ,, ಗಂಡಸರ ಮನಸ್ಸು ಕೂಡ?''

"ಹಾಗೇನಿಲ್ಲ'' ಎಂದಳಾಕೆ ತನ್ನ ಬಾಬ್ ಮಾಡಿದ ಕೂದಲನ್ನು ಹಿಂದಕ್ಕೆ ತಳ್ಳುತ್ತ. "ನಾನು ಗಂಡಸರ ಕಂಪೆನಿಯನ್ನು ಇಷ್ಟಪಡ್ತೇನೆ. ಅದರಲ್ಲೂ ಭಾವುಕರಾದ ಗಂಡಸರನ್ನು. ಹಾಗೇ ನನ್ನ ಸ್ನೇಹಿತೆಯರನ್ನು, ಆದರೆ ಭಾವುಕ ಗಂಡಸರ ಸಹವಾಸ ನನಗೆ ಖುಶಿ ಕೊಡುವಷ್ಟು ಹೆಂಗಸರ ಸಹವಾಸ ಕೊಡುವುದಿಲ್ಲ. ಹೆಂಗಸರಲ್ಲಿ ಒಂದು ಕೆಟ್ಟ ಗುಣವಿರುತ್ತದೆ ನಿಮಗೆ ಗೊತ್ತಿದೆಯಾ? ಸಾಮಾನ್ಯವಾಗಿ ಎಲ್ಲ ಹೆಂಗಸರಲ್ಲಿಯೂ ಇರುತ್ತದೆ ಎಂದಿಟ್ಟುಕೊಳ್ಳಿ ಮತ್ಸರ.''

ರೋಹಿತ್‌ನ ಸುಂದರ ಮುಖದಲ್ಲಿ ನಗುವರಳಿತು ಆ ಮಾತನ್ನು ಕೇಳಿ. "ಹಾಗಾದರೆ ನಿನಗೆ ಗಂಡಸರ ಸಹವಾಸವೇ ಹೆಚ್ಚು ಇಷ್ಟ ಅಲ್ಲವೇ?''

"ಹೌದು, ನಾನು ಹೀಗೆ ಹೇಳಿದರೆ ನಿಮಗೆ ಸಂತಸವಾಗುತ್ತದೆ ಎನ್ನುವುದಾದರೆ.'' ನಕ್ಕಳವಳು ಮೋಹಕವಾಗಿ. "ಈಗ ನೀವೇ ಕರೆದರೂ ಕೂಡ ಬರಬಲ್ಲೆ ಎಲ್ಲಿಗೆ ಬೇಕಾದರೂ ತಿರುಗಾಟಕ್ಕೆ ಮಾತ್ರ.''

ಈ ಮಾತು ಮಾತ್ರ ಅನಿರೀಕ್ಷಿತವಾಗಿತ್ತವನ ಪಾಲಿಗೆ. ಹೃದಯದ ಬಡಿತ ಒಂದು

ತಪ್ಪಿಸಿಕೊಂಡಂತಾಯಿತು.

"ಅಂದರೆ ನನ್ನ ಜೊತೆ ಬಂದರೆ ಒಬ್ಬ ಮಾವನ ಜೊತೆ ಅಥವಾ ಹಿರಿಯನೊಬ್ಬನ ಜೊತೆ ಬಂದಂತಷ್ಟೇ ಅಷ್ಟೇ ನಿರಪಾಯಕಾರಿಯೆಂದು ಭಾವಿಸುತ್ತೀಯೆಂದುಕೊಂಡೆ.

"ಓಹ್ ನನಗೆ ನನ್ನದೇ ಆದ ಕ್ಷಣಗಳು ದೊರಕಬಹುದೆಂಬ ನಿರೀಕ್ಷೆಯಲ್ಲಿ." ಏನು ಆಕೆಯ ಆ ಮಾತಿನ ಅರ್ಥ? ಆತ ತಲೆಕೆಡಿಸಿಕೊಂಡ. "ನಾನೆಂದೂ ಒಂದು ಯಂತ್ರದಂತೆ ಅಲ್ಲ ಅಥವಾ ಒಂದು ಉತ್ತಮ ಕಂಪ್ಯೂಟರ್‌ನಂತೆಯೂ ಅಲ್ಲ ತಿಳಿದುಕೊಳ್ಳಿ. ನಾನೂ ತಪ್ಪುಗಳನ್ನು ಮಾಡುತ್ತಿರುತ್ತೇನೆ."

"ಅದೇ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ."

"ಹಾಗೆಂದು ನಾವು ಪ್ರಯತ್ನಿಸ್ತಿದ್ದೇವಷ್ಟೆ ಹೇಳಲು. ಆದರೆ ಕಂಪ್ಯೂಟರ್‌ಗಳೆಂದೂ ತಪ್ಪು ಮಾಡುವುದಿಲ್ಲವಲ್ಲ ಸರಿಯಿದ್ದರೆ?"

"ಆದರೆ ಬಹಳ ಕಾಲ ಕಂಪ್ಯೂಟರ್‌ನೊಂದಿಗೇ ನೀನು ಕಳೆಯುತ್ತಿರುವುದರಿಂದ ಅಂಥದೇ ನಿರ್ಲಿಪ್ತತೆ ಅಂಟಿಕೊಂಡು ಬಿಟ್ಟಿದೆ ನಿನಗೂ ಅಂದುಕೊಳ್ಳುತ್ತೇನೆ." ಅವನೆಂದ. "ಹಾಗೆಂದಿಗೂ ಆಗುವುದಿಲ್ಲವಲ್ಲವೆಂದು ಮಾತು ಕೊಡು."

ಆಕೆ ನಕ್ಕಳು. "ನೀವು ನನ್ನನ್ನು ತಮಾಷೆ ಮಾಡುತ್ತೀರಿ. ಹೆಂಗಸರು ವಾಚಾಳಿಗಳಾಗಿರುತ್ತಾರಷ್ಟೆ. ಆದರೆ ಗಂಡಸರಾದರೆ ಪರಿಚಯವಾದ ಹುಡುಗಿಯರನ್ನು ತಮ್ಮ ತೋಳ್ತೆಕ್ಕೆಯಲ್ಲಿ ತುಂಬಿಸಿಕೊಳ್ಳಲು ಕಾತುರರಾಗಿರುತ್ತರೆನ್ನುವುದೇ ವ್ಯತ್ಯಾಸ ಎಂದೆ." ಮತ್ತೆ ನಗುತ್ತ ಮುಂದುವರಿಸಿದಳು. "ನನಗೊಮ್ಮೆ ಆ ಅನುಭವವಾಗಿದೆ."

"ಅಂದರೆ ನೀನು ಮಗುವಾಗಿದ್ದಾಗ ಎಂದುಕೊಳ್ಳುತ್ತೇನೆ."

"ಇದು ತಮಾಷೆಯ ಮಾತಲ್ಲ. ನಿಜವಾಗಿಯೂ ಹೌದು. ನಾನು ಕಾಲೇಜಿನಲ್ಲಿ ಕಲಿಯುತ್ತಲಿರುವಾಗ ಒಬ್ಬಾತನ ಪ್ರೇಮಪಾಶದಲ್ಲಿಯೂ ಬಿದ್ದಿದ್ದ ಕೂಡ."

"ಮತ್ತೇನಾಯಿತು?" ಕೇಳಿದ. "ನಿನಗೆ ಗಂಡಸರ ಸಹವಾಸ ಇಷ್ಟ"

"ಆದರೆ ಅವರು ಪ್ರಾಕ್ಟೀಸ್ ಮಾಡಿಕೊಳ್ಳಲು ನಾನು ಯಾರೊಬ್ಬರ ಪಿಯಾನೋ ಏನಲ್ಲ."

"ನುಡಿಸುವ ಕೈಗಳಿಗೆ ಒಲಿಯುವುದಿಲ್ಲವೇ ಪಿಯಾನೋ?"

"ಹಾಗೆಂದೇ ತಿಳಿದುಕೊಳ್ಳಿ."

ಪ್ರತಿಮಾಳನ್ನು ಅರ್ಥ ಮಾಡಿಕೊಂಡಾಗ ಆಕೆಯ ಓರಗೆಯ ಹುಡುಗರನ್ನಾಕೆ ಇಷ್ಟಪಡುವುದಿಲ್ಲ ಎನ್ನುವುದವನಿಗೆ ಅರ್ಥವಾಗಿತ್ತು. ಅನಂತರ ಆಕೆ ಹೇಳಿದ ಕತೆಯಲ್ಲಿ ಆಕೆಗಿಂತ ಒಂದು ವರ್ಷವಷ್ಟೇ ಹಿರಿಯನಾಗಿದ್ದ, ಮತ್ತು ಆಕೆಗಿಂತ ಉದ್ದದಲ್ಲಿ ಗಾತ್ರದಲ್ಲಿ ಚಿಕ್ಕವನಾಗಿದ್ದ ಆ ಕನ್ನಡಕಧಾರಿಯಲ್ಲಾಕೆಗೆ ಆಕರ್ಷಣೆಯುಂಟಾದುದು ಕೇವಲ ಅವ ಬುದ್ಧಿವಂತನಾಗಿದ್ದ ಎನ್ನುವ ಕಾರಣಕ್ಕಾಗಿ ಮಾತ್ರ. "ಸೋ ಯೂ ಫೆಲ್ ಇನ್ ಲವ್ ವಿದ್ ಎ ಬ್ರೈನ್?" ತಮಾಷೆ ಮಾಡಿದ.

"ಅದು ನಿಜವಾದ ಪ್ರೀತಿ ಎಂದು ನಾನು ಅಂದುಕೊಂಡಿಲ್ಲ. ನಾನೇನೋ ಅವನ ಪ್ರತಿಭೆಗಾಗಿ ಆಕರ್ಷಿಸಲ್ಪಟ್ಟೆ. ಗುಟ್ಟು ಯಾಕೆ? ಒಂದೆರಡು ಬಾರಿ ಆತನ ಜೊತೆ ಮಲಗಿಯೂ ಇದ್ದೆ. ಅದ್ಭುತವಾದ ಅನುಭವ ಅದು." ಹಾಗೆ ಹೇಳಿದವಳ ಕಣ್ಣುಗಳು ಕಿರಿದಾಗಿದ್ದುದನ್ನು

'ರಾಗಸಂಗಮ'

ಲಾಟರಿ ಡ್ರಾ - ೧೨೩ರ ವಿಜೇತರು



ವೆಂಕಟೇಶ ಪಡಿಯಾರ

ಕುಂದಾಪುರ

ದಕ್ಷಿಣ ಕನ್ನಡ ಜಿಲ್ಲೆ.

ಗಮನಿಸಿದ ರೋಹಿತ್. ನೆನಪಿನಾಳಕ್ಕೆ ಇಳಿದಿರಬಹುದೆಂದುಕೊಂಡ ಆಕೆಯ ಮನಸ್ಸು. ಒಂದಿಷ್ಟು ಡ್ರಿಂಕ್ಸ್ ಹಾಕಿದ್ದುದರಿಂದಲೇ ಇರಬೇಕೆಂದುಕೊಂಡ ಆಕೆ ಆ ರೀತಿಯಾಗಿ ಏನೊಂದೂ ಸಂಕೋಚವಿಲ್ಲದೆ ಮಾತನಾಡುತ್ತಿರುವುದು. ಸದ್ಯ ಅದು ಫ್ಯಾಮಿಲೀ ರೂಮು ಆದ ಕಾರಣ ಆ ಮಾತುಗಳನ್ನಾರೂ ಕೇಳಿರಲಿಕ್ಕಿಲ್ಲವೆಂಬ ಧೈರ್ಯ.

ಟ್ಯಾಕ್ಸಿ ಮಾಡಿಕೊಂಡು ಹೋಗಿ ಪ್ರತಿಮಾಳನ್ನು ಆಕೆಯ ಫ್ಲಾಟ್ ತನಕ ಕರೆದೊಯ್ದು ಬಿಟ್ಟ ರೋಹಿತ್. ತಪ್ಪಿಕೂಡ ಇಬ್ಬರೇ ಇದ್ದಾಗ ಆಕೆಯನ್ನು ಚುಂಬಿಸಲು ಮುಂದಾಗಲಿಲ್ಲ. ಆಸೆಯುಂಟಾದರೂ ತಡೆಹಿಡಿದ. ಅವಳ ಹಾಗೆಯೇ ತಾನೂ ಒಂದಿಷ್ಟು ಆಟ ಆಡಿಸಬೇಕು ಅವಳನ್ನು ಎಂದುಕೊಳ್ಳುತ್ತ.

"ಮತ್ತೆ ಭೇಟಿಯಾಗೋಣ ರೋಹಿತ್'' ಅಂದಳವಳು ಫ್ಲಾಟ್‌ನ ಬಾಗಿಲು ತೆರೆಯುತ್ತ, "ನೀವು ಒಬ್ಬ ಒಳ್ಳೆಯ...''

"ಈಗೇನನ್ನೂ ಹೇಳಬೇಡ ಈ ಸ್ಥಿತಿಯಲ್ಲಿ'' ಎಂದ ರೋಹಿತ್ ಪ್ರತಿಯಾಗಿ ಪಿಸುಗುಟ್ಟುತ್ತ.

"ನಾನು ಸರಿಯಾಗಿಯೇ ಇದ್ದೇನೆ'' ಎಂದು ತಾನೂ ಪಿಸುಗುಟ್ಟಿದಳು ಪ್ರತಿಮಾ. "ಯೂನಿವರ್ಸಿಟಿಯಲ್ಲಿರುವಾಗ ನಾನು ಆರಾಧಕ ಕಣ್ಣುಗಳಿಗೆ ಕೇಂದ್ರ ಬಿಂದುವಾಗಿದ್ದೆ ಗೊತ್ತಾ ನಿಮಗೆ? ಆದರೆಂದೂ ನಾನು ಯಾರನ್ನೂ ಮನಸ್ವೀ ಪ್ರೀತಿಸಲಿಲ್ಲ, ಬಯಸಲಿಲ್ಲ. ಯಾಕೆಂದರೆ ನಾನು ದಷ್ಟಪುಷ್ಟಳಾಗಿ ಆರೋಗ್ಯವಾಗಿದ್ದೇನೆ. ನನ್ನಂಥ ಆರೋಗ್ಯವಂತ ಪುರುಷರನ್ನಷ್ಟೇ ಇಷ್ಟ ಪಡುತ್ತಿತ್ತು ನನ್ನ ಮನಸ್ಸು ಒಳಗೊಳಗೇ. ನಿಮ್ಮ ಹಾಗಿನ ಆರೋಗ್ಯವಂತ ಗಂಡಸನ್ನು.''

"ಅಂದರೆ ಆರೋಗ್ಯವಂತ ಗಂಡಸರಿಗೆ ಏನೇನೂ ಬುದ್ಧಿವಂತಿಕೆ ಇಲ್ಲವಾದರೂ ನೀನು ವಶವಾಗುತ್ತೀ ಎಂದು ಅರ್ಥವೇ?''

"ಆರೋಗ್ಯವೆಂದರೆ ಮನಸ್ಸಿನ, ಬುದ್ಧಿಶಕ್ತಿಯ ಆರೋಗ್ಯವೂ ಸರಿಯಾಗಿರಬೇಕು ಎನ್ನುವ ಅರ್ಥ.'' ನಕ್ಕಳು.

"ನಾನು ಅಷ್ಟು ಬುದ್ಧಿವಂತನೆಂದುಕೊಳ್ಳಬೇಡ." ಆತನೆಂದ.

"ಆದರೆ ನನಗೆ ನಿನ್ನ ಸಹವಾಸ ಯಾಕೆ ಪ್ರಿಯವೆನಿಸುತ್ತದೆ ಎನ್ನುವುದನ್ನು ಹೇಳುತ್ತೇನೆ ಕೇಳು. ಯಾಕೆಂದರೆ ನನ್ನ ಮೃದುವಾದ ಮನಸ್ಸಿನ ಒಂದು ಭಾಗಕ್ಕೆ ನಿನ್ನ ರೀತಿ ಪ್ರಿಯವಾಗುತ್ತಿದೆ. ವರ್ಷಗಳಿಂದ ನೀನು ನನಗೆ ಪರಿಚಿತಳು ಎನ್ನುವಂಥ ಭಾವನೆಯುಂಟಾಗುವಂತೆ ಮಾಡಿದೆ ನೀನು. ನಿಮ್ಮ ಪರಿಚಯವಾದ ಕೆಲವೇ ತಾಸುಗಳ ಅವಧಿಯಲ್ಲಿ. ನಿನಗೆ ನನ್ನ ವಿಷಯ ಹೇಳದೇ ಉಳಿದರೆ ಅದು ಆತ್ಮವಂಚನೆಯಾದೀತು ಎನ್ನುವ ಭಾವನೆ ಬಲಿಯುತ್ತಿದೆ. ನನಗೆ ಮದುವೆಯಾಗಿದೆ ಮತ್ತು ನನ್ನ ಹೆಂಡತಿ ನನ್ನನ್ನು ಚೆನ್ನಾಗಿ ಅರ್ಥ ಮಾಡಿಕೊಂಡವಳಾಗಿದ್ದಾಳೆ. ಸುಖವಾಗಿದ್ದೇನೆಂದುಕೊಳ್ಳುತ್ತೇನೆ."

"ನನಗೆ ಸಂತಸವಾಯಿತು" ಎಂದಳು ಪ್ರತಿಮಾ ಯಾವ ಬಗೆಯ ಅಳುಕು ಇಲ್ಲದೆ "ರಿಯಲೀ ಐ ಆಮ್ ಗ್ಲಾಡ್."

"ದೆನ್ ಕ್ಯಾನ್ ವೀ ಬೀ ಫ್ರೆಂಡ್ಸ್?"

"ಹಾಗೆಂದೇ ಭಾವಿಸುವೆ. ಆ್ಯಸ್ ಎ ಮ್ಯಾಟರ್ ಆಫ್‌ಫ್ಯಾಕ್ಟ್ ನಾನೆಣಿಸಿದ್ದ ನೀವಿನ್ನೂ" ಎಂದೇನನ್ನೋ ಹೇಳ ಹೊರಟವಳು ಮಾತನ್ನಲ್ಲಿಯೇ ತಡೆದಳು. "ನಿಜ ಹೇಳಬೇಕೆಂದರೆ ಇಟ್ಸ್ ಗ್ರೇಟ್ ಫನ್ ಬೀಯಿಂಗ್ ವಿದ್ ಯೂ. ಯಾಕೆಂದರೆ ನೀವು ಸ್ಮಾರ್ಟ್ ಆಗಿದ್ದೀರಿ ಮತ್ತು..."

"ನಾನು ಅನೇಕ ವಿಷಯಗಳಲ್ಲಿನ್ನೂ ಚೆನ್ನಾಗಿಯೇ ಇದ್ದೇನೆಂದುಕೊಂಡಿದ್ದೇನೆ ಪ್ರತಿಮಾ."

"ಹೌದೇ ಟೆನ್ನಿಸ್‌ನಲ್ಲಿ, ಸ್ಕ್ವಾಷ್‌ನಲ್ಲಿ, ಓಟದಲ್ಲಿ?"

"ಎಲ್ಲದರಲ್ಲಿಯೂ ಅಂದೆನಲ್ಲ. ಹಾಗೇ ಹೆಣ್ಣುಗಳೊಂದಿಗೆ ಇಟ್ಟುಕೊಳ್ಳುವ ವ್ಯವಹಾರಗಳಲ್ಲಿ ಕೂಡ." ಆಕೆಯ ಹತ್ತಿರ ಬಂದ "ಆದರೆ ನನ್ನ ಪ್ರೀತಿಯ ಹುಡುಗಿ ಕೇಳಿಲ್ಲಿ. ನೀನು ಮಾತ್ರ ನಾಚಿಕೆಯನ್ನೇ ಮರೆತವಳಂತಿದ್ದೀ. ಹೇಳಿಕೇಳಿ ಕಂಪ್ಯೂಟರ್ ಸಹವಾಸ ಮಾಡುತ್ತಿರುವವಳು ನೋಡು. ಅದಕ್ಕಾಗಿ ಇರಬಹುದು ಅಷ್ಟೇ ಯಾಂತ್ರಿಕವಾಗಿ."

"ಪ್ರತಿಯೊಬ್ಬರ ವ್ಯಕ್ತಿತ್ವಗಳಿಗೂ ಎರಡೆರಡು ಮುಖಗಳಿರುತ್ತವೆ ರೋಹಿತ್. ನಾನೇನೋ ಸೈನ್ಸ್‌ನಲ್ಲಿ ಡಿಗ್ರಿ ತೆಗೆದುಕೊಂಡವಳು. ಆದರೆ ದಿನನಿತ್ಯ ಹೋರಾಟ ನಡೆಸುತ್ತಿರುವುದು ಕಂಪ್ಯೂಟರ್‌ನ ಲೆಕ್ಕಾಚಾರಗಳೊಂದಿಗೆ."

"ನೀನು ತಾತ್ವಿಕವಾಗಿ ಮಾತಾಡುತ್ತೀ." ಅವನೆಂದ. "ಯಾಕೆಂದರೆ ನಿನ್ನ ಮಾತಿನ ಅರ್ಧಾಂಶದಷ್ಟನ್ನೂ ಅರ್ಥ ಮಾಡಿಕೊಳ್ಳಲು ನನ್ನಿಂದ ಸಾಧ್ಯವಾಗಲಿಲ್ಲ. ಇದಕ್ಕಾಗಿ ನಾನು ನಿನ್ನನ್ನು ಹೊಗಳಲೇಬೇಕಾಗಿದೆ."

"ಓಹ್ ನಾನು ಒರಿಜಿನಲ್ ಅಲ್ಲ ಮಾರಾಯರೆ." ನಕ್ಕಳಾಕೆ. "ನಿಮಗೆ ಗೊತ್ತೇ ಈಗಿನ ಕಾಲದಲ್ಲಿ ಹುಡುಗಿಯರೆಲ್ಲ ಅದೇ ಸೆಂಟಿಮೆಂಟ್ಯಾಲಿಟಿಯನ್ನುಳಿಸಿಕೊಂಡಿಲ್ಲ. ಈಗೀಗಂತೂ ಅವರೆಲ್ಲ ಮೆಷಿನ್ ಮೈಡೆಂಡ್ ಆಗಿದ್ದಾರೆ."

"ಆದರೆ ಅವರಾರೂ ನಿನ್ನಂತಿರಲು ಸಾಧ್ಯವೇ ಇಲ್ಲ."

"ಯೂ ಆರ್ ವೆರಿ ನೈಸ್." ಅವಳೆಂದಳು ಅನಿರೀಕ್ಷಿತವಾಗಿಯೆನ್ನುವಂತೆ. "ಪ್ರಿಯವಾದ ವ್ಯಕ್ತಿತ್ವವುಳ್ಳವರು. ಒಂದಲ್ಲ ಒಂದು ದಿನ ನಾನು ನಿಮ್ಮ ಹೆಂಡತಿಯನ್ನು ಭೇಟಿಯಾದೇನು ಅಭಿನಂದಿಸಲು."



ರೋಹಿತ್‌ನ ಆಗಸದಲ್ಲಿ ಮಿನುಗುತ್ತಲಿದ್ದ ತಾರೆಗಳೆಲ್ಲ ಮಾಯವಾಗಿ ಬಿಟ್ಟಿದ್ದುವು. ಆದರೂ ಗಾಬರಿಗೊಂಡವನಂತೆ ತೋರಿಸಿಕೊಳ್ಳಲಿಲ್ಲ. "ಪ್ರಿಯಾ ಆಗ ನಿನ್ನನ್ನು ತುಂಬ ಹೊಗಳಬಹುದೆಂದುಕೊಳ್ಳುತ್ತೇನೆ. ಆಕೆ ಜೀವನದಲ್ಲೆಂದೂ ಯಾವುದೇ ಪರೀಕ್ಷೆಗಳನ್ನು ಪಾಸು ಮಾಡಿಕೊಂಡವಳಲ್ಲ. ಆದರೆ ನಿಮ್ಮಂಥ ಪದವೀದರ ಹುಡುಗಿಯರು ಲ್ಯಾಬೊರೇಟರಿಗಳಲ್ಲೋ ಕಂಪ್ಯೂಟರ್ ಮತ್ತಿತರ ಎಲೆಕ್ಟ್ರಾನಿಕ್ ವಸ್ತುಗಳೊಂದಿಗೆ ಕೆಲಸ ಮಾಡುವುದೆಂದರೆ ಅವರ ಬಗ್ಗೆ ಎಲ್ಲಿಲ್ಲದ ಗೌರವ ಆವಳಿಗೆ?"

"ನಾನಿವತ್ತು ನಿಮ್ಮ ಫ್ರೆಂಡ್ ಅವರಿಗೆ ನಿನ್ನೆಯ ಪಾರ್ಟಿಯ ಬಗ್ಗೆ ಥ್ಯಾಂಕ್ಸ್ ಹೇಳಲು ರಿಂಗ್ ಮಾಡಿದಾಗ ಹೀಗೇ ನಿಮ್ಮ ಸಂಸಾರದ ವಿಷಯವಾಗಿ ಮಾತನಾಡಿದೆವು. ಆತ ಹೇಳುತ್ತಾರೆ ನಿಮ್ಮ ವೈಫ್ ತುಂಬ ಲಕ್ಷಣವಾಗಿದ್ದಾರೆಂದು ಕೇಳಿದೆ. ಮತ್ತೆ ನಿಮಗೊಬ್ಬ ಮಗನೂ ಇದ್ದಾನಂತೆ ಅಲ್ಲವೇ ಸ್ಕೂಲಿಗೆ ಹೋಗುವವನು."

"ಕರೆಕ್ಟ್" ನಕ್ಕ ರೋಹಿತ್. "ನಾನು ಮತ್ತು ನೀನು ಸ್ನೇಹ ಬೆಳೆಸಿಕೊಳ್ಳುವಲ್ಲಿ ಆ ವಿಷಯಗಳೆಲ್ಲ ತೊಡಕಾಗಿ ಕಾಣುತ್ತಿದೆಯಾ?"

ಪ್ರತಿಮಾ ತಲೆ ತಗ್ಗಿಸಿ ಮೆಲುದನಿಯಲ್ಲಿ ಹೇಳಿದಳು "ಇಲ್ಲ."

ಆ ಭೇಟಿಯನಂತರ ತನ್ನ ಮನೆಗೆ ಮರಳಿದ್ದ ರೋಹಿತ್. ದಾರಿಯೆಲ್ಲೆಲ್ಲ ಪ್ರತಿಮಾಳೆ ತುಂಬಿದ್ದಳು ಹೃದಯದಲ್ಲಿ, ಮನೆಯಲ್ಲಿ, ಹಾಗೇ ಆಫೀಸಿನಲ್ಲಿ ಕೂಡ ಆಕೆಯ ಕುರಿತಾಗಿಯೇ ಯೋಚಿಸುವಂತಾಗಿತ್ತವನಿಗೆ.

ಪ್ರಿಯಾ ಈ ಜಗತ್ತಿನಲ್ಲಿ ಮೌನವನ್ನೇ ಹೆಚ್ಚಾಗಿ ಅನುಭವಿಸಿದವಳು. ಆಕೆ ಸಣ್ಣ ಮಗುವಾಗಿದ್ದಾಗ ತಾಯಿ ತೀರಿಕೊಂಡಿದ್ದಳು. ಸಾಕಿದ್ದ ಚಿಕ್ಕ ತಾಯಿಯ ಮದುವೆಯಾದನಂತರ ಆಕೆಯನ್ನಪ್ಪಿದುದು ಮತ್ತೆ ಏಕಾಂತ. ಹೀಗಾಗಿ ಮದುವೆಯಾದನಂತರವಾದರೂ ಈ ಏಕಾಂತ ಮೌನಗಳು ತನ್ನಿಂದ ದೂರವಾಗಬಹುದೆಂದುಕೊಂಡಿದ್ದಳು, ಮದುವೆಯಾಗಿದ್ದಳು. ಸ್ಪುರದ್ರೂಪಿ ರೋಹಿತ್ ಆಕೆಯ ಜೀವನ ಸಂಗಾತಿಯಾಗಿ ಬಂದ. ಸ್ವಲ್ಪ ದಿನಗಳ ವರ್ಷಗಳ ಮಟ್ಟಿಗಾದರೂ ಆಕೆಯ ನಿರೀಕ್ಷೆ ನಿಜವಾಯಿತು. ಮಗ ಗೌತಮ್ ಹುಟ್ಟಿದ. ಅನಂತರ ಗೌರಿ. ಗೌರಿಯನ್ನು ತುಂಬ ಪ್ರೀತಿಸುತ್ತಿದ್ದ ರೋಹಿತ್ ಗೌರಿಯ ಹಟಾತ್ ಸಾವಿನನಂತರ ಅಂತರ್ಮುಖಿಯಾದ.

* * * * *

ಸೋದರತ್ತೆಯ ಮನೆಯಿಂದ ಮಗ ಗೌತಮ್‌ನೊಂದಿಗೆ. ತನ್ನ ಮನೆಗೆ ಮರಳಿದಾಗ ರೋಹಿತ್ ಮನೆಯಲ್ಲಿಯೇ ಇದ್ದ. ಅಂದು ಶನಿವಾರವಾಗಿದ್ದ ಕಾರಣ ಆಫೀಸಿಗೆ ರಜೆಯಿತ್ತು. ಗೌತಮ್ ಇನ್ನಷ್ಟು ಬೆಳ್ಳಗೆ ದಪ್ಪಗಾಗಿದ್ದವನಂತೆ ಕಂಡು ಬಂದ ರೋಹಿತ್‌ಗೆ.

"ನೀವೀಗ ಬಂದುದು ಒಳ್ಳೆಯದೇ ಆಯ್ತು ಪ್ರಿಯಾ" ಎಂದ ರೋಹಿತ್ ಹೆಂಡತಿಯನ್ನು ಆತ್ಮೀಯವಾಗಿ ಸ್ವಾಗತಿಸುವ ದನಿಯಲ್ಲಿ. ಪ್ರಿಯಾಗೆ ಖುಶಿಯಾಯಿತು.

"ನಿಮಗೇನು ಗೊತ್ತು, ನೀವಂತೂ ಬರಲಿಲ್ಲ. ಸಿಕ್ಕ ಸ್ವಾತಂತ್ರ್ಯವನ್ನು ನಿಮಗಿಷ್ಟ ಬಂದ ರೀತಿಯಲ್ಲಿ ಅನುಭವಿಸಿದಂತೆ ಕಾಣುತ್ತದೆ. ನಾನಲ್ಲಿ ದ್ವೀಪದಲ್ಲಿರುವವಳಂತೆ ಚಡಪಡಿಸಿದೆ."

"ಹೇಗಿದ್ದಾರೆ ನಿನ್ನ ಸೋದರತ್ತೆ?"

"ಚೆನ್ನಾಗಿದ್ದಾರೆ. ಗೌತಮ್ ತುಂಬ ಬೆಳೆದಿದ್ದಾನೆಂದು ಹೇಳಿದರು. ಇನ್ನೊಂದಿಷ್ಟು ವರ್ಷಗಳಲ್ಲಿ ಅವ ನಿಮಗಿಂತಲೂ ಎತ್ತರವಾಗುತ್ತಾನೆಂದು."

ಕ್ರಾಂತಿ, ವಾಂತಿ

ಕ್ರಾಂತಿಕಾರನಾಗುವ
ನೆಂದು ಕನಸು ಕಾಣುತ್ತಿ
ದ್ದವ ಅದು ಬರೀ
ಭ್ರಾಂತಿ ಎಂದರಿ
ವಾದಾಗ ಕಂಡ
ಕನಸನ್ನೆಲ್ಲ ಕಕ್ಕಿ
ಕಕ್ಕಿ ಮಾಡಿಕೊಂಡ
ನಲ್ಲ ವಾಂತಿ.

— ರೇಣು ಹೊಂಗಲ್



ರೋಹಿತ್ ಈ ಮಾತಿಗೆ ತಲೆಯಾಡಿಸಿದ.

"ನೀವು ಖುಶಿಯಾಗೇ ಇದ್ದಂತೆ ಕಾಣುತ್ತೀರಿ ನಾನಿಲ್ಲದ ವೇಳೆ." ಕಣ್ಣು ಮಿಟುಕಿಸಿದಳು.

"ಸ್ವಲ್ಪ ಮಟ್ಟಿಗೆ ಸ್ವಾತಂತ್ರ್ಯ ಸಿಕ್ಕಿತೆನ್ನುವುದು ನಿಜ."

ಆಗ ಅವರಿಬ್ಬರೂ ಬೆಡ್ ರೂಮಿನಲ್ಲಿದ್ದರು. ರೋಹಿತ್ ಕಿಟಕಿಯ ಬಳಿ ಸರಿದು ಹೊರಗೆ ನೋಡಿದ. ಸಣ್ಣಗೆ ಮಳೆ ಸುರಿಯುತ್ತಲಿತ್ತು ಹೊರಗಡೆ. ಆಕಾಶ ಅಷ್ಟು ತಿಳಿಯಾಗಿರಲಿಲ್ಲ. ಹಾಗೇ ಅದನ್ನು ನೋಡಿದವನ ಮನಸ್ಸಿನಲ್ಲೂ ಮೋಡಗಳೇ ತುಂಬಿಕೊಂಡಂತೆ, ನೆನಪಿನ ಮಳೆ ಸುರಿಯುತ್ತಲಿರುವಂತೆನಿಸಿತು. ಪ್ರತಿಮಾಳ ನೆನಪು.

"ನಿನ್ನೆ ರಾತ್ರಿ..."

ಪ್ರಿಯಾ ಏನನ್ನೋ ಹೇಳಲು ಮೊದಲು ಮಾಡಿದಳು.

"ನಿಮಗೆ ನಮ್ಮ ನೆನಪಾಯಿತೆಂದುಕೊಳ್ಳುತ್ತೇನೆ. ನನಗಂತೂ ತುಂಬ ಆಯಿತು."

"ನನಗೂ" ಎಂದವನ ದನಿಯಲ್ಲಿ ಕೃತಕತೆ ಇತ್ತೇ? ಪ್ರತಿಯಾಗಿ ಪ್ರಿಯಾ ಸುಂದರವಾಗಿ ನಕ್ಕಳು.

ಆದರೆ ಅಲ್ಲಿ ಹೋಗುವಾಗ ಇಟ್ಟಿದ್ದ ಹೂವೇ ಇದೆ. ಅಳುವಂತಾಯಿತು ಪ್ರಿಯಾಗೆ ರೋಹಿತ್‌ನ ಉದಾಸೀನವನ್ನು ಕಂಡು. ಹಿಂದೆಂದೂ ಅವ ಹೀಗಿರಲಿಲ್ಲ. ಪ್ರತಿದಿನವೂ ಹೂಗಳನ್ನು ಬದಲಿಸುತ್ತಿದ್ದ. ಆದರೆ ಯಾಕೆ ಈ ಬದಲಾವಣೆ ಅವನಲ್ಲಿ ಇತ್ತೀಚೆಗೆ?

ಪ್ರಿಯಾ ಆ ಒಣಗಿದ ಹೂವನ್ನು ತೆಗೆದು ಕಿಟಕಿಯ ಹೊರಗೆ ಬಿಸುಟುದನ್ನು ನೋಡಿದ ರೋಹಿತ್. ತಾನದನ್ನು ಮರೆತೆ ಎಂದು ಏನಾದರೂ ಸಬೂಬು ಹೇಳಬಹುದಾಗಿತ್ತು. ಆದರೆ ಅದನ್ನಾಕೆ ನಂಬುವುದಿಲ್ಲ ಎನ್ನುವುದವನಿಗೆ ಗೊತ್ತು.

ಗೌತಮ್‌ನನ್ನು ಕರೆದು ಸಿಗರೆಟ್ ತರುವಂತೆ ಹೇಳಿ ಹಣ ಕೊಟ್ಟು ಹೊರಗೆ ಕಳಿಸಿದ ರೋಹಿತ್. ಗೌತಮ್ ಹೊರ ಹೋದನಂತರ ಬರುವುದೊಂದಿಷ್ಟು ಹೊತ್ತು ತಡವೇ ಆಗುತ್ತದೆ. ತನ್ನ ಸ್ನೇಹಿತರನ್ನೆಲ್ಲ ಕಂಡು ಮಾತಾಡಿಸಿ ಬರುತ್ತಾನೆ. ಅದು ಅಲ್ಲಿ ಉಳಿದಿದ್ದ ಅವರಿಬ್ಬರಿಗೂ ಗೊತ್ತು. ಪ್ರಿಯಾ ಹಾಸಿಯೇ ಇದ್ದ ಹಾಸಿಗೆಯನ್ನು ನೋಡುತ್ತ ಕೂತಳು. ಎರಡು ತಲೆ

ದಿಂಬುಗಳಲ್ಲಿ ಒಂದು ಬಹುಕಾಲದಿಂದ ಉಪಯೋಗಿಸಲ್ಪಡದೆ ಹಾಗೇ ಇದೆ. ಬಹುಕಾಲದಿಂದ ಅಂದರೆ ಗೌರಿಯ ಸಾವಿನನಂತರ ಎಂದೂ ಅವರಿಬ್ಬರೂ ಆ ಹಾಸಿಗೆಯ ಮೇಲೆ ಜೊತೆಯಾಗಿ ಮಲಗಿದುದಿಲ್ಲ. ತಾವಿಬ್ಬರೂ ದೂರವುಳಿದುದು ಗೌರಿಯ ಸಾವಿನಂಥ ಕೆಟ್ಟ ನೆನಪಿನಿಂದಾಗಿಯೇ ಎಂದವಳು ಭಾವಿಸಿದ್ದಳಲ್ಲದೆ ತಮ್ಮ ನಡುವೆ ಬೇರೊಬ್ಬಳು ಹೆಣ್ಣಿನ ಪ್ರವೇಶವಾಗಿದೆಯೆನ್ನುವುದವಳು ಕನಸಿನಲ್ಲಿ ಕೂಡ ಕಲ್ಪಿಸದ ಸಂಗತಿ.

ಬರಿದಾದ ಹಾಸಿಗೆಯನ್ನು ಅದರ ಮೇಲೆ ಬಹುಕಾಲದಿಂದ ಉಪಯೋಗಿಸಲ್ಪಡದೆ ಹಾಗೇ ಉಳಿದ ಒಂದು ತಲೆದಿಂಬನ್ನು ನೋಡಿ ಮುಖ ಮುಚ್ಚಿಕೊಳ್ಳುವಂತಾಯಿತವಳಿಗೆ ತನ್ನ ಕೈಗಳಿಂದ. ಮುಖ ಮುಚ್ಚಿಕೊಂಡಳು. ಮೌನ ಹಾಗೇ ಮುಂದುವರಿದಾಗ ಕೆಲಸದ ನೆವನ ಮಾಡಿಕೊಂಡು ಕೆಳಗಿನ ಕಿಚನ್ ಕಡೆ ನಡೆದಳು. ರೆಫ್ರಿಜರೇಟರ್ ತೆರೆದಾಗ ಅಲ್ಲಿ ಆಕೆಗೆ ಬೇಕಾಗಿದ್ದುದೆಲ್ಲವೂ ಇದ್ದುದು ಗಮನಕ್ಕೆ ಬಂತು.

ಮೇಲೆ ಬಂದು ಇನ್ನೂ ಹಾಗೇ ನಿಂತೇ ಇರುವ ಗಂಡನನ್ನು ತಮಾಷೆಗೆಳೆಯಬೇಕೆನಿಸಿತವಳಿಗೆ "ನಾನಿಲ್ಲಿ ಇಲ್ಲದಾಗ ನಿಮ್ಮೆಲ್ಲ ಹಳೆಯ ಗರ್ಲ್ ಫ್ರೆಂಡ್‌ಗಳನ್ನು ಕಂಡು ಬಂದಿರಾ ಮತ್ತೆ?'' ಛೇಡಿಸಿದಳು.

"ನನಗಾರೂ ಗರ್ಲ್ ಫ್ರೆಂಡ್‌ಗಳಿಲ್ಲ.''

ಪ್ರಿಯಾಳ ಮುಖದಲ್ಲಿ ನಗು ಕಾಣಿಸಿತು.

"ನಾನು ನಿಮ್ಮ ಕಾಲು ಹಿಡಿದು ಈಚೆಗೆ ಎಳೆಯುತ್ತಿದ್ದುದರಿಂದ ಹಾಗಾಯಿತು.''

ಅವ ತನ್ನ ಮಾತಿನ ಸರಣಿಯನ್ನು ಬೇರೆಡೆಗೆ ತಿರುಗಿಸಿದ. "ನೀನು ನಿನ್ನ ಜೊತೆ ಕ್ಯಾಮರಾ ಒಯ್ದಿದ್ದೀಯಲ್ಲ, ಅಲ್ಲಿ ಯಾವ್ಯಾವ ಫೋಟೋಗಳನ್ನು ತೆಗೆದೆ?''

"ಹೌದು ಅವನ್ನೆಲ್ಲ ತಂದಿದ್ದೇನೆ. ಇನ್ನೂ ಡೆವಲಪ್ ಮಾಡಲಿದೆ. ಕೆಲವು ನೈಸ್ ಶಾಟ್‌ಗಳಿವೆ ಗೌತಮ್‌ನದು.''

ಆ ಮಾತಿಗೆ ಕಿವಿಕೊಡದೆ ರೋಹಿತ್ ಸಿಗರೆಟ್ ಹಚ್ಚಿಕೊಂಡು ಹೊರನಡೆದ.

* * * * *

ಮರುದಿನ ಮನೆಯಲ್ಲಿ ಪ್ರಿಯಾ ಇಲ್ಲದ ಸಮಯಕ್ಕಾಗಿ ಕಾದು ಪ್ರತಿಮಾಳ ಫ್ಲಾಟ್‌ನ ನಂಬರ್‌ಗೆ ಡಯಲ್ ಮಾಡಿದ ರೋಹಿತ್. ಆದರೆ ಪ್ರತಿಮಾಳಿಂದ ಉತ್ತರ ಬರಲಿಲ್ಲ. ಒಂದು ಬಗೆಯ ನಿರಾಶೆಯಾಯಿತವನಿಗೆ. ಒಂದು ಬಗೆಯ ಮೋಡಿಯನ್ನೇ ಹಾಕಿತ್ತವನಿಗೆ ಪ್ರತಿಮಾಳ ವ್ಯಕ್ತಿತ್ವ. ಪ್ರಿಯಾ ಬರುವುದರ ಮುಂಚಿನ ದಿನ ಸಂಜೆಯೆಲ್ಲ ಅವಳೊಂದಿಗೆ ಹಾಯಾಗಿ ಕಳೆದಿದ್ದ ನೆನಪುಗಳನ್ನು ಮೆಲುಕು ಹಾಕಿದ.

ಆಫೀಸಿಗೆ ಬಂದವನು ಮತ್ತೊಮ್ಮೆ ಪ್ರತಿಮಾಳ ಫ್ಲಾಟ್‌ಗೆ ಫೋನ್ ಮಾಡಿದ. ಆಗಲೂ ನಿರುತ್ತರ. ಮತ್ತೆ ಆಕೆ ಕೆಲಸ ಮಾಡಿಕೊಂಡಿರುವ ಆಫೀಸಿಗೆ. ಅಲ್ಲಾಕೆ ಸಿಕ್ಕಿದಳು. ಫೋನ್‌ನ ಮೂಲಕವೇ ಅವರೊಂದು ನಿರ್ಧಾರಕ್ಕೆ ಬಂದರು ಆಕೆಯ ಫ್ಲಾಟಿನಲ್ಲಿ ಬಂದು ಆಕೆಯನ್ನವ ಕಾಣುವುದು ಎಂದು. ಕುತೂಹಲಕರವಾದ ಸಂಗತಿಯೆಂದರೆ ಆಕೆಗೆ ಇಬ್ಬರು ಸ್ನೇಹಿತೆಯರಿರುವುದನ್ನು ಮತ್ತು ಅವರಿಬ್ಬರೂ ರಜೆಯ ಮೇಲೆ ಹೋದುದನ್ನು ಅವಳಿಂದ ತಿಳಿದುದು. ಒಬ್ಬಳು ಜಾನಕಿ ಮೆಂಡನ್ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿರುವವಳು. ಇನ್ನೊಬ್ಬಳು ಅನಸೂಯ, ಪ್ರತಿಮಾಳ ಆತ್ಮೀಯ ಸ್ನೇಹಿತೆ. ಆಕೆ ಬಯಾಲಜಿಯ ವಿದ್ಯಾರ್ಥಿನಿ ಕಾಲೇಜಿನಲ್ಲಿ.

ಬಿರುಗಾಳಿ ಬೀಸುತ್ತಿದ್ದಾಗ ಮಾಡಿದ ಪ್ರತಿಜ್ಞೆಗಳು, ಬಿರುಗಾಳಿ ಬೀಸಿ ಹೋದ ಮೇಲೆ ಮರೆತು ಹೋಗುತ್ತವೆ.

— ಅನಾಮಿಕ

ಶಿಷ್ಯನ ಜ್ಞಾನಕ್ಕೆ ಸಹಿ ಹಾಕುವುದಷ್ಟೇ ಗುರುವಿನ ಕೆಲಸ. ಉಳಿದೆಲ್ಲ ವಿಷಯದಲ್ಲಿ ಶಿಷ್ಯ ಸ್ವಾವಲಂಬಿ. — ವಿನೋಬಾ

ಸಂಗ್ರಹ : **ಬಿ. ಮ. ಜಂಗಳಿ**



ರೋಹಿತ್ ಆಕೆಯ ಫ್ಲಾಟ್‌ಗೆ ಹೋದಾಗ ಪ್ರತಿಮಾ ಇನ್ನೂ ಡ್ರೆಸ್ ಮಾಡಿಕೊಂಡಿರಲಿಲ್ಲ. ಆಕೆಯೇ ಬಂದು ಬಾಗಿಲು ತೆಗೆದಾಗ ನೋಡಿದವನಿಗೆ ಆಶ್ಚರ್ಯವಾಗಿ ಕಂಡಿತು. ತಿಳಿಗುಲಾಬಿಯ ನೈಟ್ ಗವುನ್‌ನಲ್ಲಾಕೆ ತೀರಾ ಉದ್ದವಾಗಿ ಕಂಡಳು. ಆದರೆ ಈ ಹಿಂದಿಗಿಂತಲೂ ಹೆಚ್ಚು ಸುಂದರಿಯಾಗಿಯೂ ಕಂಡಳು.

"ಟೆರಿಬ್ಲೀ ಸಾರಿ'' ಆಕೆಯೆಂದಳು. "ನಾನೆಂದೂ ಪಂಕ್ಚುವಲ್ ಆಗಿ ಇದ್ದವಳಲ್ಲ.''

ಅವ ತನ್ನ ಕೈಯಲ್ಲಿದ್ದ ಬ್ಯಾಗನ್ನು ಬದಿಗಿರಿಸಿ ಕೂತು ನಕ್ಕ. "ಎಂದಿಗೂ?''

"ಹಾಗೆಂದು ನನ್ನ ಸ್ನೇಹಿತೆಯರೇ ಹೇಳ್ತಾರೆ. ನನಗೆ ಸಮಯದ ಮಹತ್ವವೇ ತಿಳಿದಿರುವುದಿಲ್ಲವೆಂದು.''

"ಹೀಗೆ ಬಂದು ನಿನ್ನನ್ನು ಭೇಟಿಯಾಗುತ್ತಿದ್ದರೆ ನನಗೇ ಹೇಳಿಯಾರು ಯಾರಾದರೂ ಸಮಯದ ಮಹತ್ವ ತಿಳಿಯದವನೆಂದು.''

"ನಿಜವಾಗಿಯೂ ಹೇಳಬೇಕೆಂದರೆ ರೋಹಿತ್ ನಾನೀ ಸಮಯವನ್ನು ವ್ಯವಸ್ಥಿತವಾಗಿ ಉಪಯೋಗಿಸಿಕೊಳ್ಳುವವಳೇ ಅಲ್ಲ.''

ಆತ ತಿರುಗಿ ಹಾಗೆಂದವಳನ್ನು ನೋಡಿದ. ಆಕೆಯ ತುಟಿಗಳಲ್ಲೆಂದೂ ಇಂಥ ಆಕರ್ಷಣೆ ಅವನಿಗೆ ಕಂಡದ್ದಿಲ್ಲ. ಈ ಹಿಂದೆ ತೆಳ್ಳಗೆ ನಸುಗೆಂಪಾದ ತುಟಿಗಳು. ಮುಖದಲ್ಲಾವ ಮೇಕಪ್ ಇರಲಿಲ್ಲ. ಮಾತ್ರವಲ್ಲ ಕೂದಲನ್ನು ಕೂಡ ಬಾಚಿರಲಿಲ್ಲ ಅವಳು. ಆದರೆ ಅವು ಸಿಲ್ಕ್‌ನಂತೆ ಕಂಡವು ಅವನಿಗೆ. ಯೌವನ ತುಂಬಿಕೊಂಡಿರುವ ಆಕೆಯ ದೇಹ ಸೌಂದರ್ಯದ ಪರಿಯೇ ವಿಶಿಷ್ಟವಾದುದು. ಮತ್ತೆ ಆ ನೀಲಿ ಕಣ್ಣುಗಳು.

"ಅದೇನು ಇವತ್ತು ನನ್ನ ಜೊತೆ ಬರೇ ಚರ್ಚೆಯನ್ನು ಮಾಡಬೇಕೆಂದುಕೊಂಡಿದ್ದೀಯಾ?'' ಕೇಳಿದನವ ಸಿಗರೆಟ್‌ನ ಪ್ಯಾಕ್ ಹೊರತೆಗೆದು ಅದರಿಂದೊಂದು ಸಿಗರೆಟ್ ಹಚ್ಚಿಕೊಳ್ಳುತ್ತ, ಆಕೆ ತಲೆಯಲುಗಿಸಿದಳು.

"ಹಾಗೆಂದೇ ಕಾಣುತ್ತದೆ.''

"ಹಾಗಾದರೆ ಈ ಸಂಜೆಯನ್ನು ಖುಶಿಯಾಗಿ ಕಳೆಯಬಹುದೆನಿಸ್ತದೆ.''

"ಇಬ್ಬರು ಬುದ್ಧಿವಂತರು ವಾದ ಮಾಡುತ್ತಲಿದ್ದರೆ ಕುತೂಹಲಕರವಾಗಿರುತ್ತದೆಯೇ ಹೊರತು ಬೋರ್ ಎನಿಸುವುದಿಲ್ಲ.''

"ನನ್ನ ಮನಸ್ಸಿನಲ್ಲಿರೋದನ್ನೇ ಹೇಳ್ತಾ ಇದ್ದೀಯ. ಅದು ನಿಜ ನಾವಿಬ್ಬರೂ ಸೇರಿ ಒಂದು ವಿಷಯವಾಗಿ ವಾದಿಸಿದರೆ ಯಾವುದೇ ಡಿಬೇಟ್‌ನಲ್ಲಿ ಗೆಲ್ಲಬಲ್ಲೆವೆನಿಸ್ತದೆ. ನನ್ನನ್ನು ನಿನ್ನೆದುರು ಹೊಗಳಿಕೊಳ್ಳಬೇಕೆಂಬ ಉದ್ದೇಶದಿಂದ ಹೇಳ್ತಾ ಇಲ್ಲ. ಐ ನ್ಹೋ ಮೈ ಲಿಮಿಟೇಶನ್ಸ್. ನಿನ್ನ ಬುದ್ಧಿಮತ್ತೆಗೆ ಸರಿಸಾಟಿಯಾದುದಲ್ಲ ಎಂದು ನನಗನ್ನಿಸಿದೆ ನಿನ್ನ ಪರಿಚಯವಾದ ಬಳಿಕ."

"ನೀವು ಹೇಳುವಂತೆ ನಾನು ನಿಮ್ಮಷ್ಟು ಜಾಣೆಯೇನಲ್ಲ." ಆಕೆಯೆಂದಳು ಅವನನ್ನೇ ನೋಡುತ್ತ. ಇನ್ನೂ ಡ್ರೆಸ್ ಮಾಡುವ ಆತುರ ಅವಳಿಗಿಲ್ಲದವಳಂತೆ. ಆದರೆ ಪ್ರತಿಮಾಳ ರೀತಿಯೇ ಅಂತಾದ್ದು. "ನನಗೂ ನನ್ನ ಲಿಮಿಟೇಶನ್ಸ್ ಗೊತ್ತಿದೆ." ಹೇಳಿದಳು. "ಒಂದು ಪದವಿಯನ್ನು ತೆಗೆದುಕೊಂಡೆನೆಂದ ಮಾತ್ರಕ್ಕೆ ಯಾರೂ ಬುದ್ಧಿವಂತರಾಗಿ ಬಿಡುವುದಿಲ್ಲ. ಪ್ರತಿ ಸಾರಿಯೂ ನನಗೆ ಅನಿಸುತ್ತದೆ ನಿಮ್ಮಂಥವರನ್ನು ಕಂಡಾಗಲೆಲ್ಲ ನನ್ನ ಬುದ್ಧಿಮತ್ತೆ ಅಷ್ಟು ಚೆನ್ನಾಗಿಲ್ಲ. ನಾನಿನ್ನೂ ಕಲಿಯಬೇಕಾದುದು ಬಹಳಷ್ಟಿದೆ ಎನ್ನುವುದು."

"ನಿನ್ನನ್ನು ಭೇಟಿಯಾದನಂತರ ನನಗೂ ಹಾಗೆನಿಸಲಿಕ್ಕೆ ಹತ್ತಿದೆ ಪ್ರತಿಮಾ. ನಾನು ಇನ್ನೂ ಕಲಿಯಬೇಕಾದುದು ಬಹಳಷ್ಟಿದೆ. ಅದನ್ನು ಕಲಿಯಬೇಕು ಎಂದು."

"ಯಾವುದನ್ನು?" ಆಕೆ ತನ್ನ ಕಣ್ಣುಗಳೆರಡನ್ನೂ ಅರಳಿಸಿ ಕೇಳಿದ ರೀತಿ ಮೋಹಕವಾಗಿ ಕಂಡಿತವನಿಗೆ.

"ಆಲ್ ದ ಥಿಂಗ್ಸ್ ದಟ್ ಇಂಟ್ರೆಸ್ಟ್ ಯೂ."

"ಹಾಗೆಂದು ನಾನು ಹೇಳಿದೆನೆಂದು ತಿಳಿಯಬೇಡಿ. ನಿಮಗೆ ನಿಮ್ಮ ಕಲಿಕೆಯ ಬಗ್ಗೆ ತೃಪ್ತಿ ಇದ್ದೇ ಇದೆ. ಯಾವುದನ್ನೇ ಆಗಲಿ ಕಲಿಯಬೇಕೆಂದು ನಿಮಗನಿಸುವುದಿಲ್ಲವೆನ್ನುವುದು ನನಗೆ ಖಾತರಿ ಇದೆ."

"ನೀನು ನನ್ನನ್ನು ಅರ್ಥಮಾಡಿಕೊಂಡಿಲ್ಲ ಎನ್ನುವುದಕ್ಕೆ ಸಾಕ್ಷಿಯಾಗಿದೆ ಈ ಮಾತು. ಹೇಗೆ ವಿವರಿಸಿಬೇಕೆನ್ನುವುದು ತಿಳಿಯುವುದಿಲ್ಲ. ಆದರೆ ಹೀಗೆಂದು ತಿಳಿದುಕೋ. ನಿನ್ನ ಆಸಕ್ತಿಯ ವಿಷಯಗಳೆಲ್ಲವನ್ನೂ ಕಲಿಕೆಯ ಮೂಲಕ ನನ್ನದಾಗಿಸಿಕೊಳ್ಳಕೆಂದು ಅನಿಸುತ್ತದೆ. ನಾನೀತನಕ ಎಂದೂ ಯಾವುದರ ಕುರಿತಾಗಿಯೂ ಯೋಚಿಸಿದುದೇ ಇಲ್ಲ."

"ಯಾಕೆ, ನೀವೆಂದೂ ನಿಮ್ಮ ಹೆಂಡತಿಯ ಜೊತೆ ಯಾವುದೇ ವಿಷಯವಾಗಿ ಚರ್ಚಿಸುತ್ತಿರಲಿಲ್ಲವೇ?"

"ನಿನ್ನೊಡನೆ ಚರ್ಚಿಸಿದಂತೆ ಎಂದಿಗೂ ಇಲ್ಲ."

"ಆದರೆ ಯೂ ಮೀನ್ ಮದುವೆಯಾದ ಬಹಳಷ್ಟು ಕಪಲ್ಸ್‌ಗಳಂತೆ ನೀವು ಸದಾಕಾಲ ಜಗಳಾಡುತ್ತಿದ್ದೀರಿ ಎಂದು ಅರ್ಥವೇ, ಎಂದೂ ಮಾತನಾಡುತ್ತಿರಲೇ ಇಲ್ಲವೇ?"

ಅವನ ಮುಖ ಕೆಂಪಾಯಿತು. ಪ್ರತಿಮಾ ಸತ್ಯಕ್ಕಿಂತ ಎಷ್ಟೋ ಮುಂದೆ ಹೋಗಿದ್ದಾಳೆ ತಿಳಿದುಕೊಳ್ಳುವುದರಲ್ಲಿ ತಮ್ಮಿಬ್ಬರ ಬಗ್ಗೆ ಎನಿಸಿತವನಿಗೆ. ಪ್ರಿಯಾಗೆ ಅಂಥ ಕೆಟ್ಟ ಲೇಬಲ್ ಆಕೆ ಕೊಡುವುದು ಅವನಿಗೆ ಇಷ್ಟವಾಗಲಿಲ್ಲ. ಪ್ರಿಯಾ ಒಬ್ಬಳು ಮೃದು ಹೃದಯಿಯಾದ ಹೆಂಡತಿ ಮತ್ತು ಮಕ್ಕಳ ತಾಯಿಯ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾಳೆನ್ನುವುದನ್ನು ಅವಳಿಗೆ ವಿವರಿಸಿ ಹೇಳಬೇಕೆನಿಸಿತು.

ಪ್ರತಿಮಾ ಕಪಾಟಿನ ಬಳಿ ಸರಿದು ಬಾಗಿಲು ತೆರೆದು ಎರಡು ಗ್ಲಾಸುಗಳನ್ನು ಕೈಗೆತ್ತಿಕೊಂಡಳು. ಹಾಗೇ ಫ್ರಿಜ್ ಬಳಿ ಬಂದು ಬಿಯರ್‌ನ ಒಂದು ಬಾಟಲಿಯನ್ನೂ

"ನಿಮಗಿಂತ ನಮ್ಮ ನಾಯಿ ಎಷ್ಟೋ ಪ್ರಾಮಾಣಿಕವಾಗಿದೆ."

"ಇರಬಹುದು ಚಿನ್ನ, ಆದರೆ ನಿನ್ನ ನಾಯಿ ನಿನಗೆ ಪ್ರತಿ ತಿಂಗಳೂ ಸ್ನೋ, ಪೌಡರ್, ಬ್ಲೌಸ್, ಬ್ರಾ, ಸೀರೆ ತಂದು ಕೊಡುತ್ತಾ?"

– ಎಸ್. ವಿಶ್ವನಾಥ



ಎತ್ತಿಕೊಂಡು ಆವನಿದ್ದಲ್ಲಿಗೆ ಬಂದಳು. "ಯಾಕೋ ನೀವು ನನಗೊಂದು ಒಗಟಾಗಿ ಪರಿಣಮಿಸುತ್ತಿದ್ದೀರಿ." ಬಾಟಲಿಯ ಬೆಣೆ ತೆಗೆದು ಉಕ್ಕುತ್ತಿರುವ ಬಿಯರನ್ನು ನಿಧಾನವಾಗಿ ಗ್ಲಾಸುಗಳಿಗೆ ಸುರುವಿದಳು. ಆಗ ಆತ ಸುಮ್ಮನುಳಿದ. ತನ್ನ ಮತ್ತು ಪ್ರಿಯಾಳ ಕುರಿತಾಗಿ ವಾದಿಸಬೇಕೆನಿಸಿತವನಿಗೆ ಆಕೆಯ ಜೊತೆ.

"ನಾವು ಸಾದಾ ದಂಪತಿಗಳಾಗಿದ್ದೇವೆ ಸಾಮಾನ್ಯವಾಗಿ ಎಲ್ಲ ದಂಪತಿಗಳಂತೆ. ನಿನಗೆ ಗೊತ್ತಿದೆಯೋ ಸ್ವಲ್ಪ ಹಳೆಯದಾಯಿತೆಂದಾಕ್ಷಣ ಇಂಥ ದಾಂಪತ್ಯಗಳು ಕುತೂಹಲಗಳನ್ನು ಕಳೆದುಕೊಳ್ಳುತ್ತವೆ ಪರಸ್ಪರರ ಮಟ್ಟಿಗೆ."

"ಹೌದೇನು?" ಹಾಗೆಂದು ಆತನನ್ನೇ ನೋಡಿದಳಾಕೆ ವಿಲಕ್ಷಣವಾಗಿ.

ದಂಪತಿಗಳು ಪರಸ್ಪರರ ಮಟ್ಟಿಗೆ ಎಷ್ಟು ಹತ್ತಿರದಲ್ಲಿದ್ದಾರೆನ್ನುವುದು ಮುಖ್ಯವಾಗಿರುವುದಿಲ್ಲ ಎಂದೂ. ನಾವಿಬ್ಬರೂ ಮದುವೆಯಾಗಿ ಹದಿನಾಲ್ಕು ವರ್ಷಗಳೇ ಕಳೆದಾದ ಬಳಿಕ ಮತ್ತೆ ಹೇಗೆ ತಾನೇ ಮೊದಲಿನ ಆಸಕ್ತಿಯನ್ನೇ ಉಳಿಸಿಕೊಳ್ಳಬಲ್ಲೆವು? ಮನೆ, ಖರ್ಚು ವೆಚ್ಚ ಮಕ್ಕಳು ಅವರ ಆರೋಗ್ಯ, ವಿದ್ಯಾಭ್ಯಾಸದ ಕಡೆಗೆ ಗಮನ ಇವೆಲ್ಲ ಒಂದು ಚಕ್ರವಷ್ಟೇ ಆಗಿ ಉಳಿಯುತ್ತದೆ ಹೊರತು ಮತ್ತೇನಲ್ಲ."

"ನಿಮಗೆ ತುಂಬ ಜನ ಸ್ನೇಹಿತರಿರಬೇಕಲ್ಲ?"

ಕಣ್ಣು ಮಿಟುಕಿಸಿದಳು, ಅವನಿಗೆ ಸಿಟ್ಟು ಬಂತು.

"ನೋಡಿಲ್ಲಿ ಪ್ರತಿಮಾ ನೀನೊಬ್ಬಳು ಸಣ್ಣ ಮಗುವಿನಂತೆ ಮಾತನಾಡಬೇಡ. ಸ್ನೇಹಿತರೆಂದೂ ಸ್ನೇಹಿತರೇ. ನನ್ನ ಪ್ರಶ್ನೆಗೆ ಉತ್ತರ ಹೇಳು. ನಿನಗೂ ಸ್ನೇಹಿತೆಯರಿದ್ದಾರೆ. ಅವರೊಂದಿಗೆ ಕಾಲ ಕಳೆಯುವುದನ್ನು ಬಿಟ್ಟು ನನ್ನಂಥವನನ್ನೇಕೆ ಬರಹೇಳಿದೆ? ನನ್ನ ಕುರಿತಾಗಿ ಯಾಕೆ ಅಷ್ಟೊಂದು ತಲೆಕೆಡಿಸಿಕೊಳ್ಳುತ್ತೀ?"

ಆಕೆ ತತ್‌ಕ್ಷಣ ಆ ಮಾತಿಗೆ ಉತ್ತರಿಸಲಿಲ್ಲ. ಸೋಫಾದ ಮೇಲೆ ಕೂತಿದ್ದವಳು ಒರಗಿದಳು. ಆ ಇಡಿಯ ಫ್ಲಾಟ್ ತುಂಬ ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿ ಸಿಂಗರಿಸಲ್ಪಟ್ಟುದು. ರೋಹಿತ್ ಮತ್ತು ಪ್ರಿಯಾ ಸಂದರ್ಶಿಸಿದ ಯಾವ ಫ್ಲಾಟ್‌ಗಳೂ ಇಷ್ಟೊಂದು ನಾಜೂಕುತನದಿಂದ ಕೂಡಿರಲಿಲ್ಲ.

"ನೀನು ನನ್ನ ಪ್ರಶ್ನೆಗೆ ಉತ್ತರಿಸಲೇ ಇಲ್ಲ ಮತ್ತೆ?"

"ನಾನಿನ್ನೂ ಯೋಚಿಸುತ್ತಲೇ ಇದ್ದೇನೆ."

"ಹೌದೇನು?"

ಆಕೆ ಅವನನ್ನೊಮ್ಮೆ ನೇರವಾಗಿ ನೋಡಿ ತುಟಿಗಳಲ್ಲೇ ನಕ್ಕಳು. "ಏನೆಂದುಕೊಳ್ಳುತ್ತೀರಿ? ಯಾವುದಾದರೂ ಪ್ರಿಯವೆನಿಸಬಹುದಾದ ಸಂಗತಿ ನನ್ನ ಬಾಯಿಯಿಂದಲೇ ಬರಲೆಂದು ನಿರೀಕ್ಷಿಸುತ್ತಿರುವಂತಿದೆ."

"ನನ್ನ ಜೊತೆ ಬರಲು ಹಿಂಜರಿಯಬೇಡ" ಎಂದನವ. "ನನಗೆ ಖಂಡಿತವಿದೆ ನೀನು ನನ್ನ ಕರೆಗೆ ನಿರಾಕರಿಸುವುದಿಲ್ಲವೆಂದು. ಯಾಕೆಂದರೆ ನಾನು ಈಗ ಏಕಾಂಗಿಯಾಗಿದ್ದೇನೆ ಎಂದು ಅಥವಾ ನನಗಿಂತ ಹೆಚ್ಚು ಬುದ್ಧಿವಂತರಾದವರ ಸಹವಾಸ ಬೇಕೆನಿಸುತ್ತದೆಯಾ?"

ಈ ಮಾತಿಗೆ ಮಾತ್ರ ಪ್ರತಿಮಾ ಜೋರಾಗಿ ನಕ್ಕು ಬಿಟ್ಟಳು.

"ನೀವಿನ್ನೂ ಅತ್ಯಂತ ಮುಗ್ಧ ಮನಸ್ಸಿನವರಾಗಿಯೇ ಉಳಿದಿದ್ದೀರಿ. ಸ್ಟಾಕ್ ಬ್ರೋಕರ್ ಎಂದ ಮಾತ್ರಕ್ಕೆ ವ್ಯವಹಾರಿಕ ಜಗತ್ತಿನಲ್ಲಿ ಪಳಗಿದವರೇ ಆಗಿರಬೇಕೆಂದೇನೂ ಇಲ್ಲವಲ್ಲ? ಆದರೆ ನಾನಿನ್ನೂ ವಿದ್ಯಾರ್ಥಿಗಳ ಪ್ರಪಂಚದಲ್ಲಿಯೇ ಇದ್ದೇನೆನಿಸುತ್ತಿದೆ. ಜಗತ್ತಿನಲ್ಲೆಲ್ಲ ವ್ಯಯಕ್ತಿಕ ಆಸೆಗಳು. ಆಲ್ ದಟ್ ನಾನ್‌ಸೆನ್ಸ್. ನಾನು ಖಂಡಿತವಾಗಿಯೂ ಹೇಳುತ್ತೇನೆ ಇಂಥವೆಲ್ಲ ಆಸೆಗಳಿರುವ ಗಂಡಸನ್ನು ನಾನಂತೂ ಖಂಡಿತ ಮದುವೆಯಾಗಲಾರೆ. ನನ್ನ ಬದುಕನ್ನು ನಾನೇ ನನಗಿಷ್ಟ ಬಂದ ರೀತಿಯಲ್ಲಿ ನಡಸಬೇಕೆಂಬಾಸೆ ಇದೆ."

ಹಾಗೆ ಹೇಳುತ್ತಿದ್ದವಳ ಮಾತುಗಳನ್ನು ಕೇಳಿ ಜೋರಾಗಿ ನಕ್ಕುಬಿಟ್ಟ ರೋಹಿತ್. ಸಲುಗೆಯಿಂದ ಆಕೆಯ ಹೆಗಲಮೇಲೆ ಕೈ ಹಾಕಿದ. "ನೀನು ಮದುವೆಯಾಗು ಅಥವಾ ಆಗದೇ ಇರು ಆ ಬಗ್ಗೆ ನಾನಂತೂ ತಲೆಕೆಡಿಸಿಕೊಳ್ಳುವುದಿಲ್ಲ. ನಾನಂತೂ ಜೀವನನುದ್ದಕ್ಕೂ ನಿನ್ನಂಥವಳಿಂದ ನಿರ್ದೇಶಿಸಲ್ಪಡುವ ಹುಚ್ಚನಾಗಲಾರೆನೆನೆಸುತ್ತದೆ."

ಆಕೆ ಗಂಭೀರಳಾದಳು. ತಗ್ಗಿದ ಸ್ವರದಲ್ಲಿ ಹೇಳಿದಳು.

ಡಾರ್ಲಿಂಗ್ ನೀವು ಹುಚ್ಚನಾಗಲಾರಿರಿ.ಆದರಿನ್ನೂ ಶಾಲೆಗೆ ಹೋಗುವ ಹುಡುಗನಂತಿದ್ದೀರಿ ಮುಗ್ಧತೆಯಲ್ಲಿ ಎಂದೆ. ಅದು ನಿಮ್ಮ ತಪ್ಪಲ್ಲ. ನೀವು ಕಲಿತ ವಿದ್ಯೆ ಬೆಳೆದು ಬಂದ ಸಂಸ್ಕೃತಿ ನಿಮ್ಮನ್ನು ಹಾಗೆ ಇಟ್ಟಿದೆ ಎಂದುಕೊಳ್ಳಬೇಕಷ್ಟೆ ಆದರೆ ನಿಮ್ಮಲ್ಲೊಂದು ಬಗೆಯ ಚಾರ್ಮ್ ಇದೆ. ನಾನು ನಿಮ್ಮನ್ನು ಛೇಡಿಸುವಾಗಲಂತೂ ತುಂಬ ಮುದ್ದಾಗಿ ಕಾಣಿಸುತ್ತೀರಿ. ನಿಮ್ಮನ್ನು ಛೇಡಿಸುವುದು ಸುಲಭ."

ಆಕೆ ಅವನನ್ನು ಡಾರ್ಲಿಂಗ್ ಎಂದು ಸಂಬೋಧಿಸಿದ್ದೆಷ್ಟೋ ತಂಪೆರಚಿತ್ತು ಅವನ ಮನಸ್ಸಿಗೆ. ಅನಂತರ ಮತ್ತು ಆತನ ಹತ್ತಿರಕ್ಕೆ ಸರಿದು ಹೇಳಿದಳವಳು. "ನಾವೀಗ ಜಗಳ ಕಾಯುವುದು ಬೇಡ. ಹೊರಗೆಲ್ಲಾದರೂ ಹೋಗಿ ತಿರುಗಾಡಿಕೊಂಡು ಬರೋಣ. ನಿಮಗೆ ನನ್ನಿಂದೇನಾಗಬೇಕೋ ಅದೆಲ್ಲವನ್ನೂ ಕೊಡಲು ನಾನು ಸಿದ್ಧ, ನನ್ನಿಂದ ಸಾಧ್ಯವಾದುದು ಮಾತ್ರ."

ಆ ಮಾತು ಕೇಳಿದವನ ಮುಖವೆಲ್ಲ ಕೆಂಪಾಯಿತು "ನಿಜವಾಗಿಯೂ?" ತನ್ನ ಕಿವಿಗಳನ್ನೇ ನಂಬಲಾಗಿರಲಿಲ್ಲ ಅವನಿಗೆ.

"ನಿಜವಾಗಿಯೂ ತೀರ್ಮಾನಿಸುವವರು ನೀವೇ." ಹಾಗೆಂದು ನಕ್ಕಳು.

ಆತ ಹತ್ತಿರ ಸರಿದ, ಆಕೆಯನ್ನು ತಬ್ಬಿಕೊಂಡ. "ಹುಚ್ಚು ಹುಡುಗಿ, ಕೊನೆಗಾದರೂ

'ರಾಗಸಂಗಮ'

ಲಾಟರಿ ಡ್ರಾ – ೧೩೪ರ ವಿಜೇತರು

ಕೆ. ವಾಸುದೇವರಾವ್
ಹೊಸೂರು
ಹುಬ್ಬಳ್ಳಿ–21.



ಅರ್ಥಮಾಡಿಕೊಂಡೆಯಲ್ಲ ನನ್ನ ಮನಸ್ಸಿನಲ್ಲೇನಿದೆಯೆಂದು. ನಿನ್ನ ಬಗ್ಗೆ ಹುಚ್ಚು ಹಿಡಿದಂತಾಗಿತ್ತು ನನಗೆ'' ಎಂದು ಆಕೆಯ ತುಟಿಗಳಲ್ಲಿ ತನ್ನ ತುಟಿಯೊತ್ತಿದ. ಆಕೆ ಪ್ರತಿಭಟಿಸಲಿಲ್ಲ.

* * * * *

ಅವರೊಳಗಿನ ಭಾವೋದ್ವೇಗಗಳೆಲ್ಲ ಕರಗಿದ ಮೇಲೆ ಜೊತೆಯಾಗಿ ಕೂತು ಮತ್ತೊಂದಿಷ್ಟು ಬಿಯರ್ ಹೀರಿದರು. ಆತ ಸಿಗರೆಟ್ ಸೇದುತ್ತಲಿದ್ದರೆ ಆಕೆ ತನ್ನ ಮೊದಲ ಪ್ರೇಮಿಯ ಬಗ್ಗೆ ಹೇಳಲಾರಂಭಿಸಿದ್ದಳು. ಪ್ರೇಮಿಯೆಂದರೆ ಆಕೆಯೆಂದೂ ಆತನಿಂದ ಉಪಯೋಗಿಸಲ್ಪಟ್ಟಿರಲಿಲ್ಲ. ಆಕೆಯೆನ್ನುವುದನ್ನು ನಂಬಬಹುದಾದರೆ. ಕೇಳುತ್ತಲಿದ್ದ ರೋಹಿತ್‌ಗೆ ಆಕೆಯ ಬಗೆಗೇನೂ ಕೆಟ್ಟ ಭಾವನೆ ಬರಲಿಲ್ಲ ಬದಲಾಗಿ ನೇರ ನಡವಳಿಕೆಯ ಬಗ್ಗೆ ಮೆಚ್ಚುಗೆಯಾಯಿತು.

"ನನ್ನನ್ನು ಉಪಯೋಗಿಸಿಕೊಂಡಂತೆ ಆತನನ್ನೂ?''

ಆತನ ಪ್ರಶ್ನೆಯನ್ನಾಕೆ ಅರ್ಧದಲ್ಲೇ ತಡೆದಳು. "ನೀವು ಸುತ್ತು ಬಳಸಿ ಪ್ರಶ್ನೆ ಕೇಳಬೇಡಿ.'' ಹಾಗೆಂದವಳ ದನಿಯಲ್ಲಿನ ತೀಕ್ಷ್ಣತೆಗೆ ಆತ ಬೆಚ್ಚಿದ. ಮತ್ತೆ ನಾನು ತಪ್ಪು ಮಾಡಿದೆನೆನಿಸಿ ಪಶ್ಚಾತ್ತಾಪ ಪಟ್ಟ.

"ನೀನು ಏನು ಬೇಕಾದರೂ ತಿಳಿದುಕೋ. ನನ್ನದಕ್ಕಿಂತಲೂ ಹೆಚ್ಚು ಖುಶಿ ಕೊಟ್ಟಿತ್ತೇ ನಿನಗೆ ಬೇರೆಯವರ ಸ್ನೇಹ ಎನ್ನುವುದನ್ನು ತಿಳಿಯಬೇಕಾಗಿತ್ತು ನನಗೆ. ಅದಕ್ಕಾಗಿ ಹಾಗೆ ಕೇಳಿದೆ.'' ನೇರವಾಗಿ ಹೇಳಿದ.

"ಅದನ್ನು ನನ್ನ ಬಾಯಿಯಿಂದಲೇ ಕೇಳುವುದರಿಂದ ನಿಮಗೆ ಖುಶಿಯಾಗುತ್ತದೆಯೇ?'' ತುಂಟತನದಿಂದ ಕೇಳಿದಳು. ಪ್ರತಿಯಾಗಿ ಆತ ಆಕೆಯ ಕೈಬೆರಳನ್ನು ಹಲ್ಲುಗಳ ಮಧ್ಯೆ ತಂದು ಕಚ್ಚಿಬಿಟ್ಟ.

"ನನ್ನ ಬಗ್ಗೆ ಹೇಳಬೇಕೆಂದರೆ ನಾನಿಂಥ ಕೆಟ್ಟ ಹುಡುಗಿಯನ್ನು ಕಂಡೇ ಇಲ್ಲ. ಐ ಪಾಸಿಟಿವ್‌ಲೀ ಡಿಸ್‌ಲೈಕ್ ಯೂ.''

ಅವನ ಆ ಮಾತಿಗೆ ಆಕೆ ಜೋರಾಗಿ ನಕ್ಕುಬಿಟ್ಟಳು. "ನೀವು ಇಷ್ಟಪಡುವಂಥ ಹುಡುಗಿಯ

ಜೊತೆ ಮತ್ತೇನು ಮಾಡುತ್ತೀರಿ?''

ಆ ಮಾತಿಗೆ ಉತ್ತರವಾಗಿ ಅವ ತನ್ನ ಕೆನ್ನೆಗೆ ಆಕೆಯ ಕೆನ್ನೆಯನ್ನು ಹತ್ತಿರ ತಂದು ಉಜ್ಜಿದ ಪ್ರೀತಿಯಿಂದ. "ಐ ಆ್ಯಮ್ ಟೆರಿಬ್ಲೀ ಇನ್ ಲವ್ ವಿದ್ ಯೂ ಪ್ರತಿಮಾ'' ಎಂದ ಭಾವೋದ್ವೇಗದ ದನಿಯಲ್ಲಿ. ಆ ಮಾತಿಗೆ ಆಕೆ ಎದ್ದು ಕುಳಿತು ತಲೆಗೂದಲನ್ನು ಕೊಡವಿಕೊಂಡಳು. "ನಮ್ಮ ಪ್ರೀತಿಗೆ ಅಂಥ ಭವಿಷ್ಯವೇನೂ ಇಲ್ಲ ರೋಹಿತ್. ನೀವು ವಿವಾಹಿತರು ಈಗಾಗಲೇ ಮತ್ತು ನಾನು ನನ್ನ ಕೆಲಸಕ್ಕಾಗಿ ನನ್ನನ್ನು ಅರ್ಪಿಸಿಕೊಂಡವಳು.'' ವಾಸ್ತವವಾದಿಯಂತೆ ಮಾತನಾಡಿದ್ದಳವಳು. ಆ ಮಾತು ಆತನಲ್ಲೊಂದು ಬಗೆಯ ಸೋಲಿನ ಪ್ರಜ್ಞೆಯನ್ನು ಸೃಷ್ಟಿಸಿತ್ತು. ತಮ್ಮಿಬ್ಬರ ಪರಿಸ್ಥಿತಿಗಳ ಬಗ್ಗೆ ಆತ ಎಂದೂ ಯೋಚಿಸಿದವನಲ್ಲ ಆಕೆಯಿಂದ ಈ ಮಾತು ಬರುವುದಕ್ಕೆ ಮುನ್ನ. ಬೇರೊಂದು ಮಗ್ಗುಲಲ್ಲಿ ಹೆಂಡತಿ ಪ್ರಿಯಾಳ ಸ್ಥಾನಮಾನವನ್ನವನಿಗೆ ನೆನಪಿಸಿ ಕೊಟ್ಟಿದ್ದಳವಳು.

ಪ್ರಿಯಾಳ ವ್ಯಕ್ತಿತ್ವದ ವಿಶ್ಲೇಷಣೆ ನಡೆಸಲಾರಂಭಿಸಿತ್ತವನ ಮನಸ್ಸು ಆಗ. ಆಕೆಯ ಸರಳತೆಯ ಬಗ್ಗೆ ಯೋಚಿಸಲಾರಂಭಿಸಿದ್ದವನು ತ್ಯಾಗದ ಬಗೆಗೂ ಯೋಚಿಸಿದ. ಸರಳವಾದ ಉತ್ತರವನ್ನು ಕಂಡುಕೊಂಡಿದ್ದನವ ತನ್ನದೇ ಆದ ವ್ಯಕ್ತಿತ್ವದ ಬಗೆಗೆ ಆ ಮೂಲಕ. ಅದೆಂದರೆ ತಾನೇನೂ ಅಂಥ ಯೋಗ್ಯ ವ್ಯಕ್ತಿತ್ವದವನಲ್ಲವೆಂದು.

"ಒಂದಲ್ಲ ಒಂದು ದಿನ ನಾನೂ ಮದುವೆಯಾಗುತ್ತೇನೆ ಮತ್ತು ನನ್ನದೇ ಆದ ಸಂಸಾರವೊಂದರ ಒಡತಿಯಾಗುತ್ತೇನೆ. ಈಗಲ್ಲ ಮುಂದೆ ಎಂದಾದರೂ ಒಂದು ದಿನ ಎಂದಿಟ್ಟುಕೊಳ್ಳೋಣ. ನಾನೀ ಕೆಲಸವನ್ನೇ ಮದುವೆಯಾಗಿದ್ದೇನೆಂದು ನೀವಂದುಕೊಂಡರೆ ಅದು ತಪ್ಪು ತಿಳುವಳಿಕೆ. ನನ್ನ ಕೆಲಸವನ್ನು ನಾನು ಪ್ರೀತಿಸುತ್ತಿದ್ದೇನೆಂದಷ್ಟೇ ಹೇಳಿದೆ.''

"ಅಂದೆನಲ್ಲ ಎಲೆಕ್ಟ್ರಾನಿಕ್ ಉಪಕರಣಗಳೊಂದಿಗೆ ಸಹವಾಸ ಮಾಡಿದ್ದರಿಂದ ನಿನ್ನ ಮನಸ್ಸು ಕೂಡ ಇಲೆಕ್ಟ್ರಾನಿಕ್ ಮಾದರಿಯೇ ಆಗಿಬಿಟ್ಟಿದೆ ಎಂದು ಭಾವಿಸಿದೆ ನಾನು. ಸ್ವಿಚ್ ಹಾಕಿದಾಗಲಷ್ಟೇ ಯಾಂತ್ರಿಕವಾದ ಭಾವನೆಗಳನ್ನು ಹೊಂದುವಷ್ಟೇ ಯಾಂತ್ರಿಕ.''

"ಆದರೆ ನನ್ನ ಭಾವನೆಗಳಿನ್ನೂ ಸತ್ತಿಲ್ಲ ಮಹರಾಯರೆ.'' ನಕ್ಕಳು ಪ್ರತಿಮಾ. ಅವು ಎಷ್ಟು ಜೀವಂತವಾಗಿದೆಯೆಂದರೆ ಸದಾ ಕಾಲ ನಿಮ್ಮ ಜೊತೆಗೇ ಇರಬೇಕೆನಿಸುತ್ತದೆ ಪ್ರಜ್ಞೆಯ ಗಂಟಾನಾದವನ್ನು ದಿಕ್ಕರಿಸಿಯೂ.''

"ನನ್ನ ಹೃದಯದೊಳಗಿನ ಮಾತು. ಕೂಡ ಅದೇ ಆಗಿದೆ ಪ್ರತಿಮಾ.'' ಆತನೆಂದ ಪಿಸುದನಿಯಲ್ಲಿ.

"ಆದರೆ ನೀವು ಹಾಗೆ ಹೇಳಬಾರದು. ಯಾಕೆಂದರೆ ನಿಮಗೆ ನಿಮ್ಮದೇ ಆದ ಸಂಸಾರವೊಂದಿದೆ. ನನ್ನಷ್ಟು ಸ್ವತಂತ್ರರಲ್ಲ ನೀವು ಆ ವಿಷಯದಲ್ಲಿ. ನಿಮ್ಮಂಥ ಗಂಡಸರು ತಾವು ಮದುವೆಯಾದ ಹೆಂಡಂದಿರಿಗೆ ಈ ರೀತಿ ಮೋಸ ಮಾಡುತ್ತಿರುವುದರ ಬಗ್ಗೆ ನನಗೂ ಒಂದಿಷ್ಟು ಖೇದವಿದೆ.'' ಆಕೆ ಹಾಗೆ ಹೇಳಿದಳಾದರೂ ನಕ್ಕಳು ತಮಾಷೆಯೆನ್ನುವಂತೆ.

"ಆಲ್‌ರೈಟ್.'' ರೋಹಿತ್ ಗಂಭೀರ ಸ್ವರದಲ್ಲಿ ಹೇಳಿದ ಅದನ್ನು ಸೀರಿಯಸ್ ಆಗಿ ತೆಗೆದುಕೊಂಡವನಂತೆ. "ನೀನು ಹೇಳುತ್ತಿರುವುದು ನಿಜವೇ ಆಗಿದೆ. ಆದರೆ ನನ್ನ ಪ್ರಿಯಾ ಒಬ್ಬಳು ಒಳ್ಳೆಯ ಹೆಣ್ಣು. ಒಬ್ಬಳು ಗೃಹಿಣಿ. ತನ್ನ ಗಂಡನಿಗಾಗಿ ಯಾವ ತ್ಯಾಗವನ್ನು ಬೇಕಾದರೂ ಮಾಡಬಲ್ಲವಳು. ಆದರೂ ಕೂಡ ನಿನ್ನೊಂದಿಗಿದ್ದಾಗಿನ ಒಂದು ಬಗೆಯ

ವಿಫಲತೆ

ಬಾಳಿನ ಅರ್ಥವನ್ನು
ಪದಗಳಲ್ಲಿ ಬಂಧಿಸಲು
ಯತ್ನಿಸಿದಾಗ ನಾನೇ
ವಿಫಲ ಯತ್ನಗಳ
ಬಂಧಿಯಾದೆ.

— ಸೋಮಶೇಖರ ಸಾಯ್. ಕೆರೂರು



ಭಾವತೀವ್ರತೆ ನನಗೆಂದೂ ಬಂದುದಿಲ್ಲ ಆಕೆಯೊಂದಿಗಿರುವಾಗ. ಇಷ್ಟು ವರ್ಷಗಳಿಂದ ನೋಡುತ್ತಿದ್ದೇನೆ. ಇದರಲ್ಲಿ ನನ್ನ ತಪ್ಪೂ ಇರಬಹುದೆನಿಸ್ತದೆ. ಯಾವ ಸಂದೇಹವೂ ಇಲ್ಲ. ಆದರೆ ನಾನದನ್ನು ಸರಿಪಡಿಸಲಾರೆನೆನಿಸುತ್ತದೆ.''

"ಐ ಆ್ಯಮ್ ಸಾರಿ'' ಎಂದಳು ಪ್ರತಿಮಾ ಬೇರೇನನ್ನೂ ಹೇಳಲು ತೋಚದೆ.

"ಈ ವಿಷಯ ನಿನ್ನನ್ನೊಂದಿಷ್ಟು ಚಿಂತೆಗೀಡು ಮಾಡಿತೇ, ನಮ್ಮಿಬ್ಬರ ಮಧ್ಯೆ ಬರುವುದು, ಪಾಪಕರ ಎಂದೇನಾದರೂ ಭಾವಿಸಿದೆಯಾ ಮತ್ತೆ?''

"ಹಾಗೇನಿಲ್ಲ. ಆದರೆ ನಿಮ್ಮನ್ನು ಗಮನಿಸಲು ಒಂದು ಹೊಸ ದೃಷ್ಟಿಯನ್ನು ಒದಗಿಸಿ ಕೊಟ್ಟಂತಾಯಿತಷ್ಟೆ. ನಮ್ಮ ನಡುವೆ ನಿಮ್ಮ ಹೆಂಡತಿಯನ್ನೇನೂ ಬೇಸರ ಪಡಿಸಲು ನಾನು ಹೋಗುವುದಿಲ್ಲ. ನಿಮಗೊಬ್ಬ ಮಗನಿದ್ದಾನೆ ಕೂಡ. ಚಿಕ್ಕ ಮಕ್ಕಳು ತಮ್ಮ ತಂದೆ ತಾಯಿ ಬೇರೆಯಾಗುವ ಸಂಗತಿಯನ್ನೇನೂ ನಿರೀಕ್ಷಿಸುವುದಿಲ್ಲ ಮತ್ತು ಹಾಗೇನಾದರೂ ಆದರೆ ಅವರ ಮನಸ್ಸನ್ನದು ಘಾಸಿಗೊಳಿಸುತ್ತದೆಯೆನ್ನುವುದೂ ನನಗೆ ತಿಳಿದಿದೆ.''

"ಆದರೆ ಅಂಥ ಸಂಗತಿಗಳಿಗೆಲ್ಲ ಅವಕಾಶವೇ ಇಲ್ಲವಲ್ಲ.'' ಸ್ಥಿರವಾದ ಸ್ವರದಲ್ಲಿ ಹೇಳಿದನವ. "ಆದರೆ ನೀನು ನನ್ನ ದೌರ್ಬಲ್ಯವನ್ನು ಏನೆಂದು ತಿಳಿದುಕೊಂಡಿದ್ದೀಯೋ ತಿಳಿಯುವುದಿಲ್ಲ.''

"ಹಾಗೆ ನೋಡಿದರೆ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಂದೊಂದು ದೌರ್ಬಲ್ಯಗಳಿದ್ದೇ ಇರುತ್ತವೆಯೆನ್ನುವುದು ನನಗೆ ತಿಳಿದೇ ಇದೆಯಾದ ಕಾರಣ ನಾನಿದನ್ನೆಲ್ಲ ಎಂದೂ ಗಂಭೀರವಾಗಿ ಪರಿಗಣಿಸುವುದಿಲ್ಲ.''

"ಇಂಥ ಹೆಣ್ಣುಗಳೂ ಇರುತ್ತಾರೆಯೇ ಎಂದು ಆಶ್ಚರ್ಯವಾಗುತ್ತಿದೆ ನನಗೆ ನೀನೆಂದುದನ್ನು ಕೇಳಿದಾಗ.''

"ಇಂಥ ಹೆಣ್ಣುಗಳು ಅಂದರೆ?'' ಹಾಗೆಂದು ಕೇಳಿದ ಆಕೆ ಆತನ ಹತ್ತಿರ ಬಂದಳು. ಅನಂತರ ಆತನ ತಲೆಗೂದಲನ್ನು ಹಿಂದಕ್ಕೆ ಸರಿಸಿ ಹಣೆಯ ಮೇಲೆ ಹೂಮುತ್ತನ್ನೊತ್ತಿದಳು.

"ನಿಮ್ಮಲ್ಲೊಂದು ಬಗೆಯ ಆಕರ್ಷಣೆಯನ್ನು ಕಂಡಿದ್ದೇನೆ ನಾನು. ಅದನ್ನು ನಿರಾಕರಿಸಲಾರೆ. ನಾವು ಹೀಗೇ ಪ್ರೇಮಿಗಳಾಗಿಯೇ ಮುಂದುವರಿಯುವುದಾದರೆ ಹಾಗೇ ಆಗಲಿ. ಅದರಿಂದ ಯಾರಿಗೂ ಯಾವುದೇ ಹಾನಿಯಿಲ್ಲ ಎಂದುಕೊಳ್ಳುತ್ತೇನೆ.'' ಹಾಗೆಂದು ಆತನ ತೋಳತೆಕ್ಕೆಯಲ್ಲಿ

ಸೇರಿಕೊಂಡಳು.

ಆಗಲೇ ಅವನು ಆಕೆಯ ಬಳಿ ಗೌರಿಯ ಕುರಿತಾಗಿ ಹೇಳಲಾರಂಭಿಸಿದ್ದು. ತೀರಿಕೊಂಡ ಅವನ ಪ್ರೀತಿಯ ಮಗಳು ಗೌರಿಯ ಕುರಿತಾಗಿ. ಆ ಮಗುವಿನ ಕಣ್ಣುಗಳ ಕುರಿತಾಗಿ. ಅವು ಹೇಗೆ ಅವನ ಮನಸ್ಸನ್ನು ಮುದಗೊಳಿಸುತ್ತಿದ್ದುವು ಎನ್ನುವುದರ ಕುರಿತಾಗಿ.

"ನಿನ್ನನ್ನು ಮೊದಲ ಬಾರಿಗೆ ನೋಡಿದಾಗ ನನಗೆ ಗೌರಿಯ ನೆನಪಾಯಿತು. ನಿನ್ನ ಕಣ್ಣುಗಳು ಆಕೆಯದನ್ನು ಹೋಲುತ್ತಿದ್ದುವಾದ ಕಾರಣದಿಂದ ಇರಬಹುದು. ಹಾಗೇ ನಿನ್ನ ಕೂದಲಿನ ಮೃದುತ್ವ. ನಿನ್ನನ್ನು ಮೊದಲ ಬಾರಿಗೆ ನೋಡಿದಾಗ ನನ್ನ ತೀರಿಕೊಂಡ ಮಗಳು ಗೌರಿ ಬೆಳೆದು ನಿನ್ನಷ್ಟು ಪ್ರಾಯದವಳಾಗುವಾಗ ಹೀಗೇ ಇರುತ್ತಿದ್ದಳೇನೋ ಅನಿಸಿತು.''

ಪ್ರತಿಮಾ ಮೌನವಾಗಿದ್ದಳು ಅವನ ಮಾತುಗಳನ್ನು ಕೇಳಿ ಅನಂತರ ಹೇಳಿದಳು.

"ನಿಮಗೆ ನನ್ನ ವಿಷಯವನ್ನು ಹೇಳಬೇಕೆನಿಸುತ್ತದೆ.''

"ಏನೆಂದು?''

"ನನಗೆ ಮಕ್ಕಳೆಂದರೆ ಎಂದೂ ಪ್ರೀತಿ ಇಲ್ಲ. ಅವರೊಂದಿಗೆ ಹೇಗಿರಬೇಕು. ಹೇಗೆ ವ್ಯವಹರಿಸಬೇಕೆನ್ನುವುದೇ ತಿಳಿದಿಲ್ಲ ನನಗೆ. ಅವು ನನ್ನ ಆಕಾಂಕ್ಷೆಯ ವಸ್ತುಗಳೇ ಅಲ್ಲ ಯಾವತ್ತೂ. ಆದರೆ ಕೆಲವೊಮ್ಮೆ ಮಕ್ಕಳನ್ನು ಬಲವಂತವಾಗಿಯಾದರೂ ಪ್ರೀತಿಸಲು ಮನಸ್ಸನ್ನು ತಯಾರಿಗೊಳಿಸಬೇಕೆನಿಸಿದ್ದು ಸುಳ್ಳಲ್ಲ. ಆದರೆ ಅದು ನನ್ನಿಂದ ಸಾಧ್ಯವಾಗಿರಲಿಲ್ಲ. ಆದರೆ ನೀವು ಹಾಗಲ್ಲ. ನಮ್ಮ ಆಸಕ್ತಿಗಳಲ್ಲಿ ಇರುವ ವಿಭಿನ್ನತೆಯೇ ಇದಾಗಿದೆ. ಆದರೆ ನೀವು ನನ್ನ ಜೀವನದಲ್ಲಿ ಇಂಥ ಸಮಯದಲ್ಲಿ ಪ್ರವೇಶಿಸಿ ನನಗೆ ಉಪಕಾರ ಮಾಡಿದ್ದೀರಿ. ಎಂಥ ಸಮಯದಲ್ಲಿ ಎಂದರೆ ನಾನು ಸದಾ ಕಾಲ ಇಲೆಕ್ಟ್ರಾನಿಕ್ ಮಾಧ್ಯಮಗಳ ಸಹವಾಸದಲ್ಲೇ ಇದ್ದುದರಿಂದ ನನ್ನ ಮನಸ್ಸು ಕೂಡ ಅಂಥದೇ ಯಾಂತ್ರಿಕತೆಯನ್ನು ರೂಡಿಸಿಕೊಳ್ಳಲು ಸಿದ್ಧವಾಗಿರುವಂಥ ಒಂದು ಹಂತದಲ್ಲಿ. ನನಗೂ ಪ್ರೀತಿ ಬೇಕೆನಿಸುತ್ತದೆ. ಯಾರನ್ನಾದರೂ ಪ್ರೀತಿಸಬೇಕು ಮತ್ತು ಪ್ರತಿಯಾಗಿ ಅವರಿಂದ ಪ್ರೀತಿಸಲ್ಪಡಬೇಕು ಎಂದು ಅನಿಸುತ್ತದೆ. ನಮ್ಮದು ಬರಿಯ ಪ್ರೇಮವಷ್ಟೇ ಒಂದು ಗಂಡು ಮತ್ತು ಹೆಣ್ಣಿನ ನಡುವಣ ಸಹಜವಾದ ಪ್ರೇಮ. ಯಾವ ಬಂಧನಗಳೂ ಇರದಂಥ ಪ್ರೇಮ.''

ಹಾಗೆಂದವಳನ್ನು ಬರಸೆಳೆದು ಮುದ್ದಿಕ್ಕಿದ ರೋಹಿತ್. ಹುಚ್ಚನೇ ಆಗಿಬಿಟ್ಟ. ಬೆಂಕಿ ಮತ್ತು ಐಸ್‌ನೊಂದಿಗೆ ಚೆಲ್ಲಾಟವಾಡಿದ.

ಮರುದಿನ ಬೆಳಿಗ್ಗೆಯಷ್ಟೇ ನೆನಪಾದುದು ಅವನಿಗೆ ತನ್ನ ಮನೆಯ ಬಗೆಗೆ. ಅಲ್ಲಿ ಕಾದಿರುವ ಹೆಂಡತಿ ಪ್ರಿಯಾಳ ಬಗೆಗೆ ಮತ್ತು ಮಗ ಗೌತಮ್ ಬಗೆಗೆ.

* * * * *

ಈಗವನು ಹೆಂಡತಿ ಪ್ರಿಯಾಳನ್ನೆದುರಿಸಬೇಕಾಗಿದೆ.

ಮರಳಿ ಬಂದಿದ್ದ ಪ್ರಿಯಾಳಲ್ಲಿ ಯಾವ ಭಾವನೆಗಳೂ ಇರಲಿಲ್ಲ ಹೊಸತಾದುವು. ಎಂದಿನಂತೆ ಮನೆಗೆ ಮರಳಿದ್ದಳು. ಅವಳ ಯೋಚನೆಯ ದಿಗಂತಗಳೇನಿದ್ದರೂ ತನ್ನ ಪತಿ ರೋಹಿತ್‌ನ ಕುರಿತಾಗಿ ಮತ್ತು ಮಗ ಗೌತಮ್‌ನ ಕುರಿತಾಗಿ ಇತ್ತು. ಹಾಗೇ ಮನೆಯ ಕುರಿತಾಗಿಯೂ. ಅವರದೇ ಆದ ಮನೆ.

ತನಗೆ ಇತ್ತೀಚೆಗೆ ಪರಿಚಿತಳಾದ ಮತ್ತು ತನ್ನ ಪ್ರೇಯಸಿಯೂ ಆಗಿ ಹೋದ ಯುವತಿಯ


ಮಾನವರನ್ನು ದೇಶ, ಧರ್ಮ, ಜಾತಿ ಬಣ್ಣಗಳ ನೆಪದಲ್ಲಿ ಬೇರೆ ಮಾಡಿರುವುದೇ ಪ್ರಪಂಚದ ಈಗಿನ ಕಷ್ಟ ಪರಿಸ್ಥಿತಿಗೆ ಕಾರಣ.

— ಜೆ. ಕೃಷ್ಣಮೂರ್ತಿ

ವ್ಯಕ್ತಿಗೂ ವಿಶ್ವಕ್ಕೂ ಸಂಬಂಧವನ್ನುಂಟು ಮಾಡುವ ಹೆದ್ದಾರಿಯೇ ಅನುಭವ.

— ಕಾರಂತ

ಸಂಗ್ರಹ : **ಶಿವರಾಜ ಬಿ. ಜಂಗಳೆ**



ಕುರಿತಾಗಿ ಏನೊಂದೂ ಸುಳಿವು ಸಿಗದಂತೆ ತನ್ನ ಹೆಂಡತಿಯ ಜೊತೆ ಜಾಗರೂಕತೆಯಿಂದಲೇ ವರ್ತಿಸಿದ ರೋಹಿತ್.

ಹೀಗೇ ಸಾಗುತ್ತಿದೆ ಬದುಕು.

ಆದರೆ ಎಷ್ಟು ದಿನ ಹಾಗೇ ಕೃತಕವಾದ ನಡವಳಿಕೆ ಮುಂದುವರಿಸಲು ಸಾಧ್ಯ ಒಬ್ಬ ಗಂಡನಿಗೆ ತನ್ನ ಹೆಂಡತಿಯ ಜೊತೆ? ಕಂಡೂ ಕಾಣದಂತೆ ಒಂದು ಬಗೆಯ ನ್ಯೂನತೆ ಇಣುಕಿತ್ತು ಅವರಿಬ್ಬರ ನಡುವೆ. ಸಣ್ಣಪುಟ್ಟ ವಿಷಯಗಳಲ್ಲಿ ಜಗಳ ತಲೆ ಹಾಕುತ್ತಿತ್ತು.

ಜೂನ್ ತಿಂಗಳ ಒಂದು ಸಂಜೆ. ಹೆಂಡತಿ ಪ್ರಿಯಾಳ ಜೊತೆ ಕ್ಷಮೆ ಯಾಚಿಸಿ ಹೊರಹೋಗಿ ತನ್ನ ಸ್ನೇಹಿತರೊಂದಿಗೆ ಡಿನ್ನರ್ ಮುಗಿಸಿ ಬಂದ. ಹಿಂದೆಂದೂ ಆತ ಹಾಗೆ ಮಾಡಿದ್ದ ನೆನಪು ಇಲ್ಲ ಪ್ರಿಯಾಗೆ. ಇದೊಂದು ರೀತಿಯಲ್ಲಿ ವಿಚಿತ್ರವಾಗಿಯೇ ಕಂಡಿತವಳಿಗೆ ಅವನ ವರ್ತನೆ. ಮುಂದೆ ಅವನ ಸಣ್ಣಪುಟ್ಟ ಕ್ರಿಯೆಗಳಲ್ಲೂ ಒಂದು ರೀತಿಯ ವಿಭಿನ್ನತೆಯನ್ನೇ ಗುರುತಿಸಿತವಳ ಸಂಶಯಗ್ರಸ್ಥ ಮನಸ್ಸು.

ಈ ನಡುವೆ ಪ್ರತಿಮಾ ಜೊತೆ ರೋಹಿತ್‌ನ ಪ್ರಕರಣ ಆತ್ಮೀಯವಾಗುತ್ತ ಹೆಚ್ಚು ಹೆಚ್ಚು ಆತ್ಮೀಯವಾಗುತ್ತ ಮುಂದುವರಿಯುತ್ತಿತ್ತು.

ಒಮ್ಮೆ ಅವರಿಬ್ಬರೂ ಹೊರ ಹೋದಾಗ ಮಳೆ ಹನಿಯಲಾರಂಭಿಸಿತ್ತು.

"ನೋಡು, ಮಳೆ ಹನಿಯಲಾರಂಭಿಸಿದೆ. ಸಣ್ಣದೊಂದು ಕೊಡೆಯನ್ನು ತರಬೇಕಾಗಿತ್ತು ನಾವು.'' ಅವನೆಂದ. "ನೋಡು ನಿನ್ನ ಕೂದಲು ಹೇಗೆ ಒದ್ದೆಯಾಗುತ್ತಿವೆ.''

ಆಕೆ ನಕ್ಕಳು ಅವನ ಮಾತಿಗೆ ."ಆದರೆ ಅದರಿಂದೇನೂ ತೊಂದರೆಯಿಲ್ಲ ನನಗೆ. ನನೆಸಿಕೊಳ್ಳುವುದೆಂದರೆ ತುಂಬ ಇಷ್ಟ'' ಎಂದಳು. ಅನಂತರ ಆತನ ಹತ್ತಿರ ಸರಿದು ತುಂಟಾಟ ಆರಂಭಿಸಿದಳು.

"ನಿನಗೆ ತೀರಾ ಓಲ್ಡ್ ನಾನು. ಹಾಗೇ ಸಿಲ್ಲಿ.'' ಮುನಿಸು ತೋರಿದ.

"ನಾನು ನಿಮಗೆ ಓಲ್ಡ್ ಎಂದು ಹೇಳಿದ್ದು ಪ್ರೀತಿಯಿಂದ.'' ಆಕೆ ತನ್ನ ತಪ್ಪನ್ನು ಸರಿಪಡಿಸಿಕೊಳ್ಳುವವಳಂತೆ ಹೇಳಿದಳು. "ನಿಜ ಹೇಳಬೇಕೆಂದರೆ ನನ್ನ, ನಿಮ್ಮ ನಡುವಣ ವಯಸ್ಸಿನ ಅಂತರ ಅಷ್ಟೊಂದು ಆಳವಾದದ್ದೇನಲ್ಲ. ಈಗಾಗಲೇ ಹೇಳಿದ್ದೇನೆ ನಲ್ವತ್ತು

ದಾಟಿದರೂ ನೀವಿನ್ನೂ ಯಂಗ್ ಆಗಿಯೇ ಕಾಣುತ್ತೀರಿ. ಮತ್ತು ನನಗೆ ತುಂಬ ಇಷ್ಟವಾಗುತ್ತದೆ ನಿಮ್ಮ ಒಡನಾಟ.''

"ಅದು ನನ್ನ ಸಮಾಧಾನಕ್ಕಾಗಿಯಷ್ಟೇ ಹೇಳುತ್ತಿರೋದು ನೀನು. ನನ್ನಿಂದ ನಿನಗೆ ಈಗಾಗಲೇ ಬೋರ್ ಆಗಿದ್ದರೆ ಆಶ್ಚರ್ಯವೇನಿಲ್ಲ.''

ಮಳೆ ಜೋರಾಗಿ ಸುರಿಯಲಾರಂಭಿಸಿತ್ತು. ಆವ ಮುಂದೆ ಬಾಗಿ ಕಿಟಕಿಯ ಗಾಜುಗಳನ್ನು ಮುಚ್ಚಿದ. ಕಾರು ಸಾಗುತ್ತಲೇ ಇತ್ತು.

"ರೋಹಿತ್, ಯಾಕೆ ನಾವು ಹೀಗೆ ಜಗಳಾಡಬೇಕು? ನಿಮಗೆ ಗೊತ್ತಿದೆ ಐ ಲವ್ ಯೂ ಇನ್ ಮೈ ಫನ್ನಿ ವೇ.''

"ಫನ್ನೀ ವೇ ಅಂದೆಯಲ್ಲ ಅದು ಸರಿಯಾದ ಶಬ್ದ.''

"ನೀವು ಹೀಗೆಲ್ಲ ಮಾತನಾಡಿದರೆ ಮಾತ್ರ ನನ್ನಿಂದದನ್ನು ಸಹಿಸಲಿಕ್ಕಾಗೋಲ್ಲ. ಬಿ. ಸ್ಟ್ರೆಯಿಟ್ ಫಾರ್‌ವರ್ಡ್.''

"ನೆನಪಿನಲ್ಲಿಡು ಸದಾಕಾಲ ನಮ್ಮ ಮೊದಲ ಭೇಟಿಯನ್ನು. ನಾನು ಒಳ್ಳೆಯ ಮೂಡ್‌ನಲ್ಲಿದ್ದೆ ಮತ್ತು ಪ್ರತಿಯಾಗಿ ನೀನು ಜಗಳಾಡಲು ಉತ್ಸುಕಳಾದಂತಿದ್ದೆ.''

"ಅದೇನೋ ನಿಜ.'' ಪ್ರತಿಮಾ ಹೇಳಿದಳು. "ಒಪ್ಪಿಕೊಳ್ಳುತ್ತಿದ್ದೇನಲ್ಲ ನನ್ನ ಸ್ವಭಾವವೇ ಅಂತಾದ್ದು?''

"ನೀನೇನೋ ಗೆಲ್ಲಬಲ್ಲೆ. ನನ್ನ ಅವಸ್ಥೆ ಏನೆಂದು ಹೇಳು.''

"ಓಹ್ ರೋಹಿತ್, ನೀವು ಸತ್ಯವನ್ನೆದುರಿಸಲಾರಿರೇಕೆ? ನಮ್ಮ ಅಫೇರ್ ಎಲ್ಲರಂತಲ್ಲ ನೆನಪಿಟ್ಟುಕೊಳ್ಳಿ. ತುಂಬ ಸೀರಿಯಸ್ ಆದುದು. ನಾವು ಹೀಗೆ ಜಗಳಾಡುತ್ತಲಿದ್ದರೆ ಬಹುಬೇಗ ಇದಕ್ಕೊಂದು ಕೊನೆ ಬಂದೀತೆನಿಸುತ್ತದೆ. ದುರಂತವೋ ಸುಖಾಂತವೋ ಗೊತ್ತಿಲ್ಲ. ಅಂತೂ ಒಂದು ಅಂತ್ಯ.''

"ನಿನ್ನೊಂದಿಗೆ ಜಗಳವಾಡುವುದೆಂದರೆ ನನಗಿಷ್ಟವಾಗುವುದಿಲ್ಲ. ಯಾಕೆಂದರೆ ಐ ಹ್ಯಾವ್ ಹ್ಯಾಡ್ ಇನಫ್ ಆಫ್ ಇಟ್ ಅಟ್ ಹೋಮ್.''

"ಯಾಕ ನೀವು ಯಾವಾಗಲೂ ಜಗಳಾಡುತ್ತೀರಾ ನಿಮ್ಮ ವೈಫ್ ಜೊತೆ?''

ಮೊದಲ ಬಾರಿಗೆ ಆಕೆ ಆ ಕುರಿತಾಗಿ ವಿಚಾರಿಸಿದ್ದಳು.

ಅವ ಅಸಮಾಧಾನದ ಉಸಿರೆಳೆದ.

"ಅಂಥ ಜಗಳಗಳೇನಿದ್ದರೂ ನನ್ನಿಂದಲೇ ಆರಂಭವಾಗುತ್ತಿದ್ದುವು. ಪ್ರಿಯಾ ಯಾವಾಗಲೂ ಸಮಾಧಾನ ಚಿತ್ತದವಳಾಗಿರುವ ಪ್ರವೃತ್ತಿಯವಳು. ಅವಳ ಸಮಾಧಾನ ಪ್ರವೃತ್ತಿಯೇ ನನ್ನನ್ನು ರೇಗಿಸಿರುವುದು.''

"ನೀವು ಸಮಾಧಾನ ಪ್ರಿಯರಲ್ಲವೆಂದಾಯಿತು. ಹಾಗಾದರೆ ನಿಮ್ಮ ಜೊತೆ ಬಾಳುವೆ ನಡೆಸುವುದೂ ಕಷ್ಟದ ಸಂಗತಿ.''

"ನಿನ್ನ ಪರಿಚಯವಾಗುವತನಕ ನಾನು ಅಸಮಾಧಾನಿಯೇ ಆಗಿದ್ದೆನೆನ್ನಬಹುದು.''

ಅವಳ ತಲೆಗೂದಲಲ್ಲಿ ಮುಖವಿರಿಸಿ ಆಕೆಯ ಗಮಗಮಿಸುವ ಕೂದಲುಗಳನ್ನು ಚುಂಬಿಸಿದ, ಕೆಳಗಿಳಿದು ಆ ಸುಂದರ ತುಟಿಗಳಿಗೆ ತುಟಿ ಸೇರಿಸಿದ. "ನನ್ನನ್ನೆಂದೂ ಬಿಡುವುದಿಲ್ಲವಲ್ಲ ಎಂದಿಗೂ.''

"ಅಮ್ಮಾ ನೀನು ಸರ್ಕಸ್ ಕಂಪೆನಿಯಲ್ಲಿ ಕೆಲ್ಸ ಮಾಡ್ತಿದ್ಯಾ?"

"ಇಲ್ವಲ್ಲೋ, ಯಾಕೋ ಹೀಗೆ ಕೇಳ್ತಿದ್ದೀಯಾ?"

"ಮತ್ತೆ ಪಕ್ಕದ ಮನೆ ಆಂಟಿ ನೀನು ಡ್ಯಾಡೀನ ನಿನ್ನ ಕಿರು ಬೆರಳಿನ ಮೇಲೆ ಕುಣಿಸ್ತಿರ್ತೀಯ ಅಂತ ಆದ್ಯಾರ್ ಜೊತೇಲೋ ಹೇಳ್ತಿದ್ದರು."

— ಎಸ್. ವಿಶ್ವನಾಥ



"ಅದು ಭವಿಷ್ಯತ್ತನನ್ನವಲಂಬಿಸಿದ ಪ್ರಶ್ನೆ." ಆಕೆಯೆಂದಳು. "ಈಗಲೇ ಏನೂ ಹೇಳಲಾಗುವುದಿಲ್ಲ ಆ ಕುರಿತು; ಹೇಳಲಾರೆ. ಒಂದು ವೇಳೆ ನಾನು ಬೇರೆ ಕಡೆ ಅಥವಾ ಹೊರದೇಶಗಳಲ್ಲಿ ನೌಕರಿ ಹಿಡಿದರೇ?"

"ಆಗ ನಾನೂ ನಿನ್ನನ್ನು ಹಿಂಬಾಲಿಸುತ್ತೇನೆ. ಮನೆಯಲ್ಲಿ ಇದರ ಪರಿಣಾಮವೇನಾದರೂ ನಾನು ಲಕ್ಷಿಸುವುದಿಲ್ಲ. ಪ್ರಿಯಾಗೆ ಎಲ್ಲವನ್ನೂ ವಿವರಿಸಿ ಹೇಳುತ್ತೇನೆ ಸತ್ಯವನ್ನು. ನನ್ನ ಮದುವೆಯೇ ಒಂದು ದುರದೃಷ್ಟದ್ದು ಎಂಬ ಅರಿವು ಬಂದಿದೆ ನನಗೀಗಾಗಲೇ. ಎಷ್ಟೋ ಬಾರಿ ನಾನು ಆ ಮದುವೆಯಿಂದ ಬೇರ್ಪಡಲು ಯೋಚಿಸಿದ್ದೆ. ಆದರೆ ಅದಕ್ಕೆ ಬೇಕಾಗುವಷ್ಟು ಧೈರ್ಯ ನನ್ನಲ್ಲಿರಲಿಲ್ಲ." ಪ್ರತಿಮಾ ಅತನ ತೋಳ್ತೆಕ್ಕೆಯಿಂದ ಹೊರಬಂದಳು.

"ದೇವರಾಣೆಗೂ ಹೇಳುತ್ತಿದ್ದೇನೆ. ನೀವೆಂದೂ ಹಾಗೆ ಮಾಡಬಾರದು ನನಗಾಗಿ."

"ಅಂದೆನಲ್ಲ, ನೀನೆಂದೂ ನನ್ನ ಜೀವನದಿಂದ ಹೊರಗಾಗಬಾರದೆಂದು. ಅದಕ್ಕಾಗಿ ಯಾವ ತ್ಯಾಗವನ್ನು ಮಾಡಲು ಸಿದ್ದನಿದ್ದೇನೆಂದು. ನನ್ನ ಈ ನಿರ್ಧಾರವೆಂದೂ ಬದಲಾಗದು."

"ಅಂಥ ಪರಿಸ್ಥಿತಿಯೇ ಬರಲಾರದೆಂದುಕೊಳ್ಳೋಣ." ಆಕೆಯೆಂದಳು ಅವನ ಹಣೆಯನ್ನು ಚುಂಬಿಸುತ್ತ. ಹಾಗೇ ಕಾರಿನಿಂದ ಇಳಿದು ಹೊರಬಂದಳು. ಕೆಳಗಿಳಿದು ಬೀದಿಯಲ್ಲಿ ನಡೆದು ಹೋಗುತ್ತಿರುವವಳನ್ನೇ ನೋಡಿದನವ. ಮಳೆ ಸುರಿಯುತ್ತಲೇ ಇತ್ತು. ಆದರೆ ಅವನನ್ನಾಕೆ ಲಕ್ಷ್ಯಕ್ಕೆ ತೆಗೆದುಕೊಳ್ಳಲೇ ಇಲ್ಲ.

ತನ್ನ ಹೆಂಡತಿ ಪ್ರಿಯಾಳ ನೆನಪಾಯಿತವನಿಗೆ ಆ ಕ್ಷಣ. ಆಕೆಯೆಂದೂ ಆತನ ಬಗೆಗಿನ ಆಕೆಯ ಭಾವನೆಗಳನ್ನು ಪ್ರತಿಮಾ ಹೇಳುವಷ್ಟು ಸರಳವಾಗಿ ಹೇಳಿರಲಿಲ್ಲ. ಮುಖ್ಯವಾಗಿ ಆಕೆಯ ಮೌನ ಅಸಹನೀಯವಾಗಿತ್ತವನ ಪಾಲಿಗೆ.

* * * * *

ಮುಂದೊಂದು ದಿನ ಅಕ್ಟೋಬರ್ ತಿಂಗಳ ನಡುವಿನಲ್ಲಿ ಒಂದು ಸಣ್ಣ ಘಟನೆ ನಡೆಯಿತು.

ಪ್ರತಿಮಾಳೊಂದಿಗೆ ವಾಸವಾಗಿದ್ದ ಜಾನಕಿ ಎನ್ನುವ ಹುಡುಗಿ ತನಗೆ ಬೇರೆಲ್ಲೋ ನೌಕರಿ ದೊರಕಿದೆಯೆಂದು ಹೇಳಿ ಹೊರಟು ಹೋಗಿದ್ದಳು ಆ ಫ್ಲಾಟನ್ನು ಬಿಟ್ಟು. ಇನ್ನೊಬ್ಬಾಕೆ

ಅನಸೂಯಳಿಗೆ ಬೇರೆ ಕಡೆ ವರ್ಗವಾಗಿದ್ದ ಕಾರಣ ಆಕೆಯೂ ಹೊರಟು ಹೋಗಿದ್ದಳು. ಈಗ ಪ್ರತಿಮಾ ಒಬ್ಬಳೇ ಅಲ್ಲಿ ವಾಸವಾಗಿರಬೇಕಾಯಿತು. ಆ ಸುದ್ದಿ ಕೇಳಿದ ರೋಹಿತ್‌ಗೆ ಬೇರೆ ಇಬ್ಬರು ಯುವತಿಯರಿಗೆ ವಾಸಿಸಲು ಅವಕಾಶವಿದೆಯೆಂದು ಸ್ಥಳೀಯ ಪತ್ರಿಕೆಯಲ್ಲಿ ಜಾಹೀರಾತು ಕೊಡುವ ಯೋಚನೆಯನ್ನು ಆಕೆ ರೋಹಿತ್‌ನಲ್ಲಿ ಹೇಳಿದಾಗ ಆವ ಬೇಡವೆಂದಿದ್ದ.

"ಆದರೆ ನಾನೊಬ್ಬಳೇ ಹೇಗೆ ಇರಲಿ?'' ಎಂದು ಕೇಳಿದ್ದಳಾಕೆ. "ಅದಲ್ಲದೆ ನನಗಿದು ದುಬಾರಿಯಾಗುತ್ತದೆ'' ಎಂದು.

"ನಾನು ಆ ಭಾರವನ್ನು ಹೊರುವುದಾದರೆ'' ಎಂದು ಉತ್ತರಿಸಿದ್ದ. ಆಕೆ ಸುಮ್ಮನಾದಳು.

ಮುದೊಂದು ದಿನ ತಾನಾಗಿಯೇ ನಿಂತು ಆಕೆಯ ಫ್ಲಾಟ್ ಆರೇಂಜ್ ಮಾಡಿದ ರೋಹಿತ್. ಎಷ್ಟೆಂದರೂ ಅದು ಅವರಿಬ್ಬರಿಗೆ ಸೇರಿದ ಫ್ಲಾಟ್ ಆಯಿತಲ್ಲವೇ?

"ಇದಕ್ಕಾಗಿ ನಾನು ನಿಮಗೆಷ್ಟು ಕೃತಜ್ಞತೆ ಹೇಳಿದರೂ ಸಾಲದು'' ಎಂದಳಾಕೆ ಆತನ ತೋಳ್ತೆಕ್ಕೆಯಲ್ಲಿ ಸೇರಿಕೊಳ್ಳುತ್ತ.

"ಆದರೆ ನಾನಿದನ್ನೆಲ್ಲ ನಿಮಗೆ ಹಿಂದಿರುಗಿಸುತ್ತೇನೆ; ಖರ್ಚನ್ನೆಲ್ಲ. ನಾನೊಮ್ಮೆ ಬೇರೆ ನೌಕರಿ ಮಾಡುವಂತಾಗಲಿ ಸ್ವಲ್ಪ ಹೆಚ್ಚಿನ ಸಂಭಾವನೆ ಸಿಗುವಂತಾಗಲಿ. ಆಗಲೇ ತೀರಿಸಲಾರಂಭಿಸುತ್ತೇನೆ ಸಾಲವನ್ನು.''

ಆತನೇನೂ ಮಾತನಾಡಲಿಲ್ಲ ಪ್ರತಿಯಾಗಿ.

ಹೊರಟು ಹೋಗುವ ಮುನ್ನ ಒಂದು ಚೆಕ್ ಆಕೆಯ ಕೈಗಿತ್ತ ರೋಹಿತ್. ಅದನ್ನು ಮಡಚುತ್ತ ಆತನನ್ನೇ ಎವೆಯಿಕ್ಕದೆ ನೋಡಿದಳವಳು.

"ಎಂಥ ತಮಾಷೆಯಾಗಿದೆ ಇದು?'' ಎಂದಳು ನಿಧಾನವಾಗಿ. "ಈತನಕ ನಾನು ಯಾರಿಂದಲೂ ಹಣವನ್ನೇ ಪಡೆದವಳಲ್ಲ ಗಂಡಸರಿಂದಾಗಲೀ ಹೆಂಗಸರಿಂದಾಗಲೀ ನೀವೇ ಮೊದಲಿಗರು ಕೊಟ್ಟವರೆಂದರೆ.''

"ನೀನು ಭಾವನೆಗಳನ್ನೆಲ್ಲ ಓದಲಾರಂಭಿಸಿದ್ದು ಯಾವಾಗಿನಿಂದ?''

"ನಿಮ್ಮ ಪರಿಚಯವಾದನಂತರ'' ಎಂದು ಮುಂದೆ ಬಂದು ಆತನನ್ನು ಆಲಂಗಿಸಿದಳು.

* * * * *

ಹೊರಗೆ ಸುರಿಯುತ್ತಲಿರುವ ಮಳೆಯನ್ನೇ ನೋಡುತ್ತ ಕುಳಿತ್ತಿದ್ದಳು ಪ್ರಿಯಾ ತನ್ನ ಪತಿಯ ಜೊತೆ. ಒಂದು ಮಾತು ಅವರ ನಡುವೆ ಬರಲಿಲ್ಲ. ಅವರಿಬ್ಬರು ಸಂಬಂಧಿಯೊಬ್ಬರ ಮದುವೆಯ ಸಮಾರಂಭದಲ್ಲಿ ಪಾಲ್ಗೊಳ್ಳಲು ಬಂದವರಾಗಿದ್ದರು. ಇತ್ತೀಚೆಗೆ ಬದಲಾದ ರೋಹಿತ್‌ನ ವರ್ತನೆಗಳ ಬಗ್ಗೆ ಯೋಚಿಸುತ್ತಿದ್ದಳವಳು. ಇತ್ತೀಚೆಗೆ ತಮ್ಮಿಬ್ಬರ ದಾಂಪತ್ಯದ ನಡುವೆ ಹೆಣ್ಣೊಬ್ಬಳ ಪ್ರವೇಶವಾಗಿರುವುದವಳಿಗೆ ತಿಳಿದಿತ್ತು ಕೆಲವು ಘಟನೆಗಳಿಂದಾಗಿ.

ರಥಬೀದಿಯಲ್ಲಿರುವ ಒಂದು ಜುವೆಲ್ಲರೀ ಶಾಪ್‌ನಿಂದೊಂದು ಫೋನ್ ಬಂದಿತ್ತಾಕೆಗೆ ಒಮ್ಮೆ. ಮೊದಲಿಗೆ ಆತ ಇದು ಶ್ರೀಮತಿ ರೋಹಿತ್ ಮಾತಾಡ್ತಿರೋದೇ ಎಂದು ಕೇಳಿದ್ದ. ತೊಂದರೆ ಕೊಡುತ್ತಿರುವುದಕ್ಕಾಗಿ ಮೊದಲಿಗೆ ಕ್ಷಮೆ ಯಾಚಿಸಿದ್ದ ಹಾಗೇ ರೋಹಿತ್ ತನ್ನ ಹೆಂಡತಿಗಾಗಿ ತಯಾರಿಸುವಂತೆ ಹೇಳಿದ್ದ ಕಿವಿಯೋಲೆಗಳು ತಯಾರಾಗಿರುವುದಾಗಿಯೂ ತಾನು ಒಬ್ಬರು ಸಹಾಯಕರ ಕೈಯಲ್ಲಿ ಅದನ್ನು ಕಳಿಸುತ್ತಿರುವುದಾಗಿಯೂ ಹೇಳಿದ್ದ. ಆದರೆ ಅನಂತರ ಆ ಓಲೆಗಳನ್ನು ತಂದ ಸಹಾಯಕ ವಿಳಾಸ ಸರಿಯಿಲ್ಲವೆಂದು ಹಿಂದಿರುಗಿ ಹೋದ



ಬಳಿಕ ಮತ್ತೊಮ್ಮೆ ಅದೇ ಜುವೆಲ್ಲರೀ ಶಾಪ್‌ನಿಂದ ಆಕೆಗೆ ಕ್ಷಮೆ ಯಾಚಿಸಿ ಫೋನ್ ಬಂದಿತ್ತು. ಅದನ್ನು ಆಕೆಯೇ ಜುವೆಲ್ಲರಿ ಶಾಪ್‌ಗೆ ಬಂದು ಒಯ್ಯುವಂತೆ.

"ಆದರೆ ನಾನು ಕಿವಿಯೋಲೆಗಳನ್ನು ತಯಾರಿಸುವಂತೆ ಆರ್ಡರು ಕೊಟ್ಟಿಲ್ಲವಲ್ಲ."

"ನೀವಲ್ಲ ಕೊಟ್ಟದ್ದು, ನಿಮ್ಮ ಹಸ್ಬೆಂಡ್. ನೀವವರ ಜೊತೆ ಬಂದಿದ್ದಿರಿ ನೆನಪಿಲ್ಲವಾ? ನೀವು ಮಿ. ರೋಹಿತ್‌ಕುಮಾರ್ ಅವರ ಶ್ರೀಮತಿಯಲ್ಲವೇ?"

ಮತ್ತೂ ಆಶ್ಚರ್ಯ ಅವಳಿಗೆ. "ನನಗೆ ನೆನಪಾಗುತ್ತಿಲ್ಲವಲ್ಲ."

"ಸರಿಯಾಗಿ ನೆನಪು ಮಾಡಿಕೊಳ್ಳಿ ಮೇಡಮ್." ಅಂಗಡಿಯವರೆಂದಿದ್ದರು ಫೋನ್‌ನಲ್ಲಿ. "ನಿಮ್ಮ ಹಸ್ಬೆಂಡ್ ಹೇಳಿದ್ದರು ನೆನಪಿಲ್ಲವಾ ಆ ಕಲ್ಲುಗಳು ನಿಮ್ಮ ಕಿವಿಗಳ ಬಣ್ಣಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತವೆ ಎಂದು."

"ಆದರೆ ನೀವು ರಾಂಗ್ ನಂಬರ್‌ಗೆ ಫೋನ್ ಮಾಡಿದ್ದೀರೆನಿಸುತ್ತದೆ" ಎಂದಿದ್ದಳು ಪ್ರಿಯಾ ಜೋರಾಗಿ ನಗುತ್ತ. "ನಾನು ಅವರನ್ನೇ ನಿಮ್ಮ ಶಾಪ್‌ಗೆ ಕಳಿಸುತ್ತೇನೆ ಆ ಓಲೆಗಳನ್ನು ತರಲು, ಆಯಿತೇ?"

ಆಕೆ ಅದನ್ನು ತನ್ನ ಗಂಡನಿಗೆ ಹೇಳಿದಳು.

ಮಾತ್ರವಲ್ಲ ಅವನ ಮುಖದಲ್ಲಾಗುವ ಬದಲಾವಣೆಗಳನ್ನೂ ಜಾಗರೂಕತೆಯಿಂದ ಪರೀಕ್ಷಿಸಿದಳು. ಆದರೆ ರೋಹಿತ್ ಅಷ್ಟು ಸುಲಭವಾಗಿ ಸಿಕ್ಕಿಹಾಕಿಕೊಳ್ಳುವವನಲ್ಲ. ಯಾರೋ ರಾಂಗ್ ನಂಬರ್‌ಗೇ ಫೋನ್ ಮಾಡಿರಬೇಕೆಂದು ವಾದಿಸಿದ. ಮಾತ್ರವಲ್ಲ ತಾನು ಆ ಜುವೆಲ್ಲರೀ ಶಾಪ್‌ಗೆ ಹೋಗಿ ವಿಚಾರಿಸಿ ಬರುವುದಾಗಿಯೂ ಹೇಳಿದ.

ಆದರೆ ಆಕೆ ಅವನನ್ನು ನಂಬಲಿಲ್ಲ. ಹಾಗೆಂದು ಆ ಕ್ಷಣವೇ ಸತ್ಯವನ್ನು ಕಂಡುಕೊಳ್ಳುವ ಆತುರವನ್ನೂ ತೋರಲಿಲ್ಲ. ತಾನು ಏನೂ ತಿಳಿಯದವಳಂತೇ ಇದ್ದು ಗಮನಿಸಬೇಕೆಂದುಕೊಂಡಳು. ಆಕೆಗೆ ರೋಹಿತ್ ಬಗ್ಗೆ ವಿಶ್ವಾಸವಿತ್ತು. ತನ್ನ ಹಿಂದಿನಿಂದ ಬೇರೆ ಯಾರೋ ಹುಡುಗಿಯ ಜೊತೆ ಸ್ನೇಹಮಾಡಿ ಆಕೆಗೆ ಒಡವೆಗಳನ್ನು ಮಾಡಿಸುವಷ್ಟು ಮುಂದುವರಿಯಲಾರನೆಂಬ ನಂಬುಗೆ. ಆತನ ಬಗ್ಗೆ ನಂಬುಗೆ ಮಾತ್ರವಲ್ಲ, ಆಳವಾದ ಪ್ರೀತಿಯೂ ಇತ್ತು. ಯಾಕೆಂದರೆ ಆಕೆ ಮೆಚ್ಚಿ ಮದುವೆಯಾದ ಗಂಡ ಮತ್ತು ಆಕೆಯ ಮಗ ಗೌತಮ್‌ನ ತಂದೆ.

ಆದರೆ ಸಂಶಯದ ಒಂದು ಎಳೆ ಆಕೆಯ ಮನಸ್ಸಿನ ಮೂಲೆಯನ್ನು ಸೇರಿದ್ದು ಮಾತ್ರ ಸತ್ಯವಾಗಿತ್ತು ಆ ಘಟನೆಯ ಮೂಲಕ.

ಮುಂದೊಂದು ರಾತ್ರಿ ರೋಹಿತ್ ಮನೆಗೆ ತಡವಾಗಿ ಬಂದು ತನ್ನ ಡ್ರೆಸ್ಸಿಂಗ್ ರೂಮಿನ ಬಾಗಿಲು ತೆಗೆಯುತ್ತಿದ್ದುದು ಕೇಳಿಸಿತವಳಿಗೆ. ಹಾಸಿಗೆಯಲ್ಲಿ ಮಲಗಿದ್ದವಳು ತನ್ನ ಕೋಣೆಯ ಬಾಗಿಲನ್ನು ತೆರೆದಿದ್ದಳು.

"ಓಹ್ ಪ್ರಿಯಾ" ಎಂದನಷ್ಟೇ ಮನಸ್ಸಿಲ್ಲದ ಮನಸ್ಸಿನವನಂತೆ. ಮತ್ತೆ ಬೇರೆತ್ತಲೋ ನೋಡಿದ ಆಕೆಯ ನೋಟವನ್ನೆದುರಿಸಲಾಗದೆ.

"ನೀವೀಗೀಗ ಹದ್ದು ಬಸ್ತು ಮೀರುತ್ತಿರುವಂತೆ ಕಾಣುತ್ತಿದೆ." ಆಕೆಯೆಂದಳು ಬೇಕೆಂದೇ ತುಂಟತನದಿಂದ ಎನ್ನುವಂತೆ.


"ರೆಸ್ಟೋರೆಂಟ್ ಒಂದರಲ್ಲಿ ಪಾರ್ಟಿಯಿತ್ತು." ಅವ ಬಡಬಡಿಸಿದ.

"ನೀವು ಈಗ ಬಹಳಷ್ಟು ಕುಡಿದಿದ್ದೀರೆನಿಸುತ್ತದೆ. ನೀವು ಮತ್ತು ನಿಮ್ಮ ಜೊತೆಗಿದ್ದವರು."

'ರಾಗಸಂಗಮ'

ಲಾಟರಿ ಡ್ರಾ – ೧೩೩ರ ವಿಜೇತರು

ಶೀಲಾ ಲೋಬೋ
ಹೊನ್ನಾವ್
ಕುಮಟ.



ಬೇಕೆಂದೇ ಕೊನೆಯ ವಾಕ್ಯವನ್ನು ಒತ್ತಿ ಹೇಳಿದ್ದಳು. "ಗೊತ್ತಿದೆಯೇ ರಾತ್ರಿ ಹನ್ನೆರಡು ದಾಟಿದೆ.''

"ಒಬ್ಬ ಗಂಡಸು ಮನೆಯಿಂದ ಹೊರಗಿರುವ ಪ್ರತಿಯೊಂದು ಗಂಟೆಯ ವಿಷಯವನ್ನು ತನ್ನ ಹೆಂಡತಿಯ ಮುಂದೆ ವಿವರಿಸಿ ಹೇಳಬೇಕೆಂದಿದೆಯೇ?''

"ಓಹ್ ಎಂದಿಗೂ ಇಲ್ಲ'' ಎಂದಳು ಪ್ರಿಯಾ ಜೋರಾಗಿ ನಗಲೆತ್ನಿಸುತ್ತ, "ನೀವು ನಿಮ್ಮಿಷ್ಟದಂತೇ ಮಾಡಬಹುದು.''

"ಥ್ಯಾಂಕ್ಸ್'' ಎಂದನವ. "ನಾನೀಗ ಮಲಗಬಹುದೇ?'' ಅಪ್ಪಣೆ ಕೊಡುತ್ತೀಯಾ ಎನ್ನುವಂಥದೇ ವ್ಯಂಗ್ಯದ ದಾಟಿಯಲ್ಲಿ ಕೇಳಿದ.

"ಅಗತ್ಯವಾಗಿ'' ಆಕೆಯೆಂದಳು. "ಯಾಕೆಂದರೆ ನೀವು ಈಗಾಗಲೇ ತುಂಬ ದಣಿದಿದ್ದೀರಿ.''

"ಆಕೆಯ ಮಾತಿನಲ್ಲಿನ ಪ್ರತಿಯಾದ ವ್ಯಂಗ್ಯವನ್ನವ ಗುರುತಿಸಿದನೆನ್ನಬೇಕು. ಮುಖ ಕಪ್ಪಿಟ್ಟಿದ್ದುದನ್ನವಳು ಗಮನಿಸಿದಳು.

ತಪ್ಪಿತಸ್ಥ ಮುಖಭಾವವನ್ನವಳು ಗುರುತಿಸಿದಳು ಅವನಲ್ಲಿ.

ಮುಖಭಾವ ಮಾತ್ರವಲ್ಲ, ಅವನ ಇಡಿಯ ದೇಹದಲ್ಲೂ ಅದು ಎಸಗುವ ವರ್ತನೆಯಲ್ಲೂ ಅದನ್ನು ಕಂಡಳು. ಪ್ರೀತಿ ಯಾವ ಕ್ಷಣದಲ್ಲಿ ದ್ವೇಷವಾಗುತ್ತದೆನ್ನುವುದು ಪ್ರೀತಿಸುವ ಮತ್ತು ಅದನ್ನೇ ದ್ವೇಷವಾಗಿಸುವ ಹೆಣ್ಣುಗಳಷ್ಟೇ ಬಲ್ಲರು. ಸಾಮಾನ್ಯವಾಗಿ ಬಹುತೇಕ ಹೆಣ್ಣುಗಳು. ಪ್ರಿಯಾ ಅವರಲ್ಲಿ ಹೊರತಾಗಿರಲಿಲ್ಲ. ಬುಸುಗುಟ್ಟುತ್ತ ತಾನೂ ತನ್ನ ಕೋಣೆಯ ಬಾಗಿಲು ಹಾಕಿಕೊಂಡಿದ್ದಳು.

ಆದರೆ ಹಾಸಿಗೆಯನ್ನು ಸೇರಿದವಳಿಗೆ ಮಲಗಲಾಗಲಿಲ್ಲ. ಮಲಗಿ ನಿದ್ರಿಸಲಾಗಲಿಲ್ಲ. ಎದ್ದು ಕುಳಿತಳು ದೇಹವೆಲ್ಲ ನಡುಗುತ್ತಿತ್ತಾಕೆಯದು.

ಮುಂದೆ,

ಅಂಥದೇ ಘಟನೆಗಳು ಅಥವಾ ಅದನ್ನು ಹೋಲುವಂಥ ಘಟನೆಗಳು. ಪ್ರಿಯಾಳ ಮನಸ್ಸಿನಲ್ಲಿ ಕವಿದ ಸಂಶಯದ ಕತ್ತಲು ದಟ್ಟವಾಗುತ್ತಲಿತ್ತು ದಿನದಿಂದ ದಿನಕ್ಕೆ.

ಈ ನಡುವೆ ರೋಹಿತ್‌ನ ತಾಯಿ ಅಂಬುಜಮ್ಮ ಅವರಿಗೆ ಹಾರ್ಟ್ ಎಟ್ಯಾಕ್ ಆಯಿತು. ಆಕೆಯ ಶುಶ್ರೂಷೆಗೆಂದು ಸಿಟಿ ನರ್ಸಿಂಗ್ ಹೋಮ್‌ಗೆ ದಾಖಲು ಮಾಡಿದನಂತರ ಪ್ರಿಯಾಗೆ ಆಕೆಯೊಂದಿಗಿರಬೇಕಾಯಿತು.

ಆಗಲೆಲ್ಲ ರೋಹಿತ್ ಪ್ರಿಯಾಳ ಬಗ್ಗೆ ಆದರದಿಂದಲೇ ಇದ್ದ ಅಥವಾ ಹಾಗೆ ನಟಿಸಿದ. ಅಂಬುಜಮ್ಮ ತೀರಿಕೊಂಡರು. ಆಗ ಮಾತ್ರ ಅಧೀರನಾಗಿದ್ದಂತೆ ಕಂಡುಬಂದ ಅವಳಿಗೆ ಆತ ಪ್ರಿಯಾಳ ಹೆಗಲಿಗೆ ಆತುಕೊಂಡು ಅತ್ತುಬಿಟ್ಟರು. ಆಗ ಅವನಿಗೆ ಮಾನಸಿಕ ಭದ್ರತೆ ಸ್ಥಿರತೆ ತಂದುಕೊಟ್ಟವಳೇ ಪ್ರಿಯಾ.

ಆ ರಾತ್ರಿಯೆಲ್ಲ ಅವ ಅಲ್ಲಿಂದ ಕದಲಿರಲಿಲ್ಲ. ಪ್ರಿಯಾಳ ಜೊತೆಗೇ ಇದ್ದ ಈ ಹಿಂದಿನ ರೋಹಿತ್‌ನಂತೆಯೇ. ಅಂಥ ದುಃಖದ ಸಂದರ್ಭದಲ್ಲೂ ಒಂದು ಬಗೆಯ ಆನಂದವೆನಿಸಿತ್ತವಳಿಗೆ. ಆತ ಮೊದಲಿನಂತೆ ಆಕೆಗೆ ಹತ್ತಿರವಾದುದನ್ನು ನೋಡಿ. ಆದರೆ ಆ ಸಂತಸ ಬಹುಕಾಲ ಉಳಿಯಲಿಲ್ಲ. ರೋಹಿತ್ ಮತ್ತೆ ತನ್ನ ಸ್ವಭಾವವನ್ನು ಬದಲಿಸಿದ್ದ. ಮೊದಲಾದರೆ ಅಂಬುಜಮ್ಮನವರ ಸಾಂತ್ವನದ ಆಸರೆಗಳಾದರೂ ಇದ್ದುವು ಪ್ರಿಯಾಳಿಗೆ ಗಂಡನ ಅನಾದರಕ್ಕೊಳಗಾದಾಗಲೆಲ್ಲ. ಆದರೆ ಆಕೆಯ ಸಾವಿನನಂತರ ಪ್ರಿಯಾ ನಿಜ ಅರ್ಥದಲ್ಲಿ ಒಂಟಿಯಾಗಿದ್ದಳು.

ಒಮ್ಮೆ ಹೀಗಾಯಿತು.

ಗೌತಮ್ ನಡೆಸುತ್ತಿದ್ದ ಸೈಕಲ್ ಆಯ ತಪ್ಪಿದ್ದರಿಂದ ಬಿದ್ದು ತಲೆ ಕೈಕಾಲುಗಳಿಗೆ ಪೆಟ್ಟು ಮಾಡಿಕೊಂಡ. ಶಾಲೆಯಲ್ಲಿ ಡಾಕ್ಟರೊಬ್ಬರು ಅವನ ಮೇಲಿನ ತುಟಿಗಳಿಗೆ ನಾಲ್ಕು ಹೊಲಿಗೆ ಹಾಕಿದ್ದರು. ಒಂದು ಹಲ್ಲು ಮುರಿದು ಹೋಗಿತ್ತು. ಮಾಟ್ರನ್ ಏನೋ ಆಸ್ವಾಸನೆಯಿತ್ತಿದ್ದರು ಪ್ರಿಯಾಗೆ. ಏನೂ ತೊಂದರೆಯಿಲ್ಲ ಎಂದು. ಆದರೆ ಪ್ರಿಯಾಗೆ ಹೆದರಿಕೆ. ಸುದ್ದಿ ಕೇಳಿದಾಕೆಗೆ ಮನೆಯಲ್ಲಿ ನಿಲ್ಲಲಾಗಲಿಲ್ಲ. ತಕ್ಷಣ ಹೋಗಿ ಮಗನನ್ನು ನೋಡುವ ಕಾತರ ವ್ಯಕ್ತಪಡಿಸಿದಳು. ರೋಹಿತ್‌ನನ್ನು ಕರೆದಳು. ಆದರೆ ಆತ ಬರಲೊಪ್ಪಲಿಲ್ಲ.

"ಸಣ್ಣಪುಟ್ಟ ಗಾಯಗಳಷ್ಟೇ ಆಗಿರಬಹುದು. ತುಟಿಗೆ ಹೊಲಿಗೆಯಾದರೆ ಹಲ್ಲುಗಳಿಗೆ ಹಾನಿಯಾದರೇನಂತೆ, ಜೀವಕ್ಕೇನೂ ಅಪಾಯವಿಲ್ಲ. ಆದರೆ ಯಾಕಿಷ್ಟು ಗಾಬರಿಯಾಗುತ್ತೀ ಎನ್ನುವುದೇ ತಿಳಿಯುವುದಿಲ್ಲ."

"ತಂದೆಯಾದ ನಿಮಗೇ ಗಾಬರಿಯಿಲ್ಲ ಎಂದ ಮೇಲೆ ಅವನ ತಾಯಿಯಾದ ನನಗೆ ಮತ್ತಷ್ಟು ಗಾಬರಿಯಾಗುತ್ತಿದೆ" ಎಂದಳವಳು ವ್ಯಂಗ್ಯವಾಗಿ.

ಅವರಿಬ್ಬರು ಗೌತಮ್‌ನ ವಿಷಯವಾಗಿ ಒಂದಿಷ್ಟು ಹೊತ್ತು ಚರ್ಚಿಸಿದರು. ತನ್ನ ಮಗುವಿನ ಬಗ್ಗೆ ಅವನಿಗೆ ಪ್ರೀತಿಯಿಲ್ಲ ಎನ್ನುವ ಭಾವನೆಯೇ ಪ್ರಿಯಾಳ ದುಃಖದ ಮೂಲವಾಗಿತ್ತು. ಅವನ ಬಗೆಗಿದ್ದ ಅಸಮಾಧಾನದ ಮೂಲವಾಗಿತ್ತು. ಅದನ್ನವಳು ಬಾಯಿ ತೆರೆದು ಹೇಳಿಯೂ ಬಿಟ್ಟಳು ಅವನೆದುರಿಗೆ.

"ಹಾಗೆಂದೇ ತಿಳಿದುಕೊಳ್ಳಬಹುದು ನೀನು." ಅವನೆಂದ ಅಸಮಾಧಾನದ ಸ್ವರದಲ್ಲಿ. "ನಿನಗೂ ನನ್ನ ಮೇಲೆ ಪ್ರೀತಿ ಈಗ ಇಲ್ಲ. ಗೌರಿಯ ಸಾವಿನನಂತರ ನನ್ನನ್ನು ದ್ವೇಷಿಸಲಾರಂಭಿಸಿದ್ದೀ."

"ನೀವು ಸುಮ್ಮನೆ ಏನೆಲ್ಲ ಕಲ್ಪಿಸಿಕೊಂಡು ಕೊರಗುತ್ತಿದ್ದೀರಿ. ದಯವಿಟ್ಟು ಗೌರಿಯ ನೆನಪನ್ನು ತಂದುಕೊಂಡು ಅಳದಿರೋಣ. ನಮ್ಮ ಜಗಳದ ಮಧ್ಯೆ ಈಗ ಮಣ್ಣಲ್ಲಿ ಹೂವಾಗಿ ಅರಳಿರಬಹುದಾದ ಆ ಮಗುವಿನ ಹೆಸರು ಎತ್ತದಿರೋಣ."

ಅನುಭವ

ಹುಡುಗಿ ನಿನ್ನ
ಪ್ರೀತಿಯ ಸವಿ
ದೊರೆತ ಮೇಲೆ
ಅನುಭವವಾಯ್ತು
ಅದು ಜೇನಿಗಿಂತ
ಸಿಹಿಯೆಂದು.

— ಕಣತೂರು ಕೆಂಪರಾಜ್



"ಯಾಕೆ ತರಬಾರದು, ಈ ವರ್ಷಗಳಲ್ಲಿ ನಾನವಳ ಹೆಸರನ್ನು ಕೂಡ ಎತ್ತದಿರುವಂತೆ ಮಾಡುತ್ತಲಿದ್ದೀ. ನೀನವಳ ತಾಯಿಯಾಗಿದ್ದೀ. ಗೌತಮ್ ನಿನ್ನ ಮಗನಾದರೇನಾಯಿತು ಗೌರಿ ಮಗಳಾದರೇನಾಯಿತು, ಹೆಣ್ಣು ಗಂಡೆನ್ನದೇ ಎರಡೂ ಮಕ್ಕಳನ್ನು ಸಮನಾಗಿ ಪ್ರೀತಿಸಬೇಕಾಗಿತ್ತು ನೀನು. ನೀನು ನಿರ್ಲಕ್ಷ್ಯ ತಾಳಿದ್ದ ಫಲವಾಗಿಯೇ ಅವಳ ಸಾವುಂಟಾದುದು. ನನ್ನ ಪುಟ್ಟ ಮಗಳನ್ನು ನಾನು ಕಳೆದುಕೊಂಡುದು.''

"ದಯವಿಟ್ಟು ದೇವರಾಣೆಯಾಗಿಯಾದರೂ ನೀವು ಆ ವಿಷಯವನ್ನು ಮತ್ತೆ ನೆನಪಿಸಬೇಡಿ ರೋಹಿತ್. ಗೌರಿಯ ಸಾವಿನ ನೆನಪು ನನ್ನ ನೆತ್ತರನ್ನು ತಣ್ಣಗಾಗಿಸುತ್ತೆ. ದುಃಖವೇ ತುಂಬಿಕೊಂಡಂತಾಗುತ್ತದೆ ನನ್ನ ದೇಹದೊಳಗೆಲ್ಲ ನೆತ್ತರಿನ ಬದಲಾಗಿ.'' ಆಕೆ ಬಿಕ್ಕಿ ಬಿಕ್ಕಿ ಅತ್ತಳು.

ಸ್ವಲ್ಪ ಹೊತ್ತು ಮೌನ ನೆಲೆಸಿತು ಅವರಿಬ್ಬರ ನಡುವೆ.

ಅನಂತರ ಹೇಳಿದಳಾಕೆ ಸಮಾಧಾನ ತಂದುಕೊಳ್ಳುತ್ತ. "ನನಗೆಲ್ಲ ಗೊತ್ತಿದೆ. ನೀವು ನನಗೇನೆಲ್ಲ ತಿಳಿದಿಲ್ಲ ಎಂದುಕೊಂಡಿದ್ದೀರೋ ಅದೆಲ್ಲ ತಿಳಿದಿದೆಯೆಂದುಕೊಳ್ಳಿ.''

"ನೀನೇನು ಹೇಳುತ್ತಿದ್ದೀ ಎನ್ನುವುದು ನನಗೆ ತಿಳಿಯಲಿಲ್ಲ.''

"ತಿಳಿಯದಿರುವುದಾದರೂ ಹೇಗೆ? ನಿಮ್ಮ ಮನಸ್ಸನ್ನು, ಆತ್ಮಸಾಕ್ಷಿಯಿದ್ದರೆ ಅದನ್ನು ಪ್ರಶ್ನಿಸಿಕೊಳ್ಳಿ. ನಿಮಗೊಬ್ಬಳು ಸ್ನೇಹಿತೆಯಿದ್ದಾಳೆ ಯುವತಿ ಹೆಚ್ಚಿನ ಸಂಭವಗಳಲ್ಲಿ. ನನಗಿಂತ ಹೆಚ್ಚು ಆಕರ್ಷಕವಾಗಿ ಕಾಣುವವಳು. ನಾನೆಲ್ಲ ಅರ್ಥ ಮಾಡಿಕೊಂಡಿದ್ದೇನೆ. ಆ ಕಿವಿಯೋಲೆಯ ವಿಷಯವಾಗಿ ನೀವು ನನಗೆ ಸುಳ್ಳು ಹೇಳಿದರೇನಾಯಿತು? ನೀವೇ ಜುವೆಲ್ಲರೀ ಶಾಪ್‌ನಲ್ಲಿ ಅದನ್ನು ಮಾಡಿಸಲು ಹಾಕಿಸಿದ್ದು ಎನ್ನುವುದನ್ನು ನಾನು ಖಚಿತಪಡಿಸಿಕೊಂಡಿದ್ದೇನೆ. ನೀವು ನಿಮ್ಮ ಆತ್ಮಸಾಕ್ಷಿಗೆ ವಂಚನೆ ಮಾಡಿಕೊಳ್ಳದೇ ಹೇಳಿ.''

ಆತನ ಕಣ್ಣುಗಳನ್ನೇ ನೋಡುತ್ತ ಕೇಳಿದಳವಳು.

ರೋಹಿತ್ ಈಗ ಸೋತಿದ್ದ ಆಕೆಯೆದುರಿಗೆ ಹಾಗೇ ಮೌನ ವಹಿಸಿದ್ದ.

'ಒಂದು ಕಾಲದಲ್ಲಿ ತಾನು ಅತ್ಯಂತ ಪ್ರೀತಿಸುತ್ತಲಿದ್ದ ಗಂಡಸು ಇವನೇ?' ಎನ್ನುವ ಅನುಮಾನವುಂಟಾದವಳಂತೆ ನೋಡುತ್ತಿದ್ದಳಾಕೆ ಅವನನ್ನೇ. ಆ ಮುಖ ಈಗ ಕೆಂಪಗಾಗಿದೆ.

ಮೊದಲಿನಂತ ನಿಷ್ಕಳಂಕ ಭಾವದಿಂದಲ್ಲ. ಬದಲಾಗಿ ತಪ್ಪಿತಸ್ಥ ಮುಖಭಾವವನ್ನು ಹೊತ್ತುಕೊಂಡು.

ಅವರಿಬ್ಬರ ನಡುವೆ ಬಲಿಯಲಾರಂಭಿಸಿದ್ದ ಮೌನ ಅಸಹನೀಯವಾಗಿತ್ತು ಇಬ್ಬರ ಪಾಲಿಗೂ.

ನಿಧಾನವಾಗಿ ರೋಹಿತ್ ಹೇಳಿದ.

"ಇತ್ತೀಚೆಗೆ ನನ್ನ ವರ್ತನೆಗಳನ್ನೆಲ್ಲ ಅತ್ಯಂತ ಜಾಗರೂಕತೆಯಿಂದ ನೀನು ಗಮನಿಸ್ತಿರೋದಿಕ್ಕೆ ಇದೇ ಕಾರಣವೇ? ಹಾಗಾದರೆ ಇನ್ನೂ ಜಾಗರೂಕಳಾಗಿರಬೇಕೆಂದು ಸಲಹೆ ಮಾಡುತ್ತೇನೆ."

ಅವನ ಮಾತು ಕೇಳಿ ಜೋರಾಗಿ ನಕ್ಕು ಬಿಟ್ಟಳಾಕೆ.

"ನೀವು ಆ ಹುಡುಗಿಯ ಬಗ್ಗೆ ಹೇಳಲು ಯಾಕೆ ಹೆದರುತ್ತೀರಿ ಎನ್ನುವುದು ಅರ್ಥವಾಗುವುದಿಲ್ಲ."

"ನಿನ್ನ ಕಲ್ಪನೆಯಲ್ಲಿರುವ ವ್ಯಕ್ತಿಗಳ ಬಗ್ಗೆ ನಾನಾದರೂ ಹೇಗೆ ಹೇಳಲಿ" ಎಂದು ಎದ್ದು ಹೋದ ತನ್ನ ಕೋಣೆಗೆ.

ಮರುದಿನ ಬೆಳಿಗ್ಗೆ ಎದ್ದವಳೇ ಗಂಡನನ್ನು ಆಫೀಸಿಗೆ ಕಳಿಸಿದನಂತರ ಗೌತಮ್‌ನ ಶಾಲೆಗೆ ಹೋದಳು ಪ್ರಿಯಾ. ಬೇಕೆಂದೇ ಕಾರು ತೆಗೆದುಕೊಂಡು ಹೋಗಲಿಲ್ಲ. ಬದಲಾಗಿ ಬಸ್‌ನಲ್ಲಿ ಹೋದಳು. ಮಧ್ಯಾಹ್ನ ಮೂರು ಗಂಟೆಯಷ್ಟು ಹೊತ್ತಿಗೆ ಆಕೆ ಶಾಲೆಯ ಆವರಣವನ್ನು ತಲುಪುವುದು ಸಾಧ್ಯವಾಯಿತು. ಹೆಡ್‌ಮಾಸ್ತರ್ ಅವರ ಅನುಮತಿ ಪಡೆದು ಮಗ ಗೌತಮ್‌ನನ್ನು ಭೇಟಿಯಾದಳು.

ಆಕೆ ಊಹಿಸಿದ್ದಷ್ಟು ಗಂಭೀರವಾಗಿಯೇನೂ ಆತ ಗಾಯಗೊಂಡಿಲ್ಲದಿರುವುದನ್ನು ಗಮನಿಸಿ ಅವಳಿಗೆ ಖುಶಿಯಾಯಿತು. ಗೌತಮ್ ತುಂಬ ಒಳ್ಳೆಯ ಹುಡುಗ. ಭಾವುಕ ಪ್ರವೃತ್ತಿಯವನು. ತಾಯಿಯನ್ನು ಕಂಡವನೇ ತನಗಾದ ಆಕಸ್ಮಿಕದ ವಿಷಯವಾಗಿ ಚುಟುಕಾಗಿ ಹೇಳಿದ. ಆದರೆ ತನ್ನ ಸ್ನೇಹಿತನಾಗಿದ್ದ ಹುಡುಗ ಭರತ್‌ನ ತಂದೆ ತಾಯಿ ಬೇರೆಯಾಗಿರುವುದು, ಅದು ಭರತ್‌ನ ಮನಸ್ಸಿನ ಮೇಲೆ ಬೀರಿದ ಪರಿಣಾಮ, ನಿರಾಶೆಗಳ ಕುರಿತಾಗಿ ಹೇಳಿದ. ಅದೇ ದೃಷ್ಟಿಯಲ್ಲಿ ಆತ ತನ್ನ ತಂದೆಯನ್ನು ನೋಡುತ್ತಿದ್ದಾನೇನೋ ಅನಿಸಿತು ಕೇಳುತ್ತಲಿದ್ದ ಅವನ ತಾಯಿಗೆ. ಹಾಗೆ ಕ್ರಮೇಣ ಅವನು ತನ್ನ ತಂದೆ ಅಂದರೆ ರೋಹಿತ್‌ನನ್ನು ದ್ವೇಷಿಸುವ ಹಂತಕ್ಕೂ ಬರಬಹುದೆನಿಸಿತವಳಿಗೆ. ಆ ಭಾವನೆ ಆಕೆಯ ಮನಸ್ಸನ್ನು ತಟ್ಟಿತು. ಹೀಗೆ ಎಂದಿಗೂ ಆಗಬಾರದು ಎಂದುಕೊಂಡಳು ಪ್ರಿಯಾ.

ಆಕೆ ಮಗು ಗೌತಮ್‌ನಿಂದ ಬೀಳ್ಕೊಂಡು ಮನೆಯ ಕಡೆಗೆ ತಿರುಗಿದಳು.

ಮನೆ ತಲುಪುವಾಗ ರಾತ್ರಿ ಎಂಟು ಗಂಟೆ ದಾಟಿತ್ತು. ರೋಹಿತ್ ಇನ್ನೂ ಮನೆಗೆ ಮರಳಿದ ಸೂಚನೆಗಳಿರಲಿಲ್ಲ. ತಾನೊಬ್ಬಳೇ ಊಟ ಮುಗಿಸಿ ಕೋಣೆಯ ಬಾಗಿಲು ಹಾಕಿಕೊಂಡಳು. ಆ ರಾತ್ರಿ ಮತ್ತೆ ಅವನಿಗೆ ಮುಖ ತೋರಿಸುವ ಧೈರ್ಯವಿಲ್ಲದೆ.

ಮರುದಿನ ಬೆಳಿಗ್ಗೆ ಆತ ಮಲಗಿದಲ್ಲಿಗೆ ಬೆಡ್‌ಕಾಫಿಯನ್ನು ಒಯ್ದು ಇಟ್ಟಳು. ಜೊತೆಗೆ ಸಣ್ಣ ಚೀಟಿಯನ್ನೂ ಇಟ್ಟಿದ್ದಳು. ಆ ಚೀಟಿಯಲ್ಲಿ ಹೀಗೆ ಬರೆದಿದ್ದಳು ಪ್ರಿಯಾ.

'ದಯವಿಟ್ಟು ನೆನ್ನೆರಾತ್ರಿಯಂತೆ ನಾವು ಜಗಳಾಡದಿರೋಣ. ಯಾಕೆಂದರೆ ಜಗಳಾಡುವುದರಿಂದ ಯಾವ ಸಮಸ್ಯೆಯೇ ಆಗಲಿ ಬಗೆಹರಿಯುವುದಿಲ್ಲ. ಆದಕಾರಣ ಭಿನ್ನಾಭಿಪ್ರಾಯಗಳಿದ್ದರೆ ಪರಸ್ಪರ ಮಾತುಕತೆಗಳಿಂದ ಅದನ್ನು ನಿವಾರಿಸಿಕೊಳ್ಳುವುದೇ ಯೋಗ್ಯವಾದ ದಾರಿಯೆನ್ನುವ

ಅಂತರ್ರಾಷ್ಟ್ರೀಯ ಜಗಳಗಳು ಅಶಾಂತ ಮಾರ್ಗಗಳಿಂದ ಎಂದೂ ಸರಿಪಡಲಾರವು.
– ನೆಹರು

ಅತೃಪ್ತಿಯು ಪ್ರಗತಿಯ ಹಾದಿಯಲ್ಲಿಯ ಮೊದಲನೆಯ ಹೆಜ್ಜೆ. – ಆಸ್ಕರ್ ವೈಲ್ಡ್

ಆತ್ಮಶುದ್ಧಿ ಇಲ್ಲದವನ ನಾಯಕತ್ವವು, ಮನೋ ನಿಗ್ರಹವಿಲ್ಲದವನ ತಪಶ್ಶಕ್ತಿಯು, ಹಣಕ್ಕಾಗಿ ಬರೆಯುವವನ ಕಾವ್ಯಗಳು ನಿಷ್ಪ್ರಯೋಜಕ. – ಭಟ್ಟ ನಾರಾಯಣ

ಸಂಗ್ರಹ : ಕೆ. ಆರ್. ಹೇಮಲತಾ



ಸತ್ಯ ನನಗೆ ತಡವಾಗಿಯಾದರೂ ತಿಳಿಯಿತು. ಆದಕಾರಣ ನಿನ್ನೆ ರಾತ್ರಿಯ ದುಡುಕುತನಕ್ಕಾಗಿ ನಾನು ಕ್ಷಮೆ ಯಾಚಿಸುತ್ತೇನೆ.'

ಆಫೀಸಿಗೆ ಹೊರಟು ಹೋಗುವ ಮುನ್ನ ರೋಹಿತ್ ಮೇಲೆ ಹತ್ತಿ ಬಂದು ಆಕೆಯ ಜೊತೆ ಮಾತನಾಡಿದ. ರಾತ್ರಿಯೆಲ್ಲ ಚೆನ್ನಾಗಿ ನಿದ್ರೆ ಮಾಡಿರುವವನಂತೆ ಕಂಡುಬಂದ ಅವ ಅವಳಿಗೆ. ಹಾಗಾದರೆ ಈ ಗಂಡಸಿಗೆ ಯಾವುದೇ ರೀತಿಯ ಜವಾಬ್ದಾರಿಗಳೇ ಇಲ್ಲವೇ? ಆಕೆ ಯೋಚಿಸಿದಳು.

"ನಿನ್ನ ಚೀಟಿಯನ್ನು ನೋಡಿದೆ ಪ್ರಿಯಾ. ನಿನ್ನೊಂದಿಗೆ ನಾನೂ ಒಪ್ಪುತ್ತೇನೆ; ನಾನು ಕೂಡ ಅಷ್ಟೊಂದು ಒರಟಾಗಿ ವರ್ತಿಸಬಾರದಾಗಿತ್ತು. ಆದುದಾಯಿತು ಅದನ್ನು ಮರೆತುಬಿಡೋಣ'' ಎಂದ.

ಮುದೊಂದು ದಿನ ರೋಹಿತ್ ತನ್ನ ಹೆಂಡತಿಯ ಭುಜ ಹಿಡಿದು ಅತ್ತು ಬಿಟ್ಟ. ತನ್ನ ತಾಯಿಯ ನೆನಪಾಗಿ. "ಆಕೆಗೆ ನೀನು ತುಂಬ ಹತ್ತಿರದವಳಾಗಿದ್ದೆ. ಹಾಗೇ ನನ್ನ ಸ್ವಂತ ತಾಯಿಗೆ ನಾನೇನು ಮಾಡಬೇಕಾಗಿತ್ತೋ ಅದನ್ನು ಮಾಡದೇ ಕರ್ತವ್ಯ ಚ್ಯುತನಾದೆ. ಆದರೆ ನೀನು ಹಾಗಾದರೆ ನಿನ್ನೆಲ್ಲ ಕರ್ತವ್ಯಗಳನ್ನೂ ಮಾಡಿದ್ದೀ. ಅವಳಿಗಿರದ ಮಗಳಾಗಿ ಬಂದೆ ಕೂಡ. ಅದಕ್ಕಾಗಿ ನಿನ್ನನ್ನೆಷ್ಟು ಹೊಗಳಿದರೂ ಕಡಿಮೆಯೇ.''

ಪ್ರಿಯಾ ತನ್ನ ಕಣ್ಣು ಮುಚ್ಚಿಕೊಂಡಳು. ಆದರೂ ಕಣ್ಣಲ್ಲಿ ಹರಿದು ನೀರು ಕೆಳಗಿಳಿಯದೇ ಇರಲಿಲ್ಲ 'ತಾನು ಇಂಥ ಒಳ್ಳೆಯ ಮನಸ್ಸಿನ ಪತಿಯನ್ನು ತಪ್ಪಾಗಿ ಭಾವಿಸಿದೆನಲ್ಲ' ಎನ್ನುವ ಕೊರಗು ಆಕೆಯನ್ನು ಬಾಧಿಸಿತು. ಆ ದಿನವಷ್ಟೇ ಅವರಿಬ್ಬರೂ ಒಂದೇ ಕೋಣೆಯಲ್ಲಿ, ಒಂದೇ ಹಾಸಿಗೆಯ ಮೇಲೆ ಒಬ್ಬರನ್ನೊಬ್ಬರು ತಬ್ಬಿಕೊಂಡು ಮಲಗಿದ್ದರು. ಅವನಿಂದ ರಕ್ಷಣೆಯನ್ನವಳು ಹಾಗೆ ಪಡೆದಿದ್ದರೆ ಅವನಿಗೂ ರಕ್ಷಣೆಯೊದಗಿಸಿದಳು ಮಾನಸಿಕವಾಗಿ. ತಾವಿಬ್ಬರೇ ವಿನಾ ತಮ್ಮ ನಡುವೆ ಆಕೆ ಊಹಿಸಿದಂತೆ ಬೇರೆ ಯಾವ ಹೆಣ್ಣೂ ಇಲ್ಲವೆಂದು ಖಚಿತವಾಗಿ ನಂಬಿದಳು. ತಾನು ಹೊಂದಿದ್ದ ಭಾವನೆಗಳೆಲ್ಲವುಗಳಿಗಾಗಿ ಪಶ್ಚಾತ್ತಾಪ ಪಡಬೇಕೆನಿಸಿತು.

ಅನಂತರದ ಎರಡು ಅಥವಾ ಮೂರು ವಾರಗಳಲ್ಲಿ ಆ ಮನೆಯಲ್ಲಿ ಶಾಂತಿ

ಸಮಾಧಾನವಿತ್ತು. ಆದರೆ ಅದರಲ್ಲೊಂದು ಬಗೆಯ ಅಸಹಜತೆಯೂ ಇತ್ತು ಸೂಕ್ಷ್ಮವಾಗಿ ಗಮನಿಸಬಹುದಾದರೆ. ಆದರೆ ಪರಸ್ಪರರ ಮಟ್ಟಿಗೆ ಅವರಿಬ್ಬರೂ ಶಾಂತರಾಗೇ ಇದ್ದರೂ ಏನೊಂದೂ ಮಾತುಗಳ ಚಕಮಕಿ ಇಲ್ಲದೆ. ಕ್ರಮೇಣ ಅವರಿಬ್ಬರು ಊಟದ ಹೊತ್ತಲ್ಲಿ ಮಾತ್ರ ಪರಸ್ಪರರನ್ನು ಭೇಟಿಯಾಗುತ್ತಿದ್ದರು. ರೋಹಿತ್‌ನ ತೀರಿಕೊಂಡ ತಾಯಿಯ ವೈಕುಂಠ ಸಮಾರಾಧನೆ ಅನಂತರ ತಿಂಗಳ ನೆನಪಿನ ದಿನವೆಲ್ಲ ಬಂದ ಅತಿಥಿಗಳೆದುರು ಪರಸ್ಪರ ಅನ್ಯೋನ್ಯತೆಯಲ್ಲಿರುವ ದಂಪತಿಗಳಂತೆ ಇದ್ದರು. ಹಾಗಿದ್ದರು ಎನ್ನುವುದಕ್ಕಿಂತ ಹಾಗೆ ನಟಿಸಿದರು ಎಂದರೇ ಹೆಚ್ಚು ಸರಿಯಾಗಬಹುದು.

* * * * *

ದೀಪಾವಳಿಯ ಹೊತ್ತಿಗೆ ರಜೆಯ ಮೇಲೆ ಗೌತಮ್ ಮನೆಗೆ ಬಂದ. ಅಪರೂಪಕ್ಕಾದರೂ ತಂದೆ ತಾಯಿಯ ಜೊತೆಯಲ್ಲಿರಬೇಕೆನ್ನುವ ಬಯಕೆ ಹುಡುಗನಿಗೆ. ಅದು ರೋಹಿತ್‌ನಿಗೂ ಗೊತ್ತು. ಪ್ರೀತಿಯಿಂದ ಒಮ್ಮೆ ಮಗನ ಭುಜದ ಮೇಲೆ ಕೈಯಾಡಿಸುತ್ತ ಹೇಳಿದ ರೋಹಿತ್. "ಸಪೂರವೇನಲ್ಲ ಆದರೆ ಎತ್ತರಕ್ಕೆ ಬೆಳೆದಿದ್ದೀಯ. ತುಂಬ ವೇಗವಾಗಿ ಬೆಳೆಯುತ್ತಿದ್ದೀ. ಈ ವೇಗವನ್ನೊಂದಿಷ್ಟು ಕಡಿಮೆಗೊಳಿಸು. ನನ್ನಷ್ಟು ಎತ್ತರದ ಮಗನಿದ್ದಾನೆ ನನಗೆ ಎಂದು ಹೇಳಿಕೊಳ್ಳೋದಕ್ಕೆ ನನ್ನಿಂದಾಗೋಲ್ಲ."

"ಓ ದೇವರೆ ಹಾಗಾದರೆ ನಾನೆಷ್ಟು ಸಮಯ ತೆಗೆದುಕೊಳ್ಳಬೇಕಿನ್ನು ಹಾಗಾಗಲು." ಗೌತಮ್ ನಕ್ಕುಬಿಟ್ಟ ತಂದೆಗೆ ತಕ್ಕ ಮಗ ಎಂದುಕೊಂಡಳು ಪ್ರಿಯಾ.

"ಅವನೇನೂ ನಿಮ್ಮಷ್ಟು ಎತ್ತರಕ್ಕೆ ಬೆಳೆಯೋದಿಲ್ಲ" ಆಕೆಯೆಂದಳು. "ನನ್ನಂತೆ ಅವನು ಕುಳ್ಳಗೆ."

"ಆದರೆ ದುಂಡಗೆ" ಎಂದು ತಾನೂ ನಕ್ಕ ರೋಹಿತ್.

"ಆಕಸ್ಮಿಕದಿಂದಾದ ಗಾಯಗಳೆಲ್ಲ ಗುಣವಾಗಿ ಮಾಸಿವೆಯಲ್ಲ?" ತನ್ನ ತಾಯಿಗೆ ತೋರಿಸಿದ ಗೌತಮ್. ಪ್ರಿಯಾ ಆತನ ತುಟಿಗಳನ್ನೇ ನೋಡಿದಳು.

"ಸಣ್ಣದೊಂದು ಕಲೆ ಇದೆಯಷ್ಟೆ. ಅವರು ನಿಜಕ್ಕೂ ಒಳ್ಳೆಯ ನುರಿತ ಡಾಕ್ಟರ್ ಇರಬೇಕು. ಹೇಗೆ ಎಷ್ಟು ನಾಜೂಕಾಗಿ ಹೊಲಿದಿದ್ದರವರು."

"ಇನ್ನು ಮುಂದೆ ಬೈಸಿಕಲ್‌ನಲ್ಲಿ ಹೆಚ್ಚು ಆಟವಾಡಬೇಡ" ಎಂದ ರೋಹಿತ್ ಮಗನಿಗೆ.

"ಡ್ಯಾಡ್" ಅದೇ ಸಮಯ ಎಂದುಕೊಳ್ಳುತ್ತ ಹೇಳಿದ ಗೌತಮ್ ತನ್ನ ತಂದೆಗೆ. "ನನ್ನೊಬ್ಬ ಸ್ನೇಹಿತನಿದ್ದಾನೆ. ಸ್ಟಾಂಪ್ಸ್ ಕಲೆಕ್ಟ್‌ಮಾಡೋದ್ರಲ್ಲಿ ಹೆಚ್ಚು ಆಸಕ್ತಿ ಅವನಿಗೆ. ನನಗೂ ಅವನಂತೆ ಸ್ಟಾಂಪ್ಸ್ ಕಲೆಕ್ಟ್ ಮಾಡ್ಬೇಕೂಂತ ಆಸೆ. ನೀವು ತಂದು ಕೊಡ್ತೀರಾ?"

"ನೋಡೋಣ ನಾನೀಗ ಒಂದಿಷ್ಟು ಬಿಜಿಯಾಗಿದ್ದೇನೆ. ಸಮಯವಿರುವಾಗ ಪ್ರಯತ್ನಿಸ್ತೇನೆ. ಆಗದೇ?"

"ಓಕೆ" ಎಂದ ಗೌತಮ್.

ತಂದೆ ಹೊರಟು ಹೋದನಂತರ ಮತ್ತೆ ತನ್ನ ತಾಯಿಯ ಕಡೆಗೆ ತಿರುಗಿದ.

"ಯಾಕೋ ನಮ್ಮ ಡ್ಯಾಡ್ ಮೊದಲಿನಂತಿಲ್ಲ ಅನಿಸುತ್ತೆ ಅಲ್ವಾ ಮೋಮ್. ಯಾಕೆ ಈ ಬದಲಾವಣೆ?"

ಪ್ರಿಯಾ ತನ್ನ ಕೆಳತುಟಿಯನ್ನು ಕಚ್ಚಿಕೊಂಡಳು. ಹಾಗೇ ಆಕೆಯ ಕಣ್ಣುಗಳು ತುಂಬಿ

"ರೀ ಶಾರದಮ್ಮ, ನಿಮಗೆ ಒಂದು ತಮಾಷೆ ಹೇಳ್ತೀನಿ ಅದನ್ನು ಕೇಳಿದರೆ ನೀವು ನಕ್ಕು ನಕ್ಕು ಸತ್ತೇ ಹೋಗುತ್ತೀರಿ."

"ಹಾಗಾದರೆ ಸ್ವಲ್ಪ ಇರಿ, ನಮ್ಮ ಅತ್ತೇನ ಕರೀತೀನಿ. ಅವರ ಹತ್ತಿರ ಆ ತಮಾಷೆ ಹೇಳ್ರೀ!''

— ಕೆ. ಎಸ್. ಮುರಳೀಧರ



ಬಂದುದನ್ನು ಕೆನ್ನೆಗಳು ಕೆಂಪಾದುದನ್ನು ಹುಡುಗ ಗಮನಿಸಿದ. ಆ ಪ್ರಶ್ನೆ ಅವಳದೇ ಆಗಿತ್ತು ಕೂಡ. ಮಗು ಗೌತಮ್‌ನಿಂದ ಬರಬಾರದಾಗಿತ್ತೆನ್ನುವುದೇ ಅವಳ ಖೇದಕ್ಕೆ ಕಾರಣವಾಗಿತ್ತು.

"ನಿನ್ನ ತಂದೆಗೆ ಇತ್ತೀಚೆಗೆ ಸ್ವಲ್ಪ ಹೊಟ್ಟೆನೋವು ಬಾಧಿಸುತ್ತಿದೆ. ಆದಕಾರಣ ಇಂಥ ವಿಷಯಗಳಲ್ಲೆಲ್ಲ ನಿರಾಸಕ್ತಿ ಇರಬೇಕೆನಿಸುತ್ತದೆ. ನೀನು ಯೋಚಿಸಬೇಡ. ನಾನು ನೋಡುತ್ತೇನೆ ನಿನ್ನ ಸ್ನೇಹಿತರ ಸ್ಟಾಂಪ್ ಕಲೆಕ್ಷನನ್ನು. ಆಯಿತೇ?''

ಆ ಸಂಜೆ ಎಲ್ಲ ನಗುನಗುತ್ತ ಕಳೆದರು.

ಅದು ಬೆಳಕಿನ ಹಬ್ಬವಾಗಿತ್ತು ದೀಪಾವಳಿ. ಚಿಂತೆ ಮತ್ತು ಮನಸ್ತಾಪಗಳು ಕತ್ತಲು ತರಬಹುದಾದ ಕಾರಣ ಆಕೆ ಅವು ಸುಳಿಯದಂತೆ ಜಾಗರೂಕಳಾಗಿದ್ದಳು. ರೋಹಿತ್‌ನ ಜೀವನದಲ್ಲಿ ಇತ್ತೀಚೆಗೆ ಪ್ರವೇಶಿಸಿದ್ದಾಳೆಂದು ಆಕೆಗೆ ಮನವರಿಕೆಯಾದ ಆ ಮತ್ತೊಬ್ಬಳು ಹೆಣ್ಣಿನ ನೆನಪನ್ನು ಆಕೆ ಸಂಪೂರ್ಣವಾಗಿ ಮರೆಯಲೆತ್ನಿಸಿದ್ದಳು ಕೊನೆಯ ಪಕ್ಷ ಆ ದಿನದ ಮಟ್ಟಿಗಾದರೂ.

ಸಂಭ್ರಮದ ವಾತಾವರಣ ನೆಲೆಸುವಂತೆ ಪ್ರಯತ್ನಿಸಿದಳು. ರೋಹಿತ್‌ನ ಸಂಬಂಧಿಕರ ಮಕ್ಕಳೆಲ್ಲ ಬಂದಿದ್ದರು. ಎಲ್ಲ ಗೌತಮ್‌ನ ಓರಗೆಯವರೇ. ಆ ಮಕ್ಕಳೊಂದಿಗೆ ಸಂತೋಷವಾಗಿ ಕಳೆದ ಗೌತಮ್.

ಆದರೆ ಒಂದು ಘಟನೆ ನಡೆಯಿತು.

ಸಂಜೆ ಎಲ್ಲರೂ ಗದ್ದಲದಲ್ಲಿ ಮುಳುಗಿದ್ದಾಗ ರೋಹಿತ್ ಸಮಯ ಸಾಧಿಸಿ, ಆಕೆ ಡ್ರೆಸ್ಸಿಂಗ್ ರೂಮಿನಲ್ಲಿರುವ ಮಂಚದ ಮೇಲೆ ಕೂತಿದ್ದ ಸಮಯ ಸಾಧಿಸಿ ಒಳ ಬಂದು ಬಾಗಿಲು ಹಾಕಿದ. ಅವನ ಕೈಯಲ್ಲೊಂದು ಪುಟ್ಟ ಪ್ಯಾಕೆಟ್ ಇದ್ದುದನ್ನಾಕೆ ಗಮನಿಸಿದಳು. ಅದನ್ನಾಕೆಯ ಕೈಗೆ ಕೊಡುತ್ತ ಆಕೆಯನ್ನು ಚಕಿತಗೊಳಿಸಲು ಯತ್ನಿಸಿದ. "ದೀಪಾವಳಿಯ ಶುಭಾಷಯಗಳು'' ಎಂದು.

ಆದರೆ ಪ್ರಿಯಾ ಆ ಪ್ಯಾಕೆಟನ್ನು ತತ್‌ಕ್ಷಣ ಪಡೆಯಲಿಲ್ಲ. ಅವನು ಅದನ್ನು ಹಿಡಿದುಕೊಂಡೇ ಮಂಚದ ಮೇಲೆ ಕುಳಿತ. ಪ್ರತಿಯಾಗಿ ಆಕೆಯೂ ಆತನಿಗೇನನ್ನೂ ಕೊಡಲಿಲ್ಲ.

"ನಿಮಗಾಗಿ ಏನನ್ನು ತರಬೇಕೆನ್ನುವುದು ನನಗೆ ತಿಳಿಯದೇ ಹೋಯಿತು.'' ಆಕೆಯೆಂದಳು ಕಣ್ಣುಗಳಲ್ಲಿ ಉಕ್ಕಿ ಬಂದ ನೀರನ್ನು ತಡೆಹಿಡಿಯಲೆತ್ನಿಸುತ್ತ. "ನಿಮ್ಮ ಬರ್ತ್ ಡೇ ಕೂಡ ಹತ್ತಿರದಲ್ಲಿಯೇ ಇದೆಯಾದ ಕಾರಣ ದೀಪಾವಳಿ ಮತ್ತು ಬರ್ತ್ ಡೇ ಗಿಫ್ಟ್ ಎಂದು ಒಂದೇ

ಸಲ ಕೊಡೋಣವೆಂದು ಸುಮ್ಮನುಳಿದೆ. ನೀವೇ ಆರಿಸಿ ತರುವಂತೆ ಏರ್ಪಡಿಸಲೆತ್ನಿಸಿದ್ದೆ.''

"ಓಕೆ ಹಾಗೇ ಆಗಲಿ'' ಎಂದ ರೋಹಿತ್. "ಈಗ ನಿನ್ನ ಉಡುಗೊರೆಯ ಪ್ಯಾಕೆಟನ್ನು ಬಿಚ್ಚಿ ನೋಡಬಹುದಲ್ಲ.''

"ಆಯ್ತು ಈಗ ಇದನ್ನು ತೆರೆದು ನೋಡು'' ಎಂದು ಒತ್ತಾಯಿಸಿದ ರೋಹಿತ್ ಆಕೆಗೆ. ಆಕೆ ಅದನ್ನು ತೆಗೆದುಕೊಂಡು ತೆರೆಯಲೆತ್ನಿಸಿದಳು. 'ದೇವರೇ ಆ ಕಿವಿಯೋಲೆಗಳನ್ನು ರೋಹಿತ್ ಆಕೆಗೆಂದು ಮಾಡಿಸಿದ್ದು ಆಗದಿರಲಿ' ಎಂದು ಬೇಡಿಕೊಂಡಳು ಮನಸ್ಸಿನಲ್ಲಿಯೇ, ಆಕೆಯ ಸಂತಸಕ್ಕೆ ಪಾರವೇ ಇರಲಿಲ್ಲ. ಆ ಪ್ಯಾಕೆಟ್‌ನಲ್ಲೊಂದು ಜೊತೆ ಕಿವಿಯೋಲೆಗಳಿದ್ದುದನ್ನು ನೋಡಿದಾಗ. ಹಂಸಗಳ ವಿನ್ಯಾಸವಿರುವ ಕಿವಿಯೋಲೆ. ಅಮೆರಿಕನ್ ಡೈಮಂಡ್‌ನವು. ಇವು ನಿನ್ನ ಮುಖಕ್ಕೆ ಚೆನ್ನಾಗಿ ಒಪ್ಪುತ್ತದೆ ಎಂದು ನಾನು ಯಾವಾಗಲೋ ಯೋಚಿಸಿದ್ದೆ'' ಎಂದನವ. ಆಕೆಗೆ ಕಣ್ಣುಗಳನ್ನು ಒರೆಸದೆ ಬೇರೆ ದಾರಿಯಿರಲಿಲ್ಲ.

"ನಾನು ನಿಮ್ಮನ್ನು ತಪ್ಪಾಗಿ ತಿಳಿದಿದ್ದೆ'' ಎಂದು ಪಿಸುಗುಟ್ಟಿದಳವಳು ಮುಗ್ಧಳಾಗಿ.

"ದೇವರಾಣೆಗಾಗಿಯೂ ನೀನು ಹಾಗೆಲ್ಲ ಏನೆಲ್ಲ ಕಲ್ಪಿಸಿಕೊಂಡು ಕೊರಗಬೇಡ. ನಾನೇನಂಥ ತಪ್ಪು ಮಾಡಿದ್ದೇನೆ ನಿನಗೆ ಅಪ್ರಿಯವಾದಂಥದು. ನನ್ನ ಕುಟುಂಬವನ್ನು ಚೆನ್ನಾಗಿಯೇ ನೋಡಿಕೊಂಡಿದ್ದೇನಲ್ಲವೇ ನನ್ನಿಂದ ಸಾಧ್ಯವಾದಷ್ಟು ಮಟ್ಟಿಗೆ?''

ಆಕೆಯಲ್ಲಿ ಮಾತುಗಳಿರಲಿಲ್ಲ ಪ್ರತಿಯಾಗಿ ಹೇಳಲು.

"ಹೌದು ನಿಜಕ್ಕೂ. ಆದರೆ ನಾನು...''

"ನಾನೇನಂಥ ಕ್ರೂರ ಕೆಲಸವನ್ನು ಮಾಡಿದ್ದೇನೆನ್ನುವಷ್ಟರ ಮಟ್ಟಿಗೆ ನೋಡಬೇಡ ನನ್ನನ್ನು.''

ಹಾಗೆ ಹೇಳಿದನಾದರೂ ಆತನ ದನಿಯಲ್ಲಿನ ಅಸಹಜತೆ ಆಕೆಗೆ ತಿಳಿದುಬಿಟ್ಟಿತ್ತು.

ಮಾತಿಲ್ಲದೆ ಹೊರಗಿನ ಹಜಾರಕ್ಕೆ ಬಂದು ಆಕೆಗೆ ಈ ಹಿಂದೆ ಫೋನ್ ಮಾಡಿದ್ದ ಜುವೆಲ್ಲರಿ ಶಾಪ್‌ನ ನಂಬರ್‌ಗೆ ಡಯಲ್ ಮಾಡಿ ವಿಚಾರಿಸಿದಳು. ಆ ಜೋಡಿ ಕಿವಿಯೋಲೆಗಳ ಬಗ್ಗೆ.

"ಅವನ್ನಾಗಲೇ ಒಂದು ವಾರದ ಹಿಂದೆಯೇ ನಿಮ್ಮ ಹಸ್ಬೆಂಡ್ ಒಯ್ದಿದ್ದಾರಲ್ಲ ಮೇಡಂ.''

"ಮತ್ತೆ ಅವರು ಈದಿನ ಒಂದು ಜೊತೆ ತಂದಿದ್ದಾರೆ. ಅದು ನಿಮ್ಮ ಅಂಗಡಿಯದೇ?''

"ಹೌದು'' ಎನ್ನುವ ಉತ್ತರ ಬಂತು. "ಆದರೆ ಅವು ಅಷ್ಟು ಕಾಸ್ಟ್‌ಲೀ ಏನಲ್ಲ. ಮೊದಲು ಒಯ್ದುದು ಅಪ್ಪಟ ವಜ್ರದ ಓಲೆಗಳಾಗಿದ್ದರೆ ಇಂದು ಖರೀದಿಸಿ ಒಯ್ದುದು ಅವನ್ನೇ ಹೋಲುವ ಅಮೆರಿಕನ್ ಡೈಮಂಡ್‌ಗಳದು. ''

ತಾನು ತೊಟ್ಟುಕೊಂಡ ಓಲೆಯನ್ನು ಕಿವಿಯಿಂದ ಹರಿದು ಆತನೆಡೆಗೆ ಬಿಸುಡಬೇಕೆನಿಸಿತವಳಿಗೆ. ಆದರೆ ಅಷ್ಟರಲ್ಲಿ ಆಕೆಯ ಮಗ ಗೌತಮ್ ಅಲ್ಲಿಗೆ ಬಂದ ತನ್ನ ತಂದೆ ತಂದಿದ್ದ ಒಂದು ಪ್ಯಾಕೆಟ್ ಅಮೂಲ್ಯವಾದ ಸ್ಟಾಂಪ್ಸ್‌ಗಳ ಜೊತೆ. "ಮಮ್ಮಿ ನೋಡಿಲ್ಲಿ ಡ್ಯಾಡ್ ಏನು ಪ್ರೆಸೆಂಟ್ ಮಾಡಿದ್ದಾರೆಂದು.''

ಮಗುವಿನ ಮುಗ್ಧ ಸಂತಸವನ್ನು ನೋಡಿದವಳಿಗೆ ತಾನು ಮತ್ತೊಂದು ರಗಳೆಯನ್ನೆಬ್ಬಿಸಿ ಅಶಾಂತಿಯನ್ನುಂಟು ಮಾಡುವುದು ಸರಿಯೆನಿಸಲಿಲ್ಲ. ಆಕೆ ಜುವೆಲ್ಲರಿ ಶಾಪ್‌ಗೆ ಫೋನ್

'ರಾಗಸಂಗಮ'

ಲಾಟರಿ ಡ್ರಾ – ೧೩೪ರ ವಿಜೇತರು

ಎ. ಎಸ್. ಗುರುವರ್ಧನ್
ಗುಡಗೇರಿ
ಧಾರವಾಡ ಜಿಲ್ಲೆ.



ಮಾಡಿದ್ದ ವಿಷಯ ರೋಹಿತ್‌ಗೆ ತಿಳಿಯದು.

ಆಕೆಯೀಗ ನಾಟಕವಾಡಲೇಬೇಕಾಗಿತ್ತು ಮಗು ಗೌತಮ್‌ನ ಮನಸ್ಸು ಹಾಳಾಗಬಾರದೆನ್ನುವ ಒಂದೇ ಉದ್ದೇಶದಿಂದ. ಆಕೆಯ ದಾಂಪತ್ಯ ಜೀವನ ತೂತಾಗಿ ತೇಲುತ್ತಿರುವ ದೋಣಿಯಂತಾಗಿದೆಯೆನ್ನುವುದವಳಿಗೆ ತಿಳಿದು ಹೋದ ಸತ್ಯವಾಗಿತ್ತು.

ಮಗ ಆಟದಲ್ಲಿ ಮುಳುಗಿದಾಗ ಆಕೆ ಮೇಲೇರಿ ತನ್ನ ಬೆಡ್‌ರೂಮಿಗೆ ಹೋಗಿ ಮಲಗಿ ಬಿಕ್ಕಿ ಬಿಕ್ಕಿ ಅತ್ತಳು. ರೋಹಿತ್ ಆಕೆಯನ್ನು ಹಿಂಬಾಲಿಸಿದ. ಮತ್ತು ತಾನು ಆಕೆಯ ಹಿಂದೆಯೇ ಬೆಡ್‌ರೂಮನ್ನು ಪ್ರವೇಶಿಸಿ ಹಿಂದಿನಿಂದಲೇ ಬಾಗಿಲು ಹಾಕಿಕೊಂಡ.

"ಏನಿದೆಲ್ಲ ಈ ಹಬ್ಬದ ವಾತಾವರಣದಲ್ಲೂ ಇಂಥ ವರ್ತನೆ?'' ಪ್ರಶ್ನಿಸಲಾರಂಭಿಸಿದ.

ಆಕೆ ಅವನನ್ನೇ ದುರುಗುಟ್ಟಿಕೊಂಡು ನೋಡಲಾರಂಭಿಸಿದಳು. ತನ್ನ ಊಹೆ ನಿಜವಾಗಿರುವುದನ್ನವಳು ಅವನಿಗೆ ಹೇಳಿದಳು. "ಇದು ನಿಜಕ್ಕೂ ವಿಶ್ವಾಸಕ್ಕೆ ಯೋಗ್ಯವೆನಿಸಿದ ವರ್ತನೆ ನಿಮ್ಮದು. ಈ ಮನೆಯನ್ನು ತೊರೆದು ಆ ನಿಮ್ಮ ಸ್ನೇಹಿತೆಯ ಮನೆಗೆ ಹೋಗುವುದು, ರಾತ್ರಿಗಳಲ್ಲೆಲ್ಲ ಆಕೆಯೊಂದಿಗೆ ಇರುವುದು, ಬೆಳಿಗ್ಗೆ ಎದ್ದು ಈಕಡೆ ಬರುವುದು. ಹಾಗೇ ಏನೂ ನಡೆದಿಲ್ಲವೆನ್ನುವಂತೆ ನನ್ನನ್ನು ಅತಿಯಾಗಿ ಪ್ರೀತಿಸುತ್ತಿರುವಂತೆ ನಾಟಕವಾಡುವುದೆಲ್ಲ. ಹೀಗೆ ಮಾಡುವಾಗ ಇದೆಲ್ಲ ಆತ್ಮವಂಚನೆ ಎಂದು ಎಂದೂ ನಿಮ್ಮ ಅಂತರಾತ್ಮಕ್ಕೆ ಹೊಳೆಯಲೇ ಇಲ್ಲವೇ?''

"ನನಗಿದೆಲ್ಲ ಅರ್ಥವಾಗುವುದಿಲ್ಲ, ನೀನು ಏನು ಮಾತನಾಡುತ್ತಿದ್ದೀಯೆಂದು'' ಎಂದ ರೋಹಿತ್ ಅದೇ ತನ್ನ ನಾಟಕೀಯ ಸ್ವರದಲ್ಲಿ.

"ನಿಮಗೆ ಅರ್ಥವಾಗುವುದಾದರೂ ಹೇಗೆ ಪಾಪ?''

ಆಕೆಯೆಂದಳು ವ್ಯಂಗ್ಯವಾಗಿ "ಬೆಕ್ಕು ಕಣ್ಣು ಮುಚ್ಚಿಕೊಂಡೇ ಹಾಲು ಕುಡಿಯುವುದು.''

"ನೋಡಿಲ್ಲಿ.'' ಆತನ ಮುಖ ಕೆಂಪು ಕೆಂಪಾಗಿತ್ತು ಸಿಟ್ಟಿನಿಂದ. "ನಮ್ಮ ನಡುವೆ ಇರಬಹುದೆಂದು ನೀನು ಕಲ್ಪಿಸಿದ ಬಿರುಕು ನಿಮ್ಮ ಮಗನಿಗೆ ತಿಳಿಯಬಾರದೆಂದು ನಾನು ಬಹಳಷ್ಟು ಶ್ರಮವಹಿಸಿದೆ. ಆದರೆ ನೀನು ನೋಡು ಹೇಗೆ ವರ್ತಿಸ್ತಾ ಇದ್ದೀ. ಗೌತಮ್ ಏನೂ

ಇನ್ನೂ ಸಣ್ಣ ಮಗುವಲ್ಲ. ನಮ್ಮ ವರ್ತನೆಗಳ ಮೂಲಕ ನಮ್ಮ ನಡುವಿರಬಹುದೆಂಬ ಕಲ್ಪನೆಯ ಬಿರುಕು ಆತನ ಅರಿವಿಗೆ ಬಾರದಿರಲಾರದು.''

ಪ್ರಿಯ ಏನನ್ನೋ ಹೇಳಲೆತ್ನಿಸಿದಳಾದರೂ ಮರುಕ್ಷಣ ಮೌನವೇ ಲೇಸನ್ನುವ ಧೋರಣೆ ವಹಿಸಿದಳು. ಅವನ ಹಾಗೆ ನಾಟಕವಾಡಲು ತನ್ನಿಂದ ಸಾಧ್ಯವಾಗದು ಎನ್ನುವುದವಳಿಗೆ ತಿಳಿದಿದೆ. ಕವುಚಿ ಮಲಗಿ ಮುಖವನ್ನು ತಲೆದಿಂಬುಗಳಲ್ಲಿ ಹುದುಗಿಸುವುದಷ್ಟೇ ಸಾಧ್ಯವಾಯಿತುವಳ ಮಟ್ಟಿಗೆ ಆಗ.

"ಬಾಗಿಲಿನ ಚಿಲಕವನ್ನು ಹಾಕಿ ದಯಬಿಟ್ಟು.''

ಬಿಕ್ಕಳಿಸಿದಳು ಆ ಸ್ಥಿತಿಯಲ್ಲೇ.

ಅವ ಹಾಗೆ ಮಾಡಿದ. ಅವನ ಮನಸ್ಸು ಆಗಲೇ ಪಶ್ಚಾತ್ತಾಪಕ್ಕೆ ಹತ್ತಿರವಾದ ಭಾವನೆಯನ್ನು ತುಂಬಿಸಿಕೊಳ್ಳಲಾರಂಭಿಸಿತ್ತು. ಆಕೆಗೆ ಎಲ್ಲವೂ ತಿಳಿದುಬಿಟ್ಟಿತೇ ಹಾಗಾದರೆ ಎಂದುಕೊಂಡ. ಇನ್ನು ಸತ್ಯವನ್ನು ಮುಚ್ಚಿಡುವುದರಲ್ಲಿ ಅರ್ಥವೂ ಇಲ್ಲವೆನಿಸಿತು. ಪ್ರತಿಮಾಳನ್ನು ತೊರೆಯಲು ಮನಸ್ಸು ಹಿಂಜರಿಯುತ್ತದಾದರೂ ಅವಳಿಂದಾಗಿ ತನ್ನ ಹೆಂಡತಿಯ ಮನಸ್ಸನ್ನೂ ನೋಯಿಸುವುದರಲ್ಲಿ ಅವನಿಗೆ ಸಂತೋಷ ಇಲ್ಲವಾಗಿತ್ತು. ಆಕೆಯೆಂದೂ ಪ್ರತಿಮಾಳನ್ನು ತಮ್ಮಿಬ್ಬರ ನಡುವೆ ಸ್ವೀಕರಿಸಲಾರಳು.

ಹಾಸಿಗೆಯಲ್ಲಿ ಕೂತವನು ಕವುಚಿ ಮಲಗಿದ್ದ ಆಕೆಯ ಭುಜವನ್ನು ಮುಟ್ಟಿದ.

"ಮುಟ್ಟಬೇಡಿ.'' ಆಕೆ ಭುಸುಗುಟ್ಟಿದಳು. "ನಾನು ನಿಮ್ಮನ್ನು ದ್ವೇಷಿಸ್ತೇನೆ. ಐ ಹೇಟ್ ಯೂ. ಐ ಹೇಟ್ ಯೂ.''


ಆತ ಎದ್ದು ನಿಂತು ಪ್ಯಾಂಟಿನ ಜೇಬಿನಲ್ಲಿ ಸಿಗರೆಟ್ ಪ್ಯಾಕಿಗಾಗಿ ತಡಕಾಡಿದ. "ಓ ದೇವರೆ'' ಅವನೆಂದ. "ಗೌತಮ್ ಮನೆಗೆ ಬಂದಿದ್ದಾನೆನ್ನುವ ಪರಿವೆಯಿಲ್ಲದವಳಂತೆ ವರ್ತಿಸ್ತಾ ಇದ್ದೀ. ಅವನಿಗಿದೆಲ್ಲ ತಿಳಿದುಬಿಟ್ಟರೆ ಅವನ ಪುಟ್ಟ ಮನಸ್ಸಿನಲ್ಲಿ ಏನಾಗಬಹುದು?''

ತಟ್ಟನೆ ಎದ್ದು ಕುಳಿತಳವಳು. ಕಡುಕಪ್ಪು ಕೂದಲುಗಳ ಹಿನ್ನೆಲೆಯಲ್ಲಿ ಕಾಣುವ ಬಿಳಿಯ ಮುಖದಲ್ಲಿ ಉದ್ವಿಗ್ನತೆ ರೋಷಗಳಿದ್ದುವು. "ನೀವು ನನ್ನನ್ನು ಮೋಸ ಮಾಡಲಾರಿರಿ. ನಾನು ಅಷ್ಟು ಸುಲಭವಾಗಿ ಮೋಸ ಹೋಗುವವಳೂ ಅಲ್ಲ ತಿಳಿದುಕೊಳ್ಳಿ. ಇಷ್ಟು ದೀರ್ಘವಾದ ಅವಧಿಯಲ್ಲಿ ನಾನು ಸುಮ್ಮನೇ ಉಳಿದೆ ಏನೊಂದೂ ಮಾತನಾಡದೆ. ಸರಿಯಾದ ಹಿನ್ನೆಲೆ ನನಗೆ ಸಿಗದಿದ್ದುದೇ ಅದಕ್ಕೆ ಕಾರಣವಾಗಿತ್ತು. ಆದರೀಗ ನನಗೆ ಸರಿಯಾದ ಹಿನ್ನೆಲೆ ಸಿಕ್ಕಿದೆ. ನಿನ್ನೆಯತನಕ ನನಗೆ ನಿಮ್ಮ ಮೇಲೆ ಅನುಮಾನವುಂಟಾಗಿರುವುದು ನಿಮಗೆ ತಿಳಿಯಬಾರದೆಂದು ಪ್ರಯತ್ನಿಸಿದೆ. ನೀವು ಹೇಳುತ್ತಿದ್ದ ಕತೆಗಳನ್ನೆಲ್ಲ ನಂಬಿದವಳಂತೆ ನಾಟಕವಾಡಿದೆ. ನಾನು ನಿಮ್ಮನ್ನು ಪ್ರೀತಿಸಿದ್ದೆ ರೋಹಿತ್, ಈ ಪ್ರಪಂಚದಲ್ಲಿರುವ ಎಲ್ಲಕ್ಕಿಂತಲೂ ಹೆಚ್ಚಾಗಿ ನಿಮ್ಮನ್ನು ಪ್ರೀತಿಸಿದ್ದೆ. ಈ ಹುಡುಗಿಗಾಗಿಯಾಗಲೀ ಬೇರೆ ಯಾರಿಗೇ ಆಗಲಿ ನಿಮ್ಮನ್ನು ಒಪ್ಪಿಸುವುದು ನನ್ನಿಂದ ಸಾಧ್ಯವಾಗುವುದಿಲ್ಲ ಆದರೆ ಈಗೀಗ ನೀವು ನನ್ನನ್ನೊಂದು ಕಾಲಕಸಕ್ಕಿಂತ ಕಡೆಯಾಗಿ ಕಾಣುತ್ತಿದ್ದೀರಿ. ಅದು ನನಗೆ ತಿಳಿಯದಿರಲೆಂದು ನಾಟಕವಾಡುತ್ತೀರಿ. ನೀವೇನೂ ಕ್ರಿಮಿನಲ್ ಅಲ್ಲವೆಂದು ಹೇಳಿದಿರಿ. ಆದರೆ ರೋಹಿತ್ ಒಂದು ಹೆಣ್ಣಿನ ಮನಸ್ಸನ್ನು ಆಕೆಯ ಮನೆಯನ್ನು ಒಡೆಯುವಂಥ ಕೆಲಸ ಮಾಡುತ್ತಿದ್ದೀರಿ. ಇದು ಯಾವ ಕ್ರೈಮ್‌ಗೂ ಕಡಿಮೆಯದಲ್ಲ. ನಯವಂಚಕರು ನೀವು.''

ಭಾಗ್ಯರತಿ

ಭಾಗ್ಯರತಿ
ನೀನೇಯೇ
ಧರೆಗಿಳಿದ ರತಿ
ಸದ್ಯಕ್ಕೆ ನೀ
ನನ್ನ ಗೆಳತಿ
ನೀ ಇಲ್ಲವಾದರೆ
ಆ ದೇವರೇ ಗತಿ.

– ಹರಪನಹಳ್ಳಿ ಶ್ರೀಧರ



"ಪ್ರಿಯಾ'' ತುಂಬ ಹೊತ್ತಿನ ಮೌನದನಂತರ ಹೇಳಿದವನವ. "ನಿನಗೆ ಎಚ್ಚರಿಕೆ ನೀಡುತ್ತಿದ್ದೇನೆ. ನೀನೀ ನಾಟಕವನ್ನು ಮುಗಿಸದೇ ಇರುವುದಾದರೆ ನಿನ್ನೊಂದಿಗೆ ಇರಲು ನನ್ನಿಂದ ಸಾಧ್ಯವಿಲ್ಲ ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ ನಾನು.''

ಆಕೆ ಮುಖವನ್ನು ಬೆಡ್‌ಶೀಟಿನಿಂದ ಒರೆಸಿಕೊಂಡಳು.

"ನಿಮಗಿದು ಇಷ್ಟವಿಲ್ಲ. ನಿಮಗಿದು ಖಂಡಿತವಾಗಿಯೂ ಇಷ್ಟವಿಲ್ಲ ನನ್ನ ಜೊತೆಗಿರುವುದು. ನಿಮಗೀಗ ಬೇಕಾಗಿರುವುದು ಆಕೆಯೇ ಹೊರತು ನಾನಲ್ಲ ಎನ್ನುವುದು ನನಗಾಗಲೇ ಮನದಟ್ಟಾಗಿದೆ. ಹೋಗಿರಿಲ್ಲಿಂದ ಆಕೆಯ ಕೃತಕ ಮಾತುಗಳಿಗೆ ತಲೆದೂಗಲು. ಆಕೆಯೊಂದಿಗೆ ಚಕ್ಕಂದವಾಡಲು. ಅದನ್ನೆಲ್ಲ ಮುಗಿಸಿ ಬರುವ ನಿಮ್ಮನ್ನು ಮನೆಯಲ್ಲಿ ಸ್ವಾಗತಿಸಲು ನಾನೇನು ಏನೂ ತಿಳಿಯದ ಬೊಂಬೆ ಎಂದುಕೊಂಡಿರಾ? ನನಗೂ ಒಂದು ಹೃದಯವಿದೆ ನಿಮ್ಮ ಹಾಗೇ. ಭಾವನೆಗಳೂ ಇವೆ ತಿಳಿದುಕೊಳ್ಳಿ. ನಿಮಗೆ ನಿಮ್ಮ ವಿಷಯದಲ್ಲಿ ಸ್ವಾತಂತ್ರ್ಯವಿದೆ ಎಂದು ನೀವು ವಾದಿಸಬಹುದು. ಅದೇ ವಾದವನ್ನು ನಾನು ಕೂಡ ನಿಮ್ಮ ಮುಂದಿಟ್ಟರೆ?''

"ಇಂಥವೆಲ್ಲ ಆರೋಪಗಳನ್ನು ನನ್ನ ಮೇಲೆ ಹೊರಿಸುವುದರಿಂದ ನಿನಗೆ ಏನೂ ಸಾಧಿಸಿದ ತೃಪ್ತಿಯಾಗದು.''

"ನಿಮಗೆ ಬೇಕಾಗಿರುವುದೂ ಅದೇ ತಾನೇ?''

"ಹಾಗಾದರೆ ನಾನಿಲ್ಲಿಂದ ಹೊರಟುಹೋಗುವುದೇ ಮೇಲು ಎನ್ನುತ್ತೀಯಾ?''

ಆಕೆ ಮೌನದ ಮರೆಹೋದಳು. ಕಣ್ಣುಗಳೆರಡೂ ಕಿಡಿ ಕಾರುವಂತಿದ್ದುವು. ಒಬ್ಬ ಪರಮದ್ರೋಹಿಯನ್ನು ನೋಡುವವಳಂತೆ ನೋಡಿದಳು. ಬಾಯಿ ಪಿಸುಗುಟ್ಟಿತು.

"ಹಾಗಾದರೆ ಯಾರೋ ಒಬ್ಬಳಿಗಾಗಿ ನೀವು ನನ್ನನ್ನು ಬಿಡಲೂ ತಯಾರಾಗಿದ್ದೀರಿ ಎಂದಾಯಿತು.''

ಆಗಲೂ ಅವನದು ಸುಧೀರ್ಘವಾದ ಮೌನವೇ ಉತ್ತರವಾಗಿತ್ತು. ಅವನ ಮುಖ ಬಿಳುಚಿಕೊಂಡಿತ್ತು. ಪ್ರತಿಮಾ ಕೊಟ್ಟಿದ್ದ ವಿಸ್ಕಿಯೆಲ್ಲವನ್ನೂ ಕಕ್ಕಿ ಬಿಡುತ್ತಿರುವಂತೆನಿಸಿತು. ಗಂಟಲು ಒಣಗಿತು. ಆ ತನಕ ಒಂದು ಕಪ್ ಕಾಫಿ ಅಥವಾ ಟೀಯನ್ನವ ಕುಡಿದಿರಲಿಲ್ಲ. ತನ್ನ

ಮನಸ್ಸನ್ನೊಂದಿಷ್ಟು ಸ್ಥಿಮಿತಕ್ಕೆ ತಂದುಕೊಳ್ಳಲೆತ್ನಿಸುವವನಂತೆ ನಿಧಾನವಾಗಿ ಹೇಳಿದನವ.

"ಪ್ರಿಯಾ ದೇವರಾಣೆಗೂ ಹೇಳುತ್ತಿದ್ದೇನೆ. ಈ ವಿಷಯವಾಗಿ ಮತ್ತಷ್ಟು ಕೆದಕಬೇಡ. ಈ ದಿನವಂತೂ ಬೇಡ ಏನಿದ್ದರೂ."

"ಅಂದರೆ ನೀವು ಅವಳಿಗಾಗಿ ನಿಮ್ಮ ಕೈ ಹಿಡಿದು ಬಂದು ಈ ತನಕದ ಬಾಳುವೆ ನಡೆಸಿದ ನಿಮ್ಮ ಹೆಂಡತಿಯನ್ನು, ನಿಮ್ಮ ಮಗನನ್ನು ಕೂಡ ಬಿಟ್ಟು ಹೋಗಲು ತೀರ್ಮಾನ ಮಾಡಿದ್ದೀರೆಂದಾಯಿತು."

"ಯಾವುದರ ಬಗ್ಗೆಯೂ ನಾನು ತೀರ್ಮಾನಕ್ಕೆ ಬಂದಿಲ್ಲ ಇನ್ನೂ. ಒಂದು ಪಕ್ಷ ಮುಂದೆಂದಾದರೂ ಆ ತೀರ್ಮಾನಕ್ಕೆ ಬಂದರೂ ಕೂಡ ಅದು ಆ ವಿಷಯದಿಂದಾಗಿಯಂತೂ ಖಂಡಿತ ಅಲ್ಲ. ನಾನು ಅದನ್ನು ಒಪ್ಪಲಾರೆ ಆಕೆಗಾಗಿ ನಿಮ್ಮಿಬ್ಬರನ್ನು ತೊರೆಯುತ್ತೇನೆನ್ನುವುದನ್ನು."

"ನಿಮ್ಮ ಮನಸ್ಸನ್ನು ಪ್ರಶ್ನಿಸಿಕೊಳ್ಳಿ." ಪ್ರಿಯಾ ಹೇಳಿದಳು. "ನೀವದನ್ನು ನಿರಾಕರಿಸಲಾರಿರಿ."

"ಸರಿ ಹಾಗೆಂದೇ ಒಪ್ಪಿಕೊಳ್ಳೋಣ."

"ಯಾರಾಕೆ?"

"ನಿನಗೆ ಗೊತ್ತಿಲ್ಲ."

"ಯಾವಾಗ ನೀವವಳನ್ನು ಮೊದಲ ಬಾರಿಗೆ ಭೇಟಿಯಾದಿರಿ?" ಕೇಳಿದಳು. "ಯಾವ ಸಂದರ್ಭದಲ್ಲಿ."

"ನೋಡು" ರೋಹಿತ್ ಹೇಳಿದ ಬೇಸರದ ದನಿಯಲ್ಲಿ. "ನಿನ್ನ ಕ್ರಾಸ್ ಎಕ್ಸಾಮಿನೇಶನ್‌ಗೆ ಉತ್ತರಿಸುವಂಥ ಮನಸ್ಥಿತಿಯಲ್ಲಿ ನಾನಿಲ್ಲ ಈಗ. ಅಂಥ ತಾಳ್ಮೆ ಇಲ್ಲ."

"ನಿಮ್ಮ ಮೂಡ್ ಸರಿಯಿಲ್ಲವೆನ್ನಿ. ಯಾರಾದರೂ ತಿಳಿದುಕೊಳ್ಳಬೇಕಿದೆಯೇ ಹೀಗೆಂದು ನೀವು ಸಂತೃಪ್ತರು ಮತ್ತು ನಾನು ನಿಮ್ಮ ನಡುವೆ ಬಂದು ತಪ್ಪು ಮಾಡಿದವಳೆಂದು?"

"ನೋಡು ಪ್ರಿಯಾ, ದಯವಿಟ್ಟು ಇಂಥ ಮಾತುಗಳನ್ನಾಡಿ ನನ್ನ ಮನಸ್ಸನ್ನು ಚುಚ್ಚಬೇಡ. ನಾನದನ್ನು ಸಹಿಸಲಾರೆ. ನಾನು ತಪ್ಪಿತಸ್ಥ ಹೌದೇ ಅಲ್ಲವೇ ಅದಲ್ಲ ಮುಖ್ಯವಾದ ಸಂಗತಿ. ಯಾರೋ ಒಬ್ಬರಿದ್ದಾರೆ ನಮ್ಮ ನಡುವೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಮತ್ತು ನಾನು ತಪ್ಪು ಮಾಡುತ್ತಿದ್ದೇನೆನ್ನುವ ಅರಿವೂ ನನ್ನನ್ನು ಚುಚ್ಚುತ್ತಲಿದೆ. ಆದರೆ ಈ ವಿಷಯದಲ್ಲಿ ಈ ರೀತಿಯ ಜಗಳಗಳೆಲ್ಲ ನಮಗೆ ಒಳ್ಳೆಯದನ್ನುಂಟು ಮಾಡಲಾರವು ಈ ಹೊತ್ತಿನಲ್ಲೂ ಏನಿದ್ದರೂ. ನೀನೀಗ ನನ್ನನ್ನು ಹೊರಹೋಗುವಂತೆ ಹೇಳಿದರೂ ನಾನು ಸುಮ್ಮನಿರಬೇಕಾಗುತ್ತದೆ ಈಗ. ಆದರೀಗ ನಿನ್ನ ಹೆಚ್ಚಿನ ಗಮನವೆಲ್ಲ ಗೌತಮ್‌ನ ಒಳಿತಿನ ಕಡೆಗಿರಬೇಕಾಗಿದೆ. ನೀನು ಮನಸ್ಸು ಬದಲಾಯಿಸುತ್ತೀ ಎಂದುಕೊಳ್ಳುತ್ತೇನೆ."

ಅವನ ಆ ಮಾತು ಆಕೆಯನ್ನು ಸೋಲಿಸಿತು. ರೋಹಿತ್‌ನ ಮೇಲೆ ಆಕೆ ಹೂಡಬೇಕೆಂದಿದ್ದ ಬಾಣಗಳೆಲ್ಲವೂ ಮರಳಿ ಬತ್ತಳಿಕೆಯನ್ನು ಸೇರುವಂತಾಯಿತು. ಅವ ಸೋಲೊಪ್ಪಿಕೊಳ್ಳುವ ಮೂಲಕ ಕೊನೆಯಪಕ್ಷ ಆ ಕ್ಷಣದಲ್ಲಾದರೂ ಆಕೆಯನ್ನು ಗದ್ದಿದ್ದ. ಆಕೆ ಮುಖ ಮುಚ್ಚಿಕೊಂಡು ಅತ್ತುಬಿಟ್ಟಳು. ಆಕೆ ಹಾಗೆ ಅಳುತ್ತಿದ್ದರೆ ರೋಹಿತ್ ಅಸಹಾಯಕನಾಗಿ ಆಕೆಯತ್ತ ನೋಡುತ್ತ ನಿಂತನಷ್ಟೆ. ಸೇದಬೇಕೆಂದಿದ್ದ ಸಿಗರೆಟನ್ನು ಮರೆತಿದ್ದ.

ಆಕೆ ತನ್ನ ಕೈಗಳನ್ನು ಅವನಿಂದ ಹಿಂದೆಗೆದುಕೊಳ್ಳಲೆತ್ನಿಸಲಿಲ್ಲ. ಆದರೆ ಅಳುವನ್ನು ಮುಂದುವರಿಸಿಯೇ ಇದ್ದಳು. ಸ್ವಲ್ಪ ಹೊತ್ತಿನ ಮೇಲೆ ಅವನೆಂದ. "ಪ್ರಿಯಾ ನಾನೀಗ ಅತ್ಯಂತ

ನಿನಗೇನು ಮಾಡಬೇಕೆಂಬುದು ತಿಳಿಯದಿದ್ದಾಗ ಚೆನ್ನಾಗಿ ನಗು. – ಆಂಗ್ಲ ಗಾದೆ

ನಿನ್ನ ವಿಷಯವಾಗಿ ಆಡಿದ ಕೆಡುಕು ನಿಜವಿದ್ದರೆ ತಿದ್ದಿಕೋ. ಇಲ್ಲದಿದ್ದರೆ ನಕ್ಕು ಬಿಡು. – ಶೇಕ್ಸ್‌ಪಿಯರ್

ಎಲ್ಲರನ್ನೂ ಪ್ರೀತಿಸು, ಆದರೆ ಕೆಲವರನ್ನು ಮಾತ್ರ ನಂಬು. – ಅನಾಮಿಕ

ಸಂಗ್ರಹ : ಕೆ. ಆರ್. ವಿಶಾಲ



ಹೀನ ಮನುಷ್ಯನೆಂಬ ಭಾವನೆ ಬರುತ್ತಲಿದೆ. ನಾನದನ್ನು ಒಪ್ಪುತ್ತೇನೆ ಕೂಡ. ನಾನು ನಿನಗೆಂಥ ಮೋಸ ಮಾಡಿದ್ದೇನೆನ್ನುವ ಕಲ್ಪನೆ ನನಗೀಗ ಬರಹತ್ತಿದೆ. ಆದರೆ ಇಂಥವೆಲ್ಲ ಸಂಗತಿಗಳು ನಡೆಯುತ್ತವೆ. ಬೇರೆ ದಂಪತಿಗಳು ಇಂಥ ಪರಿಸ್ಥಿತಿಗಳನ್ನೆದುರಿಸಿದ್ದಿದೆ. ಯಾಕೆ ನಮ್ಮ ಸ್ನೇಹ ವರ್ತುಲದಲ್ಲಿ ಕೂಡ ನೀನು ಕಂಡಿರಬಹುದು. ಆದರೆ ಅವರೆಲ್ಲ ಸುಖವಾಗಿಯೇ ಇಲ್ಲವೇ? ಯಾರೊಬ್ಬರಿಗೂ ತಮ್ಮ ಗುಟ್ಟನ್ನು ಬಿಟ್ಟು ಕೊಡದೇ ಆ ದಂಪತಿಗಳೆಲ್ಲ ಜೊತೆಯಾಗಿ ಬದುಕುತ್ತಿಲ್ಲವೇ? ಕೆಲವೇ ಮಂದಿ ಮಾತ್ರ ಗಂಡ ಹೆಂಡತಿಯಾಗಿ ಮುಂದುವರಿಯಲು ಇಷ್ಟಪಡದೆ ಬೇರೆಯಾದವರಿದ್ದಾರೆ ಇಲ್ಲವೆನ್ನುವುದಿಲ್ಲ. ಒಂದು ವೇಳೆ ನೀನು ಹೇಳುವುದಾದರೆ ನಾನವಳನ್ನು ನಿರಾಕರಿಸಬೇಕೆಂದು...''

ಪ್ರಿಯ ಈಗ ತಲೆಯೆತ್ತಿ ಆತನ ಕಡೆ ನೋಡಿದಳು.

"ಮೊದಲು ಆಕೆ ಯಾರೆನ್ನುವುದನ್ನು ತಿಳಿಯಬೇಕಾಗಿದೆ ನನಗೆ. ಯಾಕೆಂದು ಗೊತ್ತಿಲ್ಲ. ನಾನೀ ವಿಷಯದಲ್ಲಿ ಹುಚ್ಚಿಯೋ ಆಗಿದ್ದೇನೆ. ಅನಂತರವಷ್ಟೇ ತೀರ್ಮಾನಿಸುತ್ತೇನೆ. ಆಕೆ ಯಾರೆಂದು ನೀವು ಹೇಳಿದನಂತರ.''

"ಗೌತಮ್ ಬಗ್ಗೆ ಏನು ಹೇಳುತ್ತೀ?''

"ಅವನಿಗಿನ್ನೂ ಗೊತ್ತಿಲ್ಲ. ನೀವು ಹೊರಹೋಗುವ ತೀರ್ಮಾನವನ್ನು ಈಗಲೇ ತಳೆಯುವ ಅಗತ್ಯವಿಲ್ಲ.''

ಪ್ರಿಯಾ ಹೇಳಿದದಳು ಸಣ್ಣ ದನಿಯಲ್ಲಿ. "ಆದರೆ ಆಕೆ ಯಾರೆನ್ನುವುದು ನನಗೆ ತಿಳಿಯಬೇಕಾಗಿದೆ.''

"ಆಲ್‌ರೈಟ್.'' ಅವನೆಂದ ನಿಡಿದಾದ ಉಸಿರುಬಿಟ್ಟು ಮತ್ತೆ ಎದ್ದು ಕಿಟಕಿಯ ಬಳಿ ಸರಿದ. ತೆರೆದ ಕಿಟಕಿಯಾಚೆಗೆ ಕಾಣುವ ನೀಲಿ ಆಕಾಶವನ್ನು ನೋಡಿದ. ಅದರ ಕೆಳಗೆ ಕೆಲವು ಮನೆಗಳಲ್ಲಾಗಲೇ ದೀಪ ಬೆಳಗಲಾರಂಭಿಸಿತ್ತು. 'ಸಂಭ್ರಮದ ದೀಪಾವಳಿಯನ್ನಾಚರಿಸುತ್ತಿದ್ದಾರೆ ಅವರೆಲ್ಲ. ಆದರೆ ತಮ್ಮ ಪಾಲಿಗೆ?' ಅವ ಯೋಚಿಸುತ್ತಿರಬಹುದು ಹಾಗೆಂದುಕೊಂಡಳವಳು.

"ನೀವು ನಿಮ್ಮದೇ ಆದ ಬಂಧನಗಳಲ್ಲಿ ಬಿಗಿಯಲ್ಪಟ್ಟಿದ್ದೀರೆನಿಸುತ್ತದೆ ರೋಹಿತ್'' ಆಕೆಯೆಂದಳು. ಸಮಾಧಾನ ಚಿತ್ತದವಳಂತೆ "ನಾನು ಹೇಳುತ್ತೇನೆ ನೀವು ನಿಮ್ಮ ಕೈ ಹಿಡಿದ ಹೆಂಡತಿಯನ್ನು ಹೀಗೆ ಕುತೂಹಲದ ಅನುಮಾನದ ಸ್ಥಿತಿಯಲ್ಲಿಡಬಾರದು. ನನ್ನನ್ನೇ ಕಟ್ಟಿಕೊಂಡು

ಇರಬೇಕು ನೀವು ಜೀವನದುದ್ದಕ್ಕೂ ನಿಮಗಿಷ್ಟವಿಲ್ಲದಿದ್ದರೂ ಕೂಡ ಎಂದು ನಾನಂತೂ ಬಯಸುವವಳಲ್ಲ. ಅಥವಾ ನಾನಾಗಿಯೇ ಡೈವೋರ್ಸ್‌ಗೆ ಮುಂದುವರಿಯುವಳೂ ಅಲ್ಲ. ನಿಮ್ಮ ಜೊತೆ ನನ್ನನ್ನು ಮುಟ್ಟಬೇಡಿರೆಂದು ಮಾತ್ರ ಹೇಳುವೆ. ಬೇರೆ ಯಾರೋ ಹೆಣ್ಣಿನೊಂದಿಗೆ ಅಫೇರ್ ಹೊಂದಿರುವುದಾದರೆ.''

ಹಾಗೆ ಆಕೆ ಅವನಿಗೆ ಹೇಳಿದ್ದು ಅದು ಮೊದಲ ಸಲ ಏನೂ ಆಗಿರಲಿಲ್ಲ. ಹೃದಯ ಬೆಂದು ಹೋಗುತ್ತಿದ್ದ ಸಂದರ್ಭಗಳಲ್ಲೂ ಆಕೆಯಿಂದ ಇಂಥ ತಣ್ಣನೆಯ ಮಾತುಗಳು ಬಂದಿದ್ದುವು ಈ ಹಿಂದೆ ಎಷ್ಟೋ ಬಾರಿ.

ಆಕೆ ಸತ್ಯವನ್ನೇ ಕೇಳಬಯಸುತ್ತಾಳಾದರೆ ಅದನ್ನು ಹೇಳುವುದೇ ಕ್ಷೇಮಕರ ಎನ್ನುವ ತೀರ್ಮಾನಕ್ಕೆ ಬಂದ ಅವ.

ಪ್ರತಿಮಾಳ ಬಗ್ಗೆ ಹೇಳಲಾರಂಭಿಸಿದ.

* * * * *

"ಬಾ ಮಗು.''

ತಲೆಯೆತ್ತಿ ನೋಡಿದ ಹೆಡ್‌ಮಾಸ್ತರ್ ಗೌತಮ್‌ನನ್ನು ಒಳ ಕರೆದರು. ಆದರೆ ಅವರಿಗೆ ಆ ಹೊತ್ತು ಬಿಡುವಿರಲಿಲ್ಲ. ಕಳೆದ ಪರೀಕ್ಷೆಯಲ್ಲಿ ಒಬ್ಬ ವಿದ್ಯಾರ್ಥಿ ಪಡೆದ ಕಡಿಮೆ ಅಂಕಗಳಿಗಾಗಿ ವಿಷಾದಿಸಿ ಆತನ ವಿಧವೆ ತಾಯಿಗೆ ಪತ್ರ ಬರೆಯುವುದರಲ್ಲಿದ್ದರು. ಆ ವಿದ್ಯಾರ್ಥಿಯ ತಾಯಿ ತನ್ನ ಮಗ ಕಲಿಯುವುದರಲ್ಲಿ ತುಂಬ ಜಾಣ ಎನ್ನುವ ಭಾವನೆಯನ್ನು ಹೊಂದಿದ್ದವರಾಗಿದ್ದರು. ತನ್ನ ಮಗನೇನಾದರೂ ಕಡಿಮೆ ಅಂಕ ಗಳಿಸಿದರೆ ಅದಕ್ಕೆ ಶಾಲೆಯ ಅಧ್ಯಾಪಕ ವೃಂದ ವಹಿಸುವ ನಿರ್ಲಕ್ಷ್ಯ ಮತ್ತು ತೋರುವ ರಾಜಕೀಯ ಎಂದವರು ಭಾವಿಸಿದಂತಿದೆ.

ಗೌತಮ್‌ನನ್ನು ಅಲ್ಲಿನ ಬೆಂಚ್ ಮೇಲೆ ಕೂರುವಂತೆ ಹೇಳಿದರವರು.

"ಏನು ಬಂದದ್ದು, ಯಾವ ವಿಷಯ ನಿನ್ನ ಮನಶಾಂತಿಗೆ ದಕ್ಕೆಯನ್ನುಂಟು ಮಾಡಿದೆ?'' ಎಂದು ಕೇಳಿದರು.

"ನೀವು ನನ್ನನ್ನು ಸಿಲ್ಲಿ ಎಂದು ಭಾವಿಸಲಾರಿರಾದರೆ ಒಂದು ಮಾತು ಹೇಳಲು ಬಂದೆ ಸರ್.''

"ಏನೆಂದು ವಿವರವಾಗಿ ಹೇಳದೆ ಹೀಗೆ ಹೇಳಿದರೆ ನಾನು ಏನೆಂದು ತಿಳಿದುಕೊಳ್ಳಲಿ? ನಾನು ನಿನ್ನನ್ನೆಂದೂ ಸಿಲ್ಲಿಯೆಂದು ಭಾವಿಸಿಲ್ಲ. ತುಂಬ ಬುದ್ಧಿವಂತನಾದ ಹುಡುಗನೇ ಇದ್ದೀ.''


ಗೌತಮ್ ಗಂಟಲು ಸರಿಪಡಿಸಿಕೊಂಡ ಹೆಡ್‌ಮಾಸ್ತರ್ ಅವರ ಧೈರ್ಯ ತುಂಬುವ ಮಾತನ್ನು ಕೇಳಿ.

"ಇದು ನನ್ನ ಮನೆಯ ವಿಷಯ ಸರ್.''

"ಏನು ವಿಷಯ ಹೇಳು.''

"ನನ್ನ ತಂದೆ ತಾಯಿಗಳ ವಿಷಯವಾಗಿ ಸರ್.''

ಹೆಡ್‌ಮಾಸ್ತರ್ ಅವರು ನಿಟ್ಟುಸಿರು ಬಿಟ್ಟರು. ಎಲ್ಲರಂತಲ್ಲ, ಇಂಥ ಸಂಗತಿಗಳನ್ನು ಅನೇಕ ವಿದ್ಯಾರ್ಥಿಗಳ ಬಾಯಲ್ಲಿ ಕೇಳಿದ್ದಾರವರು ಇತ್ತೀಚೆಗೆ. 'ತಮ್ಮ ತಂದೆ ತಾಯಿ ನಡುವೆ ಜಗಳವಿದೆ ಅಥವಾ ಮನಸ್ತಾಪ ಇದೆ' ಎಂದು ದೂರುವ ವಿದ್ಯಾರ್ಥಿಗಳು.



ಗೌತಮ್ ಚಿಕ್ಕವನೇನಲ್ಲ.

ಹದಿಹರೆಯದ ಹುಡುಗ.

ಅವನ ತಂದೆ ತಾಯಿ ಜೊತೆಯಾಗಿ ಈ ಶಾಲೆಗೆ ಬಂದಿದ್ದ ನೆನಪು ಮಾಡಿಕೊಂಡರು ಹೆಡ್‌ಮಾಸ್ತರ್. ಅಪೂರ್ವವಾದ ಸುಂದರ ಜೋಡಿ.

"ನೀನು ಆ ವಿಷಯದಲ್ಲಿ ಚಿಂತೆ ತಾಳಬೇಕಾಗಿಲ್ಲ ಗೌತಮ್." ಹೆಡ್‌ಮಾಸ್ತರ್ ಹೇಳಿದರು. "ನನಗೆ ಅರ್ಥವಾಗುತ್ತದೆ ಮತ್ತು ನಿನ್ನ ಧೈರ್ಯವನ್ನು ನಾನು ಗೌರವಿಸುತ್ತೇನೆ."

ಗೌತಮ್ ಅನ್ಯಮನಸ್ಕನಾಗಿ ತನ್ನೆದುರಿಗಿರುವ ಡೆಸ್ಕ್‌ನ ಮೇಲೆ ಬೆರಳಾಡಿಸುತ್ತಿದ್ದ. ಕಳೆದ ಬಾರಿಯೊಮ್ಮೆ ಆತ ತನ್ನ ಸ್ನೇಹಿತ ಭರತ್‌ನ ಬಗ್ಗೆ ಹೇಳಲು ಬಂದಿದ್ದುದನ್ನವರು ಜ್ಞಾಪಿಸಿಕೊಂಡರು. ಭರತ್‌ನ ತಂದೆ ತಾಯಿ ಬೇರೆ ಬೇರೆಯಾಗುವವರಿದ್ದಾರೆ ಆದರಿಂದಾಗಿ ಭರತ್ ಮಾನಸಿಕ ಸ್ಥೈರ್ಯವನ್ನು ಕಳೆದುಕೊಂಡಿದ್ದಾನೆಂದು ವಿವರಿಸಿದ್ದ. ಆಗ ಆ ಸಮಸ್ಯೆಯನ್ನವರು ಹೇಗೋ ಬಗೆಹರಿಸಲು ಯತ್ನಿಸಿದ್ದರು; ಆದರೆ ಸೋತಿದ್ದರು.

ಆದರೆ ಗೌತಮ್ ಈಗ ಬಂದಿರುವುದು ಅವನದೇ ಸ್ವಂತದ್ದಾದ ಒಂದು ಸಮಸ್ಯೆ ಬಗ್ಗೆ ಹೇಳಿಕೊಳ್ಳಲು.

"ನನ್ನ ತಂದೆ ತಾಯಿ ಕೂಡ ಬೇರೆಯಾಗುವ ಸನ್ನಾಹದಲ್ಲಿರುವಂತೆ ಕಾಣುತ್ತಾರೆ ಸರ್. ಅದನ್ನು ಕಲ್ಪಿಸುವುದೂ ನನ್ನಂಥವರಿಂದ ಸಾಧ್ಯವಾಗುವುದಿಲ್ಲ."

ಹೆಡ್‌ಮಾಸ್ತರ್ ಆಗಲೂ ನಿಟ್ಟುಸಿರು ಬಿಟ್ಟರು.

ಈಗಲೂ ತಾನು ದಂಪತಿಗಳಿಬ್ಬರ ನಡುವಣ ವೈಯಕ್ತಿಕವಾದ ಸಮಸ್ಯೆಗಳ ವಿಷಯವಾಗಿ ಚರ್ಚಿಸಲು ಹೋಗಬೇಕಾಗಿದೆ. ಅವರಿಬ್ಬರು ಬೇರೆಯಾದರೆ ಅವರ ಮಕ್ಕಳ ಮೇಲಾಗುವ, ಅವರ ಮನಸ್ಸಿನ ಮೇಲಾಗುವ ಕೆಟ್ಟ ಪರಿಣಾಮವನ್ನು ವಿವರಿಸಿ ಹೇಳಬೇಕಾಗಿದೆ. ಇದರಿಂದಾಗಿ ಗೌತಮ್‌ನಂಥ ಒಬ್ಬ ಜಾಣ ವಿದ್ಯಾರ್ಥಿಯ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವ ವಿಷಯನ್ನವರು ಅವನ ತಂದೆ ತಾಯಿಗಳ ಮನಸ್ಸಿಗೆ ತಲುಪಿಸುವ ಯತ್ನ ಮಾಡಬಹುದಷ್ಟೇ. ಅದಕ್ಕಿಂತ ಮುಂದುವರಿಯುವುದು ಅವರ ವ್ಯಾಪ್ತಿಯಸ್ನು ಮೀರಿದ ವಿಷಯವಾಗಿತ್ತು.

"ಇದನ್ನು ಕೇಳುತ್ತಿದ್ದರೆ ನನಗೆ ಬೇಸರವಾಗುತ್ತದೆ ಗೌತಮ್." ಹೆಡ್‌ಮಾಸ್ತರ್ ಶಿವರಾಮ್ ಸೆಟ್ಟಿ ಹೇಳಿದರು.

"ಆದರೆ ನನಗೆ ಹೆದರಿಕೆಯಾಗುತ್ತದೆ, ಪರಿಸ್ಥಿತಿ ನಿಜವಾಗಿಯೂ ಹೀಗೇ ಇದೆಯಾದರೆ ನಾನು ನನ್ನ ಮಿತಿಗಳಿಗಿಂತ ಮುಂದುವರಿಯುವಂತಿಲ್ಲ. ಆದರೆ ನಿನಗೆ ಇದು ಖಚಿತವಾಗಿದೆಯೇ ನಿನ್ನ ತಂದೆ ತಾಯಿಯ ನಡುವಿರುವ ಭಿನ್ನಾಭಿಪ್ರಾಯ ತಾತ್ಕಾಲಿಕವಾದದ್ದಲ್ಲವೆಂದು? ಯಾಕೆಂದರೆ ಜಗಳಾಡುವವರು ಅದರಲ್ಲೂ ದಂಪತಿಗಳು ಹೆಚ್ಚು ಸಮಯ ಆ ಜಗಳಗಳನ್ನು ಊರ್ಜಿತವಾಗಿರಿಸುವುದಿಲ್ಲ. ಯಾವ ಕ್ಷಣದಲ್ಲೂ ಅವರಿಬ್ಬರು ಪರಸ್ಪರ ರಾಜಿ ಸೂತ್ರಕ್ಕೆ ಮಣಿಯುವ ಸಾಧ್ಯತೆಗಳು ಇಲ್ಲದೇ ಇಲ್ಲ."

ಗೌತಮ್ ತಲೆ ಕೆಳಗೆ ಹಾಕಿದ ನಾಚಿಕೆಯಿಂದ.

"ಆದರೆ ಈ ಸಂಗತಿ ಈ ಹಂತದಿಂದ ತೀರಾ ಮುಂದೆ ಹೋಗಿದೆ ಸರ್. ದೀಪಾವಳಿ ದಿನದಂದು ನನ್ನ ತಂದೆ ತಾಯಿ ಪರಸ್ಪರ ಬೇರೆಯಾಗುವ ವಿಷಯವಾಗಿ ಮಾತನಾಡುತ್ತಿದ್ದುದನ್ನು ನಾನು ಕಿವಿಯಾರೆ ಕೇಳಿದ್ದೇನೆ ಸರ್ ಹೊರಗಿನಿಂದ" ಎಂದು ಘಟನೆ ವಿವರಿಸಿದ.

"ನೋಡಿ ಮನೆಯಲ್ಲಿ ಈ ಥರ್ಮಾಮೀಟರನ್ನು ನಿಮ್ಮ ಹೆಂಡತಿಯ ನಾಲಿಗೆಯ ಕೆಳಗಿಟ್ಟು ಅರ್ಧ ನಿಮಿಷ ಬಾಯಿ ಮುಚ್ಕೊಂಡಿರು ಅಂತ ಆಕೆಗೆ ಹೇಳಿ ಎಷ್ಟು ಡಿಗ್ರಿ ಟೆಂಪರೇಚರ್ ಇದೆ ಅಂತ ನೋಡ್ಕೊಂಡು ಬಂದು ಹೇಳಿ."

"ಡಾಕ್ಟರ್ ದಯವಿಟ್ಟು ಅರ್ಧ ಗಂಟೆ ಹೊತ್ತು ಆಕೆ ಬಾಯಿ ತೆರೀಬಾರದೇ ಇರುವಂತಾ ಥರ್ಮಾಮೀಟರ್ ಇದ್ರೆ ಕೊಡಿ!"

— ಎಸ್. ವಿಶ್ವನಾಥ



ಹೆಡ್‌ಮಾಸ್ತರ್ ಯೋಚಿಸುತ್ತ ಕೇಳಿದರು.

"ಆಗಲೇ ನನಗೆ ತಮ್ಮ ನೆನಪಾಯಿತು ಸರ್. ಇಂಥ ಒಂದು ಸಮಸ್ಯೆಗೆ ತಮ್ಮ ಬಳಿಯೇ ಪರಿಹಾರವಿದೆಯೆಂದುಕೊಂಡೆ ಸರ್."

ಹೆಡ್‌ಮಾಸ್ತರ್ ಅವರ ಮುಖದಲ್ಲಿ ಒಣ ನಗುವೊಂದು ಹಾದು ಹೋಯಿತು.

"ನಮ್ಮ ಜೀವನ ನಾವು ನಿರೀಕ್ಷಿಸಿದ್ದಂತೆ ಕರಾರುವಾಕ್ಕಾಗಿ ಎಂದೂ ನಡೆಯುವುದಿಲ್ಲ ಗೌತಮ್. ಆದರೆ ನಿರಾಶೆಯ ಸಂದರ್ಭಗಳಲ್ಲೆಂದೂ ನಾವು ಹತಾಶರಾಗಬಾರದು ಅಲ್ಲವೇ?"

"ಹೌದು ಸರ್." ಗೌತಮ್ ಒಪ್ಪಿಕೊಂಡ.

"ನಿನ್ನ ತಂದೆ ತಾಯಿ ಪರಸ್ಪರ ಜಗಳಾಡಿಕೊಂಡಿದ್ದರು ಎಂದು ಹೇಳಿದೆಯಲ್ಲ?"

"ನನಗೆ ನಿಜಕ್ಕೂ ಬೇಸರವಾಗ್ತಿದೆ ಗೌತಮ್ ಇದನ್ನೆಲ್ಲ ಕೇಳಿ. ನನ್ನ ಸಹಾನುಭೂತಿಯಿದೆ ನಿನಗೆ. ಆದರೆ ನೀನು ಊಹಿಸಿಕೊಂಡಷ್ಟು ಕೆಟ್ಟದ್ದೇನೂ ಆಗಲಾರದೆನಿಸುತ್ತದೆ."

"ಆದರೆ ನನಗೆ ಹೆದರಿಕೆಯಾಗುತ್ತದೆ ಸರ್. ನನ್ನ ತಾಯಿ ನನ್ನನ್ನು ಪಡೆಯಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳುವುದಾಗಿ ತಂದೆ ಹೇಳಿದರು. ತಾನು ಕೂಡ ಅದೇ ಪ್ರಯತ್ನ ನಡೆಸುವುದಾಗಿ. ಅಂದರೆ ಕಾನೂನು ಹೇಳಿದ ಪ್ರಕಾರ ನಾನು ತಂದೆ ಅಥವಾ ತಾಯಿಯ ಜೊತೆ ಮಾತ್ರ ಇರಬಲ್ಲೆ ಸರ್. ಆದರೆ ನನಗೆ ಅವರಿಬ್ಬರೂ ಬೇಕು. ಯಾರನ್ನೂ ಬಿಟ್ಟಿರಲಾರೆ ನಾನು."

ಶಿವರಾಮ್ ಸೆಟ್ಟಿ ಅವರಿಗೆ ಏನು ಹೇಳಬೇಕೆಂದು ತೋರಲಿಲ್ಲ ಆ ಕ್ಷಣ.

"ನನಗೆ ಖಚಿತವಾಗಿದೆ ಸರ್, ನನ್ನ ತಂದೆ ತಾಯಿ ಖಂಡಿತವಾಗಿಯೂ ಪರಸ್ಪರ ಬೇರೆಯಾಗುತ್ತಾರೆ."

"ಈ ವಿಷಯದಲ್ಲಿ ನಾನಾದರೂ ನಿನಗೆ ಹೇಗೆ ಸಹಾಯ ಮಾಡಬಲ್ಲೆ ಗೌತಮ್?" ಹೆಡ್‌ಮಾಸ್ತರ್ ಕೇಳಿದರು. "ನಾನು ಏನು ಮಾಡಬೇಕೆನ್ನುವುದನ್ನಾದರೂ ಹೇಳು. ನಿನ್ನ ತಂದೆ ಮತ್ತು ತಾಯಿಯ ವೈಯಕ್ತಿಕ ವಿಷಯದಲ್ಲಿ ಪ್ರವೇಶ ಮಾಡಿದರೆ ಅದು ನನ್ನ ಅಧಿಕಪ್ರಸಂಗಿತನವಾಗುವುದಿಲ್ಲವೇ?"

"ಕೊನೆಯ ಪಕ್ಷ ಅಂದು ಭರತ್‌ನ ತಂದೆ ತಾಯಿಯನ್ನು ಭೇಟಿಯಾಗಿ ಅವರಿಗೆ ಬುದ್ಧಿ ಹೇಳಿದಂತೆ ನನ್ನ ತಂದೆ ತಾಯಿಗಾದರೂ ಹೇಳಿದರೆ ಚೆನ್ನಾಗಿರುತ್ತಿತ್ತು ಸರ್. ನಾನು

ಅವರಿಬ್ಬರನ್ನೂ ಸಮನಾಗಿ ಪ್ರೀತಿಸುತ್ತೇನೆ ಸರ್. ನೀವೇನಾದರೂ ಅವರಿಬ್ಬರನ್ನು ಕಂಡು ಬೇರೆಯಾಗದಿರುವಂತೆ ಹೇಳಿದರೆ ಅವರಿಬ್ಬರು ತಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳಬಹುದೆನಿಸ್ತದೆ ಸರ್. ಯಾಕೆಂದರೆ ಅವರಿಬ್ಬರೂ ನಿಮ್ಮನ್ನು ಗೌರವಿಸುತ್ತಾರೆ.''

ಹೆಡ್‌ಮಾಸ್ತರ್ ತಮ್ಮ ಎರಡೂ ಕೈ ಬೆರಳುಗಳನ್ನು ಪರಸ್ಪರ ಜೋಡಿಸಿಕೊಂಡು ಸ್ವಲ್ಪ ಹೊತ್ತು ಯೋಚಿಸಿದರು. ಅನಂತರ ಏನೋ ನಿರ್ಧಾರಕ್ಕೆ ಬಂದವರಂತೆ ಗಂಭೀರವಾಗಿ ಹೇಳಿದರು.

“ಆಯ್ತು ಗೌತಮ್. ಐ ವಿಲ್ ಟ್ರೈ ಟು ಹ್ಯಾವ್ ಎ ವರ್ಡ್ ವಿದ್ ಯುವರ್ ಪೇರೆಂಟ್ಸ್. ನನ್ನ ಪ್ರಯತ್ನ ನಾನು ಮಾಡ್ತೇನೆ.''

“ಥ್ಯಾಂಕ್ಯೂ ಸರ್.''

* * * * *

“ನೀವು ಈಗಲಾದರೂ ಗಮನಿಸಿದಿರಾ ನಿಮ್ಮ ಮಗನ ಮೇಲೆ ನಿಮ್ಮ ವರ್ತನೆ ಅಂದೆಂಥ ಕೆಟ್ಟ ಪರಿಣಾಮ ಬೀರಿದೆ ಎನ್ನುವುದನ್ನು?''

ಹಾಗೆಂದು ರೋಹಿತ್‌ಗೆ ಹೇಳಿದಾಕೆ ಬೇರೆ ಯಾರೂ ಅಲ್ಲ, ಆತನ ಹೆಂಡತಿ ಅಂದರೆ ಗೌತಮ್‌ನ ತಾಯಿ ಪ್ರಿಯಾ.

ಅವರಿಬ್ಬರೂ ಗೌತಮ್‌ನ ಸ್ಕೂಲಿನಿಂದ ಮನೆಗೆ ಮರಳುವ ದಾರಿಯಲ್ಲಿದ್ದರು ಕಾರಿನಲ್ಲಿ.

“ಈಗ ಸರಿಯಾಗಿದೆ. ಎಲ್ಲ ದೂರನ್ನೂ ನನ್ನ ಮೇಲೆ ಹಾಕು'' ಎಂದ ರೋಹಿತ್.

“ನಾನಾದರೂ ಹೇಗೆ ನನ್ನನ್ನೇ ದೂರಿಕೊಳ್ಳಲಿ ಈ ವಿಷಯದಲ್ಲಿ. ಜಗಳವನ್ನು ಪ್ರಾರಂಭಿಸಿದವರೇ ನೀವಲ್ಲವೇ? ಗೌತಮ್ ನಮ್ಮ ಜಗಳವನ್ನು ಕೇಳಿದ. ಆ ಕ್ಷಣದತನಕ ನಾನೆಂದೂ ನಿಮ್ಮನ್ನು ಅನುಮಾನಿಸಿದ್ದಾಗಲೀ ನಿಮಗೆ ಅನುಮಾನಾಸ್ಪದವಾದ ರೀತಿಯಲ್ಲಿ ನಡೆದುಕೊಂಡುದಾಗಲೀ ಇಲ್ಲ. ಅದು ನಿಮಗೆ ಗೊತ್ತಿದೆ. ನಿಮಗೆಂದರೆ ನಿಮ್ಮ ಆತ್ಮಕ್ಕೆ ಎಂದು ತಿಳಿದುಕೊಳ್ಳಿ. ನಾನು ನಿಮ್ಮ ತಪ್ಪನ್ನು ಕಂಡುಹಿಡಿದೆ. ಅದನ್ನು ಸರಿಪಡಿಸಲೂ ಯತ್ನಿಸಿದೆ ಕ್ಷಮಿಸಲು ಸಿದ್ಧಳಾಗಿ. ಆದರೆ ಅದಕ್ಕೆ ನಿಮ್ಮ ಸಹಕಾರ ಸಿಗಲಿಲ್ಲ. ನೀವು ಅದಕ್ಕಿಂತಲೂ ಮುಂದೆ ಹೋಗಿ ನಿಮ್ಮ ಮಗನನ್ನು ವಂಚಿಸಿದಿರಿ. ಹೆಚ್ಚಿನೆಲ್ಲ ತಂದೆಯಂದಿರು ತಮ್ಮ ಮಕ್ಕಳಿಗೆ ತೋರುವ ಪ್ರೀತಿ ವಾತ್ಸಲ್ಯಗಳನ್ನು ನೀವು ನಿಮ್ಮ ಮಗನಿಗೆ ನೀಡದೇ ಉಳಿದಿರಿ. ಅದರ ಪರಿಣಾಮ ನಿಮ್ಮ ಬಗ್ಗೆ ಆತ ತನ್ನ ಮುಖ್ಯೋಪಾಧ್ಯಾಯರಲ್ಲಿ ದೂರು ಕೊಡುವ ಹಂತವನ್ನು ತಲುಪಿದ.''

“ಅಸಹಜವಾದ ವಾದವಿದು.'' ಹಾಗೆ ಉದ್ಗರಿಸುತ್ತ ಓಡುತ್ತಿರುವ ಕಾರಿನ ಬ್ರೇಕ್ ಹಾಕಿದ ರೋಹಿತ್.

ಅದೊಂದು ನಿರ್ಜನವಾದ ಪ್ರದೇಶವಾಗಿತ್ತು. ಯಾವುದೇ ಟ್ರಾಫಿಕ್ ಇರಲಿಲ್ಲ. ಕತ್ತಲಾವರಿಸಿತ್ತು ಬೇರೆ ಸಂಜೆಗತ್ತಲು. ಗೌತಮ್‌ನ ಶಾಲೆಯ ಹೆಡ್ ಮಾಸ್ತರ್ ಅವರು ಕರೆಸಿದ್ದ ಕಾರಣಕ್ಕಾಗಿ ಅವರಿಬ್ಬರೂ ಕಾರಿನಲ್ಲಿ ಶಾಲೆಗೆ ಹೋಗಿ ಹೆಡ್‌ಮಾಸ್ತರ್ ಅವರೊಡನೆ ಮಾತನಾಡಿ ಮರಳುತ್ತಿದ್ದರು ಮನೆಗೆ.

“ನಾನು ವಿವಾಹ ವಿಚ್ಛೇದನೆಯನ್ನೇನೂ ಬಯಸುವುದಿಲ್ಲ.'' ಹಾಗೆಂದು ಹೇಳಿದ್ದನವ.

ರೀತಿ!

ಅಂತಿಂಥವನಲ್ಲ
ನನ್ನ ರಸಿಕ
ನಲ್ಲ
ಕೆನ್ನಗೆ ತುಟಿಯೊತ್ತಿ
ನುಡಿತಾನೇ ನಂ ದೇಶ
ದಲ್ಲಿ ಇದಕ್ಕೆ ಟ್ಯಾಕ್ಸ್ ಇಲ್ಲ.

— ಕುರಿನೋಟ ಕೃಷ್ಣಮೂರ್ತಿ



"ಆದರೆ ಈಕೆ ಒಂದಿಷ್ಟು ವಿಶಾಲ ಮನೋಭಾವನೆಯನ್ನು ತಳೆದು ಇರುವುದೇ ಆದರೆ ಯಾವುದೇ ಪ್ರಾಬ್ಲೆಮ್ಸ್‌ಗಳು ಬಾರದ ಹಾಗೆ ನಾನು ನೋಡಿಕೊಳ್ಳುತ್ತೇನೆ. ಮತ್ತು ಈ ಕತೆಗೊಂದು ಸುಖಾಂತ ಸಿಗುತ್ತದೆ'' ಎಂದಿದ್ದನವ ಹೆಡ್‌ಮಾಸ್ತರ್ ಅವರೆದುರಿಗೆ.

ಈಗಲೂ ಅವ ಅದನ್ನೇ ಪುನರುಚ್ಚರಿಸಿದ ಆಕೆಯ ಎದುರು.

"ನನಗೆ ಗೊತ್ತಿಲ್ಲ'' ಆಕೆಯೆಂದಳು. "ಈ ವಿಷಯದಲ್ಲಿ ನಾನು ಗೌತಮ್‌ನ ತಾಯಿಯಾಗಿಯಷ್ಟೇ ವರ್ತಿಸುತ್ತೇನಷ್ಟೆ. ಅವನು ಈ ವಯಸ್ಸಿನಲ್ಲಿಯೇ ನಿರಾಶೆಯ ಕೂಪಕ್ಕೆ ತಳ್ಳಲ್ಪಡುವುದನ್ನು ಅವನ ತಾಯಿಯಾಗಿ ನಾನು ಇಷ್ಟ ಪಡೋದಿಲ್ಲ.''

"ಸರಿ, ನೀನು ಹೀಗೆ ಅಳುತ್ತಲೇ ಇರುವುದಾದರೆ ನಾನಾದರೂ ಹೇಗೆ ಖುಶಿಯಾಗಿರಲಿ ನಿನ್ನಂಥವಳ ಜೊತೆ ನನ್ನ ಸಹನೆಗೂ ಒಂದು ಮಿತಿಯಿರುತ್ತದೆ.''

"ಹಾಗೇ ನನ್ನ ಸಹನೆಗೂ ಒಂದು ಮಿತಿ ಇರುತ್ತದೆ ಎನ್ನುವುದನ್ನು ನೀವೂ ಯಾಕೆ ತಿಳಿದುಕೊಂಡಿಲ್ಲ. ನಿಮ್ಮಿಂದ ನನಗಾದ ಅನ್ಯಾಯದ ಪರಿಕಲ್ಪನೆಯೇ ನಿಮಗಿರುವಂತಿಲ್ಲ.''

"ಹೌದು ನನ್ನಿಂದ ಅನ್ಯಾಯವಾಯ್ತು ನಿನಗೆ.'' ನಿರ್ಲಕ್ಷ್ಯದ ದನಿಯಲ್ಲಿ ಹೇಳಿದ. "ಆದಕಾರಣವೇ ನಾನದಕ್ಕಾಗಿ ಪಶ್ಚಾತ್ತಾಪ ಪಡಬೇಕಿದೆ. ಇಂಥ ಹೀನ ಸ್ಥಿತಿಯಲ್ಲಿರಲು ಯಾವೊಬ್ಬ ಗಂಡಸೂ ಇಷ್ಟಪಡುವುದಿಲ್ಲ. ಸದಾ ಕಾಲ ಅನುಮಾನಿಸುವ, ಜಗಳಾಡಿ ಮನಶಾಂತಿಯನ್ನು ಕೆಡಿಸುವ ಹೆಂಡತಿಯ ಜೊತೆ.''

"ಹಾಗಾದ್ರೆ ರೋಹಿತ್, ನಿಮಗೇನು ಇಷ್ಟವೆಂದು ಕಂಡು ಬರುತ್ತದೆಯೋ ಅದೇ ರೀತಿಯಲ್ಲಿ ನೀವು ವರ್ತಿಸಬಹುದು. ಆದರೂ ನಾನು ನಿಮ್ಮನ್ನು ಡೈವೋರ್ಸ್ ಆಗೋಲ್ಲ. ಅದರಿಂದಾಗಿ ಮಗು ಗೌತಮ್‌ನ ಮನಸ್ಸು ನೋಯಿಸೋಲ್ಲ ಎಂಥ ಕಷ್ಟ ಬಂದರೂ ಸರಿಯೇ.''

ಸಂಯಮ ತೋರಿ ಹೇಳಿದ್ದಳವಳು.

ಹಾಗೆಂದು ಹೇಳಿದವಳು ಕಾರಿನ ಹಿಂದಿನ ಸೀಟಿಗೊರಗಿದ್ದಳು. ರೋಹಿತ್ ಒಂದು ಸಿಗರೆಟ್ ಹಚ್ಚಿದ. ಹಾಗೇ ಸೇದಿ ಮೌನವಾಗಿ ಹೊಗೆ ತೇಲಿಸಿದ.

ಗೌತಮ್‌ನಿಗೆ ತಮ್ಮಿಬ್ಬರ ನಡುವಿನ ಬಿರುಕು ತಿಳಿದುಬಿಟ್ಟಿತಲ್ಲ ಎನ್ನುವ ಕಳವಳ ಅವಳದು. ಹೆಡ್‌ಮಾಸ್ತರ್ ಶಿವರಾಮ್ ಸೆಟ್ಟಿ ಅವರಿಗೆ ಸಾಧ್ಯವಾದಷ್ಟೂ ನಯವಾದ

ಮಾತುಗಳಲ್ಲಿ ಆ ದಂಪತಿಗಳಿಬ್ಬರಿಗೂ ತಿಳಿಹೇಳಿದ್ದರು ಬೇರೆಯಾಗುವುದು ಪಾಪಕರವೆಂದು. ಮಕ್ಕಳ ಅಮಾಯಕ ಮನಸ್ಸುಗಳ ಮೇಲೆ ತಂದೆ ತಾಯಿಗಳು ಈ ರೀತಿ ವರ್ತಿಸಿ ಪ್ರಹಾರ ಹೇರಬಾರದೆಂದು.

"ಇಂಥ ವಿಷಯಗಳೆಲ್ಲ ನಡೆಯುತ್ತವೆ. ಈಗೀಗಂತೂ ಹೆಚ್ಚಿನ ಸಂದರ್ಭಗಳಲ್ಲಿ ಹೀಗಾಗುತ್ತದೆಯಲ್ಲ ಎನ್ನುವ ಅಳುಕು ನನಗೆ. ಆದರೆ ಮಕ್ಕಳಿಗೆ ಮಾದರಿಯಾಗಬಲ್ಲ ಹೆತ್ತವರು ಪರಸ್ಪರ ದೂರ ಸರಿಯುವ ದುರಂತವನ್ನು ಸಾಧ್ಯವಾದಷ್ಟೂ ತಡೆಗಟ್ಟಬೇಕು ಎಂದು ಹೇಳುತ್ತಿದ್ದೇನೆ.''

ಜೋಡಿಸಲ್ಪಟ್ಟ ಅವರ ಕೈಗಳೆರಡನ್ನೂ ಆತ್ಮೀಯತೆಯಿಂದ ಅದಕ್ಕೂ ಮಿಗಿಲಾದ ಗೌರವದಿಂದ ಹಿಡಿದುಕೊಂಡ ರೋಹಿತ್ ಅವರಿಗೆ ಆಶ್ವಾಸನೆ ನೀಡುವವನಂತೆ ಹೇಳಿದ.

"ಆಯ್ತು ಸರ್, ಖಂಡಿತವಾಗಿಯೂ ಹಾಗೇ ಆಗಲಿ, ನಮ್ಮ ಕಣ್ಣು ತೆರೆಸಿದುದಕ್ಕಾಗಿ ಧನ್ಯವಾದಗಳು'' ಎಂದು ಸೌಜನ್ಯಪೂರ್ವಕವಾಗಿಯೇ ಹೇಳಿ ಅಲ್ಲಿಂದ ಹೊರಟು ಬಂದಿದ್ದ.

ಈ ಮಾತುಕತೆಗಳು ಒಂದಿಷ್ಟು ಫಲಪ್ರದವಾಗಿದ್ದಂತೆ ಕಂಡುಕೊಂಡ ಪ್ರಿಯಾ ಆಶಾವಾದಿಯಾಗಿದ್ದಳು. ಆದರೆ ಈಗ ರೋಹಿತ್ ತನ್ನ ಬಣ್ಣವನ್ನು ಮತ್ತೆ ಬದಲಾಯಿಸಿಕೊಂಡಿದ್ದುದವಳ ಅರಿವಿಗೆ ಬಂದಿತ್ತು.

ಈಗ ಅವರಿಬ್ಬರ ಮುಂದಿರುವ ದಾರಿಯಾದರೂ ಯಾವುದು?

ರೋಹಿತ್ ರಸ್ತೆಯ ಎರಡೂ ಬದಿಯಲ್ಲಿ ಅಗತಾನೇ ಬೆಳಗಿದ ಲೈಟುಗಳನ್ನು ನೋಡುತ್ತ ಕುಳಿತ.

ಹೆಡ್‌ಮಾಸ್ತರ್ ಅವರು ಯಾಕಾಗಿ ತಮ್ಮಿಬ್ಬರನ್ನು ಕರೆಸಿರಬಹುದೆನ್ನುವುದು ಅವರಿಬ್ಬರಿಗೂ ತಿಳಿಯದಾಗಿತ್ತು ಅವರನ್ನು ಭೇಟಿಯಾಗುವತನಕ.

ಭೇಟಿಯ ವೇಳೆ ಅವರೆಂದು ಈ ವಿಷಯವನ್ನು ತೆಗೆದರೋ ಅವರಿಬ್ಬರಲ್ಲಿ ಹೆಚ್ಚು ಶಾಕ್ ಆದುದು ರೋಹಿತ್‌ಗೇ. ಅವನ ಮತ್ತು ಪ್ರತಿಮಾಳ ನಡುವಿದ್ದ ಅಫೇರ್‌ನ ವಿಷಯವನ್ನವ ಸಾಕಷ್ಟು ಗುಟ್ಟಾಗಿಯೇ ಇಟ್ಟಿದ್ದ. ಅವನ ಆತ್ಮೀಯ ಸ್ನೇಹಿತರಿಗೂ ತಿಳಿಯದಿದ್ದ ವಿಷಯವಾಗಿತ್ತದು. ಆದರೆ ಅದು ಹೇಗೆ ಈ ಹೆಡ್‌ಮಾಸ್ತರ್ ಅವರಿಗೆ ತಿಳಿಯಿತು ಎಂದು ಅರ್ಥವಾಗಿರಲಿಲ್ಲ ಅವನಿಗೆ. ಮೊದಲಿಗೆ ಅವನ ಸಂದೇಹದ ದೃಷ್ಟಿ ಹರಿದು ಪ್ರಿಯಾಳ ಮೇಲೆ, ಆದರೆ ಆತ ಯಾರೊಂದಿಗೆ ಅಫೇರ್ ಅನ್ನು ಹೊಂದಿದ್ದಾನೆಂಬುದಾಗಲೀ ಅವರಿಬ್ಬರು ಯಾಕಾಗಿ ಬೇರ್ಪಡುವವರಿದ್ದಾರೆ ಎಂಬುದಾಗಲೀ ಹೆಡ್‌ಮಾಸ್ತರ್ ಶಿವರಾಮ ಸೆಟ್ಟರಿಗೆ ತಿಳಿಯದು. ಅದನ್ನು ತಿಳಿಯುವ ಆಸಕ್ತಿಯೂ ಅವರಿಗಿಲ್ಲ. ಅವರಿಗಿದ್ದ ಆಸಕ್ತಿಯೆಂದರೆ ತಮ್ಮ ಶಾಲೆಯ ಜಾಣ ವಿದ್ಯಾರ್ಥಿ ಗೌತಮ್‌ನ ಜೀವನ ಹಾಳಾಗಬಾರದೆನ್ನುವುದಷ್ಟೇ ಆಗಿತ್ತು.

ಅವರ ಆಫೀಸಿನ ಕೋಣೆಯಿಂದ ಹೊರಬರುವಾಗೇನೋ ರೋಹಿತ್ 'ಇನ್ನು ತಾನು ಪ್ರತಿಮಾಳ ಬಗ್ಗೆ ಯೋಚಿಸಲೇ ಕೂಡದು' ಎನ್ನುವ ಮನಸ್ಥಿತಿಗೆ ಬಂದಿದ್ದ. ಆದರೆ ಅಲ್ಲಿಂದ ಹೊರಟು ಬಂದನಂತರ ದಾರಿಯಲ್ಲಿ ಯೋಚಿಸುತ್ತ ಹೋದಂತೆ ಪ್ರತಿಮಾಳ ಆಕರ್ಷಣೆ ಆತನನ್ನು ಸೆಳೆದಿತ್ತು. ಕ್ರಮೇಣ ಆಕೆಯ ವಶವಾಗಿತ್ತವನ ಮನಸ್ಸು.

"ಪ್ರಿಯಾ'' ಅಳುಕುತ್ತಲೇ ಕೇಳಿದನವ ಒಂದು ಹಂತದಲ್ಲಿ. "ಹೇಗೂ ಕೆಲವು ದಿನಗಳಿಂದೀಚೆಗೆ ಬರಿಯ ಜಗಳಾಡುವುದಷ್ಟೇ ನಮ್ಮ ಪ್ರವೃತ್ತಿಯಾಗಿಬಿಟ್ಟಿದೆ. ನಿನ್ನ ಮನಸ್ಸಿಗೂ

ಅರಿವು ಎಂಬುದು ಬೆಳೆಯುವಂತಾದ್ದು. ಜ್ಞಾನ ನೆಲೆಯಾಗಿ ನಿಲ್ಲಬಲ್ಲಂತಾದ್ದು.

— ಟೆನಿಸನ್

ಸಮಯ ತಪ್ಪುವುದು ನಡತೆಯಲ್ಲಿ ತಗ್ಗಿದಂತೆ. — ಮೇಸನ್

ಸಾಮರ್ಥ್ಯವೂ, ನಂಬಿಕೆಯೂ ಗೆಲ್ಲಲಾಗದ ಪಡೆ ಬಲವಾಗಿದೆ. —ಹರ್ಬರ್ಟ್

ಸಂಗ್ರಹ : ರುದ್ರಗೌಡ ಮಂಗಳೂರ



ಸಾಕಷ್ಟು ಅಸಂತೋಷವನ್ನುಂಟು ಮಾಡಿದ್ದೇನೆ ನಾನು. ಹೇಗೂ ನಾವು ಬೇರೆಯಾಗುತ್ತೇವೆಂದಿಟ್ಟುಕೊಳ್ಳೋಣ. ಅನಂತರವಾದರೂ ನನ್ನ ಕುರಿತಾದ ಯಾವ ಕಿರಿಕಿರಿಯೂ ನಿನಗಿರದು ಅಲ್ಲವೇ?''

ಪ್ರಿಯಾ ತಕ್ಷಣ ಉತ್ತರಿಸಲಿಲ್ಲ ಅವನ ಪ್ರಶ್ನೆಗೆ. ದೂರದ ದಿಗಂತವನ್ನೇ ದಿಟ್ಟಿಸಿದಳು ಅದೆಷ್ಟೋ ಹೊತ್ತು, 'ಜೀವನ, ಮನೆ, ರೋಹಿತ್‌ನ ಹೊರತಾಗಿ?' ಆಕೆ ಯೋಚಿಸಿದಳು. 'ಸ್ವಾತಂತ್ರ್ಯವಿರುತ್ತದೆ ಆವಳಿಗೆ ಅವಳಿಷ್ಟ ಬಂದಂತೆ ನಡೆದುಕೊಳ್ಳಲು ಗೌತಮ್ ಶಾಲೆಯಲ್ಲಿರುವಷ್ಟು ಸಮಯ. ಯಾವುದಾದರೊಂದು ಉದ್ಯೋಗವನ್ನೂ ಹಿಡಿಯಬಲ್ಲಳು ಆಕೆ ಸಮಯ ಕಳೆಯಲು. ವಿವಾಹ ವಿಚ್ಛೇದನೆಯನ್ನು ಪಡೆದ ಮಹಿಳೆಯೆಂದೂ ಗೃಹಿಣಿ ಎಂದೆನಿಸಿಕೊಳ್ಳಲಾರಳು ಈ ಸೊಸೈಟಿಯಲ್ಲಿ.

ಇಂಥ ಒಂದು ಪರಿಸ್ಥಿತಿ ಬರಬಹುದು ಎಂದು ಆಕೆ ಈತನಕ ಎಂದೂ ಅಂದುಕೊಂಡದ್ದಿಲ್ಲ. ಅದೃಷ್ಟವಂತೆಯೇ ತಾನೆಂದುಕೊಂಡಂಥ ದಿನಗಳಿದ್ದುವು. ಇತ್ತೀಚೆಗೆ ಆ ಹೆಣ್ಣಿನ ಪ್ರವೇಶ ಅವನ ಜೀವನದಲ್ಲಿ ಆದ ಮೇಲಂತೂ ಪರಿಸ್ಥಿತಿ ತೀರ ಹದಗೆಟ್ಟಿದೆ ದಂಪತಿಗಳ ನಡುವೆ.

ಒಂದೊಮ್ಮೆ ತಾಯಿಯ ಮನೆಗೆ ಹೋಗಬಹುದು ಪ್ರಿಯಾ ಆತನನ್ನು ತೊರೆದು, ಅಲ್ಲಿ ತಂದೆಯಿದ್ದಾರೆ, ಆಕೆಯ ಪ್ರೀತಿಯ ತಂದೆ, ಆದರೆ ಅವರು ಗಂಡನಿಂದ ದೂರವಾಗಿ ಬಂದ ಮಗಳನ್ನು ಹೇಗೆ ತಾನೇ ಸ್ವಾಗತಿಸಬಲ್ಲರು ಎನ್ನುವ ಕಲ್ಪನೆ ಅವಳಿಗೆ ಅನುಕೂಲವೆನಿಸಲಿಲ್ಲ.

"ನನ್ನ ಸುಖ ಅಥವಾ ದುಃಖದ ಕುರಿತಾಗಿ ಅದೂ ಇಂಥ ವಿಷಯಗಳಲ್ಲಿ ನೀವೆಂದೂ ನನ್ನನ್ನು ಪ್ರಶ್ನಿಸಬಾರದು ರೋಹಿತ್. ಅದು ಅಷ್ಟು ಚೆನ್ನಾಗಿ ಕಾಣುವುದಿಲ್ಲ'' ಆಕೆಯೆಂದಳು. "ಈ ತಕ್ಷಣವೇ ನಿಮ್ಮಿಂದ ಡೈವೋರ್ಸ್ ಪಡೆಯಲು ನಾನಂತೂ ಸಿದ್ಧಳಿಲ್ಲ ಮಾನಸಿಕವಾಗಿಯೂ, ಸಾಮಾಜಿಕವಾಗಿಯೂ.''

"ಇದು ನಿನ್ನ ನಿಜವಾದ ಮಾತಲ್ಲ. ಅಂದರೆ ಮನಸ್ಸಿನ ಮಾತಲ್ಲ'' ಅವನೆಂದ. "ನನ್ನಿಂದ ಬೇರೆಯಾಗುತ್ತೇನೆಂದು ಈಗಾಗಲೇ ಅನೇಕ ಬಾರಿ ನೀನೇ ಹೇಳಿದ್ದೀಯ ಮರೆತೆಯೇನು?''

"ಆ ಹುಡುಗಿ ಅಂಥ ಮಾತು ಮಾಡಿದಳೇ ನಿಮಗೆ ಹಾಗಾದರೆ.'' ವಿಷಾದದ ನಗು ನಕ್ಕಳು ಪ್ರಿಯಾ. "ಇಷ್ಟು ವರ್ಷಗಳ ನಿಮ್ಮ ದಾಂಪತ್ಯವನ್ನು ಅಳಿಸಿ ಹಾಕುವಷ್ಟು ಪ್ರಬಲವಾದುದೇ ಅವಳ ಆ ಮಾತುಗಾರಿಕೆ?''

ರೋಹಿತ್ ಮೌನವಾಗಿದ್ದ.

"ಆದರೆ ಆಕೆಗೆ ನಿನ್ನ ಯೋಗ್ಯತೆ ಇದೆ ಎಂದು ಅನಿಸುವುದಿಲ್ಲ ನನಗೆ.''

ಆತನೆಂದ ಕೊನೆಗೆ.

"ಅದು ಆತ್ಮವಂಚನೆಯ ಮಾತು.'' ಆಕೆಯೆಂದಳು ಏನನ್ನೋ ಯೋಚಿಸಿದವಳಂತೆ. "ನಾನೊಂದು ಮಾತು ಹೇಳುತ್ತೇನೆ ಕೇಳುತ್ತೀರಾ?''

"ಹೇಳು.''

"ನಿಮಗೆ ನಾನು ಬೇಡ. ಅಂದರೆ ನಿಮ್ಮ ಮನಸ್ಸು ನನ್ನ ಕಡೆ ಆಕರ್ಷಿತವಾಗಿಲ್ಲ ಒಪ್ಪಿಕೊಂಡೆ. ಆದಕ್ಕಾಗಿ ನಾನೇನು ಮಾಡಬೇಕು ನಿಮ್ಮನ್ನು ತೊರೆದು ಹೋಗುವುದರ ಬದಲಾಗಿ. ನನ್ನ ಮಾತು ಕೇಳಿ ನಾವು ಒಂದೇ ಮನೆಯಲ್ಲಿರೋಣ. ಅದಕ್ಕೆ ಅವಕಾಶ ಮಾಡಿಕೊಡಿ. ಬೇಕಾದ ಫ್ರೆಂಡ್ಸ್‌ಗಳ ಹಾಗೆ ಅಥವಾ ಇನ್ನು ಮುಂದೆ ನಿಮ್ಮ ಸಹೋದರಿಯಂತೆ ಎಂದು ಬೇಕಾದರೂ ನೀವು ತಿಳಿದುಕೊಳ್ಳಬಹುದು. ನನ್ನ ಮನಸ್ಸು ಇದಕ್ಕೆ ಒಪ್ಪುವುದಿಲ್ಲವಾದರೂ ಕೂಡ ನಾನು ಈ ಸೊಸೈಟಿಗೆ ಹೆದರಿ, ನಮ್ಮ ಮಗು ಗೌತಮ್‌ನ ಮನಸ್ಸು ಕೆಡಬಾರದೆನ್ನುವ ಉದ್ದೇಶಕ್ಕಾಗಿಯಾದರೂ ನನಗೆ ಆ ಅವಕಾಶ ಕೊಡಿರೆಂದು ಕೇಳಿಕೊಳ್ಳುತ್ತೇನೆ. ಈ ಸೊಸೈಟಿ ನಮ್ಮನ್ನು ದಂಪತಿಗಳೆಂದೇ ಸ್ವೀಕರಿಸಿದೆ ಅವರ ದೃಷ್ಟಿಯಿಂದೂ ಆ ವಿಷಯದಲ್ಲಿ ಬದಲಾಗದಂತೆ ನಡೆದುಕೊಳ್ಳಬೇಕಾದುದು ಒಂದು ಗೌರವಾನ್ವಿತ ಕುಟುಂಬದಿಂದ ಬಂದ ನನಗೆ ಅನಿವಾರ್ಯವಾಗಿದೆ.''

ರೋಹಿತ್‌ನಿಗೆ ಏನೆನಿಸಿತೋ ತನ್ನ ಕಣ್ಣನ್ನು ಒರೆಸಿಕೊಂಡ. ತನ್ನ ದುರ್ಬಲತೆಯ ಅರಿವಾಗಬಾರದೆಂದೋ ಏನೋ ಮಾತನಾಡದೆ ಕಾರನ್ನು ಸ್ಟಾರ್ಟ್ ಮಾಡಿದ.

ಮನೆ ತಲುಪಿದಾಗ ಹೇಳಿದಳು ಪ್ರಿಯಾ ಅದೇ ತನ್ನ ಸಹಜ ಶಾಂತ ಸ್ವರದಲ್ಲಿ "ಸಂಜೆಯ ಊಟವನ್ನು ನಮಗಿಬ್ಬರಿಗಾಗಿ ನಾನು ಸಿದ್ಧಪಡಿಸಬೇಕೇ ಅಥವಾ ನೀವು ಹೊರಹೋಗಿ ನಿಮ್ಮ ಆ ಸ್ನೇಹಿತೆಯ ಮನೆಯಲ್ಲಿ ಊಟ ಮಾಡಿಬರುತ್ತೀರಾ?''

"ಇಲ್ಲ ನಾನೆಲ್ಲೂ ಹೋಗೋದಿಲ್ಲ'' ಎಂದಷ್ಟೇ ಹೇಳಿ ಕಾರನ್ನು ಶೆಡ್‌ನಲ್ಲಿ ನಿಲ್ಲಿಸಿದ.

"ಆದರೆ ಒಂದು ವಿಷಯ ನಾನು ಕೇಳಲಿಕ್ಕಿದೆ ರೋಹಿತ್ ನಿಮ್ಮ ಕೂಡ. ಆ ಹುಡುಗಿ ಅನ್ಯೋನ್ಯ ದಾಂಪತ್ಯವೊಂದರ ನಡುವೆ ಐ ಮೀನ್ ಗಂಡ ಹೆಂಡತಿಯ ನಡುವೆ ಪ್ರವೇಶ ಮಾಡುವುದು ಪಾಪಕರ ಎಂದು ಒಂದಿಷ್ಟಾದರೂ ತಿಳುವಳಿಕೆ ಇಲ್ಲದವಳೇ?''

"ಆಕೆಯಾಗಿ ಏನೂ ನಮ್ಮ ನಡುವೆ ಬರಲಿಲ್ಲ.''

"ಇರಬಹುದು. ನೀವು ನನ್ನ ಮೇಲಿನ ಆಸಕ್ತಿಯನ್ನೆಂದು ಕಳೆದುಕೊಂಡಿರಿ, ವರ್ಷಗಳ ಹಿಂದೆ. ನಾನು ಕಳೆದೆಲ್ಲ ವರ್ಷಗಳಲ್ಲಿ ಕಿವುಡಿಯಾಗಿ ಮೂಕಿಯಾಗಿ ಇದ್ದೆನೆಂದು ಭಾವಿಸಿದಿರಾ?''

"ಎಂದಿಗೂ ಇಲ್ಲ. ಕಾರಿನಲ್ಲಿ ನಾನೇನನ್ನು ಹೇಳಿದ್ದೆನೋ ಅದನ್ನೇ ಪುನರುಚ್ಚರಿಸಬೇಕಾಗಿದೆ ಪ್ರಿಯಾ. ನೀನು ತುಂಬ ಸುಂದರಿ ಮತ್ತು ಎಂದಿಗೂ ನಿನ್ನ ಮೇಲಿನ ನನ್ನ ಆಸಕ್ತಿ ಕಡಿಮೆಯಾದದ್ದೆಂದಿಲ್ಲ. ಆದರೂ ನಮ್ಮ ನಡುವೆ ಅದೆಂಥದೋ ಒಂದು ಬಗೆಯ ವಿಷಾದದ ಛಾಯೆ ಇತ್ತೆಂದುಕೊಳ್ಳುತ್ತೇನೆ. ನಮ್ಮ ನರನಾಡಿಗಳು ಪರಸ್ಪರಿಗಾಗಿ ಸ್ಪಂದಿಸುತ್ತಿರಲಿಲ್ಲವೆಂದು ಮಾತ್ರ ಹೇಳಬಲ್ಲೆ ಅದನ್ನು ನೆನಪಿಟ್ಟುಕೋ. ನನಗಿಂತ ಹದಿನಾರು ವರ್ಷಗಳಷ್ಟು ಕಿರಿಯವಳಾಗಿದ್ದಾಳೆ ಪ್ರಾಯದಲ್ಲಿ, ಆಕೆಯನ್ನು ವಂಚಿಸುತ್ತಿರುವುದು ನಾನೇ ಎಂದು ಅನಿಸುತ್ತಿದೆ ಒಮ್ಮೊಮ್ಮೆ.''

"ನೋಡಿ ನಮ್ಮ ಹುಡುಗನಿಗೆ ಹಿರಿಯರು ಹಾಕಿಕೊಟ್ಟ ದಾರೀಲಿ ನಡೆಯೋದು ಅಂದ್ರೆ ಬಹಳ ಇಷ್ಟ."

"ಅಂದ್ರೆ?"

"ವರದಕ್ಷಿಣೆ, ಪರೋಪಕಾರ, ಶಾಸ್ತ್ರೋಕ್ತ ಮದುವೇನೇ ಇಷ್ಟ ಅಂತೆ!"

— ಡಬ್ಲ್ಯು. ಕೆ. ವೆಂಕಟೇಶಮೂರ್ತಿ



"ಆಕೆಯ ಯೌವನವನ್ನು ಬೇರೆಯವರ ದಾಂಪತ್ಯವನ್ನು ಮುರಿಯುವ ಸಲುವಾಗಿ ಉಪಯೋಗಿಸಬಾರದಾಗಿತ್ತಾಕೆ. ಆಕೆಯ ವ್ಯಕ್ತಿತ್ವವೊಂದು ಹಟದ ಸ್ವಭಾವದ್ದಾಗಿರಬೇಕು."

"ಹೌದು ವೈಯಕ್ತಿಕವಾಗಿ ಆಕೆ ತುಂಬ ಪ್ರಭಾವಶಾಲೀ ವ್ಯಕ್ತಿತ್ವದವಳೇ ಆಗಿದ್ದಾಳೆ, ನಾನು ಒಪ್ಪುತ್ತೇನೆ. ಆದರೆ ಒಂದು ವಿಷಯ ಮಾತ್ರ ನಿನಗೆ ಆಶ್ವಾಸನೆ ಕೊಡುತ್ತೇನೆ ಆಕೆಯೆಂದೂ ನನ್ನನ್ನು ಒತ್ತಾಯಿಸಿಲ್ಲ ನಿನ್ನನ್ನು ತೊರೆದು ತನ್ನ ಬಳಿ ಬರುವಂತೆ. ಯಾವ ಕ್ಷಣದಲ್ಲೂ ಆಕೆ ದೂರದ ಊರಿಗೆ ಹೋಗಿಯಾಳು ಹೊಸ ಕೆಲಸವನ್ನು ಹುಡುಕಿಕೊಂಡು. ಮದರಾಸಿಗೋ ಮುಂಬಯಿಗೋ ಅಥವಾ ವಿದೇಶಕ್ಕೋ."

"ಹಾಗೆಂದವನ ಮುಖವನ್ನೇ ನೋಡಿದಳು ಪ್ರಿಯಾ. 'ಇಷ್ಟು ವರ್ಷಗಳ ಕಾಲ ತನ್ನ ಜೊತೆ ದಾಂಪತ್ಯ ಮಾಡಿದ ಈ ವ್ಯಕ್ತಿ ಹೇಗೆ ಈಗ ಅಪರಿಚಿತನಂತೆ ಕಾಣಲಿಕ್ಕೆ ಹತ್ತಿದ್ದಾನೆ' ಎನಿಸಿತವಳಿಗೆ.

"ಹಾಗೆ ಆಕೆಯೇನಾದರೂ ವಿದೇಶಕ್ಕೆ ಹೋದರೆ ಆಕೆಯ ಬೆನ್ನ ಹಿಂದೆ ನೀವೂ ಹೋಗುತ್ತೀರಾ? ನಿಮ್ಮ ಸ್ಟಾಕ್ ಎಕ್ಸ್‌ಚೇಂಜ್ ಕೆಲಸವನ್ನು ತೊರೆದು, ನನ್ನನ್ನು ಮತ್ತು ನಿಮ್ಮ ಮಗ ಗೌತಮ್‌ನನ್ನು ತೊರೆದು?"

"ಇಲ್ಲ" ಎಂದು ಹೇಳಬೇಕೆನಿಸಿತವನಿಗೆ ಗಟ್ಟಿಯಾಗಿ ಆದರೆ ಹೇಳಲಿಲ್ಲ.' ಆ ಶಬ್ದ ಆತನ ಗಂಟಲಿನಿಂದ ಹೊರಬರಲೇ ಇಲ್ಲ. ಪ್ರತಿಮಾಳ ಸುಂದರ ದೇಹ ತನ್ನ ತೋಳುಗಳಲ್ಲಿ ಬಂಧಿಯಾಗಿದ್ದುದನ್ನವ ಕಲ್ಪಿಸಿಕೊಂಡ ಆಗ. ಆಕೆಯ ಸುಂದರವಾದ ತೆಳ್ಳನೆಯ ಕೆಂಪು ತುಟಿಗಳ ನೆನಪಾಯಿತು. ನಗುವಿನ ಮುಖ, ನಕ್ಕಾಗ ಗುಳಿ ಮೂಡುವ ಆಕೆಯ ಕೆನ್ನೆಗಳು. ಪ್ರತಿಮಾ ಆಕೆಯನ್ನೊಂದು ಸುಂದರವಾದ ಪ್ರತಿಮೆಯಂತೆ ಹೇಗೆ ಕಡೆದಿದ್ದಾನೆ ಸೃಷ್ಟಿಕರ್ತ?

"ನನ್ನ ಪ್ರಶ್ನೆಗೆ ಉತ್ತರ ಹೇಳಿ."

ಆತ ಆಕೆಯ ಬಿಳುಪೇರಿದ ಮುಖವನ್ನು ನೋಡಿದ. ಯಾವ ಮೇಕ್‌ಅಪ್ ಕೂಡ ಇಲ್ಲದ ಮುಖ. ಕಡುಕಪ್ಪು ಕೂದಲುಗಳ ಹಿನ್ನೆಲೆಯಲ್ಲಿ ಸುಂದರವಾಗಿಯೇ ಕಾಣುವ ಮುಖ. ಆದರೆ ಅದು ಇಂದು ಕಳೆಗುಂದಿದೆ.

ಕೊನೆಗೂ ಆತ ಬಾಯಿಬಿಡಬೇಕಾಯಿತು.

ಪ್ರತಿಮಾ ಎಂದೂ ಬಯಸುವುದಿಲ್ಲ ನಾನೂ ಆಕೆಯನ್ನು ಹಿಂಬಾಲಿಸಿಕೊಂಡು ಹೋಗಬೇಕೆನ್ನುವುದನ್ನು. ಆದರೂ ಆಕೆ ಹೊರಟು ಹೋದನಂತರವೂ ನಮ್ಮ ಸಂಬಂಧ

ಊರ್ಜಿತದಲ್ಲಿರುಲಾರದೇ ಇರುತ್ತದೆಯೋ ಏನೆಂದು ನಾನಂತೂ ಖಚಿತವಾಗಿ ಹೇಳಲಾರೆ ಈಗಲೇ. ಆದರೆ ನಿನ್ನ ಮನಸ್ಸನ್ನೆಂದೂ ನೋಯಿಸಬಾರದೆನ್ನುವ ಉದ್ದೇಶವಿದೆ ನನಗೆ. ಆದರೆ ಅದಕ್ಕಾಗಿ ಸುಳ್ಳು ಹೇಳುತ್ತ ಮುಂದುವರಿಯಲೂ ಬಯಸುವುದಿಲ್ಲ.

ಆಕೆ ತನ್ನೆರಡೂ ಕೈಗಳಿಂದ ಮುಖ ಮುಚ್ಚಿಕೊಂಡಳು.

"ನಿಮ್ಮ ವ್ಯಕ್ತಿತ್ವವನ್ನು ಅದಕ್ಕೆ ಒಂದಿಷ್ಟೂ ಕುಂದು ಉಂಟಾಗದಂತೆ ನಡೆದುಕೊಳ್ಳಿರೆಂದಷ್ಟೇ ಹೇಳಬಲ್ಲೆ, ನಾನು ಈ ಸಂದರ್ಭದಲ್ಲಿ ನಿಮ್ಮ ಹೆಂಡತಿಯಾಗಿ."

"ಆದರೆ" ಅವನೆಂದ. " ಒಂದು ವೇಳೆ ನಿನಗೆ ವಿವಾಹ ವಿಚ್ಛೇದನೆಯಾಗುವ ಮನಸ್ಸಿಲ್ಲವಾದರೆ ಹಾಗೇ ಆಗಬಹುದು."

ಸ್ವಲ್ಪ ಹೊತ್ತು ಮೌನ ನೆಲೆಸಿತು ಅವರಿಬ್ಬರ ನಡುವೆ. ಮತ್ತೊಮ್ಮೆ ಪ್ರಿಯಾ ತನ್ನ ಕೈಗಳನ್ನುಜ್ಜಿಕೊಂಡಳು. ತಾನೇನು ಮಾಡುತ್ತಿದ್ದೇನೆನ್ನುವುದು ಅವಳಿಗೆ ಅರಿವಿರಲಿಲ್ಲ. ಆಕೆಯ ಕಣ್ಣುಗಳು ತುಂಬಿ ಬಂದು ಕಣ್ಣೀರು ಉದುರಿತು. ಆಕೆಯ ಮನಸ್ಸು ಒಡೆದು ಹೋಗಿತ್ತು ಹೋಳು ಹೋಳುಗಳಾಗಿ.

"ನೀವೇನೂ ನನ್ನ ಆಯ್ಕೆಗಾಗಿ ಬಿಡಬೇಡಿ ಏನನ್ನೂ. ನನಗಾಗಿಯೇನೂ ನೀವಾಕೆಯನ್ನು ತೊರೆಯಬೇಕೆಂದು ನಾನು ಹೇಳುವುದಿಲ್ಲ."

"ಆದರೆ ನಾನು ಸ್ವಾರ್ಥಿಯೆನ್ನುವ ಭಾವನೆ ನನ್ನನ್ನು ಇರಿಯುತ್ತದೆ ನೀನು ಏನಾದರೂ ಪ್ರತಿಭಟನೆ ತೋರದೇ ಹೋದರೆ" ಅವನೆಂದ.

"ನೀವು ಸ್ವಾರ್ಥಿಯೆಂದು ನಾನು ಈಗಲೂ ಹೇಳಲಾರೆ. ಆದರೆ ನೀವು ದುರ್ಬಲ ಮನಸ್ಸಿನವರೆನ್ನುವುದಷ್ಟೇ ತಿಳಿದಿದೆ. ಅದರ ದುರುಪಯೋಗವನ್ನೆಂದೂ ಮಾಡಲಾರೆ. ಆದರೆ ಮೊದಲಿದ್ದ ಗೌರವ ಭಾವನೆ ನನಗೆ ನಿಮ್ಮ ಮೇಲೆ ಇನ್ನೂ ಮುಂದುವರಿಯುವುದು ಸಾಧ್ಯವಾಗದು. ಬಹುಶಾ ನನಗೆ ಗೊತ್ತಿದೆ ಬಹಳಷ್ಟು ಗಂಡಸರು ತಮ್ಮ ಹೆಂಡಂದಿರ ಜೊತೆ ಪ್ರಾಮಾಣಿಕರಾಗಿಲ್ಲ. ನನ್ನಿಬ್ಬರು ಸ್ನೇಹಿತೆಯರಿದ್ದಾರೆ. ಆ ಕಾರಣಕ್ಕಾಗಿ ಗಂಡಂದಿರೊಡನೆ ಜಗಳಾಡಿದವರು. ಆದರೆ ನಾನೆಂದೂ ಬಾವಿಸಿಕೊಂಡಿರಲಿಲ್ಲ, ಊಹಿಸಲೂ ಇಲ್ಲ, ನಾನು ಕೂಡ ಒಂದಲ್ಲ ಒಂದುದಿನ ಅವರ ಸಾಲಿಗೆ ಸೇರುತ್ತೇನೆಂದು. ಓಹ್ ನೀವೆಲ್ಲ ಗಂಡಸರು ಎಷ್ಟೊಂದು ಸ್ವಾರ್ಥಿಗಳಿದ್ದೀರಿ."

ರೋಹಿತ್ ತನ್ನ ಕಾಲರ್ ಸರಿಪಡಿಸಿಕೊಂಡ.

"ಐ ಆಮ್ ಸಾರಿ."

"ನನಗೀಗ ನಾವಿಬ್ಬರೂ ಪರಿಚಯ ಹೊಂದಿದ ಒಂದು ಜೊತೆಯ ನೆನಪಾಗುತ್ತಿದೆ. ಭಾಸ್ಕರ್ ಮತ್ತು ಅನಿತಾ ದಂಪತಿಗಳದು. ನಿಮಗೆ ನೆನಪಿದೆಯೇ ಆತ ಅನಿರೀಕ್ಷಿತವಾಗಿ ಒಬ್ಬಾಕೆ ಹುಡುಗಿಯ ಬೆನ್ನು ಹತ್ತಿದ. ಆಗ ಅನಿತಾ ಏನು ಮಾಡಿದಳು ತನ್ನ ಗಂಡನನ್ನು ಕ್ಷಮಿಸಿದಳು ಮತ್ತು ಆತನ ಜೊತೆಗೇ ದಾಂಪತ್ಯ ಜೀವನವನ್ನು ಮುಂದುವರಿಸಿದಳು. ಅನಂತರ ಏನೂ ನಡೆದಿಲ್ಲ ಎನ್ನುವಂತೆ ಅವರಿಬ್ಬರೂ ಜೊತೆಯಾಗಿ ಬದುಕಿದರು. ಒಂದೇ ಚಾವಣಿಯ ಅಡಿಯಲ್ಲಿ."

"ನಾನೇನೂ ನಿನ್ನನ್ನು ಈ ರೀತಿಯಾಗಿ ಕೇಳುತ್ತಿಲ್ಲ ನನ್ನನ್ನು ಕ್ಷಮಿಸೆಂದು." ರೋಹಿತ್ ಹೇಳಿದ. "ಅಂಥ ಮನೋಭಾವ ನನ್ನದಲ್ಲ."

ತಾರುಣ್ಯ

ತನುವನ್ನು ಹೂವಾಗಿಸಿ
ಮನವನ್ನು ಜೇನಾಗಿಸಿ
ಸುಂದರ ಕನಸುಗಳ
ಬಲೆ ಹೆಣೆದು
ಬೇಟೆಗಾಗಿ ಕಾಯುವ ಜೇಡರ
ಕುಳುವಿನಂತೆ
ಪ್ರಿಯತಮನ ಬರುವಿಕೆಯನ್ನು
ನಿರೀಕ್ಷಿಸುವ
ಜೀವನದ ಒಂದು
ಮಜಲೇ ತಾರುಣ್ಯ.

— ಸಂತೇಕೋಡಿಹಳ್ಳಿ ಲೋಕೇಶ್



"ಆದರೆ ಗೌತಮ್‌ನಿಗಾಗಿ ನಾನು ಕೆಲವೊಂದು ತ್ಯಾಗ ಮಾಡಬೇಕಾಗಿದೆ. ಅವನು ಅಷ್ಟು ಸಣ್ಣ ಪ್ರಾಯದವನಾದ ಕಾರಣ ನಾನವನ ಮನಸ್ಸನ್ನು ನೋಯಿಸಲು ಇಷ್ಟಪಡುವುದಿಲ್ಲ. ಅವನಿಗೆ ತಿಳಿಯುವಂಥ ವಯಸ್ಸಾಗಿದೆ ನಮ್ಮ ಮನಸ್ತಾಪಕ್ಕೆ ಮೂಲವಾದ ಕಾರಣವೇನೆಂಬುದನ್ನು ಹುಡುಕುವಷ್ಟು ತನ್ನ ಸ್ನೇಹಿತನಾದ ಭರತ್‌ನ ತಂದೆ ತಾಯಿ ಬೇರೆಯಾಗುವುದನ್ನು ತಡೆಯಲು ತನ್ನ ಶಾಲೆಯ ಹೆಡ್‌ಮಾಸ್ತರ್ ಮೂಲಕ ಸಾಕಷ್ಟು ಪ್ರಯತ್ನಪಟ್ಟವನಾತ.

ನಿಮಗೆ ಆ ನಿಮ್ಮ ಸ್ನೇಹಿತೆಯನ್ನು ನೋಡಬೇಕೆನಿಸಿದಾಗಲೆಲ್ಲ ಹೋಗಿ ನೋಡಬಹುದು. ಆ ಕುರಿತಾಗಿ ನಾನು ಏನೂ ಪ್ರಶ್ನೆ ಕೇಳುವುದಿಲ್ಲ ನಿಮ್ಮನ್ನು. ಆದರೆ ದಯವಿಟ್ಟು ನೀವು ನನಗದನ್ನು ಹೇಳಬೇಡಿ. ಯಾವಾಗ ಮತ್ತು ಎಲ್ಲಿಗೆ ಹೋಗಿ ನೀವಾಕೆಯನ್ನು ಭೇಟಿಯಾಗುತ್ತೀರಿ ಎಂದು ಸಾರ್ವಜನಿಕರೆದುರು ನಾವು ಸಂಯಮದಿಂದ ಅನ್ಯೋನ್ಯವಾಗಿರೋ ದಂಪತಿಗಳಂತೇ ವರ್ತಿಸೋಣ ಆಗದೇ?''

ಆಕೆಯ ವಿಶಾಲ ಮನೋಭಾವದೆದುರು ತಲೆ ತಗ್ಗಿಸಬೇಕೆನಿಸಿತು ರೋಹಿತ್‌ಗೆ.

* * * * *

ಆದಿನ ರೋಹಿತ್ ಮನೆಯಲ್ಲಿಲ್ಲದಾಗ ಪ್ರಿಯಾ ಆತನ ಕೋಣೆಯೊಳಗೆ ಹೋಗಿ ಆತನ ಡ್ರಾವರ್ ಶೋಧಿಸಿದಳು. ಅಲ್ಲೆಲ್ಲಾದರೂ ಪ್ರತಿಮಾಳ ಫೋಟೋ ಅಥವಾ ಪತ್ರಗಳು ಸಿಗುವುದೇ ಎಂದು ನೋಡುವ ಪ್ರಯತ್ನವದು. ಆಕೆಯ ನಿರೀಕ್ಷೆಯಂತೆ ಅಲ್ಲೊಂದು ಪುಸ್ತಕದ ನಡುವೆ ಇದ್ದ ಪ್ರತಿಮಾಳ ಭಾವಚಿತ್ರವನ್ನು ಕಂಡುಹಿಡಿದಳು. ತುಂಬ ಸುಂದರವಾದ ಹುಡುಗಿಯೆನಿಸಿತವಳಿಗೆ ಆಕೆ ಕೂಡ ಗುರುತಿಸಿಕೊಂಡದ್ದು ವರ್ಣರಂಜಿತವಾದ ಆ ಫೋಟೋದಲ್ಲಿ ಪ್ರತಿಮಾಳ ನೀಲಿಕಣ್ಣುಗಳನ್ನು. ರೋಹಿತ್ ಆಕೆಯಲ್ಲಿ ಆಕರ್ಷಣೆ ಕಂಡುಕೊಂಡ ಕಾರಣವನ್ನೂ ಹುಡುಕಿ ತೆಗೆಯುವುದವಳಿಗೆ ಕಷ್ಟವಾಗಲಿಲ್ಲ. ಪ್ರತಿಮಾಳ ಕಣ್ಣುಗಳು ತೀರಿಕೊಂಡ ಪುಟ್ಟ ಮಗಳು ಗೌರಿಯ ಕಣ್ಣುಗಳನ್ನೇ ಹೋಲುತ್ತಿದ್ದುವು. ಅವನ್ನೇ ಅದೆಷ್ಟೋ ಹೊತ್ತಿನತನಕ

ನೋಡುತ್ತ ಕಳೆದಳು ಪ್ರಿಯಾ. ಪ್ರತಿಮಾಳ ಮುಖದ ಹೋಲಿಕೆಯೂ ತೀರಿಕೊಂಡ ಆಕೆಯ ಮಗಳು ಗೌರಿಯನ್ನೇ ಹೋಲುತ್ತಿದ್ದುದನ್ನವಳೂ ಗಮನಿಸಿದಳು. ಆ ಭಾವನೆ ಬಂದಾಗ ಪ್ರಿಯಾಗೆ ಕೂಡ ಪ್ರತಿಮಾಳ ಬಗ್ಗೆ ಒಳ್ಳೆಯ ಅಭಿಪ್ರಾಯವೇ ಉಂಟಾಯಿತು. ಮನಸ್ಸೆನ್ನುವುದು ತುಂಬ ವಿಚಿತ್ರವಾದ ವಿಷಯ.

ಅಷ್ಟರಲ್ಲಿ ಹೊರಗೆ ಮುಚ್ಚಿದ ಬಾಗಿಲಿನಾಚೆ ಯಾರೋ ಕರೆಗಂಟೆಯನ್ನೊತ್ತುತ್ತಿರುವುದು ಕೇಳಿಸಿತು. ಹೋಗಿ ಬಾಗಿಲು ತೆರೆದು ನೋಡುತ್ತಾಳೆ ಎದುರಿಗೆ ನಿಂತಿದ್ದಾನೆ ರೋಹಿತ್. ಅವನ ಮುಖದ ತುಂಬ ವಿಷಾದದ ನೆರಳು.

"ಯಾಕೆ, ನೀವು ಕೆಲಸಕ್ಕೆ ಹೋಗಲಿಲ್ಲವೇ?''

"ಇಲ್ಲ'' ಎಂದನವ.

"ಯಾಕೆ?''

"ಆಫೀಸಿಗೆ ಹೋದಾಗ ಒಂದು ಮೆಸೇಜ್ ಇತ್ತು ಆಸ್ಪತ್ರೆಯಿಂದ'' ಅವನೆಂದ. "ಆಕೆಗೆ ಆ್ಯಕ್ಸಿಡೆಂಟ್ ಆಯ್ತಂತೆ.''

"ಯಾರಿಗೆ?'' ತನ್ನ ಕಿವಿಗಳನ್ನು ನಂಬಲಾರದವಳಂತೆ ಕೇಳಿದಳು ಪ್ರಿಯಾ.

"ಪ್ರತಿಮಾಗೆ.''

"ಏನಾಯ್ತು?''

"ಆಕೆ ತನ್ನ ಆಫೀಸಿಗೆ ಹೋಗುತ್ತಿದ್ದಳಂತೆ. ಆಕೆ ಪ್ರಯಾಣಿಸುತ್ತಿದ್ದ ಕಾರು ಕಲ್ಯಾಣಪುರ ಹೈವೇಯಲ್ಲಿ ಆ್ಯಕ್ಸಿಡೆಂಟ್ ಎದುರಿಸಿತು. ಎದುರಿನಿಂದ ಬಂದ ಕಾರಿಗೆ ಡಿಕ್ಕಿ ಹೊಡೆಯಿತು. ಅರೆಪ್ರಜ್ಞಾವಸ್ಥೆಯಲ್ಲಿದ್ದ ಆಕೆಯನ್ನು ಮಣಿಪಾಲದ ಆಸ್ಪತ್ರೆಗೆ ಸೇರಿಸಿದ್ದಾರೆ. ಮೆಸೇಜ್ ಸಿಕ್ಕಿದ ತಕ್ಷಣ ನಾನು ಆಸ್ಪತ್ರೆಯತ್ತ ಧಾವಿಸಿದೆ. ಅಂಥ ಸ್ಥಿತಿಯಲ್ಲೂ ಆಕೆ ನನ್ನನ್ನು ಗುರುತಿಸಿದಳು. ಬದುಕಿ ಉಳಿಯುವ ಸಾಧ್ಯತೆಗಳು ಕಡಿಮೆ ಎನ್ನುತ್ತಾರೆ.''

ಪ್ರಿಯಾಗೆ ಕೆಡುಕೆನಿಸಿತು. "ಈಗ ನಾನೇನು ತಾನೇ ಮಾಡಬೇಕೆನ್ನುತ್ತೀರಿ?'' ಹಾಗೆ ಕೇಳಿದವಳ ಕಣ್ಣುಗಳಲ್ಲಿ ನೀರಾಡಿದ್ದನ್ನಾತ ಗಮನಿಸಿದ. "ನನಗಾಕೆಯ ಗುರುತಿಲ್ಲ, ಆಕೆಯೂ ನನ್ನ ಬಗ್ಗೆ ಕೇಳಿದ್ದಿರಬಹುದಷ್ಟೆ ನೋಡಿಲ್ಲ.''

ರೋಹಿತ್ ಕೂತುಕೊಂಡು ಸಿಗರೆಟ್ ಪ್ಯಾಕ್‌ಗಾಗಿ ತಡಕಾಡಿದ ತನ್ನ ಜೇಬನ್ನು. ಅಲ್ಲೆಲ್ಲೂ ಕಾಣದಾದಾಗ ಪ್ರಿಯಾಳ ಮುಖ ನೋಡಿದ. ಆದರೆ ಅದನ್ನರಿತ ಪ್ರಿಯಾ ತಾನೇ ಡ್ರಾವರ್ ಬಳಿ ಹೋಗಿ ಸಿಗರೆಟ್ ಪ್ಯಾಕ್ ಮತ್ತು ಲೈಟರ್ ತಂದು ಅವನ ಕೈಗಿತ್ತಳು.

"ಥ್ಯಾಂಕ್ಸ್'' ಎಂದನವ ಆಕೆಯತ್ತ ನೋಡದೆ.

"ಆಕೆ ಆಗಷ್ಟೇ ತನ್ನ ಆಫೀಸಿನಿಂದ ಹೊರಟು ಹೋಗಿದ್ದಳು ಒಬ್ಬ ಸ್ನೇಹಿತನ ಜೊತೆ. ರಾಮ್‌ರಾವ್ ಎಂದಾತನ ಹೆಸರು. ಹೊರ ದೇಶದಲ್ಲಿ ಆಕೆಗಾಗಿ ಒಂದು ಕೆಲಸ ಕೊಡಿಸುವ ಆಶ್ವಾಸನೆ ಇತ್ತನವನು. ಮಣಿಪಾಲದ ಟ್ರಾವೆಲಿಂಗ್ ಏಜೆನ್ಸಿಯೊಂದರ ಆಫೀಸಿನಲ್ಲಿ ಆಕೆ ತನ್ನ ಪಾಸ್‌ಪೋರ್ಟ್ ತೋರಿಸಬೇಕಾಗಿತ್ತು. ತನ್ನ ಕಾರ್‌ನಲ್ಲಾಕೆಯನ್ನು ಕರೆದೊಯ್ಯುತ್ತಿದ್ದ ರಾಮರಾವ್. ಕಲ್ಯಾಣಪುರ ಹೈವೇಯಲ್ಲಿ ಅವರು ಬರುತ್ತಿದ್ದಾಗ ಆಕಸ್ಮಿಕ ಸಂಭವಿಸಿತು. ಕಾರು ಲಾರಿಗೆ ಗುದ್ದಿದ್ದು ಜಖಂಗೊಂಡಿದೆ. ಅದನ್ನು ನಡೆಸುತ್ತಿದ್ದ ರಾಮರಾವ್ ಸ್ಥಳದಲ್ಲಿಯೇ ಅಸುನೀಗಿದರ ಪ್ರತಿಮಾ ಆಸ್ಪತ್ರೆಯಲ್ಲಿ ಸಾವಿನ ಹಾದಿಯಲ್ಲಿದ್ದಾಳೆ.''

ಅನ್ಯಾಯದಿಂದ ಹಣ ಗಳಿಸುವುದಕ್ಕಿಂತ ಕೆಟ್ಟದ್ದು ಬೇರಾವುದೂ ಇಲ್ಲ.

— ಡೆಮೋಕ್ರಾಟಸ್

ನಾವು ಏನನ್ನು ಹೊಂದಿರಬಾರದೋ ಅದಕ್ಕಾಗಿಯೇ ಹೆಚ್ಚು ಆಸೆ ಪಡುತ್ತೇವೆ.

— ಪಬ್ಲಿಯಸ್ ಸೈರಸ್

ಇಡೀ ಜಗತ್ತೇ ಖಂಡಿಸುತ್ತಿರುವಾಗಲೂ ತಮ್ಮ ತಪ್ಪನ್ನು ಒಪ್ಪಿಕೊಳ್ಳುವಂಥ ಜನ ತೀರ ವಿರಳ.

— ಸ್ಮಿತ್ಸ್

ಸಂಗ್ರಹ : ಕೆ. ಬಿ. ಪೂಜಾರಿ



ಆಗ ಏನು ಹೇಳಬೇಕೆಂದು ತೋರಲಿಲ್ಲ ಪ್ರಿಯಾಗೆ. ತನ್ನ ಕೈಯಲ್ಲಿನ್ನೂ ಇರುವ ಸುಂದರಿಯಾದ ಆ ಹುಡುಗಿಯ ಚಿತ್ರವನ್ನೇ ತದೇಕ ದೃಷ್ಟಿಯಲ್ಲಿ ನೋಡಿದಳು. ತನ್ನ ತೀರಿಕೊಂಡ ಹೆಣ್ಣು ಮಗಳು ಗೌರಿಯ ನೆನಪಾಯಿತವಳಿಗೆ. ರೋಹಿತ್ ಕೂಡ ಆ ಚಿತ್ರದ ಕಡೆ ನೋಡಿದ, ಆಕೆಯ ಕೈಯಲ್ಲಿರುವ ಚಿತ್ರದ ಕಡೆ ತಲೆಯಲುಗಿಸಿದ.

"ಇಲ್ಲ, ಆಕೆಯ ಆ ಸುಂದರ ಮುಖಕ್ಕೆ ಏನೂ ಆಗಿಲ್ಲ. ಆದರೆ ದೇಹವೆಲ್ಲ ಜರ್ಝರಿತವಾಗಿದೆ. ಆ್ಯಕ್ಸಿಡೆಂಟ್ ಎದುರಿಸಿದ್ದ ಆ ಕಾರಿನಿಂದಾಕೆಯನ್ನು ಹೊರಗೆಳೆಯುವಾಗ ಸ್ಮೃತಿಯಲ್ಲಿದ್ದಳಂತೆ ಅನಂತರ ಕಳೆದುಕೊಂಡಳು. ಅವಳು ಬದುಕಿ ಉಳಿಯುವ ಸಾಧ್ಯತೆಗಳು ತೀರಾ ಕಡಿಮೆಯೆನ್ನುತ್ತಾರೆ ಡಾಕ್ಟರ್‌ಗಳೆಲ್ಲ. ಬದುಕಿ ಉಳಿದರೂ ಮೊದಲಿನ ಪ್ರತಿಮಾಳಾಗಲು ಸಾಧ್ಯವಿಲ್ಲವಂತೆ."

ಹಾಗೆನ್ನುತ್ತಿದ್ದವನ ದನಿಯಲ್ಲಿನ ವಿಷಾದದ ಭಾವನೆ ಪ್ರಿಯಾಳ ಮನಸ್ಸನ್ನು ತಟ್ಟಿತು. ಅಷ್ಟೊಂದು ಸುಂದರಿಯಾದ ಹುಡುಗಿ ಅಂಗವಿಕಲೆಯಾಗಿ ಬದುಕಿ ಉಳಿಯುವುದಕ್ಕಿಂತ ಸತ್ತು ಹೋದರೇ ಒಳ್ಳೆಯದೆನಿಸಿತವಳಿಗೆ ಆ ಕ್ಷಣದಲ್ಲೂ. ಅವಳೇನೂ ಪ್ರಿಯಾಳ ಜೀವನದಲ್ಲಿ ಬರಬಾರದಾಗಿದ್ದ ಸ್ಥಾನವನ್ನು ತುಂಬಿದ್ದಳು. ಆದರೆ ಅದು ಕೆಟ್ಟದ್ದೆಂದು ತೀರ್ಮಾನಿಸಲು ಪ್ರಿಯಾ ಯಾರು? ಆಕೆಯೇನೋ ಪತಿ ರೋಹಿತ್‌ನನ್ನು ತುಂಬ ಪ್ರೀತಿಸುತ್ತಾಳೆ. ಅವನ ಬದುಕಿನಲ್ಲಿ ತಾನಲ್ಲದೆ ಬೇರೆ ಯಾವುದೇ ಹೆಣ್ಣು ಪ್ರವೇಶ ಪಡೆಯುವುದನ್ನು ದ್ವೇಷಿಸುತ್ತಾಳೆ. ಆದರೆ ಪ್ರತಿಮಾ ಈಗಿರುವ ಸ್ಥಿತಿಯಲ್ಲಿ ಆಕೆ ತನ್ನ ಧೋರಣೆಯನ್ನು ಬದಲಾಯಿಸುವಂತಾಗಿತ್ತು.

ಆಕೆ ತನ್ನ ಕೈಯಲ್ಲಿನ್ನೂ ಹಿಡಿದೇ ಇದ್ದ ಪ್ರತಿಮಾಳ ಫೋಟೋವನ್ನು ಅಲ್ಲಿಯೇ ಹಾಸಿಗೆಯ ಮೇಲಿಟ್ಟು ತನ್ನ ಗಂಡನ ಬಳಿ ಸಾರಿದಳು. ತನ್ನೆರಡೂ ಕೈಗಳಿಂದ ಆತನನ್ನು ಆಲಂಗಿಸಿಕೊಂಡಳು. "ನನಗೆ ನಿಜಕ್ಕೂ ದುಃಖವಾಗಿದೆ ರೋಹಿತ್. ಐ ಆಮ್ ಟೆರಿಬಲೀ ಸಾರಿ."

ಆತ ತಲೆಯೆತ್ತಿ ಆಕೆಯೆಡೆಗೆ ನೋಡಿದ. ತುಂಬಿದ ದುಃಖದಿಂದ ಅದು ಬಾಡಿ ಹೋಗಿತ್ತು. ಪ್ರತಿಮಾ ಸಾಯಬೇಕೆಂದು ಬಯಸುತ್ತಾನೆಯೇ ಆತ ಈ ಹಂತದಲ್ಲಿ? ಆಕೆ ಯೋಚಿಸಿದಳು. ಆದರೆ ಅವನೆಂದ.

"ಯಾಕಾಗಿ ನೀನಾದರೂ ದುಃಖಿಸಬೇಕು ಆಫ್ಟರ್ ಆಲ್ ಆಕೆ ನಿನ್ನ ವೈರಿಯೇ ಆಗಿದ್ದಾಳೆಂದು ತಿಳಿದುಕೊಂಡವಳಲ್ಲವೇ ನೀನು?''

"ಆದರೆ ನನಗೆ ದುಃಖವಾಗಿದೆ.''

ಗಂಭೀರವಾಗಿ ಹೇಳಿದಳು.

ಆಕೆಯ ಕೈಗಳನ್ನು ಬಿಡಿಸಿ ಎದ್ದುನಿಂತ.

"ದೇವರಾಣೆಗೂ ಹೇಳುತ್ತೇನೆ. ನೀನಾಕೆಯ ಪರಿಸ್ಥಿತಿಗಾಗಿ ಮರುಗಬೇಡ. ನನಗದನ್ನು ಊಹಿಸುವುದೂ ಸಾಧ್ಯವಾಗುವುದಿಲ್ಲ.''

ಆಕೆ ಅದನ್ನು ಅರ್ಥ ಮಾಡಿಕೊಳ್ಳಬಲ್ಲವಳಾಗಿದ್ದಳು. ಆಕೆಯನ್ನೀಗ ಅತ ತೊರೆಯುವೆನೆಂದು ಹೇಳಿದರೂ ಪ್ರಿಯಾಗೆ ಸಂತಸವೆನಿಸುವುದಿಲ್ಲ.

"ನಿಮಗೀಗ ಆಸ್ಪತ್ರೆಗೆ ಮರಳಿ ಪ್ರತಿಮಾಳ ಜೊತೆ ಇರಬೇಕೆನಿಸಿದರೆ ದಯವಿಟ್ಟು ಹೋಗಿ. ನಾನು ಆಕ್ಷೇಪವೆತ್ತುವುದಿಲ್ಲ. ಮನಸ್ಪೂರ್ವಕವಾಗಿಯೇ ಈ ಮಾತು ಹೇಳುತ್ತಿದ್ದೇನೆ!'' ಆಕೆಯೆಂದಳು.

ಆದರೆ ಅದಕ್ಕೆ ಪ್ರತಿಯಾಗಿ ಅವನೇನೂ ಹೇಳಲಿಲ್ಲ. ಒಂದಿಷ್ಟುಗೊಂದಲಕ್ಕೊಳಗಾದವನಂತೆ ಕಂಡುಬಂದ ಅವಳಿಗೆ. ಪ್ರಿಯಾ ಮುಂದುವರಿಸಿದಳು.

"ಆಕೆಯ ಸಂಬಂಧಿಕರಾಗಲೀ, ಸ್ನೇಹಿತೆಯರಾಗಲೀ ಇದ್ದಾರೆಯೇ ನಿಮಗೆ ತಿಳಿದಂತೆ?''

"ಯಾರೂ ಇಲ್ಲ ಪ್ರಿಯಾ, ಯಾರೂ ಇಲ್ಲ. ಯಾರೋ ಒಬ್ಬರು ಅತ್ತೆ ಇದ್ದಾರೆಂದು ಕೇಳಿದ್ದೆ. ಆದರೆ ಅವರ ವಿಳಾಸ ತಿಳಿಯದು. ಒಂದೊಮ್ಮೆ ವಿಳಾಸ ಕಂಡು ಹುಡುಕಿ ಆಕೆಯನ್ನು ಕರೆಸಿದರೂ ಆಕೆ ಬಂದು ಇಲ್ಲಿ ಇರಲಾರರೆನಿಸ್ತದೆ. ಆಕೆಯ ಆರೋಗ್ಯವೂ ಅಷ್ಟು ಚೆನ್ನಾಗಿಲ್ಲ ಎಂದು ಪ್ರತಿಮಾಳೇ ಒಮ್ಮೆ ಹೇಳಿದ ನೆನಪು. ಈಗ ಪ್ರತಿಮಾಳನ್ನು ನೋಡಿಕೊಳ್ಳುತ್ತಿರುವ ಡಾಕ್ಟರ್ ಪ್ರಕಾರ ಆಕೆಯ ಜೀವದ ಪ್ರಶ್ನೆ ಕೇವಲ ಕೆಲವೇ ತಾಸುಗಳದು. ಹೆಚ್ಚಿನ ವಿವರವನ್ನೇನೂ ಅವರು ಹೇಳಲಿಲ್ಲ.''

"ಹಾಗಾದರೆ ನೀವೀಗ ಆಸ್ಪತ್ರೆಗೆ ಹೋಗುವುದೇ ಒಳ್ಳೆಯದೆನಿಸುತ್ತದೆ.'' ಪ್ರಿಯಾ ಹೇಳಿದಳು.

ಈಗ ಆತ ತನ್ನ ತುಟಿಗಳಡೆಯಿಂದ ಸಿಗರೆಟನ್ನು ತೆಗೆದು ಆಕೆಯನ್ನೇ ನೋಡಿದ. ಒಂದು ಬಗೆಯ ಆಶ್ಚರ್ಯ ಕಾಣಿಸಿತು ಅವನ ಮುಖದಲ್ಲಿ ಪ್ರಿಯಾ ಅರ್ಥಮಾಡಿಕೊಂಡ ಹಾಗೆ.

"ಓಹ್ ಪ್ರಿಯಾ'' ಅವನೆಂದ. "ಯೂ ಆರ್ ರಿಯಲೀ ಸೋ ಗುಡ್ ಎಬೌಟ್ ದಿಸ್. ನಿನಗೆ ಕೃತಜ್ಞತೆಗಳನ್ನರ್ಪಿಸುತ್ತಿದ್ದೇನೆ ನಾನು.'' ಮತ್ತೇನೂ ಹೇಳದಾದ. ಕಣ್ಣೀರು ಉಕ್ಕಿ ಬಂದುದನ್ನಾಕೆ ಗಮನಿಸಿದಳು.

"ಹೋಗಿ ನೀವೀಗ ಆಸ್ಪತ್ರೆಗೆ.'' ಆಕೆಯೆಂದಳು ಮೂರನೆಯ ಬಾರಿ. "ನನಗೇನೂ ಕೆಟ್ಟದೆನಿಸುವುದಿಲ್ಲ ನಿಮ್ಮಾಣೆಗೂ. ಖಂಡಿತವಾಗಿಯೂ ನನಗೇನೂ ಕೆಟ್ಟದೆನಿಸುವುದಿಲ್ಲ.'' ಹಾಗೆಂದವಳ ದನಿ ಗದ್ಗದಿತವಾಗಿದ್ದುದನ್ನವ ಗಮನಿಸಿದಿರಲಿಲ್ಲ.

ಅವನು ನಿಂತಿದ್ದವನು ಕೂತು ಕಣ್ಣು ಮುಚ್ಚಿದ. ಮುಚ್ಚಿದ ಕಣ್ಣುಗಳಿಗೆ ಬೆರಳನ್ನೊತ್ತಿಕೊಂಡ. "ನನಗೆ ಈಗ ಒಂದಿಷ್ಟು ಗಾಬರಿಯಾಗಿದೆ.''

"ಒಂದಿಷ್ಟು ಬ್ರಾಂದಿ ತರಲೇ, ಕುಡಿಯುತ್ತೀರಾ?''

“ಸುತ್ತಲೀ ದಾರದಲ್ಲಿ ಕಟ್ಟಿದ್ದ ಯಾರ ದಾದರೂ ನೋಟಿನ ಕಂತೆ ಬಿದ್ದುಹೋಗಿ ದ್ದಯೋ?''

“ನಂದು ಬಿದ್ದೋಗಿದ, ನಂದು ಬಿದ್ದೋ ಗಿದ.''

“ನನಗೆ ಸಿಕ್ಕಿರೋದು ಬರೀ ಸುತ್ತಲೀ ದಾರ, ತೊಗೊಳ್ಳಿ!''

— ಎಸ್. ವಿಶ್ವನಾಥ



ಹಾಗೆಂದವಳು ಕೆಳಗಿಳಿದು ಹೋದಳು ಪ್ರಿಯಾ ಆತನ ಉತ್ತರಕ್ಕಾಗಿ ಕಾಯದೆ. ಮರುಕ್ಷಣಗಳಲ್ಲಿ ಫ್ರಿಜ್ಜಿನಿಂದಾಕೆ ಬ್ರಾಂದಿಯ ಬಾಟಲು, ಒಂದಿಷ್ಟು ತಣ್ಣನೆಯ ನೀರಿನೊಂದಿಗೆ ಅಲ್ಲಿಗೆ ಮರಳಿದಳು. ಸ್ವಲ್ಪವೇ ಆತನ ಕೈಗಿತ್ತಳು ಗ್ಲಾಸಿನಲ್ಲಿ ಸುರುವಿ, ಆತ ಕಣ್ಣುಮುಚ್ಚಿ ಹೀರಿದ ಆಕೆ ಕೊಟ್ಟುದನ್ನು.

“ಥ್ಯಾಂಕ್ಸ್ ನಾನೀಗ ಸರಿಯಾಗಿದ್ದೇನೆ.''

“ಅದೊಂದು ಸಣ್ಣ ಶಾಕ್ ಎಂದು ತಿಳಿಯಿರಿ'' ಎಂದಳಾದರೂ ಪ್ರಿಯಾ, ಆ ಹಾಸಿಗೆಯ ಮೇಲಿರಿಸಿದ್ದ ಪ್ರತಿಮಾಳ ಭಾವಚಿತ್ರವನ್ನು ರೋಹಿತ್ ತದೇಕ ದೃಷ್ಟಿಯಿಂದ ನೋಡುತ್ತಿದ್ದುದವಳ ಗಮನಕ್ಕೆ ಬಾರದಿರಲಿಲ್ಲ.

“ನೀವು ಚಿಂತಿಸಬೇಡಿ ರೋಹಿತ್. ನನ್ನ ಬಗ್ಗೆ ನಿಮಗೆ ಅನುಮಾನ ಬೇಡ. ನಿಮ್ಮಂತೇ ಯೋಚಿಸುವವಳಾಗಿದ್ದೇನೆ ನಾನೀಗ. ಅದು ನನ್ನ ಕರ್ತವ್ಯವೂ ಹೌದೆಂದು ನನಗೆ ತಿಳಿದಿದೆ. ಆ ಹುಡುಗಿ ಸಾಯುತ್ತಿದ್ದಾಳೆ ಮತ್ತು ಸಾವನ್ನೆದುರಿಸುತ್ತಿರುವ ಈ ಅಂತಿಮ ಕ್ಷಣಗಳಲ್ಲಿ ಬಹುಶಾ ಆಕೆ ಪ್ರೀತಿಸಿದ್ದ ಓರ್ವನೇ ವ್ಯಕ್ತಿಯಾದ ನಿಮ್ಮ ಸಾಮೀಪ್ಯವನ್ನು ಬಯಸಬಹುದು ಅಥವಾ ನಿಮ್ಮ ಮನಸ್ಸು ಕೂಡ ಹೀಗೆಂದೇ ಹೇಳುತ್ತಿರಬಹುದು. ಅದಕ್ಕೆ ನಾನು ಅಡ್ಡಿ ಬರಲಾರೆ.''

ಆದರೆ ಅದು ನಿಜವಾಗಿಯೂ ಅವಳ ಮನಸ್ಸಿನ ದನಿಯಾಗಿರಲಾರದೆಂದುಕೊಂಡ ರೋಹಿತ್ ಆ ಕ್ಷಣದಲ್ಲಿಯೂ.

“ನನ್ನ ನೋವು ಮತ್ತು ನಷ್ಟಗಳ ಬಗ್ಗೆ ಏನು ಹೇಳುತ್ತೀರಿ ರೋಹಿತ್? ನಾನು ನಿಮ್ಮನ್ನು ಪ್ರೀತಿಸಿದೆ. ನೀವು ಸಂಪೂರ್ಣವಾಗಿ ನನ್ನವರಾಗಿ ಉಳಿಯುತ್ತೀರೆಂದು ಭಾವಿಸಿದೆ. ಮತ್ತು ನಾನು ಕೂಡ ಸಂಪೂರ್ಣವಾಗಿ ನಿಮ್ಮವಳಾಗಿಯೇ ಉಳಿದೆ ಆ ಹುಡುಗಿ ನಮ್ಮಿಬ್ಬರ ನಡುವೆ ಬರುವತನಕ. ಅನಂತರ ಆಕೆ ನಿಮ್ಮನ್ನು ನನ್ನಿಂದ ಕಸಿದುಕೊಂಡಳೆನಿಸುತ್ತದೆ.''

ಆದು ಅವನ ಕಲ್ಪನೆಯಲ್ಲಿ ಮೂಡಿ ಬಂದ ಆಕೆಯ ಮಾತುಗಳಾಗಿತ್ತಷ್ಟೇ. ಅದನ್ನವಳು ಅರ್ಥಮಾಡಿಕೊಂಡವಳಂತೆ ಆತನ ಕೈಗಳನ್ನು ತನ್ನ ಹೆಗಲ ಮೇಲೆ ಹಾಕಿಕೊಂಡಳು.

“ನೀವು ನಿಜವಾಗಿಯೂ ನನಗೆ ಯಾವತ್ತೂ ಪ್ರಾಮಾಣಿಕರಾಗಿಯೇ ಇದ್ದೀರಿ. ಇನ್ನೂ ಇರುತ್ತೀರೆನ್ನುವುದೂ ಗೊತ್ತು.''

"ನಿನ್ನ ವಿಶಾಲ ಮನೋಭಾವವನ್ನೆಂದೂ ಮರೆಯಲಾರೆ ನಾನು'' ಎಂದನವ. "ಆದರೂ ನಾನೀಗ ಆಸ್ಪತ್ರೆಯಲ್ಲಿ ಇರಬೇಕೆನಿಸ್ತಿದೆ.''

"ನೀವು ಹೋಗಿ.''

"ಆದರೆ ಅವರೆಲ್ಲ ನನ್ನನ್ನು ಬಿಡಲಾರರೆನಿಸ್ತದೆ ನಾನಾಕೆಯ ಬಳಿಯೇ ಕುಳಿತುಕೊಳ್ಳಲು.''

"ನಾನು ಬಂದರೆ?''

"ನೀನಾದರೆ ಯಾವ ತೊಂದರೆಯೂ ಆಗಲಾರದು.''

"ನನಗೂ ಬರಬೇಕೆನಿಸುತ್ತಿದೆ.'' ಪ್ರಿಯಾ ಹೇಳಿದಳು ಸರಳವಾಗಿ. "ನಾನು ನಿಮ್ಮ ಜೊತೆ ಬರಲು ಅಪೇಕ್ಷಿಸುತ್ತೇನೆ. ಹೆಚ್ಚು ಹೊತ್ತು ಆಕೆಯ ಬಳಿ ನಾನು ನಿಲ್ಲಬೇಕಾಗಲಾರದು. ಆದರೆ ಇದಿಷ್ಟನ್ನು ಆಕೆಯಲ್ಲಿ ಈಗ ಹೇಳಬೇಕೆಂದು ನನ್ನ ಮನಸ್ಸು ಹಾತೊರೆಯುತ್ತಿದೆ. ಏನೆಂದರೆ ನಿಮ್ಮ ಜೀವನದಲ್ಲಿ ಆಕೆಯ ಪ್ರವೇಶವಾದುದರಿಂದ ನನಗೇನೂ ಖೇದವಾಗಲಿಲ್ಲ ಮತ್ತು ಆಕೆಯ ಸಾವನ್ನು ನಾನಂತೂ ಖಂಡಿತ ಬಯಸಿದವಳಲ್ಲ, ಬಯಸುವವಳೂ ಅಲ್ಲ ಎಂದು ಹೇಳಲು. ಆಕೆ ಸಾಯುವ ಮುಂಚೆ ನನ್ನ ಬಗೆಗೆ ಯಾವುದೇ ಅನುಮಾನಗಳನ್ನಿಟ್ಟುಕೊಳ್ಳದಿರಲಿ ಎನ್ನುವುದೇ ನನ್ನ ಉದ್ದೇಶವಾಗಿದೆ.''

"ಓ ದೇವರೆ.'' ರೋಹಿತ್ ತನ್ನ ತುಟಿ ಕಚ್ಚಿಕೊಂಡ.

"ನಾನು ನಿಮಗೆ ಆಶ್ವಾಸನೆ ಕೊಡುತ್ತೇನೆ.'' ಪ್ರಿಯಾ ಹೇಳಿದಳು ಖೇದದ ಸ್ವರದಲ್ಲಿ. "ನಾನು ನಿಮ್ಮನ್ನು ಕ್ಷಮಿಸಿದೆನೆಂದು ಹೇಳಿ ವ್ಯಕ್ತಿತ್ವವನ್ನು ದೊಡ್ಡದಾಗಿ ಕಾಣಿಸಲು ನಾನು ಹೆಣಗಾಡುತ್ತಿಲ್ಲ. ಬದಲಾಗಿ ಆಕೆ ನನ್ನ ಬಗ್ಗೆ ಶಾಶ್ವತವಾಗಿ ಕೆಟ್ಟ ಅಭಿಪ್ರಾಯವನ್ನು ಹೊಂದದಿರಲಿ, ಆ ಭಾವನೆಯೊಂದಿಗೇ ಹೊರಟು ಹೋಗದಿರಲಿ ಎನ್ನುವ ಸ್ವಾರ್ಥವೂ ಇದೆ ನನ್ನ ವರ್ತನೆಯಲ್ಲಿ ಎಂದು ನಾನು ಪ್ರಾಮಾಣಿಕಳಾಗಿ ಹೇಳುತ್ತಿದ್ದೇನೆ.''

"ಹಾಗೇ ಮಾಡು'' ಎಂದ ರೋಹಿತ್. "ಆದರೆ ನನ್ನ ಮನಸ್ಸು ಇದಕ್ಕೆ ಒಪ್ಪುವುದಿಲ್ಲವಾದರೂ ನಿನ್ನನ್ನು ನೋಯಿಸಬಾರದೆನ್ನುವ ಒಂದೇ ಕಾರಣಕ್ಕಾಗಿ ನಾನು ನಿನ್ನ ಮಾತಿಗೆ ಒಪ್ಪುತ್ತಿದ್ದೇನೆಂದು ತಿಳಿ.''

* * * * *

ಅನಂತರ ಅವರಿಬ್ಬರೂ ಟ್ಯಾಕ್ಸಿ ಮಾಡಿಕೊಂಡು ಆಸ್ಪತ್ರೆಯ ಕಡೆ ಧಾವಿಸಿದರು.

ಕ್ಯಾಜುವಲ್ಟೀಯಲ್ಲಿ ಅವರಿಬ್ಬರನ್ನು ಕಂಡ ಡಾಕ್ಟರ್ ಹೇಳಿದ ಸಂಗತಿ ಮಾತ್ರ ನಿರೀಕ್ಷಿಸಿದ್ದ ಸಂಗತಿಗಿಂತ ಭಿನ್ನವಾಗಿತ್ತು.

ಆಗ ತಾನೇ ಎಚ್ಚರ ಬಂದಿದೆಯಾದರೂ ಪ್ರತಿಮಾಳಿನ್ನೂ ತನಗಾದ/ಪೆಟ್ಟುಗಳಾಗಲೀ ಅಂಗ ವೈಕಲ್ಯದ ಸಾಧ್ಯತೆಗಳಾಗಲೀ ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. "ಆದರೆ ಆಕೆಯ ಸ್ಥಿತಿಯೀಗ ಆಶಾದಾಯಕವಾಗಿದೆ. ತಾನು ಬದುಕಬೇಕೆಂದವಳು ಹಟ ತೊಟ್ಟಂತೆ ಕಾಣುತ್ತದೆ'' ಎಂದರವರು.

"ಬದುಕಿ ಉಳಿಯುವ ಸಾಧ್ಯತೆಗಳಿವೆಯೇ ಸರ್?''

ರೋಹಿತ್ ಕೇಳಿದ.

"ಆದರೂ ಸಂದೇಹ, ಹಾಗೇ ಉಳಿದಿದೆ'' ಎಂದರು ಡಾಕ್ಟರ್. "ಆಕೆ ಸ್ವಲ್ಪ ಮಟ್ಟಿಗೆ ಧೈರ್ಯವಂತೆಯಾದ ಹುಡುಗಿಯೇ ಸಾರ್.''



ಈಗ ಪ್ರಿಯಾ ಅಲ್ಲಿನ್ನೂ ಅರೆಪ್ರಜ್ಞಾವಸ್ಥೆಯಲ್ಲಿ ಮಲಗಿಕೊಂಡೇ ಇದ್ದ ಪ್ರತಿಮಾಳ ಕಡೆ ನೋಡುವಂತಾಯಿತು. ತುಂಬ ಸುಂದರವಾದ ಮುಖದ ತರುಣಿ, ಕಡುಕಪ್ಪು ಕೂದಲುಗಳ ಹಿನ್ನೆಲೆಯಲ್ಲಿ ಮುದ್ದಾಗಿ ಕಾಣಿಸುವ ಗೌರವರ್ಣದ ಆ ಮುಖ.

ಸದಾ ಕಾಲ ಕಂಪ್ಯೂಟರ್‌ನೊಂದಿಗೆ ಆಟವಾಡುತ್ತ ಕೆಲಸ ಮಾಡಿಕೊಂಡಿದ್ದ ಈ ಹುಡುಗಿ ಒಳ್ಳೆಯ ಅವಕಾಶಗಳನ್ನರಸಿಕೊಂಡು ವಿದೇಶಕ್ಕೆ ಹಾರುವವಳಿದ್ದಳು. ಆದರೆ ಎಂಥ ಪರಿಸ್ಥಿತಿ ಎದುರಾಯಿತು.

ಈ ಹುಡುಗಿ ಇನ್ನೂ ಸಣ್ಣ ವಯಸ್ಸಿನವಳು ಎನಿಸಿತು ಪ್ರಿಯಾಗೆ. ನಲ್ವತ್ತರಂಚಿನಲ್ಲಿರುವ ರೋಹಿತ್‌ನ ಯಾವುದು ಈಕೆಯನ್ನು ಆಕರ್ಷಿತೆನ್ನುವುದರ ಬಗ್ಗೆ ಪ್ರಿಯಾ ಒಂದಿಷ್ಟು ಹೊತ್ತು ಯೋಚಿಸಿದಳು. ಸಮಾನವಾದದ್ದು ಯಾವುದೂ ಇರಲಿಲ್ಲ. ಅವರಿಬ್ಬರ ನಡುವೆ ಸ್ನೇಹಕ್ಕೆ ಕಾರಣವಾಗಬಹುದಾದಂತಾದ್ದು. ಹದಿನಾಲ್ಕು ವರ್ಷಗಳ ಹಿಂದೆ ತಾನಾದರೂ ಯಾಕೆ ರೋಹಿತ್‌ನಲ್ಲಿ ಆಕರ್ಷಿಕಳಾದೆ ಎನ್ನುವುದರ ಕುರಿತಾಗಿಯೂ ಯೋಚಿಸಿದಳು ಪ್ರಿಯಾ. ಯೌವನವಾಗಿದ್ದಿರಬಹುದು. ರೋಹಿತ್‌ನಲ್ಲಿ ಆಗ ಇದ್ದ ತುಂಟತನವೂ ಕಾರಣ. ಅಲ್ಲದೆ ಅವರಿಬ್ಬರ ನಡುವಣ ವಯಸ್ಸಿನ ವ್ಯತ್ಯಾಸವೂ ಅಷ್ಟಾಗಿರಲಿಲ್ಲ. ಆದರೆ ಈ ಪ್ರತಿಮಾ?

ಆದರೆ ಅಂಥ ವಿಷಯಗಳ ಮೂಲವನ್ನೆಲ್ಲ ಶೋಧಿಸುತ್ತ ಕೂರುವ ಸಮಯ ಅದಲ್ಲ ಎನ್ನುವುದನ್ನವಳ ಪ್ರಜ್ಞೆ ಎಚ್ಚರಿಸಿ ಹೇಳಿತು. ಈಗವಳ ಸಂಬಂಧ ಸೂಕ್ಷ್ಮತೆಗಳ, ಭಾವಾವೇಶಕ್ಕೆ ಒಳಗಾಗುವಂಥ ಸಂಗತಿಗಳ ಕಡೆ ಲಕ್ಷ್ಯ ಹರಿಸದೆ ಸ್ಥಿತಪ್ರಜ್ಞತೆಯನ್ನು ಕಾಪಾಡಿಕೊಂಡಿರಬೇಕಾದಂಥ ಸಮಯ. ಒಂದು ವಿಷಯವಂತೂ ತನ್ನ ಮತ್ತು ಪ್ರತಿಮಾಳ ನಡುವೆ ಸಮಾನವಾದುದಿತ್ತು ಎನಿಸಿತು ಪ್ರಿಯಾಳಿಗೆ. ಅದೆಂದರೆ ರೋಹಿತ್ ಮೇಲಿನ ಪ್ರೀತಿ.

"ಈಗ ನಾನು ಪ್ರತಿಮಾಳ ಜೊತೆ ಮಾತನಾಡಬೇಕೆಂದರೆ ನರ್ಸ್ ಸಹಾಯ ಬೇಕೆ?''

ಪಿಸುಗುಟ್ಟಿದಳಾಕೆ ರೋಹಿತ್ ಜೊತೆ.

"ಹಾಗೇನಿಸುವುದಿಲ್ಲ, ಮಾತಾಡು'' ಎಂದು ಪ್ರಿಯಾಳ ಕೈಯನ್ನು ಪ್ರತಿಮಾಳ ಕೈಗೆ ಜೋಡಿಸಿದ ರೋಹಿತ್.

ಪ್ರಿಯಾ ತನ್ನ ಕೈಗಳಲ್ಲಿರುವ ಆ ಎಳೆಯ ಜೋಡಿ ಕೈಗಳನ್ನು ನೋಡಿದಳು. ತುಂಬ ತಣ್ಣಗಿರುವಂತೆನಿಸಿತವಳಿಗೆ ಅವು. ಸಣ್ಣಗೆ ಒತ್ತಿದಳು. ತನ್ನ ಹೃದಯದಲ್ಲೆದ್ದ ಒಂದು ಆತ್ಮೀಯ ಅಲೆಯನ್ನಾಕೆ ಹತ್ತಿಕ್ಕದಾದಳು. ಈ ಹುಡುಗಿ ತಾನು ಅತ್ಯಂತ ಪ್ರೀತಿಸುತ್ತಿರುವ ತನ್ನ ಗಂಡನ ಜೀವನದಲ್ಲಿ ತೆಗೆದುಕೊಂಡ ಸ್ಥಾನಮಾನಗಳ ಕಲ್ಪನೆ ಆಗ ಅವಳಿಗೆ ಉಂಟಾಗಲೇ ಇಲ್ಲ. ಆಕೆಯೊಬ್ಬಳು ಇನ್ನೂ ಎಳೆಯ ಪ್ರಾಯದ ಸುಂದರ ಸ್ತ್ರೀ ಎಂದಷ್ಟೇ ಆಗಿತ್ತು ಆಕೆಯ ಭಾವನೆ ಆಗ ಅವಳ ಬಗ್ಗೆ.

ಪ್ರಿಯಾ ಗಿಡದಿಂದ ಜಾರಿದ ಹೂಗಳನ್ನು ಅಷ್ಟು ಇಷ್ಟಪಡುತ್ತಿರಲಿಲ್ಲ. ಬದಲಾಗಿ ಗಿಡದಲ್ಲೇ ಅವು ಇರುವುದನ್ನು ಕಂಡು ಖುಶಿ ಪಡುವವಳು. ಪ್ರತಿಮಾ ಈಗಲೋ ಆಗಲೋ ಉದುರಿ ನೆಲಕ್ಕುರುಳುವ ಸುಂದರ ಹೂವು ಎನ್ನುವ ಕಲ್ಪನೆ ಕಾಡುವ ನೆನಪಾಗಿ ಉಳಿಯಿತು; ದುಃಖವನ್ನುಂಟು ಮಾಡಿತು.

"ಪ್ರತಿಮಾ'' ಆಕೆ ಪಿಸುಗುಟ್ಟಿ ಕರೆದಳು. "ಪ್ರೀತಿಯ ಪ್ರತಿಮಾ, ನಾನು ಏನು ತಾನೇ ಮಾಡಬಲ್ಲೆ ನಿನಗಾಗಿ?''

ಆಗಷ್ಟೇ ತೆರದ ಆ ಜೋಡಿ ಕಣ್ಣುಗಳು ಪ್ರಿಯಾಳನ್ನೇ ಒಂದಿಷ್ಟು ಹೊತ್ತು ನೋಡಿದವು. ಆಕೆಯ ಕೈಯನ್ನು ಹಿಡಿದಿದ್ದ ಪ್ರಿಯಾಳ ಹೃದಯಕ್ಕೆ ಅದೊಂದು ಕಚಗುಳಿ. ನಿಧಾನವಾಗಿ ತೀರಾ ಸಣ್ಣಗಿನ ದನಿಯಲ್ಲಾಕೆ ಉತ್ತರಿಸಲು ಯತ್ನಿಸಿದಳು. ಪ್ರಿಯಾ ಬಾಗಿ ತನ್ನ ಕಿವಿಯನ್ನು ಆಕೆಯ ಮುಖದ ಕಡೆ ಹಿಡಿದಳು.

"ಹಲೋ'' ಆಕೆ ಪಿಸುಗುಟ್ಟಿದಳು.

ಇದೊಂದೇ ಸಣ್ಣ ಸಂಬೋಧನೆ ಪ್ರಿಯಾಳ ಭಾವನೆಗಳ ಮಹಾಪೂರಕ್ಕೆ ಕಾರಣವಾಯಿತು. ತನ್ನದೆ ಒಡೆದೇ ಹೋಗುತ್ತಿದೆಯೇನೂ ಅನಿಸಿತವಳಿಗೆ ಭಾವನೆಗಳು ತುಂಬಿಬಂದು. ಪ್ರತಿಯಾಗಿ "ಹಲೋ'' ಎಂದಳು.

"ಯಾರು ನೀವು?''

"ಪ್ರತಿಮಾ, ರೋಹಿತ್ ಜೊತೆಗೂಡಿಕೊಂಡು ಬಂದಿದ್ದೇನೆ ನಿನ್ನನ್ನು ನೋಡಲು ಮತ್ತು ನಿನಗಾಗಿ ನಮ್ಮಿಂದಾದುದನ್ನೇನಾದರೂ ಒಳ್ಳೆಯದನ್ನು ಮಾಡಲು.''

ಅಲ್ಲೊಂದಿಷ್ಟು ಹೊತ್ತು ಮೌನ ನೆಲೆಸಿತು. ರೋಹಿತ್ ಕಲ್ಲು ಬೊಂಬೆಯಂತೆ ಕುಳಿತಿದ್ದ ಏನೂ ಮಾತನಾಡಲು ಸಾಧ್ಯವಾಗದವನಂತೆ. ಪ್ರತಿಮಾ ಪಿಸುಗುಟ್ಟಿದಳು ಮತ್ತೊಮ್ಮೆ.

"ಅಂದರೆ ನೀವು ರೋಹಿತ್ ಅವರ ಶ್ರೀಮತಿ?''

"ಹೌದು.''

"ಯಾಕೆ?''

"ನಾನೇಕೆ ಬಂದೆ ನಿನ್ನನ್ನು ನೋಡಲಷ್ಟೇ, ಏನಾದರೂ ನಿನಗಾಗಿ ಮಾಡಲು ಒಳ್ಳೆಯದನ್ನು, ನನ್ನಿಂದ ಸಾಧ್ಯವಾದುದನ್ನು.'' ಪ್ರಿಯಾ ಹೇಳಿದಳು. "ನಿನ್ನ ಮತ್ತು ರೋಹಿತ್ ನಡುವಣ ಸಂಬಂಧ ನನ್ನನ್ನೇನೂ ಮಾಡದು. ನಾನು ಆ ಬಗ್ಗೆ ತಲೆಕೆಡಿಸಿಕೊಂಡಿಲ್ಲ.''

ಪ್ರತಿಮಾ ಭಾವನೆಗಳ ತೀವ್ರತೆಯೊಂದಿಗೆ ಹೋರಾಟ ನಡೆಸುತ್ತಿರುವವಳಂತೆ ಕಂಡುಬಂದಳು ಪ್ರಿಯಾಗೆ. ಪ್ರತಿಯಾಗಿ ಕಣ್ಣೀರು ಉಕ್ಕಿ ಬಂದಂತೆ ಕಂಡಿತು. ಏನನ್ನೋ ಹೇಳಲೆಂದು ತುಟಿಯಲುಗಿಸಿದಳು ಪ್ರತಿಮಾ. ಆದರೆ ಶಬ್ದ ಹೊರಬರಲಿಲ್ಲ. ಆಕೆ ಪ್ರಿಯಾಳನ್ನೇ ನೋಡುತ್ತಿದ್ದಳೇ ವಿನಾ ರೋಹಿತ್ ಕಡೆಗಲ್ಲ. ಕೊನೆಗೂ ಆಕೆ ಹೇಳಿದ್ದು ಕೇಳಿಸಿತು ಪ್ರಿಯಾಗೆ.

"ಬಂದಿದ್ದಕ್ಕಾಗಿ ತುಂಬ ಥ್ಯಾಂಕ್ಸ್.''

ಹಾಗೆಂದವಳ ತಣ್ಣಗಿನ ಕೈಯನ್ನು ಮೃದುವಾಗಿ ಅದುಮಿದಳು ಪ್ರಿಯಾ.

"ನಿನಗಾಗಿ ನಾನು ಏನು ಮಾಡಬಲ್ಲೆ? ದಯವಿಟ್ಟು ಹೇಳು ಪ್ರತಿಮಾ, ನಾನು ನಿನಗಾಗಿ ಏನು ಮಾಡಲಿ?''

ಆದರೆ ಪ್ರತಿಮಾ ಆ ಮಾತನ್ನು ನಿರ್ಲಕ್ಷಿಸಿದವಳಂತೆ ಕಂಡಳು.

"ನಾನು ಸಾಯ್ತಾ ಇದ್ದೇನೆ.'' ಸ್ಪಷ್ಟವಾದ ಸ್ವರದಲ್ಲಿ ಆಕೆ ಹಾಗೆಂದು ಹೇಳಿದ್ದು ಕೇಳಿಸಿತು ಪ್ರಿಯಾಗೆ. "ಗೊತ್ತಿದೆಯಾ ನಿಮಗೆ?''

ರೋಹಿತ್ ಬಾಗಿ ಹಾಗೆಂದು ಹೇಳಿದವಳ ಕಡುಕಪ್ಪು ತಲೆಗೂದಲನ್ನು ನೇವರಿಸಿದ. ಪ್ರಿಯಾ ಅವನ ಮುಖವನ್ನೇ ನೋಡಿದಳು. ಉಕ್ಕಿ ಬಂದ ಭಾವನೆಗಳ ತೀವ್ರತೆಯಿಂದ ಕಣ್ಣೀರು ಉಕ್ಕಿ ಬಂತು ಆಕೆಯ ಕಣ್ಣುಗಳಲ್ಲಿ. ತುಂಬ ನೋವು ಅನುಭವಿಸುತ್ತಿರುವವನಂತೆ ಕಂಡು ಬಂದ ರೋಹಿತ್ ಪ್ರಿಯಾಗೆ. ದುಃಖದಿಂದ ಜರ್ಜರಿತನಾದ ರೋಹಿತ್. ಪ್ರತಿಮಾ ಆತನ ಕಡೆ ನೋಡಿ

ನಗಲೆತ್ನಿಸಿದಳು.

"ರೋಹಿತ್ ಧೈರ್ಯ ತಂದುಕೊಳ್ಳಿ." ಆಕೆಯ ಬಾಯಿಯಿಂದ ಬರುವ ಮಾತೇ?" "ಸೋ ನಾವೆಲ್ಲ ಇಲ್ಲಿ ಸೇರಿದೆವು ಕೊನೆಗಾದರೂ."

ಅವನಿಂದ ಮಾತನಾಡಲು ಸಾಧ್ಯವಾಗಲಿಲ್ಲ.

ಮಾತನಾಡಲು ಏನೂ ಇರಲಿಲ್ಲ.

"ಅವರು ನಿನ್ನನ್ನು ತುಂಬ ಪ್ರೀತಿಸ್ತಿದ್ದಾರೆ ಪ್ರತಿಮಾ." ಪ್ರಿಯಾ ಹೇಳಿದಳು. "ನನಗದು ತಿಳಿದಿದೆ."

ಪ್ರತಿಯಾಗಿ ಪ್ರತಿಮಾ ತಾನಿದ್ದ ಸ್ಥಿತಿಯಲ್ಲೇ ನಗಲು ಯತ್ನಿಸಿದಳು.

"ಫನ್ನಿ, ಯೂ ಆರ್ ಮಚ್ ಮಚ್ ನೈಸರ್ ದೇನ್ ಆಯ್. ಸೋ ಕೈಂಡ್."

"ಅಲ್ಲ. ನಾನು ಯಾವತ್ತಿದ್ದರೂ ರೋಹಿತ್ ಜೊತೆ ಜಗಳಾಡಿದವಳೇ."

ಪ್ರತಿಮಾ ತನ್ನ ಕಣ್ಣುಗಳನ್ನು ಮುಚ್ಚಿ ನಿಡಿದಾಗಿ ಉಸಿರು ಬಿಟ್ಟಳು.

"ಇದು ತುಂಬ ದುಃಖದ ಸಂಗತಿಯಾಗಿದೆ. ನಾನು ನಿಮ್ಮ ಜೀವನದಲ್ಲಿ ಬರಬಾರದಾಗಿತ್ತೆಂದು ತಡವಾಗಿಯಾದರೂ ಅನಿಸಿದೆ. ಅದ ಕಾರಣವೇ ಈ ನನ್ನ ಸಾವು."

ಆಕೆ ಮುಂದೇನನ್ನು ಹೇಳುವವಳಿದ್ದಳೋ ಹೇಳದಾದಳು. ಹೇಳಲು ಅವಳಿಂದ ಸಾಧ್ಯವಾಗಿರಲಿಲ್ಲ. ರೋಹಿತ್‌ಗೆ ತೀರಾ ಕೆಡುಕೆನಿಸಿತು. ಎದ್ದು ನಿಂತು ಹೇಳಿದನವ. "ಪ್ರಿಯಾ ನನಗಿದನ್ನು ನೋಡಲು ಸಾಧ್ಯವಾಗುವುದಿಲ್ಲ. ಸ್ವಲ್ಪ ಹೊತ್ತು ಹೊರಗಿರಲೇ?" ಹಾಗೆಂದು ಹೇಳಿ ಬಾಗಿ ಪ್ರತಿಮಾಳ ಗಲ್ಲ ಸವರಿದ ತನ್ನ ತುಟಿಗಳಿಂದ. ಅನಂತರ ಅಲ್ಲಿ ನಿಲ್ಲದೆ ಹೊರ ನಡೆದ.

ಪ್ರಿಯಾ ತಾನೂ ಎದ್ದು ನಿಂತಳು ನರ್ಸ್‌ಳನ್ನು ಕರೆಯಲು. ಆದರೆ ಪ್ರತಿಮಾ ತಡೆದಳು. "ಬೇಡ, ನಾವೇ ಇರೋಣ."

ಪ್ರಿಯಾ ತನ್ನ ಕುರ್ಚಿಯಲ್ಲಿ ಕುಳಿತಳು. ಆ ಹುಡುಗಿಯ ತಣ್ಣನೆಯ ಕೈಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಮತ್ತೆ ಬಾಗಿ ಮುತ್ತಿಕ್ಕಿದಳು ಅವಳ ಕಡುಕಪ್ಪು ಕೂದಲುಗಳಿಗೆ. ಬೆವರಿನಿಂದ ತೊಯ್ದು ಹೋದ ಕೂದಲುಗಳಿಗೆ.

"ನಾನೇನೂ ಮಾಡಲಾರೆನೇ ನಿನಗಾಗಿ ಪ್ರತಿಮಾ. ಬೇಕಿದ್ದರೆ ನನ್ನ ಜೀವವನ್ನೇ ಒತ್ತೆ ಇಡಬೇಕೆನಿಸುತ್ತದೆ ಮನಸ್ಸಿನಲ್ಲಿ."

"ಏನೂ ಬೇಡ." ಪ್ರತಿಮಾ ಪಿಸುಗುಟ್ಟಿದಳು. "ನನ್ನ ಕಾರಣಕ್ಕಾಗಿ ಎಂದೂ ರೋಹಿತ್ ಜೊತೆ ಜಗಳಾಡುವುದಿಲ್ಲ ಎಂದು ಮಾತುಕೊಡಿ. ಅಷ್ಟೇ ಸಾಕು."

ಅದೇ ಕೊನೆಯ ಮಾತುಗಳಾಗಿದ್ದುವು ಪ್ರತಿಮಾ ಆಡಿದುದು ಅನಂತರ ಆಕೆಯ ಮಾತು ಮುಂದುವರಿಯಲಿಲ್ಲ. ಪ್ರಿಯಾ ಗಾಬರಿಯಿಂದ ಸಿಸ್ಟರ್‌ಳನ್ನು ಕರೆದಳು. ಪರೀಕ್ಷಿಸಿದ ನರ್ಸ್ ಗಾಬರಿಯಿಂದ ಹೊರಗೋಡಿ ಡಾ. ಶರ್ಮಾ ಅವರನ್ನು ಕರೆತಂದಳು. ಡಾ. ಶರ್ಮಾ ಪ್ರತಿಮಾಳನ್ನು ಪರೀಕ್ಷಿಸಿದವರೇ ಆಕೆಯ ಉಸಿರಾಟ ನಿಂತು ಹೋಗಿದೆ ಎಂದರು. ಇನ್ನಾಕೆ ಉಸಿರಾಡಲಾರಳೆಂದು.

ಹೂವಿನಂಥ ಸುಂದರ ಹುಡುಗಿ ಪ್ರತಿಮಾ ಅನ್ಯೋನ್ಯವಾಗಿರಬೇಕಾಗಿದ್ದ ಪ್ರಿಯಾ ಮತ್ತು ರೋಹಿತ್ ದಂಪತಿಗಳ ಜೀವನದಲ್ಲಿ ಬಂದು ಬಿರುಗಾಳಿಯೆಬ್ಬಿಸಿದವಳು, ಪ್ರಿಯಾ

ಮತ್ತು ಆಕೆಯ ಮಗ ಗೌತಮ್‌ನಿಗೆ ತಲೆನೋವಾಗಿದ್ದವಳು ಹೇಗೆ ಎಷ್ಟೊಂದು ವಿಚಿತ್ರವೆನಿಸುವ ಸನ್ನಿವೇಶದಲ್ಲಿ ಎಲ್ಲರಿಗೂ ದುಃಖವನ್ನುಳುಸಿ ಹೇಗೆ ಪ್ರಿಯಾಳ ಸಮ್ಮುಖದಲ್ಲೇ ಸಾವಿನ ತೆಕ್ಕೆಯನ್ನು ಸೇರಿಕೊಂಡಳು.

*   *   *   *   *

ಗಂಡ ಹೆಂಡತಿ ಇಬ್ಬರೂ ಪರಸ್ಪರ ಏನನ್ನೂ ಮಾತನಾಡಿಕೊಳ್ಳಲಿಲ್ಲ ಪ್ರತಿಮಾಳ ಅಂತ್ಯ ಸಂಸ್ಕಾರಕ್ಕೆ ಹೋಗಿ ಬಂದವರು.

ಮನೆ ತಲುಪಿದ ತಕ್ಷಣವೇ ರೋಹಿತ್ ತನ್ನ ಕೋಣೆಗೆ ನಡೆದು ಬಾಗಿಲು ಹಾಕಿಕೊಂಡ. ಏಕಾಂಗಿಯಾಗಿರಬಯಸಿದ್ದ ಅವನ ಭಾವನೆಗಳನ್ನು ಗೌರವಿಸಿದ್ದ ಪ್ರಿಯಾ ಎದುರು ಮಾತ ನಾಡಿರಲಿಲ್ಲ.

ಅವಳ ಕಣ್ಣೀರು ಇಂಗಿಹೋಗಿದ್ದುವು.

ಕೆಲವು ದಿನಗಳೇ ಬೇಕಾದುವು ಅವಳಿಗೆ ಪ್ರತಿಮಾಳ ಸಾವಿನ ನೆನಪನ್ನು ಮರೆಯಲು.

ವಾಸ್ತವವಾಗಿ ಪ್ರತಿಮಾ ಆಕೆಗೆ ಏನೂ ಆಗಿರಲಿಲ್ಲ. ರಕ್ತಸಂಬಂಧಿಯಲ್ಲ, ಸ್ನೇಹಿತೆಯಾಗಿದ್ದವಳೂ ಅಲ್ಲ. ಆಕೆಯ ದಾಂಪತ್ಯ ಜೀವನಕ್ಕೆ ದಾಳಿ ಮಾಡಿದ ಪ್ರತಿಸ್ಪರ್ಧಿಯೆಂದು ನಂಬಿ ಗಂಡನೊಂದಿಗೆ ಆಕೆ ಜಗಳಾಡಿದ್ದೆಷ್ಟೋ ಸಾರಿ. ಆದರೆ ಆ ಜಗಳಗಳೆಲ್ಲ ಅರ್ಥಹೀನವಾಗಿದ್ದುವು ಎಂದು ಅವಳಿಗೆ ಅನಿಸಿದ್ದು ಪ್ರತಿಮಾಳ ಸಾವಿನನಂತರವೇ.

ಕ್ರಮೇಣ ಆಕೆ ಪ್ರತಿಮಾಳ ಸಾವಿನ ನೋವನ್ನು ಮರೆಯಬೇಕೆಂದುಕೊಂಡಿದ್ದಳು.

ಆದರೆ ಆಕೆ ಅದನ್ನು ಮರೆಯಲು ಸಾಧ್ಯವಾಗಲೇ ಇಲ್ಲ. ಕಾರಣ ರೋಹಿತ್‌ನ ವರ್ತನೆ.

ಪ್ರತಿಮಾಳ ಸಾವಿನನಂತರ ರೋಹಿತ್ ಸಂಪೂರ್ಣವಾಗಿ ಬದಲಾಗಿದ್ದ. ಆಕೆಯ ನೆನಪನ್ನು ತೊರೆದು ಮತ್ತೆ ಪ್ರಿಯಾಳ ಜೊತೆ ಹಾಯಾಗಿರಲು ಆತನಿಗೆ ಮನಸ್ಸೇನೋ ಇತ್ತು. ಆದರೆ ಅದನ್ನು ಅಷ್ಟು ಸುಲಭವಾಗಿ ಮರೆಯಲು ಅವನಿಂದ ಸಾಧ್ಯವಾಗಲಿಲ್ಲ.

ಆತ ಸೋತು ಪ್ರಿಯಾಳ ಬಳಿ ಬರುತ್ತಿದ್ದ. ಆದರೆ ಪ್ರಿಯಾಳ ಸಾಮೀಪ್ಯ ಪ್ರತಿಮಾಳ ನೆನಪನ್ನು ಮರೆಸುವಷ್ಟು ಪ್ರಭಾವಯುತ ಎಂದು ಅವನಿಗೆ ಅನಿಸದೇ ಹೋಗುತ್ತಿತ್ತು.

ಪ್ರಿಯಾ ಆತನೊಂದಿಗೆ ಹೊಂದಿಕೊಂಡು ಹೋಗಲು ಬಹಳಷ್ಟುಶ್ರಮ ವಹಿಸಿದಳಾದರೂ ಆತ ಹತ್ತಿರ ಬಂದಾಗಲೆಲ್ಲ ತೀರಿಕೊಂಡ ಪ್ರತಿಮಾಳೊಂದಿಗೆ ಅವ ಹೊಂದಿದ್ದ ಸಂಬಂಧದ ನೆನಪಾಗಿ ಮತ್ತೆ ಅವಳ ನಿರ್ಧಾರದಲ್ಲಿ ಬಿರುಕು ಕಾಣಿಸಿಕೊಳ್ಳುತ್ತಿತ್ತು.

ಹೀಗೆ ಅವರಿಬ್ಬರೂ ಗಂಡ ಹೆಂಡತಿಯಾಗಿದ್ದುಕೊಂಡೇ ಒಂದೇ ರೂಂನಲ್ಲಿ ವಾಸಿಸಿದ್ದರೂ ನಿಜ ಅರ್ಥದಲ್ಲಿ ಬಿರುಕು ಬಿಟ್ಟ ಸಂಬಂಧವನ್ನು ಹೊಂದಿದ್ದರು.

ಆದರೂ ತಮ್ಮ ನಡುವೆ ಉಂಟಾದ ಬಿರುಕನ್ನು ಮಗ ಗೌತಮ್‌ನ ಗಮನಕ್ಕೆ ಬಾರದ ರೀತಿಯಲ್ಲಿ ಇಬ್ಬರೂ ನಟಿಸಬೇಕಾಗಿ ಬಂತು. ಯಶಸ್ವಿಯಾಗಿ ನಟಿಸಿದರು ಕೂಡ.

ತಾಯಿ ಪ್ರಿಯಾ ಬರೆಯುತ್ತಲಿದ್ದಳು ತನ್ನ ಮಗನಿಗೆ,

'ನಾವಿಬ್ಬರು ಅಂದರೆ ನಾನು ಮತ್ತು ನಿನ್ನ ತಂದೆ ಈಗ ನಿನ್ನನ್ನೇ ಕುರಿತಾಗಿ ಯೋಚಿಸುತ್ತಲಿದ್ದೇವೆ. ರಜೆ ಸಿಕ್ಕ ತಕ್ಷಣ ನೀನು ಮನೆಗೆ ಬಂದುಬಿಡು. ಈ ಬಾರಿ ಮೈಸೂರು ಬೆಂಗಳೂರು ಎಂದೆಲ್ಲ ಸುತ್ತಾಡಿಕೊಂಡು ಬರೋಣ.'

ಆದರೆ ಹಾಗೆ ಬರೆದವಳಿಗೆ 'ಮಗ ಗೌತಮ್‌ನ ರಜೆಯ ದಿನಗಳು ಆದಷ್ಟು ಮುಂದೆ

ಹೋಗಲಿ' ಎಂದು ಅನಿಸುತ್ತಿತ್ತು. ಯಾಕೆಂದರೆ ಅವನು ರಜೆಯಲ್ಲಿ ಮನೆಗೆ ಬಂದಾಗ ಆತನ ತಂದೆ ಮತ್ತು ತಾಯಿಯ ನಡುವೆ ಏರ್ಪಟ್ಟ ಮಾನಸಿಕ ಕಂದರದ ಅರಿವು ಅವನಿಗೆ ಆಗಿಯೇ ಆಗುತ್ತದೆ.

ಆದರೆ ದಿನಗಳು ನಿಲ್ಲುವುದಿಲ್ಲ.

ಒಂದೆರಡು ಬಾರಿ ಆಕೆ ರೋಹಿತ್ ಜೊತೆ ಈ ಕುರಿತಾಗಿ ಪ್ರಸ್ತಾಪಿಸಿಯೂ ಇದ್ದಳು.

"ಮಗು ಗೌತಮ್ ಮನೆಗೆ ರಜೆಯಲ್ಲಿ ಬರೋ ಸಮಯದಲ್ಲಾದರೂ ನಮ್ಮ ನಡುವಿರಬಹುದಾದ ಭಿನ್ನಾಭಿಪ್ರಾಯ ಬಗೆಹರಿಯಬಹುದೆಂದು ಆಶಿಸೋಣ.''

ಆದರೆ ಅದಕ್ಕವನ ಮೌನವೇ ಉತ್ತರವಾಗಿತ್ತು.

ತನ್ನ ತಾಯಿಯ ಪತ್ರದಲ್ಲಿ ವರ್ಣಿತವಾದ ತಂದೆ ತಾಯಿಯ ದಾಂಪತ್ಯದ ಅನ್ಯೋನ್ಯತೆ ಕೃತಕವಾದುದೆಂದು ಅರಿಯಲಾರದಷ್ಟು ದಡ್ಡನಾಗಿರಲಿಲ್ಲ ಗೌತಮ್.

"ಈ ಬಾರಿ ರಜೆಯಲ್ಲಿ ನೀನು ಮನೆಗೆ ಬರಬೇಡ. ನಾನು ಒಂದು ಆಪರೇಶನ್ ಮಾಡಿಕೊಳ್ಳಬೇಕೆನ್ನುತ್ತಾರೆ ಡಾಕ್ಟರ್. ನಿನ್ನ ಬೇಸಿಗೆ ರಜೆಯ ಹೊತ್ತಿಗೇ ನಾನು ಆಸ್ಪತ್ರೆ ಸೇರಬೇಕಾಗಬಹುದು' ಎಂದು ಬರೆದವಳು ಪ್ರಿಯಾ ತನ್ನ ಮಗನಿಗೆ ಮತ್ತೊಮ್ಮೆ.

ತಮ್ಮಿಬ್ಬರ ನಡುವೆ ತಲೆದೋರಿರುವ ಭಿನ್ನಾಭಿಪ್ರಾಯಗಳು ಮತ್ತು ಸಂಬಂಧದಲ್ಲಿನ ಬಿರುಕು ಗೌತಮ್‌ನ ಪುಟ್ಟ ಮನಸ್ಸನ್ನು ಘಾಸಿಗೊಳಿಸಿತು ಎನ್ನುವ ಎಚ್ಚರದಿಂದ ಆಕೆ ಹಾಗೆ ಬರೆದಿದ್ದಳು. ಆದರೆ ಪತ್ರ ಆ ಹಂತದಲ್ಲಿರುವಾಗ ಕಣ್ಣೀರು ಉಕ್ಕಿ ಬಂದಿತು ಪ್ರಿಯಾಗೆ. ಮನಸ್ಸೀ ಅತ್ತಳು.

ಆ ಸಂಜೆ ಏನೂ ಅಡುಗೆ ಮಾಡದಿರಲು ಯೋಚಿಸಿದ್ದಳು. ರೋಹಿತ್‌ಗೆ ಬೇಕೆನಿಸಿದರೆ ಹೊರಹೋಗಿ ಊಟ ಮಾಡುತ್ತಾನೆ. ತನಗಂತೂ ಬೇಡವಾಗಿದೆ ಹಸಿವಿಲ್ಲ.

ತಲೆಸಿಡಿಯುತ್ತಿದ್ದುದರಿಂದ ಬಿಸಿ ನೀರಿನ ಸ್ನಾನಮಾಡಿ ನಿದ್ರೆ ಮಾತ್ರೆ ನುಂಗಿ ಮಲಗಿದಳು ಪ್ರಿಯಾ, ಬಿಸಿ ನೀರಿನಲ್ಲಿ ಸ್ನಾನ ಮತ್ತು ನಿದ್ರೆಯ ಮಾತ್ರೆ ನುಂಗಿ ಮಲಗಿದ್ದರಿಂದ ನಿದ್ರೆ ಬಹುಬೇಗ ಬಂದು ಕರೆಯಿತು.

ಎಚ್ಚರವಾಗದವಳನ್ನು ನೋಡಿ ಆಕೆಯ ಹತ್ತಿರ ಸರಿದು ಭುಜ ಹಿಡಿದು ಅಲುಗಾಡಿಸಿದ ರೋಹಿತ್.

"ಪ್ರಿಯಾ ಪ್ರಿಯಾ, ಏಳು, ಎಚ್ಚರಗೊಳ್ಳು.''

ಕಣ್ಣು ತೆರೆದು ಆತನತ್ತ ನೋಡಿದಳಾಕೆ ಅರೆತೆರೆದ ಕಣ್ಣುಗಳಲ್ಲಿನ್ನೂ ಮಂಪರು ಹಾಗೇ ಇತ್ತು. ಅದನ್ನವ ಗಮನಿಸಿದ.

"ಏನಿದು, ಏನಾಯ್ತು?''

ಆಕೆ ಪಿಸುಗುಟ್ಟಿದಳು. ಅವನಿಗೆ ಸಮಾಧಾನವಾಯಿತು. "ಥ್ಯಾಂಕ್ ಗಾಡ್?'' ಸಮಾಧಾನದ ಉಸಿರುಬಿಟ್ಟ ರೋಹಿತ್.

ಈಗ ಸಂಪೂರ್ಣ ಎಚ್ಚರಗೊಂಡ ಪ್ರಿಯಾಗೆ ಅದು ತನ್ನ ಬೆಡ್‌ರೂಮ್ ಎನ್ನುವುದು, ಆಗಲೇ ತಿಳಿದದ್ದು ತಾನು ರೋಹಿತ್‌ನ ತೋಳುಗಳಲ್ಲಿರುವುದು. ಕಿಟಕಿಯ ಕರ್ಟನ್‌ಗಳು ಗಾಳಿಗೆ ಹಾರಾಡುತ್ತಲಿರುವುದನ್ನವಳು ಕಂಡಳು ಬೆಡ್ ಲ್ಯಾಂಪಿನ ಬೆಳಕಿನಲ್ಲಿ. ಆಕೆಯ ತೋಳುಗಳನ್ನು ಇನ್ನೂ ಹಿಡಿದುಕೊಂಡೇ ಇದ್ದ ರೋಹಿತ್‌ನ ಮುಖದಲ್ಲಿ ಗಾಬರಿಯನ್ನು

ಗುರುತಿಸಿದಳು.. ಮೌನವಾಗಿ ಕೂತವನ ಮುಖದಲ್ಲಿನ ಭಾವನೆಯನ್ನವಳಿಗೆ ಗುರುತಿಸಲಾಗಲಿಲ್ಲ ಗಾಬರಿಯೊಂದರ ಹೊರತಾಗಿ. ಆದಿನ ಶೇವ್ ಮಾಡಿಕೊಂಡಿದ್ದು ಕೂದಲುಗಳನ್ನು ನೀಟಾಗಿ ಬಾಚಿದ್ದನವ ಅಪರೂಪಕ್ಕೆ ಎನ್ನುವಂತೆ ಸುಂದರನಾಗಿಯೇ ಕಂಡ ಆಕೆಯ ನಿದ್ದೆಗಣ್ಣುಗಳಿಗೆ.

ಆಕೆ ಎದ್ದು ಕುಳಿತಳು.

"ಎಷ್ಟಾಯಿತು ಸಮಯ ಈಗ?" ಕೇಳಿದಳು.

ಆವ ತನ್ನ ಕೈಗಡಿಯಾರ ನೋಡಿಕೊಂಡ.

"ಹತ್ತೂವರೆ ಗಂಟೆ ಆಗಲೆ. ನಾನು ಆಗಲೇ ಬಂದು ಇಲ್ಲಿ ಕೂತಿದ್ದೆ. ಆಗಲಿಂದ ನೀನು ನಿದ್ರಿಸಿಯೇ ಇದ್ದೀ."

"ಹೌದೇನು?"

"ನನಗೂ ನಿದ್ರೆ ಬರುತ್ತಲಿತ್ತು ಎದ್ದು ಹೋಗುವಾಗ ನಿನ್ನನ್ನು ಮತ್ತೊಮ್ಮೆ ನೋಡಿದೆ. ನಿದ್ರೆ ತುಂಬ ಗಾಢವಾಗಿ ಬಂದಿತ್ತು ನಿನಗೆ. ನಿನ್ನ ನಿದ್ರೆಗೆ ತೊಂದರೆ ಕೊಡಬಾರದೆಂದುಕೊಂಡೆ. ಆದರೆ ಒಂದು ಬಾಟಲಿ ಕಣ್ಣಿಗೆ ಬಿತ್ತು ನಿನ್ನ ತಲೆದಿಂಬಿನ ಕೆಳಗೆ ಹೆದರಿಕೆಯಾಯಿತು. ನಿನ್ನ ಕುರಿತಾಗಿ ಹೆದರಿದೆ ಎಂಥ ಹುಚ್ಚ ಆಟ ಇದು, ನಾನೆಷ್ಟು ಹೆದರಿಬಿಟ್ಟಿದ್ದೆ."

ಈಗ ಪ್ರಿಯಾಗೆ ಅರ್ಥವಾಗಿತ್ತು.

ಜೋರಾಗಿ ನಕ್ಕು ಬಿಟ್ಟಳು.

"ಹಾಗೆ ನಗಬೇಡ." ಸಿಟ್ಟಿನಿಂದಲೇ ಹೇಳಿದ.

"ಮತ್ತೇನು ಮಾಡಲಿ ನಗದೆ, ಅಳಬೇಕೇನು?"

"ನನ್ನನ್ನು ಹೆದರಿಸಲು ಈ ಆಟ ಆಡಿದೆಯಾ?" ಆತ ಗದರಿದ. "ಡ್ಯಾಮಿಟ್ ನಾನು ಈಗಷ್ಟೇ ಒಂದು ನೋವಿನಿಂದ ಚೇತರಿಸಿಕೊಳ್ತಾ ಇದ್ದೇನೆ."

"ನನಗೇನಾದರೂ ಆಯಿತೆಂದರೆ ನಿಮಗೆ ದುಃಖವಾಗುತ್ತದೆ ಎಂದು ನಾನಂತೂ ನಂಬುವುದಿಲ್ಲ. ಹಾಗೆಂದು ಹೇಳಬೇಡಿ" ಎಂದು ಹೇಳಿದಳಾದರೂ ಮರುಕ್ಷಣ ತಾನು ಹಾಗೆ ಹೇಳುತ್ತಿರುವುದು ತಪ್ಪು ಎಂದು ಅನಿಸಿರಬೇಕವಳಿಗೆ. ತನ್ನ ಮಾತನ್ನು ತಿದ್ದಿಕೊಳ್ಳುವವಳಂತೆ ಹೇಳಿದಳು. "ಓಹ್ ಆಲ್ ರೈಟ್, ಐ ಆಮ್ ಸಾರಿ. ನಿಮ್ಮನ್ನು ಹೆದರಿಸಿದೆ ನಾನು. ಆದರೆ ಆ ಉದ್ದೇಶ ಹೊಂದಿಯೇನೂ ಅಲ್ಲ. ಮತ್ತು ನಾನು ಸ್ಲೀಪಿಂಗ್ ಪಿಲ್ಸ್ ಓವರ್ ಡೋಸ್ ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ಪೈಕಿ ಅಲ್ಲ ತಿಳಿಯಿರಿ. ನನಗೆ ಬದುಕಬೇಕೆಂಬ ಆಸೆ ಇದೆ. ಸಂಪೂರ್ಣವಾಗಿ ಬದುಕನ್ನು ನಿಜ ಅರ್ಥದಲ್ಲಿ ಅನುಭವಿಸಬೇಕೆಂದು" ಎಂದು ಅವನ ಮುಖವನ್ನೇ ನೋಡಿದಳು.

"ಆದರೆ ನೀನೇನಾದರೂ ಮಾಡಿಕೊಂಡಿಯೋ ಎಂದು ಹೆದರಿದೆ ನಾನು." ಅವನೆಂದ ಸಮಾಧಾನದಿಂದ.

"ಆತ್ಮಹತ್ಯೆ ಮಾಡಿಕೊಳ್ಳಬೇಕಾದಂಥ ಕಷ್ಟಗಳೇನೂ ಇಲ್ಲ ನನಗೆ. ಗೌತಮ್‌ನಂಥ ಮುದ್ದು ಹುಡುಗನ ತಾಯಿ ನಾನು."

ಆ ಮಾತು ಅವನ ಮನಸ್ಸನ್ನೊಂದಿಷ್ಟು ತಟ್ಟಿತು.

ಒಂದು ವೇಳೆ ಪ್ರಿಯಾ ಆತ್ಮಹತ್ಯೆ ಮಾಡಿಕೊಂಡಿದ್ದರೆ ರೋಹಿತ್ ಮುಂದಿನ ಜೀವನದುದ್ದಕ್ಕೂ ಕೊರಗಿಕೊಂಡೇ ಇರಬೇಕಾಗುತ್ತಿತ್ತು ಎನ್ನುವುದವನ ಅರಿವಿಗೆ ಬಂತು. "ಮೊದಲನೆಯದಾಗಿ

ಹೆಂಡತಿಯಾದವಳನ್ನು ವಂಚಿಸಿ ಬೇರೊಬ್ಬ ಹೆಣ್ಣಿನೊಂದಿಗೆ ಸಹವಾಸ ಮಾಡಿದ್ದ ಪಾಪಪ್ರಜ್ಞೆ. ಅದರಿಂದಾಗಿಯೇ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಳೆಂದು. ಎರಡನೆಯದಾಗಿ ಸಾಯುವ ಕೊನೆಯ ಕ್ಷಣಗಳಲ್ಲಿ ಪ್ರತಿಮಾಳ ಬಾಯಿಯಿಂದ ಬಂದಿದ್ದ ಮಾತುಗಳನ್ನು ನೆರವೇರಿಸದಿರುವುದಕ್ಕಾಗಿ ಅವಳೇನೆಂದು ಹೇಳಿದ್ದಳು?

"ನಾನೇನೂ ಮಾಡಲಾರನೇ ನಿನಗಾಗಿ ಪ್ರತಿಮಾ?"

ಆಕೆಯ ಅಂತಿಮ ಕ್ಷಣದಲ್ಲಿ ಪ್ರಿಯಾ ಕೇಳಿದ್ದ ಪ್ರಶ್ನೆ ಅದು. "ಬೇಕಿದ್ದರೆ ನನ್ನ ಜೀವವನ್ನೇ ಒತ್ತೆ ಇಡಬೇಕೆನಿಸುತ್ತದೆ ನನಗೆ" ಎಂದಿದ್ದಳು.

ಆಗ ಸಾವಿನ ಸನಿಹದಲ್ಲೂ ಪ್ರತಿಮಾ ಹೇಳಿದ್ದೇನು?

"ಏನೂ ಬೇಡ." ಎಂದು ಪಿಸುಗುಟ್ಟಿದ್ದಳು. "ನನ್ನ ಕಾರಣಕ್ಕಾಗಿ ಜಗಳಾಡುವುದಿಲ್ಲ ಎಂದು ಮಾತು ಕೊಡಿ ಅಷ್ಟೇ ಸಾಕು."

ಅದನ್ನವ ಪ್ರಿಯಾಳಿಂದಲೇ ಕೇಳಿ ತಿಳಿದಿದ್ದ.

ಅಂದರೆ ಏನು ಆಕೆಯ ಮಾತುಗಳ ಅರ್ಥ?

ತನ್ನ ನೆನಪಿನಿಂದಾಗಿ ಪ್ರಿಯಾಳನ್ನು ಹಿಂಸಿಸಬಾರದೆಂದು ಆತನಿಗೆ ಪ್ರತಿಮಾ ಕೊಟ್ಟ ಸಂದೇಶವಲ್ಲವೇ ಅದು ಪರೋಕ್ಷವಾಗಿ?

ಅವನ ಮನಸ್ಸೊಂದಿಷ್ಟು ಮೃದುವಾಯಿತು.

"ನನ್ನನ್ನು ಮಿಸ್ ಮಾಡಿಕೊಳ್ಳುತ್ತೀ ಎಂದು ನಿನಗನಿಸುವುದಿಲ್ಲವಾ?" ಕೇಳಿದನವ ಹೆಂಡತಿಯನ್ನು.

"ಎಂಥ ಮಾತು, ಎಲ್ಲಾದರೂ ಉಂಟೇ? ನನ್ನನ್ನು ಮದುವೆಯಾಗಿ ಇಷ್ಟು ವರ್ಷಗಳ ಕಾಲ ನನ್ನ ಜೊತೆ ಜೀವನ ಸಾಗಿಸಿದ್ದವರಿಂದ ಇಂಥ ಪ್ರಶ್ನೆ. ನೀವು ನನಗೆ ಎಲ್ಲವೂ ಹೌದು. ನನಗೊಂದು ಆಸರೆ, ನನಗೊಬ್ಬ ಯಜಮಾನ, ನನಗೊಬ್ಬ ಪ್ರೇಮಿ ಎಲ್ಲವೂ. ಆದರೆ ಒಂದನ್ನು ಮಾತ್ರ ನೀವು ಸದಾಕಾಲ ನೆನಪಿನಲ್ಲಿಟ್ಟುಕೊಳ್ಳಬೇಕು. ನಾನೊಬ್ಬಳು ದಾಸಿಯಾಗಲು ಇಷ್ಟಪಡಲಿಲ್ಲ. ಏನೋ ಎಲ್ಲೋ ಒಂದು ಸೂಕ್ಷ್ಮ ಎಳೆ ತಪ್ಪಿರಬಹುದೆನಿಸುತ್ತದೆ ನನಗೆ ನಮ್ಮಿಬ್ಬರ ನಡುವೆ."

ಆ ಮಾತಿಗೆ ಅವ ಮೌನವಾಗಿದ್ದ ಕೆಲಹೊತ್ತು.

"ನನಗೊಬ್ಬಳು ದಾಸಿ ಬೇಕಾಗಿರಲಿಲ್ಲ. ನಿನ್ನನ್ನು ದಾಸ್ಯದಲ್ಲಿಡಲೂ ನಾನು ಪ್ರಯತ್ನಿಸಲಿಲ್ಲ ಎಂದೂ."

ಪ್ರಿಯಾ ಎದ್ದು ಮುಖ ತೊಳೆದುಕೊಂಡಳು.

ಮೃದುವಾದ ಸ್ವರದಲ್ಲಿ ಹೇಳಿದಳವಳು.

"ಬನ್ನಿ, ಕೆಳಗಿಳಿದು ಹೋಗೋಣ. ಫ್ರಿಜ್ಜಿನಲ್ಲೊಂದಿಷ್ಟು ಜ್ಯೂಸ್ ಇರಬೇಕು. ಜೊತೆಯಾಗಿ ಕುಡಿಯೋಣ. ಊಟ ಮಾಡಬೇಕೆನಿಸಿದರೆ ಅಡುಗೆ ಮಾಡುತ್ತೇನೆ. ಮೊಟ್ಟೆಗಳಿವೆ, ಆಮ್ಲೆಟ್ ಮಾಡುತ್ತೇನೆ. ಈ ದಿನವೂ ಜಗಳಾಡುವುದು ಬೇಡ ನಾವು. ಅಂಥ ಜಗಳವನ್ನಾಕೆ ಖಂಡಿತವಾಗಿಯೂ ಇಷ್ಟಪಟ್ಟಿರಲಿಲ್ಲ."

ಹಾಗೆಂದು ಹೇಳಿದವಳ ಅಗಲವಾದ ಕಣ್ಣುಗಳನ್ನೇ ದಿಟ್ಟಿಸಿದ ರೋಹಿತ್. ಅವು ನೀರಿನ ಕೊಳಗಳಾಗಿದುವು.

"ಯಾರು ಇಷ್ಟ ಪಟ್ಟಿರಲಿಲ್ಲ?"

"ಪ್ರತಿಮಾ."

ಮೌನವಾದ ಅವ ಆ ಮಾತು ಕೇಳಿ.

"ಪ್ರತಿಮಾ, ನಿನಗವಳು ಏನಾಗಬೇಕು?"

ಹಾಗೆಂದು ಕೇಳಿದವನ ಕಡೆ ತಿರುಗಿದಳು ಪ್ರಿಯಾ.

"ಇದು ತುಂಬ ವಿಚಿತ್ರವಾದ ಪ್ರಶ್ನೆಯೇ ಆಗಿದೆ. ನಿಜಕ್ಕೂ ವಿಚಿತ್ರವಾದ ಪ್ರಶ್ನೆ. ಅಂದು ಆಸ್ಪತ್ರೆಯ ಹೊರಗೆ ನೀವು ನಿಂತಿದ್ದೀರಿ. ನಾನು ಆಕೆಯ ಜೊತೆಗೇ ಇದ್ದೆ."

ಆತ ನಿಂತು ಕೇಳುತ್ತಿದ್ದ ಮೌನವಾಗಿ ಆಕೆಯೆನ್ನುತ್ತಿದ್ದುದನ್ನು. ಹೆಣ್ಣನ್ನು ಅರ್ಥಮಾಡಿಕೊಳ್ಳುವಲ್ಲಿ ಅವನು ಹೇಗೆ ಎಲ್ಲಿ ಸೋಲುತ್ತಿದ್ದಾನೆಂದು ಆಕೆ ಪದೇ ಪದೇ ಅವನೊಂದಿಗೆ ಹೇಳುತ್ತಿದ್ದುದು ನೆನಪಾಯಿತವನಿಗೆ. ಅದನ್ನೇ ಪ್ರತಿಮಾ ತನ್ನ ಸಾವಿನ ಸಂದರ್ಭದಲ್ಲೂ ಪ್ರಿಯಾಳ ಜೊತೆ ಹೇಳಿದ್ದಳು ಪರೋಕ್ಷವಾಗಿ, ತುಂಬ ಮಾರ್ಮಿಕವಾಗಿ.

ಪ್ರಿಯಾ ಆತನ ಕೈ ಹಿಡಿದು ಬಾಗಿಲ ಕಡೆ ಎಳೆದಳು. "ಬನ್ನಿ ಕೆಳಗೆ ಹೋಗೋಣ. ಮುಂದೆ ನಮ್ಮ ನಡುವೆ ಏನು ಬೇಕಾದರೂ ಸಂಭವಿಸಲಿ. ಆದರೆ ಈ ದಿನದ ಮಟ್ಟಿಗೆ ಸ್ನೇಹಿತರಾಗಿಯೇ ಇರೋಣ.

ಅವನ ಮನಸ್ಸೇ ಅವನಿಗೆ ಅರ್ಥವಾಗಲಿಲ್ಲ. ಆಕೆಯ ಅಂಥ ವರ್ತನೆಯನ್ನಾತ ಪ್ರೀತಿಸಿದನೆ ಅಥವಾ ದ್ವೇಷಿಸಿದನೇ ಎಂದು. ಆದರೆ ಆಕೆ ಹೇಳಿದ್ದಂತೆ ಸ್ನೇಹದ ಅವಶ್ಯಕತೆಯಂತೂ ಇತ್ತವನಿಗೆ ಆ ಕ್ಷಣಗಳಲ್ಲಿ. ತನ್ನ ಮನಸ್ಸಿನಾಳದ ನೋವುಗಳನ್ನು ಮರೆಸಲು ಸಹಾಯ ಹಸ್ತ ಚಾಚುವಂಥ ಸ್ನೇಹ.

ಅವರಿಬ್ಬರೂ ಜೊತೆಯಾಗಿ ಕೆಳಗಿಳಿದರು.

ಆಕೆಯೆಂದಂತೆ ಕೆಳಗೆ ಫ್ರಿಜ್ಜಿನಲ್ಲಿ ಒಂದಿಷ್ಟು ಜ್ಯೂಸ್ ಇದ್ದಿತ್ತು. ಇಬ್ಬರೂ ಗ್ಲಾಸುಗಳಿಗೆ ಸುರುವಿಕೊಂಡು ಜೊತೆಯಾಗಿ ಕುಡಿದರು. ಒಂದಿಷ್ಟು ಮೊಟ್ಟೆಗಳಿದ್ದುವು. ಆಕೆ ಅವುಗಳನ್ನು ಸುಲಿದು ಕರಿದು ಆಮ್ಲೆಟ್ ಮಾಡಿದಳು. ಅಡುಗೆಯನ್ನೂ ಮಾಡಿದಳು. ತಮ್ಮ ಹಳೆಯ ದಿನಗಳ ನೆನಪುಗಳನ್ನು ಮೆಲುಕು ಹಾಕುತ್ತ, ಸ್ಕೂಲಿನಲ್ಲಿ ಓದುತ್ತಲಿರುವ ಮಗ ಗೌತಮ್‌ನ ವಿಷಯವಾಗಿ ಮಾತನಾಡುತ್ತ ಕಳೆದರು. ಗೌತಮ್ ಇತ್ತೀಚೆಗೆ ತನ್ನ ತಂದೆಗೆ ಬರೆದಿದ್ದ ಪತ್ರದ ವಿಷಯವಾಗಿಯೇ ಅವರಿಬ್ಬರು ಹೆಚ್ಚು ಹೊತ್ತು ಮಾತನಾಡಿದರೆನ್ನಬೇಕು. ತಾನು ತನ್ನ ತಂದೆಯಂತೆಯೇ ಆಗಬೇಕೆಂದಾತ ತನ್ನ ಪತ್ರದಲ್ಲಿ ತೋಡಿಕೊಂಡಿದ್ದ. "ಇತ್ತೀಚೆಗೆ ನಾನು ಕೇಳಿದ ಅತ್ಯಂತ ಮಹತ್ವದ ಸುದ್ದಿಗಳಲ್ಲಿ ಅದೂ ಒಂದು" ಎಂದ ರೋಹಿತ್ ಗೌತಮ್‌ನ ತಾಯಿಯ ಜೊತೆ. ಹಾಗೆ ಹೇಳುತ್ತಿದ್ದವನನ್ನೊಮ್ಮೆ ತಲೆಯೆತ್ತಿ ಆತ್ಮೀಯವಾಗಿ ನೋಡಿದಳು ಪ್ರಿಯಾ.

ಅನಂತರ ಅದೆಷ್ಟೋ ಹೊತ್ತು ಮಾತನಾಡುತ್ತ ಕುಳಿತರವರು. ಆತ್ಮೀಯವಾಗಿ ಕಳೆದ ಆ ಕ್ಷಣಗಳು ಅತ್ಯಂತ ಪ್ರಿಯವಾಗಿದ್ದುವು ಪ್ರಿಯಾಳ ಪಾಲಿಗೆ. ರೋಹಿತ್ ತನ್ನ ಕುರ್ಚಿಯಿಂದೆದ್ದು ಹೊರ ನಡೆದ. ಮತ್ತೆ ತಾನು ಅದೇ ಏಕಾಂತದ ಸ್ಥಳಕ್ಕೆ ಹೋಗಬೇಕೆನಿಸಿತ್ತು ಅವನಿಗೆ. ತಮ್ಮಿಬ್ಬರ ನಡುವಣ ಮಾತುಗಳೆಲ್ಲ ಕೃತಕವಾಗಿ ಕಂಡಿತು.

ತನ್ನ ಮನಸ್ಸಿನ ಪರಿಯೇ ವಿಚಿತ್ರವೆನಿಸಿತವನಿಗೆ ಆ ಕ್ಷಣದಲ್ಲಿಯೂ. 'ತಾನೀಗ ಏನು ಮಾಡುತ್ತಿದ್ದೇನೆ' ಅವನೆಂದುಕೊಂಡ. 'ಪ್ರಿಯಾಳಂಥ ಮುಗ್ಧ ಮಹಿಳೆಯನ್ನು ಹೀಗೆ

ವಂಚಿಸುತ್ತಿರುವುದು ತನ್ನ ವ್ಯಕ್ತಿತ್ವಕ್ಕೆ ಘನತೆ ತರವಾದುದೇ?' ಎಂದು.

ತನ್ನ ಕೋಣೆಗೆ ಹೋದ ರೋಹಿತ್ ಕಾಟಿನ ಮೇಲೆ ಕುಳಿತು ಕಣ್ಣು ಮುಚ್ಚಿದ. ಪ್ರತಿಮಾ ತೀರಿಕೊಂಡನಂತರ ತನಗಾಕೆಯ ಪರಿಚಯ ಮಾಡಿಕೊಟ್ಟ ಸ್ನೇಹಿತನಿಗೆ ಫೋನ್ ಮಾಡಿ ತಿಳಿಸಿದ್ದಾಗ ಆತನ ಪ್ರತಿಕ್ರಿಯೆಯ ನೆನಪಾಯಿತವನಿಗೆ. "ಸಾವು ಸಾಮಾನ್ಯವಾಗಿ ಎಲ್ಲರೂ ಎದುರಿಸಲೇಬೇಕಾದ ಸಂಗತಿ.'' ಒಂದು ಬಗೆಯ ಒಣ ತಾತ್ವಿಕತೆಯ ಧೋರಣೆಯಾಗಿತ್ತವನದು. 'ಅಷ್ಟೊಂದು ಸುಂದರಿಯಾದ ಸ್ತ್ರೀಯೊಬ್ಬಳ ಸಾವಿನ ಬಗ್ಗೆ ಆತ ಹಾಗೆ ಪ್ರತಿಕ್ರಿಯಿಸುವುದೇ?' ಎಂದೂ ಅನಿಸಿತ್ತು.

ಹಾಗಾದರೆ ಪ್ರೀತಿಯೆಂದರೆ ಏನು?

ಸುಳ್ಳು.

ಏನೂ ಇಲ್ಲ.

ಯಾರು ಯಾರನ್ನೂ ಪ್ರೀತಿಸುವುದಿಲ್ಲ ನಿಜ ಅರ್ಥದಲ್ಲಿ. ಮನುಷ್ಯ ಹೆಚ್ಚಾಗಿ ಪ್ರೀತಿಸುವುದು ತನ್ನನ್ನೇ ಹೊರತು ಬೇರೆಯವರನ್ನಲ್ಲ. ಅನಂತರ ತನ್ನ ಹೆಂಡತಿ, ಮಕ್ಕಳ ವಿಷಯದ ಕುರಿತಾಗಿ ಯೋಚಿಸುತ್ತಾನೆ.

ನಾಳೆಯಿಂದ ಅವನು ತನ್ನದೇ ಆದ ವೃತ್ತಿಯ ಕಡೆ ಮುಖ ಮಾಡುತ್ತಾನೆ. ಪ್ರಿಯಾಳ ಕ್ಷಮೆಯ ನೆರಳಿನಲ್ಲಿ ಮತ್ತೆ ಮನೆಗೆ ಬರುವ ಹೊಸ ಹೊಸ ಪಾರ್ಟಿಗಳನ್ನು ಭೇಟಿಯಾಗುತ್ತಾನೆ. ಅವರೊಂದಿಗೆಲ್ಲ ಚರ್ಚಿಸುತ್ತಾನೆ. ಆ ಮೂಲಕ ಪ್ರತಿಮಾಳ ಸಾವಿನ ದುಃಖವನ್ನು ಮರೆಯ ಲೆತ್ನಿಸುತ್ತಾನೆ.

ಇಷ್ಟೇನೇ ಪ್ರೀತಿಯೆಂದರೆ?

ಅಲ್ಲಿ ಡ್ರಾವರಿನೊಳಗಿದ್ದ ಎರಡು ಫೋಟೋಗಳನ್ನು ನೋಡಿದ ರೋಹಿತ್. ಅವು ಪ್ರತಿಮಾಳ ಭಾವಚಿತ್ರಗಳಾಗಿದ್ದುವು. ಒಂದು ಬಗೆಯ ನೋವು ಕಾಣಿಸಿಕೊಂಡಿತವನ ಎದೆಯಲ್ಲಿ. ಆಕೆ ಆಡಿದ ಮಾತುಗಳ ನೆನಪಾಯಿತು. ಆ ಫೋಟೋಗಳನ್ನು ಹಿಡಿದಿದ್ದ ಕೈಬೆರಳುಗಳು ಸುಟ್ಟು ಹೋಗುತ್ತಿರುವಂತೆ ಭಾಸವಾಯಿತು. ಮತ್ತೊಂದು ಚಿತ್ರವನ್ನೆತ್ತಿಕೊಂಡ ಅವ. ಅದು ಆತನ ಮಗಳು ಗೌರಿಯದಾಗಿತ್ತು. ತೀರಿಕೊಂಡ ಮಗಳು ಗೌರಿ. ಆ ಚಿತ್ರವನ್ನು ಹಿಡಿದುಕೊಂಡ ಕೈ ಬೆರಳುಗಳು ನಡುಗುತ್ತಿದ್ದುವು.

ಗೌರಿ ಮತ್ತು ಪ್ರತಿಮಾಳ ಫೋಟೋಗಳೆರಡನ್ನೂ ಹೋಲಿಸುವವನಂತೆ ಜೊತೆಯಾಗಿ ಹಿಡಿದ ರೋಹಿತ್.

'ಇಬ್ಬರನ್ನೂ ಕಳೆದುಕೊಂಡ ತಾನು' ಎನಿಸಿತವನಿಗೆ.

ಈ ಇಬ್ಬರ ನಡುವೆ ಇರುವ ಸಮಾನ ಹೋಲಿಕೆಗಳೇ ತನ್ನನ್ನವಳ ಕಡೆ ಆಕರ್ಷಿಸುವಲ್ಲಿ ಪ್ರಧಾನ ಪಾತ್ರ ವಹಿಸಿದುವು ಎನ್ನುವ ಕಟು ಸತ್ಯದ ಅರಿವಾಯಿತು.

ಎಷ್ಟೋ ಹೊತ್ತು ಯೋಚಿಸುತ್ತ ಕುಳಿತನವ ಆ ಎರಡೂ ಫೋಟೋಗಳನ್ನು ನೋಡುತ್ತ.

ಅನಂತರ ಒಂದು ನಿರ್ಧಾರಕ್ಕೆ ಬಂದವನಂತೆ ಎದ್ದು ನಿಂತ. ಕೆಳಗಿಳಿದು ಹೋದ.

"ಪ್ರಿಯಾ, ನಿನ್ನ ಜೊತೆ ಸ್ವಲ್ಪ ಮಾತನಾಡಲಿದೆ ನನಗೆ.''

ಮಾತು ಕೇಳಿ ಹೊರಬಂದಳು ಪ್ರಿಯಾ ಅಡುಗೆ ಮನೆಯಿಂದ. ತುಂಬಾ ದಣಿದವಳಂತೆ ಕಂಡು ಬಂದಳು ಅವನಿಗೆ.

"ಏನು?"

"ಪ್ರಿಯಾ" ಹಾಗೆಂದು ಮಾತನ್ನಾರಂಭಿಸಿದವನು ಸುಮ್ಮನಾದ.

"ಏನು ಹೇಳಿ ರೋಹಿತ್."

ಅವನ ಮುಖ ಕೆಂಪೇರಿತು, ತಡವರಿಸಲಾರಂಭಿಸಿದ್ದ.

"ಪ್ರಿಯಾ ನಾನೊಂದು ವಿಷಯ ನಿನಗೆ ಹೇಳಬೇಕಾಗಿದೆ."

"ಹೇಳಿ, ಏನು?"

"ನನಗೆ ಗೊತ್ತಿಲ್ಲ." ಆತ ತಡವರಿಸಿದ. "ನನಗೆ ಗೊತ್ತಿಲ್ಲ."

ಆಕೆ ಆಳವಾಗಿ ಉಸಿರೆಳೆದುಕೊಂಡಳು. ಆದರೆ ಆತನ ಬಗ್ಗೆ ಕನಿಕರವೇನಾಗಲಿಲ್ಲ. ಇಂಥ ನಿರಾಶೆಯನ್ನಾತ ಆಕೆಯ ಮೇಲೆ ಹೇರಿಯೇ ಆಕೆಯ ಜೀವನವನ್ನು ಹಾಳು ಮಾಡಿದ್ದು. ಆದರೆ ಈ ಸಮಯ ಆತನ ಬಗ್ಗೆ ಆಕೆ ಸಹಾನುಭೂತಿಯನ್ನು ಹೊಂದಲೇಬೇಕಾಗಿದೆ. ಅವನೇನು ಹೇಳ ಹೊರಟಿದ್ದಾನೆನ್ನುವುದವಳಿಗೆ ತಿಳಿದಿದೆ. ಆ ಹುಡುಗಿಯ ವಿಷಯವಾಗಿ ಅಲ್ಲದೆ ಮತ್ತೇನನ್ನು?

"ನಿಮಗೆ ಹೇಳಲಾಗದಿದ್ದರೆ ಈಗೇನೂ ಹೇಳಬೇಡಿ ರೋಹಿತ್. ತೀರಿಕೊಂಡ ಪ್ರತಿಮಾಳ ವ್ಯಕ್ತಿತ್ವ ಉಜ್ವಲವಾಗಿತ್ತು. ಆದರೆ ಅದು ಸಾವಿನೊಂದಿಗೆ ಪರ್ಯವಸಾನಗೊಂಡಿದೆ."

"ನಾನು ಮುಖ್ಯವಾಗಿ ಹೇಳ ಹೊರಟಿದ್ದುದು ಆಕೆಯ ಕುರಿತಾಗಿ ಅಲ್ಲ."

"ಮತ್ತೆ ಯಾರ ಕುರಿತಾಗಿ?"

ಆತ ಒಂದಿಷ್ಟು ಹೊತ್ತು ಆಕೆಯ ಕಣ್ಣುಗಳನ್ನೇ ದಿಟ್ಟಿಸಿದ. 'ತನ್ನ ತಪ್ಪನ್ನು ಆಕೆಯ ಒಂದು ಜೊತೆ ಕಣ್ಣುಗಳು ಆಗಲೇ ಕಂಡು ಹಿಡಿದಿವೆ' ಎನಿಸಿತವನಿಗೆ ಯಾಕೋ.

ನಡುಗುತ್ತಿತ್ತು ಮಾತನ್ನಾರಂಭಿಸಿದವನ ದನಿ. "ನಾನು ಗೌರಿಯ ಕುರಿತಾಗಿ ಹೇಳಬೇಕಾಗಿದೆ. ಈಗ ನಿನಗಿದನ್ನು ಸ್ಪಷ್ಟಪಡಿಸಬಯಸುತ್ತೇನೆ ಏನನ್ನು ಸ್ಪಷ್ಟಪಡಿಸ ಬಯಸುತ್ತೇನೆಂದರೆ..."

"ಏನನ್ನೂ ಹೇಳಬೇಡಿ" ಆಕೆಯೆಂದಳು. "ಈ ರಾತ್ರಿ ನನ್ನ ನಿದ್ದೆಯನ್ನು ಹಾಳು ಮಾಡಬೇಡಿ."

"ಆದರೆ ನಾನು ಹೇಳಲೇ ಬೇಕಾಗಿದೆ. ನನ್ನ ಮನಸ್ಸಿನಲ್ಲಿರುವುದನ್ನು ನಿನ್ನ ಬಳಿ ಹೇಳದೇ ಉಳಿದೆನೆಂದರೆ ನನಗೆ ಹುಚ್ಚ ಹಿಡಿದೀತೆನಿಸುತ್ತದೆ."

ಪ್ರಿಯಾ ಮೌನವಾಗಿದ್ದಳು.

"ಆದರೆ ನಾನು ಹೇಳಿದೆನಾದರೆ ನೀನದನ್ನು ನಂಬುವುದಿಲ್ಲ. ಆದರೂ ಸತ್ಯವಾದುವನ್ನೇ ಹೇಳುತ್ತಿದ್ದೇನೆ. ನಮ್ಮ ಮಗಳು ಗೌರಿಯ ಸಾವು ಉಂಟಾದುದು ನಿನ್ನ ನಿರ್ಲಕ್ಷ್ಯದಿಂದಲ್ಲ ಎನ್ನುವುದು ನನಗೆ ಮನದಟ್ಟಾಗಿತ್ತು. ಆದರೂ ನಾನು ಆ ಕುರಿತಾಗಿ ಬೈವಾಡುತ್ತಿದ್ದೆ, ಯಾಕೆ ಗೊತ್ತೆ? ನಾನು..."

"ದಯವಿಟ್ಟು ಏನನ್ನೂ ಹೇಳಬೇಡಿ."

"ಆದರೆ ನಾನು ಹೇಳಲೇಬೇಕು."ಹಟ ಹಿಡಿದವನಂತ ಹೇಳಿದ. "ಹೇಳದೇ ಉಳಿದೆನಾದರೆ ನಾನು ಸತ್ತೇ ಹೋದೇನೆನಿಸುತ್ತದೆ, ಕೇಳು."

"ನಾನೇ ಹೇಳುತ್ತೇನೆ. ಪ್ರತಿಮಾಳನ್ನು ಮೊದಲ ಬಾರಿಗೆ ಕಂಡಾಗ ಆಕೆಯ ಕಣ್ಣುಗಳ ಹೋಲಿಕೆ ನಿಮಗೆ ತೀರಿಕೊಂಡ ಮಗಳು ಗೌರಿಯ ಕಣ್ಣುಗಳನ್ನು ನೆನಪಿಸಿದುವು ಅಲ್ಲವಾ?"

"ಹೌದು, ನನ್ನ ಮನಸ್ಸನ್ನು ಹೇಗೆ ಅರ್ಥಮಾಡಿಕೊಂಡೆ ನೀನು?"

"ನಿಮ್ಮ ಹೆಂಡತಿಯಾಗಿರುವುದರಿಂದಾಗಿ. ನಿಮ್ಮನ್ನು ಅರ್ಥಮಾಡಿಕೊಂಡು ಇಷ್ಟೊಂದು ವರ್ಷಗಳ ಕಾಲ ನಿಮ್ಮ ಜೊತೆ ಜೀವನ ಮಾಡಿಕೊಂಡ ಅನುಭವದಿಂದಾಗಿ.''

"ನನಗೀಗ ಅರ್ಥವಾಯಿತು ಪ್ರಿಯಾ.''

ತಾನು ಸೋತೆನೆನ್ನುವುದನ್ನು ಒಪ್ಪಿಕೊಂಡವನಂತೆ ಹೇಳಿದನವ.

"ಪ್ರೇಮ ಪ್ರೀತಿ ಇವೆಲ್ಲ ಬರೀ ಕುರುಡಾಗಿರುತ್ತವೆ. ಇದನ್ನು ಈಗಲಾದರೂ ಅರ್ಥ ಮಾಡಿಕೊಂಡಿದ್ದೀರಲ್ಲ.''ಅವಳು ಆತನನ್ನು ತನ್ನೆಡೆಗೆ ಎಳೆದುಕೊಂಡಳು. "ಶಾಶ್ವತವಾಗಿ ನಿಲ್ಲುವಂಥದು ಈ ಭ್ರಮೆಯ ಪೊರೆಗಳಿಂದ ಕಳಚಿಕೊಂಡ ವರ್ತನೆಗಳು ಮಾತ್ರ. ಅದನ್ನು ಕರ್ತವ್ಯ ಎಂದು ಬೇಕಾದರೂ ಕರೆಯಬಹುದು.''

"ಅಂದರೆ ಗಂಡ ಹೆಂಡತಿಯ ಸಂಬಂಧಗಳ ನಡುವೆ ಇರುವುದು?''

"ಪ್ರೀತಿ ಪ್ರೇಮ ಎಂದು ಭ್ರಮಿಸುವ ಆಕರ್ಷಣೆಗಳು ಹೊರಟುಹೋದ ಮೇಲೆ ಉಳಿಯುವುದು ಕರ್ತವ್ಯ ಪ್ರಜ್ಞೆ ಮಾತ್ರ.''

"ಹಾಗಾದರೆ ನೀನು ನನ್ನನ್ನು ಕ್ಷಮಿಸುತ್ತೀಯಾ?'' ಆಕೆಯನ್ನೇ ನೋಡುತ್ತ ಕೇಳಿದನವ.

"ಕ್ಷಮೆ ಎಂದರೇನೆನ್ನುವುದರ ಅರ್ಥ ನನಗೇ ಗೊತ್ತಿಲ್ಲ.'' ಪ್ರಿಯಾ ನಕ್ಕಳು. "ನಾನು ಮರೆಯಬಲ್ಲೆನಷ್ಟೆ.''

"ಯಾರನ್ನು, ನನ್ನನ್ನೇ?''

"ಎಂದಾದರೂ ಸಾಧ್ಯವಿದೆಯೇ ನಾವು ಒಬ್ಬರನ್ನೊಬ್ಬರು ಮರೆಯುವುದೆಂದರೆ? ಅದೂ ನಮ್ಮ ನಡುವೆ ಗೌತಮ್‌ನಂಥ ಒಬ್ಬ ಮಗನಿರುವಾಗ.''

"ನನ್ನ ಕಣ್ಣು ತೆರೆಸಿದ್ದೀ ನೀನು ಪ್ರಿಯಾ'' ಎಂದ ರೋಹಿತ್ ಗದ್ಗದಿತ ಸ್ವರದಲ್ಲಿ. "ನನ್ನನ್ನಾವರಿಸಿದ್ದ ಭ್ರಮೆಯ ಪೊರೆ ಹರಿದು ಹೋಯಿತು. ದಾಂಪತ್ಯದಲ್ಲಿ ಗಂಡ ಹೆಂಡತಿ ನಡುವೆ ಇರಬೇಕಾದ್ದು ಪರಸ್ಪರರ ಮಟ್ಟಿಗೆ ಇರುವ ಕರ್ತವ್ಯ ಪ್ರಜ್ಞೆ ಮಾತ್ರ ಎನ್ನುವುದನ್ನು ನನಗೆ ಮನದಟ್ಟು ಮಾಡಿದ್ದೀ.''

"ನಂಬಿಕೆ?'' ಪ್ರಿಯಾ ಕೇಳಿದಳು.

"ಅದು ಕೂಡ ಮುಖ್ಯವಾದದ್ದು, ಪರಸ್ಪರರ ಮಟ್ಟಿಗೆ.''

"ಹಾಗಾದರೆ ನಾನು ಗೆದ್ದೆ'' ಎಂದಳು ಪ್ರಿಯಾ ತನ್ನ ಗಂಡನ ತೋಳಲ್ಲಿ ಸೇರಿಕೊಳ್ಳುತ್ತ. "ಈಗಲೇ ಗೌತಮ್‌ನಿಗೆ ಕಾಗದ ಬರೆಯಲೇ?''

"ಏನೆಂದು.''

"ಕೂಡಲೇ ಹೊರಟು ಬಾ ಎಂದು ಹೇಳಿ.''

"ಬೇಡ'' ಎಂದ ರೋಹಿತ್ ಆಕೆಯ ತಲೆಗೂದಲನ್ನು ತುಟಿಗಳಲ್ಲಿ ಸವರುತ್ತ. "ನಾವೇ ಹೋಗೋಣ ನಾಳೆ ಬೆಳಿಗ್ಗೆ ಸ್ಕೂಲಿಗೆ ಅವನನ್ನು ಒಂದೆರಡು ದಿನಗಳ ಮಟ್ಟಿಗೆ ಕರೆತರಲು. ಸ್ಕೂಲಿನ ಹೆಡ್‌ಮಾಸ್ತರ್ ಶಿವರಾಮ್ ಸೆಟ್ಟಿ ಅವರು ನಮ್ಮಿಬ್ಬರ ಹಿತೈಷಿ ಅಲ್ಲವೇ? ಅವರನ್ನೂ ಕಂಡು ಒಂದಿಷ್ಟು ಮಾತನಾಡಲಿದೆ.''

ಪ್ರಿಯಾ ಮಾತನಾಡಲಿಲ್ಲ ಪ್ರತಿಯಾಗಿ. ಹಾಗೇ ಹೇಳಿದ್ದ ಗಂಡನ ತೋಳುಗಳಲ್ಲಿ ಸೇರಿಕೊಂಡಳು ತೃಪ್ತಿಯಿಂದ ತುಂಬಿಬಂದ ಹೃದಯದ ಭಾವನೆಗಳು ಹಾಡಲಾರಂಭಿಸಿದ್ದವು ನವಜೀವನ ಗಾನವನ್ನು.

ಮ್ಯಾಗಜಿನ್

ವಿಭಾಗ

ಸಣ್ಣ ಕಥೆ

ಅನಿರೀಕ್ಷಿತ

ಬಿ. ಆರ್. ಕುಲಕರ್ಣಿ

ಪ್ರಿಯ ಓದುಗರೆ,

ಈ ಕತೆಯಲ್ಲಿ ಬರುವ ನಾಯಕ ಒಬ್ಬ ಸಭ್ಯ ವ್ಯಕ್ತಿ. ಎಲ್ಲರಿಂದಲೂ ಒಳ್ಳೆಯವನು ಎನ್ನಿಸಿಕೊಳ್ಳಬೇಕೆಂಬ ಬಯಕೆಯುಳ್ಳ ಭಾವನಾ ಜೀವಿ. ಯಾರಿಂದಲೂ ಕೆಟ್ಟವನು ಅಂತ ಅನ್ನಿಸಿಕೊಳ್ಳದ ಮುಗ್ಧ ಮಾನವ. ಇದೇನಪ್ಪಾ ಈತ ಪ್ರಾರಂಭದಲ್ಲಿ ಪುರಾಣ ಬಿಚ್ಚುತ್ತಿದ್ದಾನಲ್ಲ ಅಂತ ಕೋಪಿಸಿಕೊಳ್ಳಬೇಡಿ. ಈ ಮುಗ್ಧ ಪ್ರಾಣಿಯ ಜೀವನದಲ್ಲಾದ ಅನಿರೀಕ್ಷಿತ ಘಟನೆಯನ್ನು ನಿಮಗೆ ಹೇಳ ಬಯಸುತ್ತೇನೆ.

ನಮ್ಮ ಕಥಾ ನಾಯಕ ಆನಂದನಿಗೆ ಯಾರಾದರೂ ನೀನು ಬಹಳ ಒಳ್ಳೆಯವನು ಅಂದ್ರೆ ಬಹಳ ಖುಶಿಯಾಗುತ್ತಿತ್ತು. ತನ್ನ ಸರಳ ಸುಂದರ ನಡತೆಯಿಂದ ಆಫೀಸಿನಲ್ಲಿ ಬಹಳ ದಕ್ಷ ಹಾಗೂ ಒಳ್ಳೆಯ ಆಫೀಸರ್ ಅಂತ ಈತನ ಹೆಸರುಗಳಿಸಿದ್ದ. "ಬಾಳಿನಲ್ಲಿ ಬರುವುದೊಮ್ಮೆ ಸರಸ ಸಮಯ ಮನುಜಗೆ'' ಎಂಬ ಕವಿವಾಣಿಯಂತೆ ಈತ ಬಾಳಿನಲ್ಲಿ ಅಂತಹ ಸರಸ, ಸಮಯ ಕೂಡಿ ಬಂದಿತ್ತು. ಅದು ಹೇಗೆ ಅಂತೀರಾ? ಇವನು ಕೆಲಸ ಮಾಡುವ ಆಫೀಸಿನಲ್ಲಿ ಒಬ್ಬ ಸರಳ ಸುಂದರ ಹುಡುಗಿ ಟೈಪಿಸ್ಟಾಗಿ ಬಂದಾಗ ಆ ಸಮಯ ಬಂದಿತ್ತು. ಆಫೀಸಿನಲ್ಲಿ ಹಿರಿಯ ಅಧಿಕಾರಿಯಾಗಿದ್ದ ನಮ್ಮ ನಾಯಕ ತನ್ನ ಸಹೋದ್ಯೋಗಿಗಳಿಂದ ಪ್ರಾಮಾಣಿಕ ದಕ್ಷ ಅಧಿಕಾರಿ ಹಾಗೆಯೇ ಸಹೃದಯಿ ಮನುಷ್ಯ ಅಂತ ಹೆಸರು ಗಳಿಸಿದ್ದ. ಆಫೀಸಿನಲ್ಲಿ ಇನ್ನೂ ಇಬ್ಬರು ಹೆಂಗಸರು ಕೆಲಸ ಮಾಡುತ್ತಿದ್ದರೂ ಈತ ಅವರ ಬಗ್ಗೆ ಯಾವುದೇ ರೀತಿಯ ಭಾವನೆಗೆ ಒಳಗಾಗದೆ ಇದ್ದು ಬಿಟ್ಟಿದ್ದ. ಆದರೆ ಇತ್ತೀಚೆಗೆ ಹೊಸದಾಗಿ ಆವನ ಆಫೀಸಿಗೆ ಬಂದ ಲಕ್ಷ್ಮಿ ಆವನ ಚಿತ್ತವನ್ನು ಚಂಚಲಗೊಳಿಸಿದ್ದಳು. ಲಕ್ಷ್ಮಿ ತನ್ನ ಹೆಸರಿನ ಹಾಗೆ ಅಷ್ಟೇನೂ ಸಿರಿವಂತಳಾಗಿರಲಿಲ್ಲ. ಮಧ್ಯಮ ವರ್ಗದ ಕುಟುಂಬದಿಂದ ಬಂದ ಆಕೆ ಎಲ್ಲರೊಂದಿಗೆ ನಗುನಗುತ್ತ ಸಲಿಗೆಯಿಂದ ವರ್ತಿಸುತ್ತ ಎಲ್ಲರ ಮನವನ್ನು ತನ್ನೆಡೆ ಆಕರ್ಷಿಸಿಕೊಂಡಿದ್ದಳು. ತನ್ನ ಸರಳ ಶುದ್ಧ ಸೌಂದರ್ಯದಿಂದ ಹಾಗೂ ಕರಾರುವಾಕ್ಕಾಗಿ ಕೆಲಸ ಮಾಡುವುದರಿಂದ ತನ್ನ ಹಿರಿಯ ಅಧಿಕಾರಿ ಆನಂದನನ್ನು ತುಸು ಹೆಚ್ಚಾಗಿಯೇ ಆಕರ್ಷಿಸಿದ್ದಳು. ಅವಳ ಸರಳ ಉಡುಗೆ, ಎಲ್ಲರೊಂದಿಗೆ ಸರಳವಾಗಿ ಬೆರೆತು ಮಾತಾಡುವ ರೀತಿ, ಮೋಹಕ ನಗೆ, ಸುಂದರವಾದ ಮುಖ ಇವೆಲ್ಲ ಆನಂದನ ಮನದಲ್ಲಿ ಸಂತಸದ ಅಲೆಯನ್ನು ಚಿಮ್ಮಿಸುತ್ತಿದ್ದವು. ಆಕೆಯ ಸೌಂದರ್ಯವನ್ನು ತನ್ನ ಕಣ್ಣುತುಂಬ ಸವಿಯಲು ಆನಂದ ಆಗಾಗ ಆಕೆಯನ್ನು ತನ್ನ ಚೇಂಬರಿಗೆ ಕರೆಸಿ ಏನಾದರೊಂದು ಡಿಕ್ಟೇಶನ್ ಕೊಡುತ್ತಿದ್ದ. ಸರಳ ಉಡುಗೆಯ ಸುಂದರ ಯುವತಿ ತನ್ನ ತಲೆ ತಗ್ಗಿಸಿಕೊಂಡು ತಾನು ಹೇಳಿದ್ದನ್ನೆಲ್ಲ ಬರೆದುಕೊಳ್ಳುವುದನ್ನು ನೋಡುವುದೇ ಆವನಿಗೆ ಸಂತಸದ ವಿಷಯವಾಗಿತ್ತು. ಈ ಸೌದರ್ಯವತಿ ತನ್ನ ಮನದೊಡತಿಯಾದರೆ ಹೇಗೆ ಎಂದು ಆನಂದ ಆಗಾಗ ಯೋಚಿಸುತ್ತಿದ್ದ. ಹೀಗೆ ದಿನದಿಂದ ದಿನಕ್ಕೆ ಆನಂದ ಲಕ್ಷ್ಮಿಯನ್ನು ಮನದಲ್ಲಿ ಪ್ರೀತಿಸುತ್ತ ಆವಳಿಗರಿವಿಲ್ಲದಂತೆ ಆಕೆಯಲ್ಲಿ ಅನುರಕ್ತನಾಗಿದ್ದ. ಇಲ್ಲಿಂದಲೇ ಆತನ ತೊಂದರೆಗಳು ಪ್ರಾರಂಭವಾಗಿದ್ದವು. ಹೇಗೆ ಅಂತೀರಾ? ಇವನೊ ಆಫೀಸಿನಲ್ಲಿ ಹಿರಿಯ ಅಧಿಕಾರಿ ಮೇಲಾಗಿ ಎಲ್ಲರಿಂದ ಒಳ್ಳೆಯವನು ಅಂತ ಬಿರುದು ಸಂಪಾದಿಸಿದಾತ. ಅದ್ಹೇಗೆ ಓರ್ವ ಟೈಪಿಸ್ಟ್ ಹತ್ತಿರ ನಾನು ನಿನ್ನನ್ನು ಪ್ರೀತಿಸುತ್ತೇನೆ ಅಂತ ಬಾಯಿಬಿಟ್ಟು ಹೇಳಿಯಾನು.

ಎಲ್ಲರಿಂದ ಒಳ್ಳೆಯವ ಎನಿಸಿಕೊಂಡದ್ದೇ ತಪ್ಪಾಯಿತು. ಪ್ರೀತಿಸಿದ್ದನ್ನೂ ಹೇಳುವಂತಿಲ್ಲ. ಆದರೆ ಅದಕ್ಕೂ ಕಾಲ ಕೂಡಿ ಬಂತು.

ನಾನು ಹೀಗೆ ಹೇಳಿದರೆ ಅವಳಿಗೆ ತಪ್ಪು ತಿಳಿಯುತ್ತಾಳೋ ಎಂಬ ಅಳುಕು ಇವನಲ್ಲಿತ್ತು. ಒಂದು ವೇಳೆ ಧೈರ್ಯಮಾಡಿ ತಾನು 'ನಿನ್ನನ್ನು ಪ್ರೀತಿಸುತ್ತೇನೆ' ಅಂದಾಗ ಅವಳು ಸಿಡಿದುಬಿದ್ದು ಏನ್ರೀ, ಏನೋ ಹಿರಿಯ ಅಧಿಕಾರಿ, ಬಹಳ ಒಳ್ಳೆಯವರು ಅಂತ ಸ್ವಲ್ಪ ಸಲಿಗೆಯಿಂದ ವರ್ತಿಸಿದರೆ ನೀವು ಈ ರೀತೀನಾ ನಡೆದುಕೊಳ್ಳುವುದು ಅಂತ ಎಲ್ಲರೆದುರು ತನ್ನ ಗೌರವಕ್ಕೆ ತೊಂದರೆ ತಂದರೆ ಹೇಗೆ ಅಂತ ಮನದಲ್ಲಿ ಭೀತಿಗೊಂಡಿದ್ದ. ಹೀಗಾಗಿ ಅವನು ಪ್ರೀತಿ ವಿಷಯವನ್ನು ಲಕ್ಷ್ಮಿಯ ಎದುರು ಹೇಳಲು ಆಗದೆ ಒದ್ದಾಡುತ್ತಿದ್ದ. ಹೀಗೆ ಕಾಲಚಕ್ರ ಉರುಳುತ್ತಲೆ ಇತ್ತು. ಈತ ಮಾತ್ರ ತನ್ನ 'ಒನ್‌ವೇ ಟ್ರಾಫಿಕ್' ಪ್ರೀತಿಯನ್ನು ಲಕ್ಷ್ಮಿಗೆ ಹೇಳಲೆ ಇಲ್ಲ. ಕಾಲ ಯಾವುದಕ್ಕೂ ಕಾಯುವುದಿಲ್ಲ ನೋಡಿ ಅದು ಸರಿದು ಹೋಗುತ್ತಲೇ ಇತ್ತು.

ಒಂದು ದಿನ ನಮ್ಮ ನಾಯಕ ತನ್ನ ರೂಮಿನಲ್ಲಿ ಒಬ್ಬನೆ ಕುಳಿತು ತನ್ನ ಒಮ್ಮುಖ ಪ್ರೀತಿಯನ್ನು ಹೇಗಾದರೂ ಮಾಡಿ ಲಕ್ಷ್ಮಿಗೆ ತಿಳಿಸಲೇಬೇಕೆಂದು ಯೋಚಿಸುತ್ತಿದ್ದ. ಹೀಗೆ ಆತ ತನ್ನ ಯೋಚನೆಯಲ್ಲಿ ತಲ್ಲೀನನಾಗಿರುವಾಗ ಯಾರೋ ಕೋಣೆಯ ಬಾಗಿಲನ್ನು ತಟ್ಟಿದ ಶಬ್ದವಾಯ್ತು. ಹೋಗಿ ಬಾಗಿಲು ತೆರೆದವ ಆಶ್ಚರ್ಯದಿಂದ ಹಾಗೆ ನಿಂತುಬಿಟ್ಟ 'ನೆನೆದವರ ಮನದಲ್ಲಿ' ಎಂಬಂತೆ ಲಕ್ಷ್ಮಿಯೇ ಆತನೆದುರು ನಗುತ್ತ ನಿಂತಿದ್ದಳು. ಆಶ್ಚರ್ಯವೆನಿಸಿದರೂ ಆತ ಸುಧಾರಿಸಿಕೊಂಡು ಆಕೆಯನ್ನು ಒಳಗೆ ಕರೆದು ಕುಳಿತುಕೊಳ್ಳಲು ತಿಳಿಸಿದ. "ನೋಡಿ ಲಕ್ಷ್ಮಿಯವರೆ ನಿಮ್ಮ ಬಗ್ಗೆಯೇ ಯೋಚಿಸುತ್ತಿದ್ದೆ. ಅಷ್ಟರಲ್ಲಿ ನೀವೇ ಬಂದ್ರಿ" ಅಂದಾಗ ಆಕೆ ಸಂತಸವೆನಿಸಿದರೂ ತೋರಿಸಿಕೊಳ್ಳದೆ "ಅದ್ಯಾಕೆ ಸರ್, ನನ್ನ ನೆನಪಿಸಿಕೊಂಡ್ರಿ" ಅಂದಳು. ಆಗ ತಡಬಡಿಸುವ ಪಾಳಿ ಈತನದಾಗಿತ್ತು. ನಿಮ್ಮ ಜೊತೆ ಬಹಳ ಮಾತಾಡೋದಿದೆ ಅಂದು ಈತ ಒಮ್ಮೆಲೆ ಸುಮ್ಮನಾಗಿಬಿಟ್ಟ. ಆಗ ಲಕ್ಷ್ಮಿ "ಸರ್, ನನ್ನ ಜೊತೆ ಆ ಮೇಲೆ ಬೇಕಾದಷ್ಟು ಮಾತಾಡುವಿರಂತೆ. ಈಗ ಮೊದಲು ಪತ್ರಿಕೆ ತೆಗೆದುಕೊಳ್ಳಿ. ಮುಂದಿನ ತಿಂಗಳು ನನ್ನ ಮದುವೆ ನೀವು ಖಂಡಿತವಾಗಿ ಬರಬೇಕು ಸಾರ್. ನನಗೀಗ ಬಹಳ ಕೆಲಸವಿದೆ. ನಾನು ಬರುತ್ತೇನೆ ಅಂತ ಒಂದೆ ಉಸುರಿಗೆ ಹೇಳಿ 'ಲಗ್ನಪತ್ರಿಕೆ' ಕೊಟ್ಟು ಮುಗುಳುನಗುತ್ತಲೆ ಹೊರಟು ಹೋದಳು.

ಪತ್ರಿಕೆ ಕೈಯಲ್ಲಿ ಹಿಡಿದ ಆನಂದನಿಗೆ ನಿಜಕ್ಕೂ ಆಘಾತವಾಗಿತ್ತು. ಯಾವ ಹೆಣ್ಣನ್ನು ಅಷ್ಟೊಂದು ಪ್ರೀತಿಸದ ಆತ ಲಕ್ಷ್ಮಿಯನ್ನು ಮಾತ್ರ ತುಂಬ ಗಾಢವಾಗಿ ಪ್ರೀತಿಸಿದ್ದ. ಅದನ್ನು ಆಕೆಯ ಎದುರು ಹೇಳಿಕೊಳ್ಳಬೇಕೆಂದು ಅನೇಕ ಸಾರಿ ಪ್ರಯತ್ನಿಸಿದ್ದರೂ ಸಹ ಅಸಹಾಯಕ ಸ್ಥಿತಿಯಿಂದ ಹೇಳಲಾರದೆ ಹೋಗಿದ್ದ. ಹೀಗಾಗಿ ಆತ ಪ್ರೀತಿಸಿದ ಹುಡುಗಿ ಇನ್ನೊಬ್ಬನ ಮಡದಿಯಾಗುವಳು ಅಂತ ತಿಳಿದಾಗ ಸ್ವಲ್ಪ ಹೆಚ್ಚಿಗೆ ನಿರಾಶೆಗೊಂಡಿದ್ದ. ತನ್ನ ದೌರ್ಬಲ್ಯವನ್ನು ಹಳಿದುಕೊಳ್ಳುತ್ತ ಲಕ್ಷ್ಮಿಯನ್ನು ವರಿಸುವ ಅದೃಷ್ಟವಂತ ಯಾರಿರಬಹುದು ನೋಡೋಣ ಅಂತ ಆಕೆ ಕೊಟ್ಟ ಲಗ್ನಪತ್ರಿಕೆಯನ್ನು ಒಡೆದು ನೋಡಿದಾಗ ಇವನಿಗೆ ಇನ್ನಷ್ಟು ಅಚ್ಚರಿಯಾಯ್ತು. ಅದರಲ್ಲಿ ಲಗ್ನಪತ್ರಿಕೆಯ ಬದಲು ಒಂದು ಪತ್ರವಿತ್ತು. ಪ್ರೀತಿಯ ಆನಂದರಿಗೆ,

ಲಕ್ಷ್ಮಿಯ ವಂದನೆಗಳು. ನನ್ನನ್ನು ನೀವು ಮನದಲ್ಲಿ ಪ್ರೀತಿಸುವ ವಿಷಯ ನಮ್ಮ ಆಫೀಸಿನ ಸಹುದ್ಯೋಗಿಗಳಿಂದ ನನಗೆ ತಿಳಿದು ಬಂತು. ನಾನು ಸನಿಹ ಬಂದಾಗ ನಿಮ್ಮಲ್ಲಾಗುವ ಬದಲಾವಣೆಗಳನ್ನು ನಾನು ಗಮನಿಸುತ್ತಲೇ ಬಂದಿರುವೆ. ನನ್ನನ್ನು ಕಂಡರೆ ನಿಮಗೆ ಅದೆಷ್ಟು ಅಭಿಮಾನ ನಿಮ್ಮ ಪ್ರೀತಿಯನ್ನು ನೀವು ಮನದಲ್ಲೆ ಕೊರಗುವುದನ್ನು ಅನೇಕ ಸಲ ಕಂಡಿದ್ದೇನೆ. ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ನಾವು ಪ್ರೀತಿಸುವುದಕ್ಕಿಂತ ನಮ್ಮನ್ನು ಪ್ರೀತಿಸುವವರನ್ನು ಮದುವೆಯಾಗಬೇಕಂತೆ. ಯಾವ ಹೆಣ್ಣು ತಾನು ಪ್ರೀತಿಸುವ ಅಂತ ಬಾಯಿ ಬಿಟ್ಟು ಹೇಳಲಾರಳು. ಆದ್ರೆ ನಾನು ಸ್ವಲ್ಪ ನಾಚಿಕೆ ಬಿಟ್ಟು ನಿಮಗೆ ಹೇಳುತ್ತಿರುವೆ. ನಿಮ್ಮನ್ನು ನಾನು ಮನಸಾರೆ ಪ್ರೀತಿಸುತ್ತಿರುವೆ. ನನ್ನ ಪ್ರೀತಿಗೆ ನಿಮ್ಮ ಒಪ್ಪಿಗೆಯಿದ್ದರೆ ಯಾವ ಅಳುಕು ಇಲ್ಲದೆ ಧೈರ್ಯವಾಗಿ ತಿಳಿಸಿ ಮುಂದಿನ ತಿಂಗಳಲ್ಲಿ ಮದುವೆಯಾಗೋಣ. ನನ್ನ ಈ ಮೊಂಡು ಧೈರ್ಯ ನಿಮಗೆ ತಪ್ಪೆನಿಸಿದರೆ ಕ್ಷಮಿಸಿಬಿಡಿ.

ಇಂತಿ ನಿಮ್ಮ
ಲಕ್ಷ್ಮಿ

ಅನಿರೀಕ್ಷಿತವಾಗಿ ಮೂಡಿ ಬಂದ ಈ ಆಮಂತ್ರಣ ಆನಂದನಲ್ಲಿ ಬಹಳ ಧೈರ್ಯ ತಂದು ಕೊಟ್ಟಿತು. ಮರುದಿನ ಆತ ತನ್ನ ಚೇಂಬರಿಗೆ ಲಕ್ಷ್ಮಿಯನ್ನು ಕರೆಸಿ ತನ್ನ ಮನದಿಂಗಿತವನ್ನು ತಿಳಿಸಿದ. ಇನ್ನು ಕೆಲವೇ ದಿನಗಳಲ್ಲಿ ಆನಂದ, ಲಕ್ಷ್ಮಿಯವರ ಮದುವೆ ಇದೆ. ನೀವು ಬರುತ್ತೀರಿ ತಾನೆ ಮದುವೆಗೆ?

ಪ್ರಿಯ ಓದುಗರೆ, ನಿಮಗೂ ಇಂತಹ ಅನಿರೀಕ್ಷಿತ ಸಂದರ್ಭ ಒದಗಿ ಬಂದರೆ ನೀವೇನು ಮಾಡುವಿರಿ?

ಧಾರಾವಾಹಿ-೨

ಚೈತ್ರ ಚಂದನ



ಯು. ವಿ. ತಾರಿಣಿ ರಾವ್

"ಅಮ್ಮಾವ್ರೆ ಇವರೆಲ್ಲ ನೀರು ಹಾವುಗಳು. ಒಂದೆರಡು ಕೊಳಕು ಮಂಡಲಗಳೂ ಇವೆ.''

"ಚೆಲುವಿ ಎಲ್ಲ ನಿಂಗೊತ್ತ.''

"ನಾಹುಟ್ಟಿ ಬೆಳದದ್ದೇ ಇಲ್ರವ್ವ. ಅದೋ ಆ ಗುಡಿಸಲಿವೆ ನೋಡ್ರಿ ಅದೇ ನಮ್ಮ ಹಟ್ಟಿ''

ಗಿರಿಕನ್ಯೆಯ ಪಾರ್ಶ್ವದಲ್ಲಿ ಶಾಂಭವಿ ನಿಲಯದ ಹಿಂಭಾಗದಲ್ಲಿ ಚಿಕ್ಕ ಚಿಕ್ಕ ಗುಡಿಸಲ ಸಾಲಿತ್ತು.

"ನಮ್ಮ ಅವ್ವ ಈ ಮನೇಲಿ ತೊಳೆಯಾಕೆ ಬಳಿಯಾಕೆ ಬರ್ತಿತ್ತು. ಅಪ್ಪ ಎಸ್ಟೇಟಿನಾಗೆ ಕೆಲ್ಸ ಮಾಡ್ತದೆ. ಅವ್ವನಿಗೆ ಕಾಯಿಲೆ ಶುರುವಾಗಿ ನಾನೇ ಬರಕ್ಕೆ ಶುರು ಮಾಡಿದೆ ನೋಡಿ. ನನ್ನ ಮಾತುಕತೆಯಲ್ಲಿ ಬಾಳ ವೈನಾಗೋಯ್ತು.'' ಚೆಲುವಿ ಹೆಮ್ಮೆಯಿಂದ ತುಟಿಯುಬ್ಬಿಸಿದಳು. ಚೆಲುವಿಯ ಹಳ್ಳಿ ಭಾಷೆ ತುಂಬ ಸುಧಾರಿಸಿತ್ತು. "ಅವ್ವಾ ಈ ಮನೆಯ ಗೋಡೆಗಳಿಗೆ ಕಿವಿ ಇರ್ತದೆ. ಸ್ವಲ್ಪ ಹುಶಾರು.''

ಸಂಜೆ ಶ್ರೇಯಸ್ ಶಾಂಭವಿ ನಿಲಯದ ಮುಂಭಾಗದಲ್ಲಿ ಎಸ್ಟೇಟಿನ ಜನರಿಗೆ ಬಟವಾಡೆ ಹಣದೊಡನೆ ತನ್ನ ಮದುವೆಯ ಕಾಣಿಕೆಯಾಗಿ ಸೀರೆ ಕುಪ್ಪುಸದೊಡನೆ ಒಂದೊಂದು ಶರ್ಟಿನ ಬಟ್ಟೆ, ತುಂಡು ಪಂಚೆಯನ್ನು ಹಂಚಿದ. ಆ ಶ್ರಮ ಜೀವಿಗಳಿಗೆ ತುಂಬ ಸಂತೋಷವಾಗಿತ್ತು. ಶ್ರೇಯಸ್‌ನ ಕರೆಯಂತೆ ಚೈತ್ರ ಹೊರಬಂದು ಶ್ರೇಯಸ್‌ನ ಪಕ್ಕ ಕೂತಳು. "ಗಂಡ ಹೆಂಡ್ತಿ ನೂರುಕಾಲ ಸುಖವಾಗಿ ಬಾಳಿ.'' ಆಳುಗಳು ಹರಸಿದರು.

"ಸಾಹೇಬ್ರೆ ವೃಥಾ ಇಷ್ಟೊಂದು ಖರ್ಚು ಮಾಡಿದ್ರಿ.'' ಮಿ. ಪ್ರದೀಪ್ ಗೊಣಗಿದ್ದು ಕೇಳಿಸಿತು.

"ಏನಾಯ್ತು. ಆಳುಮಕ್ಕಳು ಸುಖವಾಗಿದ್ದರೆ ನಮಗೂ ಸುಖ. ಶ್ರಮಕ್ಕೆ ಕಾಣಿಕೆ ಕೊಟ್ಟರೆ ತಪ್ಪೇನಿಲ್ಲ.'' ವಯಸ್ಸಾದ ನಂಜುಂಡಯ್ಯ ಹೇಳಿದರು. "ನಾಳೆ ನಿಮ್ಮ ಫಾರಂಹೌಸಿನವರಿಗೂ ಹಂಚಬೇಕು ನೋಡಿ.''

ಪ್ರದೀಪ್ ಚೈತ್ರಳನ್ನೇ ದಿಟ್ಟಿಸಿದ. ಸ್ವಲ್ಪ ಹೊತ್ತು ನಂಜುಂಡಯ್ಯನವರೊಡನೆ ಮಾತಾಡುತ್ತಿದ್ದು, ಶಾಂಭವಿ ನಿಲಯದೊಳಗೆ ಅತ್ಯಂತ ಪರಿಚಿತನಂತೆ ಒಳಗೆ ಹೋದ. ಶಾಂತಜ್ಜಿಯ ಬಾಗಿಲು ಮುಚ್ಚಿತ್ತು. ಶಾಂತಜ್ಜಿ ಅಸಹನೆಯಿಂದ ಕುದಿಯುತ್ತ ಅತ್ತಿಂದಿತ್ತ ಶತಪಥ ತಿರುಗುತ್ತಿದ್ದರು. ಬಾಗಿಲು ತಳ್ಳಿ ಒಳಗೆಹೋದ.

ಮಧ್ಯ ರಾತ್ರಿಯಲ್ಲಿ ಟೆಲಿಫೋನ್ ಗಂಟೆ ಬಾರಿಸಿತು. ಶಬ್ದ ನೀರವತೆಯನ್ನು ಸೀಳಿತು. ಎಲ್ಲೋ ಆಳುಕೂಗು ನರಳುವಿಕೆ ಗಾಳಿಯಲ್ಲಿ ಹರಡಿತ್ತು. ಒಮ್ಮೆಲೇ ಚೈತ್ರಳಿಗೆ ಎಚ್ಚರವಾಯ್ತು. ಪಕ್ಕದಲ್ಲಿ ಶ್ರೇಯಸ್ ಇರಲಿಲ್ಲ. ಫೋನ್‌ನಲ್ಲಿ ಜೋರಾಗಿ ಮಾತಾಡುತ್ತಿದ್ದ ಸದ್ದು. ಜೋರಾಗಿ ನಾಯಿಗಳು ಬೊಗಳುವ ಸದ್ದು.

ಗಾಬರಿ, ವಿಸ್ಮಯದಿಂದ ಚೈತ್ರ ಹಿಂಬದಿಗೆ ನಿಟ್ಟಿಸಿದಾಗ. ಅಂದು ಚೆಲುವಿ ತೋರಿಸಿದ್ದ ಗುಡಿಸಲು ಸಮೂಹದಿಂದ ನಭದೆತ್ತರ ದೊಡ್ಡ ಪಂಜು ಹೊತ್ತಿದಂತೆ ಬೆಂಕಿ ನರ್ತಿಸುತ್ತಿತ್ತು. ಚಟಚಟನೆ

ಉರಿದು ಸಿಡಿಯುತ್ತಿದ್ದ ಅವುಗಳ ಜ್ವಾಲೆ ಗಿರಿಕನ್ಯೆಯ ಎತ್ತರ ಮೀರಿಸಿತ್ತು. ಗುಡಿಸಲ ಹೊರಗೆ ನಿಂತಿದ್ದ ಬಡ ಜನರ ಆಕ್ರಂದನ ಮುಗಿಲು ಸೀಳುವಂತೆ ಬೊಬ್ಬಿಡುತ್ತಿತ್ತು. ಶಿವಮೊಗ್ಗೆಯ ಫೈರ್ ಬ್ರಿಗೇಡಿಗೆ ಫೋನ್ ಮಾಡುತ್ತಿದ್ದ ಶ್ರೇಯಸ್. ಫಾರಂ ಹೌಸಿನಿಂದ ನಂಜುಂಡಯ್ಯ, ಮಿ. ಪ್ರದೀಪ್ ಇತರರು ಬಂದರು. ಎಲ್ಲರೂ ವಾಹನಗಳಲ್ಲಿ ತುಂಬಿಕೊಂಡು ಹೊರಟರು. ಇಲ್ಲಿ ತನ್ನ ಪಾತ್ರವೇನೆಂದು ತಿಳಿಯದೆ ಕ್ಷಣಕಾಲ ನಿಂತಳು ಚೈತ್ರ. ತೊಟ್ಟ ನೈಟ್ ಗೌನ್‌ನಲ್ಲಿ ಹೋದ ನೆನಪಾಗಿ ಶಾಲೊಂದು ತೆಗೆದುಕೊಂಡು ಹೊರಬರುತ್ತಿದ್ದಂತೆ,

ಬೈಕಿನಲ್ಲಿ ಬಂದ ಹರೀಶ ಕಂಡ. "ಮೇಡಂ, ಎಲ್ಲ ಎಲ್ಲಿ?"

"ಎಲ್ಲರೂ ಬೆಂಕಿ ಹತ್ತಿದ ಜಾಗಕ್ಕೆ ಹೋಗಿದ್ದಾರೆ."

ಅವಳಿಗೆ ಕರೆದೊಯ್ಯುವ ಯಾವ ವಾಹನ, ಜನ ಇಲ್ಲದ್ದರಿಂದ ಅವಳೆಂದಳು. "ಹರೀಶ ತಾಳು ನಾನೂ ಬರ್ತೀನಿ." ಆರ್ತರ ಮೊರೆ ಅವಳ ಕಿವಿ ಕಣ್ಣುಗಳಲ್ಲಿ ತುಂಬಿತ್ತು. ಸರ್ರನೆ ಬೈಕ್ ಹತ್ತಿ ಕೂತಳು. ಬೈಕ್ ಹೊರಟಿತು.

ಹರೀಶ್‌ನೊಟ್ಟಿಗೆ ಅವಳು ಹೋಗುತ್ತಿದ್ದುದನ್ನೇ ಕಿಟಕಿಯಿಂದ ನೋಡುತ್ತಿದ್ದ ಆಕೆ ಹುಬ್ಬುಗಂಟಿಕ್ಕಿದಳು.

ಜೋಡಿದಾರ ಮನೆಯ ಸೊಸೆ ಯಾರೋ ಹುಡುಗನೊಬ್ಬನ ಬೈಕ್‌ನಲ್ಲಿ ಕೂತುಕೊಂಡು ಹೋಗುವುದೇನು. ನರಸಿಂಹಯ್ಯ ಇದ್ದಿದ್ದರೆ ಖಂಡಿತ ಇಬ್ಬರನ್ನೂ ಸುಟ್ಟು ಹಾಕುತ್ತಿದ್ದ. ಏನೋ ಯೋಚಿಸುತ್ತ ಶಾಂತಜ್ಜಿಯ ಮುಖ ಅರಳಿತು.

ಬೆಂಕಿಯ ಝಳ ಅಷ್ಟು ದೂರದಲ್ಲೇ ಹೊಡೆಯುತ್ತಿತ್ತು. ಮನೆ ಕಳೆದುಕೊಂಡವರು ಎದೆ ಹೊಡೆದುಕೊಂಡು ಅಳುತ್ತಿದ್ದರು. ನೋಡುತ್ತಿದ್ದಂತೆ ಸೇರಿದ ಜನರೆಲ್ಲ ಬೆಂಕಿಯನ್ನು ಅಡಗಿಸಲು ಪ್ರಯತ್ನಿಸುತ್ತಿದ್ದರು. ನೀರು ಎರಚುತ್ತಿದ್ದರು. ಮಣ್ಣು ಹಸಿ ಕಾಫಿ ಗಿಡದ ರೆಂಬೆ ಕೊಂಬೆ ಎರಚುತ್ತಿದ್ದಂತೆ ಶಿವಮೊಗ್ಗೆಯ ಫೈರ್ ಇಂಜನ್ನು ಬಂದಿತು. ಸಹಾಯಕ ಪಡೆಯೊಡನೆ ಅಗ್ನಿಯ ಹೆಮ್ಮೆಯನ್ನು ಅಡಗಿಸಲು ಪ್ರಯತ್ನಿಸಿದರು. ಎಲ್ಲ ಹುಲ್ಲು ಚಾವಣಿ ಭಸ್ಮವಾಗಿ ಅದರೊಳಗಿನ ಸಮ್ಮಿಶ್ರ ಆಹಾರ ಪದಾರ್ಥ ನಾಶವಾಗಿತ್ತು. ಇಬ್ಬರು ಚಿಕ್ಕ ಮಕ್ಕಳು, ವಯಸ್ಸಾದ ಮುದುಕಿಯನ್ನು ಬಲಿ ತೆಗೆದುಕೊಂಡು ಅಗ್ನಿ ಶಾಂತವಾಗತೊಡಗಿತು. ಗಾಯಗೊಂಡ ನಾಲ್ವರನ್ನು ಅಂಬ್ಯೂಲೆನ್ಸಿನಲ್ಲಿ ಸಾಗಿಸಲಾಯಿತು ಗಂಟೆಯ ಹಿಂದೆ ಉರಿಯುತ್ತಿದ್ದ ಭೀಷಣ ಅಗ್ನಿಯ ನಾಲಗೆಗೆ ಎಲ್ಲವೂ ಸ್ವಾಹಾ ಆಗಿದ್ದವು. ಬಡವ ಬಲ್ಲಿದ ಎಂಬ ಬೇಧ ಅಗ್ನಿಗಿಲ್ಲ. ಅವನದು ಕರಾಳ ನೃತ್ಯ. ಭೀಷಣ ರಾತ್ರಿಯನ್ನು ಕರಾಳ ಕೈಗಳ ಪ್ರಕಾಶದಿಂದ ನುಂಗುವ ದೃಶ್ಯ ಘೋರವಾದದ್ದು. ಬೆಳಕು ಹರಿದು ಸಂಜೆಯಾದರೂ ಶ್ರೇಯಸ್, ಚೈತ್ರ ಆ ಜಾಗವನ್ನು ಬಿಟ್ಟು ಕದಲಲಿಲ್ಲ.

ಗಾಯಗೊಂಡು ನರಳುವವರನ್ನು ಉಪಚರಿಸುತ್ತ ಹಸಿದವರಿಗೆ ಆಹಾರ ಹಂಚುತ್ತ ತನ್ನ ಕೈಲಾದ ಸಹಾಯ ಮಾಡುತ್ತ ಓಡಾಡುತ್ತಿದ್ದಳು. ಆಹಾರ ಬೇಯಿಸಲು ದೊಡ್ಡ ದೊಡ್ಡ ಒಲೆ ಹೂಡಿದ್ದರು.

"ಯಾವುತ್ತೂ ಇಂಗಾಗಿರ್ನಿಲ್ಲ. ದ್ಯಾವ್ರಿಗೆ ಯಾಕೆ ಕ್ಯಾಪ ಬಂದದೆ."

"ಈ ತಾಯಿ ಕಾಲಿಟ್ಟಗಳಿಗೆಯಲ್ಲೇ ಇಂಗಾಗ ಬೇಕೆ?"

ಇಲ್ಲಿಯವರೆಗೆ...

ಶ್ರೇಯಸ್ ಮತ್ತು ಚೈತ್ರ ಹೊಸದಾಗಿ ಮದುವೆಯಾದವರು. ಚೈತ್ರ ಓರ್ವ ಅನಾಥೆ. ಶ್ರೇಯಸ್‌ನ ಭವ್ಯ ಎಸ್ಟೇಟಿನ ಮನೆ ಅವಳಿಗೇಕೋ ಭಯದ ಗೂಡಾಗಿ ಕಾಡುತ್ತದೆ.

...ಮುಂದೆ ಓದಿ

"ಇರಬವ್ವ ನನ್ನ ಮಗಾ ಒಂಟೋಯ್ತುಲ್ಲ ಸೀವ್ನೆ, ಎಲ್ಲಿದ್ದೀಯಾ." ಮಗುವನ್ನು ಕಳೆದುಕೊಂಡಾಕೆಯ ಅಳು.

"ಒಬ್ಬ್ಯಾಬ್ರು ಕಾಲಿಟ್ಟಗಳಿಗೆ ಇಂಗೇಯ." ಮಾತುಕತೆ ಅವಳ ಕಿವಿಗೆ ಬೀಳುತ್ತಿತ್ತು. ಆದರೂ ಅವಳು ಓಡಾಡಿ ಉಪಚರಿಸುವುದನ್ನು ಬಿಡಲಿಲ್ಲ.

"ಏನೇ ಹೇಳು ಶ್ರೇಯಸ್, ಇದು ಯಾರೋ ಹಚ್ಚಿದ ಬೆಂಕಿ." ಶ್ರೀಕಂಠಯ್ಯ ಹೇಳಿದರು.

"ಏನೋ ಬಿಡಿ ಶ್ರೀಕಂಠಯ್ಯನೋರೆ. ಬುಡ್ಡಿ ಬೆಂಕಿ, ಒಲೆ ಬೆಂಕಿ ಅಥವಾ ಬೀಡಿ ಬೆಂಕಿ ಹತ್ತಿರ ಬೇಕು." ಶ್ರೀಯಸ್ ಸಮಾಧಾನಿಸಿದ.

ಆದರೂ ಅವನಿಗೆ ಅವರು ಹೇಳಿದ್ದು ಸರಿ ಎನಿಸಿತ್ತು. ಅಂದು ಫಾರಂ ಕಡೆ ಅವನಿಗೆ ಹೋಗಲಾಗಲಿಲ್ಲ. ಪ್ರದೀಪ್ ಹೊರಟುಹೋಗಿದ್ದ. ತನ್ನ ಕಂಡರೆ ಆಗದವರು ಯಾರಿದ್ದಾರೆ? ನಾಳೆಯಿಂದಲೇ ಸಾಲು ಹೆಂಚಿನ ಗಟ್ಟಿ ಮನೆ ಕಟ್ಟಿಸುವ ವಾಗ್ದಾನ ನೀಡಿದ. ಅಲ್ಲೇ ಮೇಸ್ತ್ರಿಗಳನ್ನು ಕರೆಸಿ ಮಾತುಕತೆ ಮುಗಿಸಿದರು.

ನೊಂದ ಕಾರ್ಮಿಕರಿಗೆ ಕಾಳು ಕಡ್ಡಿ ಹಂಚಿ ಸಮಾಧಾನಪಡಿಸಿ ದಂಪತಿಗಳು ಮನೆ ಸೇರಿದರು.

ಅಮಾಯಕರಾದ ಎರಡು ಕಂದಮ್ಮಗಳು ಆ ಬೆಂಕಿಯಲ್ಲಿ ಸುಟ್ಟು ಕರಕಾಗಿದ್ದುವು. ಯಾರಿಗೇನು ಸಿಕ್ಕಿತು. ಬೆಂಕಿ ಹಚ್ಚಿ ವಯಸ್ಸಾಗಿದ್ದ ಮುದುಕಿಯಾಗಿ ಅಗ್ನಿ ಶಾಂತವಾಗಿತ್ತು.

"ಮಗೂ ನಿದ್ರೆ ಊಟ ಇಲ್ಲದೆ ಮುಖ ಹೇಗಾಗಿದೆ. ಹೋಗು ಸ್ನಾನ ಮಾಡ್ಕೊ. ಹೊಟ್ಟೆಗೇನಾದ್ರೂ ತಗೊ."

"ಛೇ ಇಷ್ಟೊಂದು ಬೇಜಾರಾಗಬಾರದು. ನಿನ್ತಂದೆ ಹೇಗಿದ್ರು. ರಾತ್ರೆಯಲ್ಲ ನೀನ್ಯಾಕೆ ಇರ್ಬೇಕಿತ್ತು ಚಳೀಲಿ. ಆಳುಗಳಿದ್ದರು. ಒಂದಿಷ್ಟು ಹಣ ಬಿಸಾಡಿದ್ರೆ ಬಾಯಿ ಮುಚ್ತಿದ್ರು. ನಿನ್ನದು ತುಂಬ ಹೆಂಗರಳು. ನಿನ್ತಂದೆ ಇದ್ದಂತೆ ಹುಲಿಯಾಗಿದ್ರೆ ಯಾರೂ ಹತ್ರ ಬರಲೂ ಹೆದರ್ತಾರೆ."

"ಹೋಗಲಿ ಬಿಡಜ್ಜಿ, ಬಡವರು."

"ನೀ ಎಷ್ಟೇ ಮಾಡು ಈ ಜನಕ್ಕೆ ಉಪಕಾರ ಮಾಡಿದ್ರೂ ಸ್ಮರಣೆಗೆ ಬರೋ[illegible]

"ಶಾಂತಜ್ಜಿ ದುಡಿದು ದಣಿದ ಈ ಗುಡಿಸಲುಗಳಿಗೆ ಮಧ್ಯ ರಾತ್ರಿ ಯಾರು ಹಚ್ಚಿರಬಹುದು?"

"ಅಯ್ಯೊ ಮಗು ಯಾರ್‍ಯಾಕೆ ಬೆಂಕಿ ಇ[illegible] ನಂಗೆ ಮೊದಲೇ ಹೀಗಾಗ್ಬಹುದು ಅಂತ ಅನ್ನಿ[illegible] ಪಾಪಿಷ್ಟರನ್ನು ಕಂಡರೆ ನಿಸರ್ಗ ಮುನಿಯು[illegible] ಆಗ ಹೀಗೆಲ್ಲ ಆಗೋದುಂಟು."

"ಅಜ್ಜಿ ಇಂಥ ಮಾತು ನಂಗೆ ಹಿಡಿ[illegible] ಅಂತ ನಿಂಗೆ ಗೊತ್ತು. ಅಂಥದೆಲ್ಲ ನನ್ನತ್ರ ಸುಳಿಯ[illegible] ಈ ಮಾತು ಸಾಕು."

ಚೈತ್ರ ಶ್ರೇಯಸ್‌ನೊಡನೆ ಫಾರ್‌ಂಗೆ ಜೀ[illegible] ಬರತೊಡಗಿದಳು. ಈಗೀಗ ಆಳುಕಾಳುಗ[illegible] ಅವಳಲ್ಲಿ ವಿಶೇಷ ಗೌರವಾದರಗಳು ಬೆಳೆಯತೊ[illegible]ದ್ದವು. ಕಾರ್ಮಿಕರ ಬಡ ಗುಡಿಸಲು ಸು[illegible] ಹೋಗಿ ಅಪಾರ ನಷ್ಟವಾಗಿದ್ದರಿಂದ ಶ್ರೇಯ[illegible] ಮುಂದೆ ನಿಂತು ಹೆಂಚು ಹೊದೆಸಿದ ಮನೆಗಳ[illegible] ಕಟ್ಟಿಸಿಕೊಟ್ಟಿದ್ದ.

ಚಿಕ್ಕಮ್ಮನ ಕಾಲ್ಗುಣ ಚೆನ್ನಾಗಿಲ್ಲ ಎಂ[illegible] ಹೇಗೋ ಹರಡಿತ್ತು. ಆದರೆ ಚಿಕ್ಕಮ[illegible] ಪ್ರಮಾಣಿಕತೆಯ ಅರಿವಾಗಿ ಆ ಹೆಸರು ಕ್ರಮೇ[illegible] ಎರಡು ತಿಂಗಳಲ್ಲಿ ಮರೆಯಾಗತೊಡಗಿತು. ಡಾ[illegible] ಹೌಸಿನಲ್ಲಿ ಎಂಟು ಜೊತೆ ಉತ್ತಮ ತಳಿ[illegible] ನಾಯಿಗಳನ್ನು ಸಾಕಿದ್ದರು. ಅವುಗಳ ವ[illegible] ಮಾಡಿಸಲಾಗುತ್ತಿತ್ತು. ಆ ಜಾತಿಯ ಹೆಸ[illegible] ವಿಚಿತ್ರವಾಗಿತ್ತು. ಗಬ್ಬದ ಎರಡು ಸಿಂಧಿ ಹಸುಗ[illegible] ಕರು ಹಾಕಿದ್ದವು. ಒಂದು ಗಂಡು ಕರು ಒಂ[illegible] ಹೆಣ್ಣು ಕರು. ಹುಟ್ಟಿ ಒಂದೇ ದಿನವಾಗಿದ್ದ[illegible] ಕರುಗಳ ಆಕಾರ ದೊಡ್ಡದಿತ್ತು. ಸುಂದರವಾ[illegible] ಅದರ ಕಂಗಳು ಜಿಂಕೆಯಂತೆ ಕಂಡವು. ಶ್ರೇಯ[illegible] ಹೇಳುವ ಎಷ್ಟೋ ವಿಷಯಗಳು ಅವಳಿಗೆ ಅರ್ಥ[illegible] ಆಗುತ್ತಿರಲಿಲ್ಲ. ಸೂಕ್ತ ಸಮಯದಲ್ಲಿ ಹಸುಗಳಿ[illegible] ಇಂಜೆಕ್ಷನ್ ಕೊಟ್ಟ ಗಬ್ಬ ಮಾಡುವ ಪದ್ಧ[illegible]



ತಿಳಿದಿರಲಿಲ್ಲ. ಈಗೀಗ ಶ್ರೇಯಸ್ ಕೂಡ ದನಗಳಿಗೆ ಡಾಕ್ಟರ ವಿಚಾರಣೆಯಿಲ್ಲದೆ ದಪ್ಪ ಸಿರಿಂಜಿನಿಂದ ಇಂಜೆಕ್ಷನ್ ಕೊಡುತ್ತಿದ್ದ.

ಡಾಗ್ ಹೌಸಿನಲ್ಲಿ ಕಪ್ಪು ಬಣ್ಣದ ಪೊಮೇರಿಯನ್ ಡಾಲಿ ನಾಲ್ಕು ಮರಿ ಹಾಕಿತ್ತು. ಮರಿಗಳಂತೂ ಮುದ್ದಾಗಿತ್ತು. "ಶ್ರೀ ಇದೊಂದು ಮರಿ ನನ್ನ ಹತ್ರ ಇರಲಿ, ಸಾಕ್ತೀನಿ."

"ಓ ಚೇತೂ ಶಾಂತಜ್ಜಿಗೆ ಇಷ್ಟವಾಗಲ್ಲ. ಅದೇಕೊ ಅಜ್ಜಿಗೆ ನಾಯಿ ಕಂಡರೆ ಅಲರ್ಜಿ. ಇಂಥ ಕಪ್ಪು ಬಣ್ಣವಂತೂ ಉಹ್ಞುಂ ಡಾರ್ಲಿಂಗ್ ಬೇಡ."

"ಹಲೋ ಮೇಡಂ, ಯಾವಾಗ್ಬಂದ್ರಿ?"

ಹರೀಶ್ ಎದುರಾದ. "ನಾನಿವತ್ತು ಊರಿಗೆ ಹೊರಟು ಹೋಗ್ತೀನಿ. ನಿಮಗೆ ಹೇಳೋಣ ಅಂತ ಇದ್ದೆ. ಇಲ್ಲೇ ಸಿಕ್ಕಿದ್ರಲ್ಲ."

ಹರೀಶನ ಮಾತುಗಳು ಶ್ರೇಯಸ್‌ಗೆ ಸರಿಬೀಳಲಿಲ್ಲ ಎಂದು ಚೈತ್ರ ಗ್ರಹಿಸಿದಳು.. "ಮುಂದೇನು ಓದ್ತೀಯ ಹರೀಶ?"

"ಎಂ.ಎಸ್ಸಿ. ಮಾಡ್ಬೋಣ ಅನ್ಕೊಂಡಿದ್ದೀನಿ. ಬರ್ತೀನಿ ಅಂಕಲ್, ಬೈ ಬೈ."

ಡಾಗ್ ಹೌಸ್ ಸುತ್ತಿಕೊಂಡು ಪೌಲ್ಟ್ರಿಗೆ ಬಂದಾಗ ಡಾ. ಚಂದ್ರಕಾಂತ್ ಬಂದಿದ್ದರು. ಶ್ರೇಯಸ್, ಮಿ. ಪ್ರದೀಪ್, ಡಾಕ್ಟರ್ ಕೋಳಿ ರೋಗದ ಬಗ್ಗೆ ಮಾತಾಡತೊಡಗುತ್ತಿದ್ದಂತೆ ಅವಳಿಗೆ ಬೇಸರವಾಯ್ತು. ಹಿಂದಿನ ದಿನ ಚೆಲುವಿಯೊಡನೆ ಗುಲಾಬಿ ತೋಟದಲ್ಲಿ ಸುತ್ತಾಡುವಾಗ "ಸಣ್ಣಮ್ಮಾವ್ರೆ ನಿಮಗೊಂದು ಮಾತು ಹೇಳ್ಬೇಕ್ರೀ."

"ಏನೇ ಅದು ಹೇಳು."

"ಯಾರ್ಗೂಡೆ ಹೇಳ್ಬಾರ್ದು."

"ಮತ್ತೆ ನಮ್ಮ ಹಟ್ಟಿಗೆ ಬೆಂಕಿ ಬಿದ್ದಿದ್ದಲ್ಲಂತೆ ಯಾರೋ ಹಚ್ಚಿಸಿದರಂತೆ."

ಅಂದಿನ ಘಟನೆ ನೆನಪಾಗಿ ಚೈತ್ರಳಿಗೆ ನಿಟ್ಟುಸಿರುಕ್ಕಿತು.

ಯಾರಿರಬಹುದು ಶ್ರೇಯಸ್‌ಗೆ ಆಗದಂಥ ವರು. "ಚಿಕ್ಕಮ್ಮ" ಆಕಡೆ ಈಕಡೆ ನೋ
ಪಿಸು ನುಡಿದಳು. "ಮತ್ತೆ ಫಾರಂ
ಪ್ರದೀಪ್, ಅದೆ ಬೆಕ್ಕಿನ ಕಣ್ಣಿನ ಅಯ್ನೋ
ಅವರ ಕಡೆಯವರೇ ಬಂದು ರಾತ್ರಿನಾ
ಮಡಗಿದ್ದಂತೆ. ಅಂಗಂತ ಮಾತಾಡ್ಕಾತಿ

"ಛೇ ಇರಲಾರದು ಅವ್ನ್ಯಾಕೆ ಹೀಗ್ಮಾ

"ನಿಮ್ಗೆ ಗೊತ್ತಿಲ್ಲವ್ವ. ಅಯ್ಯ ದೊ
ಬಾಳ ಸಂದಾಕಿದ್ದಾರೆ. ಆಗಾಗ ಅವರು ಇ
ಬರ್ತಿರ್ತಾರೆ."

"ನಾ ಏಳಿದ್ನ ಸಾಹೇಬ್ರಿಗೆ ಏಳ್ಬೇ


'ಬಹುಶಾ ಶಾಂತಜ್ಜಿಗೆ ನನ್ನ
ಹೊಟ್ಟೆಕಿಚ್ಚಿರಬೇಕು. ಅವರು ಹೆಚ್ಚು ಮಾತಾಡ
ತನ್ನನ್ನೇ ಅಸಹನೆಯಿಂದ ದಿಟ್ಟಿಸುತ್ತಾರೆ.
ನನ್ನ ಕಾಲ್ಗುಣ ಕೆಟ್ಟದ್ದು ಎಂದು ಪ್ರಚಾರ ಮ
ಸಿಗುವ ಭಾಗ್ಯವೇನು.'

"ಮೇಡಂ ಮೇಡಂ, ಏನು
ಯೋಚನೆಯಲ್ಲಿದ್ದೀರ." ಇಪ್ಪತ್ತರ ಎಳೆ ಹ
ಹರೀಶನ ಮುಖದಲ್ಲಿ ಚಿಗುರು ಚಿಗುರು
ಗದ್ದಗಳು. ಅವನು ಮೇಡಂ ಎಂದರೆ
ಒಂತರಾ ತಮಾಷೆ ಎನಿಸುತ್ತದೆ.

"ಏನಿಲ್ಲಪ್ಪ, ಹೀಗೇ ಅವರೆಲ್ಲ
ಮಾತಾಡ್ತಿದ್ರು."

"ಮೇಡಂ ನಿಮ್ಹತ್ರ ಸ್ವಲ್ಪ ಮಾತಾಡಬ
ಶಾಂಭವಿ ನಿಲಯಕ್ಕೆ ಬರೋಣ ನಿಮ್ಮನ್ನು ನೋ
ಅಂದ್ಕೊಂಡೆ. ಆದರೆ ತಾತನಿಗೂ ಬಂದ
ಹೇಳಿದ್ರು. ಆ ಕಡೆ ಹೆಚ್ಚು ತಿರುಗಾಡಕ್ಕೆ ಹ
ಅಂತ. ಅದ್ಯಾಕೆ ಅಂತ ಕೇಳಿದ್ರೆ ನಿಂಗದಲ್ಲ
ಎಸ್ಟೇಟು ಫಾರಂ ಗದ್ದೆ ಎಲ್ಲ ಬೇಕಾದ್ರೂ
ಅಂದ್ಬಿಟ್ರು. ಮುಖ್ಯ ವಿಷಯ ಹೀಗಿದೆ
ಮೇಡಂ. ಬೆಂಕಿ ಬಿತ್ತಲ್ಲ ಅವತ್ತು ರಾತ್ರಿ
ಒಂದೂವರೆ ಇರಬಹುದು. ನಮ್ಮ ಮನ
ಹಿಂದೆ ನೀಲಗಿರಿ ಮರಗಳಿವೆಯಲ್ಲ ಅಲ್ಲಿ ಮ
ಏನೋ ಮಾತಾಡ್ಕೋತಿದ್ರು. ಯಾರು
ತಿಳೀಲಿಲ್ಲ."

(





ಸವಿತ ಆರ್. ಕಾಂಚನ್

ಹೆಜಮಾಡಿ

15 ಚುಕ್ಕೆ
15 ಸಾಲು


ಸೂಚನೆ

ರಂಗೋಲಿ ಚಿತ್ರಗಳನ್ನು ಕರಿಯ ಶಾಯಿ ಅಥವಾ ಪೆನ್ಸಿಲ್‌ಗಳಲ್ಲಿ ಮಾತ್ರ ಬರೆಯಿರಿ. ನೀಲಿ ಶಾಯಿಯಲ್ಲಿ ಬರೆಯಬೇಡಿ.

ರಂಗೋಲಿ ಚಿತ್ರಗಳೊಂದಿಗೆ ನಿಮ್ಮ ಪಾಸ್‌ಪೋರ್ಟ್ ಸೈಜಿನ ಕಪ್ಪು ಬಿಳುಪು ಛಾಯಾಚಿತ್ರವನ್ನು ಕಳುಹಿಸಲು ಮರೆಯದಿರಿ.

ರಂಗೋಲಿ

ಪ್ರತಿಯೊಂದೂ ಹತ್ತು ರೂಪಾಯಿ ಬಹುಮಾನ ಪಡೆದಿದೆ





ನಾಗರತ್ನ ರಾಮಚಂದ್ರ ಹೆಗಡೆ

ಸುರ್‌ಕಟ್ಟು

ಚುಕ್ಕೆ, 13ರಿಂದ 7ರವರೆಗೆ

ಚಿನ್ನದ ಪುತ್ಥಳಿ

ಧಾರಾವಾಹಿ–೧೪



ಎಚ್. ಕೆ. ಅನಸೂಯ ಸಂಪತ್

"ಈಗಲೂ ಅವನಿಗೆ ಹೆಣ್ಣು ಕೊಡಲು ಜನ ಕಾದು ನಿಂತಿದ್ದಾರೆ. ಅವನೇನು ಕಳಪೆಯಲ್ಲ. ನಿಮ್ಮ ಶ್ರೀಮಂತಿಕೆ ನಿಮಗೇ ಇರಲಿ" ಎಂದು ಮದುವೆಯಲ್ಲಿ ಊಟವನ್ನೂ ಮಾಡದೆ ದುರ್ದಾನ ತೆಗೆದುಕೊಂಡವಳಂತೆ ಹೊರಟು ಹೋಗಿದ್ದಳು ರಮಾ.

ಈ ಎಲ್ಲ ಪ್ರಕರಣಗಳಿಂದ ಕುಮುದಮ್ಮನ ಮನಸ್ಸಿಗೆ ನೋವಾಗಿತ್ತು. ಛತ್ರದಿಂದ ಮನೆಗೆ ಬಂದ ಕೂಡಲೇ ಬಿಕ್ಕಿ ಬಿಕ್ಕಿ ಅತ್ತರು.

"ಕುಮುದಾ ಏನಾಗಿದೆ ನಿನಗೆ, ಲಕ್ಷಣವಾಗಿ ಮಗಳನ್ನು ಧಾರೆಯೆರೆದು ಕೊಟ್ಟು ಹೀಗೆ ಅಳುವುದೇ? ಅಳಬೇಡ."

"ನಿಮಗೇನು ಗೊತ್ತು ನನ್ನ ಹೊಟ್ಟೆಯ ಸಂಕಟ. ಆ ಹುಡುಗನಿಗೆ ನಾವೆಂದರೆ ಎಷ್ಟು ನಿಕೃಷ್ಟ ನೋಡಿ. ಅವಳೊಂದಿಗೆ ಮನೆಗೆ ಬಂದಿದ್ದರೆ ಏನಾಗುತ್ತಿತ್ತು? ನಾವು ಬಡವರು ಅಂತ ಹೀನಾಯ ಅವನಿಗೆ."

"ಕುಮುದಾ, ಅಳಿಯಂದಿರು ಐ.ಎ.ಎಸ್. ಆಫೀಸರ್. ಅವರಿಗೆ ದೊಡ್ಡ ಜನರ ಪರಿಚಯವಿರುತ್ತೆ. ಅವರಲ್ಲಿ ಯಾರೋ ಕರೆದ ಪಾರ್ಟಿಗೆ ಹೋಗಲೇಬೇಕಾಗಿರಬಹುದು. ಹೋಗಿದ್ದಾರೆ. ಅದಕ್ಕೆಲ್ಲ ಏಕೆ ತಪ್ಪು ಅರ್ಥ ಕಲ್ಪಿಸುತ್ತೀಯಾ?"

"ಆದರೂ ಅವರು ಹಾಗೆ ಮಾಡಿದ್ದು ಸರಿಯಲ್ಲ. ನಮ್ಮ ವಸಂತ್‌ಗೆ ಕೊಟ್ಟು ಮದುವೆ ಮಾಡಿದ್ದಿದ್ದರೆ ನಮಗೆ ಎಷ್ಟು ಗೌರವವಿರುತ್ತಿತ್ತು. ಅಂತಸ್ತು ಮೀರಿ ಮದುವೆ ಮಾಡಿದರೆ ಹೀಗೆಯೇ ಆಗುವುದು."

"ಕುಮುದಾ ಮಗಳು ಒಳ್ಳೆಯ ಮನೆ ಸೇರಿದ್ದಕ್ಕೆ ಸಂತೋಷಪಡು. ಅದರ ಬದಲು ಅಳುತ್ತೀಯಲ್ಲ. ನಿನ್ನ ವಸಂತ್‌ನಂತಹ ನೂರಾರು ಮಂದಿ ನೌಕರರು ಅಳಿಯಂದಿರ ಕೈಕೆಳಗೆ ಕೆಲಸ ಮಾಡುತ್ತಾರೆ ಗೊತ್ತೇನು? ಹೆಣ್ಣು ಮಕ್ಕಳನ್ನು ಯಾವತ್ತೂ ನಮಗಿಂತ ಶ್ರೀಮಂತರ ಮನೆಗೆ ಕೊಡಬೇಕು. ಹೆಣ್ಣು ತರುವಾಗ ನಮಗಿಂತ ಬಡವರ ಮನೆಯಿಂದ ತರಬೇಕು ಅಂತಾರೆ ಹಿರಿಯರು."

"ಹಾಗಾದರೆ ವರ್ಷ ಆ ಮನೆಯಲ್ಲಿ ಸುಖವಾಗಿರುತ್ತಾಳಾ?"

"ಅಯ್ಯೋ ಹುಚ್ಚಿ, ವರುಣ್ ವರ್ಷ ಒಬ್ಬರನ್ನೊಬ್ಬರು ಪ್ರೀತಿಸಿ ಮದುವೆಯಾಗಿದ್ದಾರೆ ಎಂಬುದನ್ನು ಮರೆಯಬೇಡ."

"ಹೌದಲ್ಲವಾ, ಅವರ ಮನೆಯ ಜನ ತುಂಬ ಒಳ್ಳೆಯವರು."

"ಇಲ್ಲದಿದ್ದರೆ ಎರಡು ಖರ್ಚೂ ಹಾಕಿ ಮದುವೆ ಮಾಡಿಕೊಳ್ಳುತ್ತಿದ್ದರೇ?"

"ಹೌದೂಂದ್ರೇ, ನೀವು ಹೇಳುವುದು ಸರಿ."

"ನೋಡು ಸಂಜೆಗೆ ಅವರಿಬ್ಬರೂ ಬರಬಹುದು. ರಾತ್ರಿಗೆ ಏನಾದರೂ ಸಿಹಿ ಅಡುಗೆ ಮಾಡು. ಊಟ ಮಾಡಿಕೊಂಡು ಹೋಗಲಿ."

ಕುಮುದಮ್ಮ ಸಂಭ್ರಮದಿಂದ ಒಳಗೆ ನಡೆದರು. ಅವರಿಗೆ ಸಹಾಯ ಮಾಡಲು ಹಿರಿಯ ಮಗಳು ಹೋದಳು.

ಸುಮಾರು ಸಂಜೆ ಏಳು ಗಂಟೆಯ ವೇಳೆಗೆ ಪಾರ್ಟಿ ಮುಗಿಯಿತು.

ಅವಳೊಂದಿಗೆ ಹೊರಬಂದ ವರುಣ್ ಹೆಂಡತಿಯ ಮೇಲೆ ರೇಗಿದ.

"ನಿನಗೆ ಸ್ವಲ್ಪನೂ ಮ್ಯಾನರ್ಸ್ ಗೊತ್ತಿಲ್ಲ. ಅದೇನು ಕಾಲೇಜಿಗೆ ಮಣ್ಣು ಹೊತ್ತೆಯೋ?"

"ಏನಾಯಿತು?"

"ಟೇಬಲ್ ಮ್ಯಾನರ್ಸ್ ಕಲಿಯಬೇಕು. ಜೊತೆಗೆ ಕಂಪೆನಿಗಾಗಿ ಡ್ರಿಂಕ್ಸ್ ಆಫರ್ ಮಾಡಿದರೆ ತೆಗೆದುಕೊಳ್ಳಬೇಕು."

"ನನ್ನ ಕೈಲಾಗಲ್ಲಪ್ಪ."

"ಯಾಕೆ ಆಗಲ್ಲ, ನೀನು ಈಗ ಐ.ಎ.ಎಸ್. ಆಫೀಸರ್ ಹಾಗೂ ಇಂಡಸ್ಟ್ರಿಯಲಿಸ್ಟ್ ವರುಣ್‌ನ ಹೆಂಡತಿ. ಆಡುವ ಹುಡುಗಿಯಲ್ಲ. ಬಿಹೇವಿಯರ್ಸ್ ಎಲ್ಲ ಸರಿಯಾಗಿರಬೇಕು."

"ನೀವು ಹೇಳಿಕೊಡಿ, ಕಲಿಯುತ್ತೇನೆ."

"ಸರಿ ನಡಿ" ಎಂದ.

ಅವನ ಸಿಡುಕು ಮುಖ ಕಂಡು ತವರು ಮನೆಗೆ ಹೋಗುವ ಆಸೆ ಹೇಳಲು ಬಾಯಿ ಬಾರದಾಗಿತ್ತು. ಆದರೂ ಕಾರು ಹೊರಡಿಸುವ ಮೊದಲು ಅವನ ಹತ್ತಿರ ಸರಿದು ಅವನ ಭುಜದ ಮೇಲೆ ತಲೆಯಿಟ್ಟು.

"ವರುಣ್" ಎಂದಳು ಮೆಲ್ಲಗೆ.

"ವರ್ಷ, ಬಿಹೇವ್ ಯುವರ್‌ಸೆಲ್ಫ್ ಅಂಡ್ ಸಿಟ್ ಪ್ರಾಪರ್‌ಲಿ. ದಿಸ್ ಇಸ್ ನಾಟ್ ಬೆಡ್‌ರೂಮ್. ನನ್ನ ಕಲೀಗ್ಸ್ ಎಲ್ಲ ನೋಡುತ್ತಾರೆ."

ಅವಳಿಗೆ ಅನಾಮತ್ತು ಆಕಾಶದಿಂದ ಭೂಮಿಗೆ ಎಸೆದಂತಾಯಿತು. ಅವನು ಅಷ್ಟು ಕಟುವಾಗಿ ಹೇಳಬಹುದೆಂದು ಅವಳು ನಿರೀಕ್ಷಿಸಿರಲಿಲ್ಲ. ಅವಳು ಕೂಡಲೇ ದೂರ ಸರಿದು ಕುಳಿತಳು.

ಕಾರನ್ನು ಸ್ಟಾರ್ಟ್ ಮಾಡಿದ. ಪಾಪ ತಾಯಿ ಕಾಯುತ್ತಿರುತ್ತಾರೆ. ಹೇಗೆ ಹೇಳುವುದು ಗಂಡನಿಗೆ? ಅವನು ನೋಡಿದರೆ ಮುಖ ದಪ್ಪ ಮಾಡಿಕೊಂಡು ಕುಳಿತಿದ್ದಾನೆ. ಆದರೂ ಒಮ್ಮೆ ಹೇಳಿ ನೋಡೋಣವೆಂದು,

"ರೀ."

"ಯಸ್."

"ನಮ್ಮ ತಾಯಿ ಮನೆಗೆ ಹೋಗೋಣ."

"ಈಗ ಸಾಧ್ಯವಿಲ್ಲ. ಮನೆಗೆ ಹೋಗಿ ಡ್ರೆಸ್ ಬದಲಾಯಿಸಿ ಹೋಟೆಲ್ಲಿಗೆ ಹೋಗುವುದು."

"ಇವತ್ತೂ ಹೋಟೆಲ್ಲಿಗಾ?"

"ಏಕೆ, ನಿನ್ನೆಗೇ ಸಾಕಾಯಿತಾ?" ಅವನು ನಗುತ್ತ ನುಡಿದ.

"ಪ್ಲೀಸ್ ಅಮ್ಮನ ಮನೆಗೆ ಹೋಗೋಣ. ಹೆತ್ತವರಿಗೆ ನಿರಾಶೆ ಮಾಡುವುದು ನನಗಿಷ್ಟವಿಲ್ಲ." ಅವಳ ಕಂಗಳಲ್ಲಿ ಕಂಬನಿ ಬಟ್ಟಾಡುತ್ತಿತ್ತು.

ಅವನಿಗೆ ಏನೆನಿಸಿತೋ ಮಾತನಾಡದೆ ಕಾರನ್ನು ಅವಳ ತಾಯಿಯ ಮನೆಯತ್ತ ತಿರುಗಿಸಿದ.

ಅವನು ಕಾರನ್ನು ನಿಲ್ಲಿಸಿ ಸ್ಟೀರಿಂಗ್ ವೀಲ್ ಮೇಲೆ ತಲೆಯಿಟ್ಟು ಕಣ್ಣು ಮುಚ್ಚಿದ.

"ಬನ್ನಿ." ವರ್ಷ ಕರೆದಳು.

"ನಿಮ್ಮ ಮನೆಯ ವಠಾರದಲ್ಲಿ ಎಲ್ಲರೂ ನಮ್ಮನ್ನೇ ವಿಚಿತ್ರ ಪ್ರಾಣಿಗಳಂತೆ ನೋಡುತ್ತಾರೆ ನಾನು ಬರುವುದಿಲ್ಲ. ನೀನು ಹೋಗಿ ಬಾ."

"ನಾನೊಬ್ಬಳೇ ಹೋಗಬೇಕೇ?"

"ಹೌದು, ನೀನೇ ತಾನೇ ಬರಬೇಕು ಅಂತ ಬಯಸಿದ್ದು."

"ಸರಿ, ನಾನೂ ಹೋಗುವುದಿಲ್ಲ."

"ನಿನ್ನಿಷ್ಟ." ನಿರ್ಲಿಪ್ತನಾಗಿ ನುಡಿದ.

ಅವನು ಹಾಗೆಯೇ ಮಾಡುವವನೇ. ಒಮ್ಮೆ ನುಡಿದರೆ ಮುಗಿಯಿತು. ಅದೇ ಅಂತಿಮ ತೀರ್ಮಾನ.

ಇಲ್ಲಿಯವರೆಗೆ...

ಸುಂದರ ಮೈಕಟ್ಟಿನ ಚೆಲುವೆ ವರ್ಷ. ಮನೆಯಲ್ಲಿನ ಬಡತನದಿಂದ ಆಕೆಯ ಕನಸುಗಳೆಲ್ಲ ಗಾಳಿಗೋಪುರಗಳು ಮಾತ್ರ. ಬಡವನಾದ ವಸಂತ್‌ನನ್ನು ನಿರಾಕರಿಸಿ ಶ್ರೀಮಂತ ವರುಣ್‌ನನ್ನು ಪ್ರೀತಿಸಿ ಮದುವೆ ಆಗುತ್ತಾಳೆ.

....ಮುಂದ ಓದಿ

ತಿಂಡಿ ತಿನ್ನೋಲ್ಲ ಅಲ್ಲವೇ?''

"ಹಾಗೇನಿಲ್ಲಮ್ಮ. ಈಗ ತಿನ್ನುತ್ತೇನೆ'' ಎಂದು ತಿನ್ನತೊಡಗಿದಳು.

ಆದರೂ ಅವಳು ಸುಖವಾಗಿಲ್ಲವೆಂದು ಸಾವಿತ್ರಮ್ಮನಿಗೆ ಅನಿಸಿತು. ತಾವಾದರೂ ವರುಣ್‌ಗೆ ಬುದ್ಧಿ ಹೇಳಬೇಕೆಂದು ತೀರ್ಮಾನಿಸಿದರು.

ವರುಣ್ ಸಂಜೆ ಬಂದವನೇ ಮನೆಯಲ್ಲಿ ಹೊಸ ವಿಷಯವೊಂದನ್ನು ಹೇಳಿದ.

"ವರ್ಷ ನನಗೆ ಮಂಗಳೂರಿಗೆ ಟ್ರಾನ್ಸ್‌ಫರ್ ಆಗಿದೆ.''

"ಹೌದಾ?'' ವರ್ಷ ಗಾಬರಿಯಿಂದ ಕೇಳಿದಳು.

"ಅದಕ್ಕೆ ಹೆದರಿಕೆ ಏಕೆ?''

"ಹೆದರಿಕೆಯೇನಿಲ್ಲ.''

"ಹೋಗಲೇಬೇಕೆನೋ?'' ಸಾವಿತ್ರಮ್ಮ ಕೇಳಿದರು.

"ಹೌದಮ್ಮ.''

ವರ್ಷಳಿಗೆ ಅಳುವೇ ಬಂದುಬಿಟ್ಟಿತು. ಇಲ್ಲಾದರೆ ಅತ್ತೆ, ಮಾವ, ಪರಿಮಳಾ, ಶರತ್ ಎಲ್ಲರೂ ಅವಳ ಜೊತೆಗಿರುತ್ತಿದ್ದರು. ವರುಣ್ ಯಾವಾಗಲಾದರೂ ಸಿಡುಕಿ ಬಯ್ದರೆ ಸಮಾಧಾನಿಸಲು ಅವರೆಲ್ಲ ಇರುತ್ತಿದ್ದರು. ಆದರೆ ಈಗ ಅವರಿಬ್ಬರೇ ಇರಬೇಕೆಂದರೆ?

"ನಾವಿಬ್ಬರೇ ಇರಬೇಕ ಆ ಊರಿನಲ್ಲಿ?'' ಆ ರಾತ್ರಿ ವರುಣ್‌ನನ್ನು ಕೇಳಿದಳು.

"ಹೌದು ವರ್ಷ, ಅಮ್ಮ ಅಪ್ಪ ಬರುವುದಿಲ್ಲ.''

"ನನಗೊಬ್ಬಳೇ ಬೇಜಾರು.''

"ಏಕೆ ನಾನಿರುವುದಿಲ್ಲವೇ ಗಿಣಿ.''

"ನೀವಿರುತ್ತೀರಿ ಆದರೂ...''

"ನನ್ನ ಕಂಡರೆ ಭಯನಾ, ನಾನೇನು ಹುಲಿನಾ ಕರಡಿನಾ.''

"ಹಾಗಲ್ಲ ನೀವು ಬೆಳಿಗ್ಗೆಯೆಲ್ಲ ಹೊರಗೆ ಇರುತ್ತೀರಿ.''

"ನೀನು ಯಾವುದಾದರೂ ಲೇಡಿಸ್ ಕ್ಲಬ್ ಮೆಂಬರ್ ಆಗು. ಯಾವುದಾದರೂ ಆಟ ಕಲಿ.

"ನನಗೆ ಇಷ್ಟವಿಲ್ಲ.''

"ವರ್ಷ ನೀನು ಇನ್ನೂ ಪಳಗಬೇಕ ಆಫೀಸರ್ಸ್ ಹೆಂಡತಿಯರದೇ ಕೆಲವು ಕಡೆ ಕ್ಲಬ ಇರುತ್ತವೆ. ಆ ಊರಿನಲ್ಲಿ ಅಂತಹ ಕ್ಲಬ್ ಇದ್ದ ಮೆಂಬರ್ ಆಗು. ಬೇಕಾದಷ್ಟು ವಿಷಯಗಳನ ಕಲಿಯಬಹುದು.''

"ಈಗ ಕಲಿಯುವುದೇನಿದೆ, ಎಲ್ಲ ಕೆಲಸ ಬಾರದ ವಿಷಯಗಳು.''

"ವರ್ಷ, ನೀನು ಕಲಿಯಬೇಕಾದು ಬೇಕಾದಷ್ಟಿದೆ. ಶ್ರೀಮಂತ ಹೆಂಗಸರ ನಡವಳಿಕೆಯ ಹೈಲೆವಲ್ ಸೊಸೈಟಿಯಲ್ಲಿನ ರೀತಿ ನೀತಿಗಳ ಇತ್ಯಾದಿ.''

"ನನಗೆ ಅದರ ಅಗತ್ಯವಿಲ್ಲರೀ.''

"ಹಾಗಂದರೆ ಹೇಗೆ, ನೀನು ಮುಂದುವರಿಯ ಬೇಕು. ನಾಳೆ ಸಂಜೆ ನನಗೆ ಕಂಪೆನಿಯೊಂದ ಸೆಂಡ್‌ಆಫ್ ಇದೆ. ನೀನು ಬಾ.''

"ನಾನಾ, ನನಗೆ ಭಯ.''

"ಏಕೆ?''

"...''

"ಡ್ರಿಂಕ್ಸ್ ಇರುತ್ತೆ ಅಂತನಾ?''

"ಹ್ಞಂ.''

"ಬಹುಶಃ ಡ್ಯಾನ್ಸು ಇರುತ್ತೆ.''

"ಹೌದಾ, ಹಾಗಾದರೆ ನಾನು ಖಂಡಿ ಬರುವುದಿಲ್ಲ.''

"ವರ್ಷ ನೀನು ಬರಲೇಬೇಕು.''

"ನನಗೆ ಅಷ್ಟು ಸ್ವಾತಂತ್ರ್ಯವಿಲ್ಲವೇ?''

"ವರ್ಷ, ಸ್ವಾತಂತ್ರ್ಯಕ್ಕೆ ಮಿತಿಯಿದ ಬೇರೆಯವರಾಗಿದ್ದರೆ ಪಾರ್ಟಿಗೆ ನಾನು ಕರೆದಾ ಬರುತ್ತೇನೆ ಅಂತ ಸಂತೋಷದಿಂದ ಕುಣಿದಾಡ ತ್ತಿದ್ದರು. ನೀನು ನೋಡಿದರೆ ಜೈಲಿನಲ್ಲಿ ಹಾಕುತ್ತಿರು ಹಾಗೆ ಆಡುತ್ತಿಯಲ್ಲ.''

"ಹಾಗಲ್ಲರೀ, ನನಗೆ ಅಲ್ಲಿ ಹೇ



ನಡೆದುಕೊಳ್ಳಬೇಕೋ ಗೊತ್ತಿಲ್ಲ. ತಪ್ಪಾಗಿ ನಡೆದುಕೊಂಡರೆ ನಿಮಗೆ ಕೋಪ ಬರುತ್ತದೆ. ಮೇಲಾಗಿ ನನಗೆ ಆ ತರಹದ ಪಾರ್ಟಿಯಲ್ಲಿ ಭಾಗವಹಿಸುವುದು ಇಷ್ಟವಿಲ್ಲ.''

"ನೀನು ಆಗಾಗ್ಗೆ ಅಂತಹ ಪಾರ್ಟಿಗೆ ಬಂದರೆ ತಾನೇ ಅಭ್ಯಾಸವಾಗುವುದು. ನೀನು ಬಾರದೆ ಇದ್ದರೆ ಹೇಗೆ ಅನುಭವವಾಗುತ್ತದೆ ಹೇಳು.''

"ಸರಿ ಬರುತ್ತೇನಿ.'' ಇಷ್ಟವಿಲ್ಲದಿದ್ದರೂ ಗಂಡನಿಗಾಗಿ ಒಪ್ಪಿಕೊಂಡಳು.

"ನೋಡು ನಾಳೆ ಸಂಜೆ ನೀನು ಯಾವುದಾದರೂ ಒಳ್ಳೆಯ ಬ್ಯೂಟಿ ಪಾರ್ಲರ್‌ಗೆ ಹೋಗಿ ಮೇಕಪ್, ಹೇರ್‌ಸ್ಟೈಲ್ ಎಲ್ಲ ಮಾಡಿಸಿಕೋ.''

"ನಾನು ಯಾವತ್ತೂ ಅಲ್ಲಿಗೆಲ್ಲ ಹೋದವಳಲ್ಲ.''

"ಹೋಗದಿದ್ದರೆ ಈಗ ಹೋಗು. ಕಲಿತುಕೊಳ್ಳುವುದು ಯಾವಾಗ, ಕಾಲೇಜಿನಲ್ಲಿ ಓದುವಾಗ ಎಂದೂ ಹೋಗಿರಲಿಲ್ಲವೇ?''

"ಇಲ್ಲ.''

"ಅಲ್ಲಿಗೆಲ್ಲ ಹೋಗುವುದಕ್ಕೆ ನಿನ್ನ ಹತ್ತಿರ ದುಡ್ಡೆಲ್ಲಿತ್ತು? ಈಗ ಹಣ ಇದೆ. ಅದನ್ನು ಉಪಯೋಗಿಸಿ ಸರಿಯಾಗಿ ಇರುವುದನ್ನು ಕಲಿ. ನೀನು ನನಗೆ ತಕ್ಕ ಹೆಂಡತಿಯಾಗಿರಬೇಕು.''

ತನ್ನ ಆಸೆಯಂತೆ ತಾನು ಬಾಳಲು ಅವಕಾಶವಿಲ್ಲವೇ? ಮದುವೆಯಾದ ತಪ್ಪಿಗೆ ಅಲಂಕರಿಸಿಕೊಳ್ಳುವುದು ಆತನ ಇಷ್ಟದಂತೆಯೇ? ಛೇ ಎಂತಹ ಹೀನ ಸ್ಥಿತಿ ಯಾಯಿತು.

ಅವರು ಬಯಸುವ ಶ್ರೀಮಂತಿಕೆಯ ವರ್ತನೆ ನನ್ನಲ್ಲಿ ಇಲ್ಲವೇ? ಈ ರೀತಿಯ ಸಮಸ್ಯೆಯೆಲ್ಲ ಉದ್ಭವಿಸುವುದೆಂದು ಅವಳು ಕನಸಿನಲ್ಲಿಯೂ ನೆನೆಸಿರಲಿಲ್ಲ. ಡ್ರಿಂಕ್ಸ್, ಡ್ಯಾನ್ಸ್ ಗಂಧವೇ ತಿಳಿಯದು ಅವಳಿಗೆ. ಅದನ್ನು ನೋಡಿದರೆ ವಾಂತಿ ಬರುವಂತಾಗುತ್ತಿತ್ತು. ಏನೋ ಒಂದು ರೀತಿಯ ಮಾನಸಿಕ ಭಯ ಬೇರೆ. ತಾನು ಮಾಡುವುದು ತಪ್ಪೇನೋ ಎಂಬ ಅಪರಾಧಿ ಮನೋಭಾವ. ಹುಟ್ಟಿನಿಂದ ಬೆಳೆದು ಬಂದ ಸ್ವಭಾವವನ್ನು ದಿಢೀರನೆ ಬದಲಿಸಬೇಕೆಂದರೆ ಕಷ್ಟವಾಗುತ್ತಿತ್ತು. ಮೇಲಾಗಿ ಮನಸ್ಸು ಒಪ್ಪುತ್ತಿರಲಿಲ್ಲ. ಆದರೂ ಗಂಡನ ಆಸೆಗೆ ವಿರುದ್ಧ ಹೋಗಲು ಸಾಧ್ಯವೇ?

"ವರ್ಷ ಏನು ಯೋಚನೆ ಮಾಡುತ್ತಿದ್ದೀಯಾ? ನಾಳೆಯ ಪಾಡು ನಾಳೆಗೆ. ಈಗ ಮಲಗಿಕೋ.''

ಅವಳು ಮೌನವಾಗಿ ಮಲಗಿದಳು. ಅವನು ಹತ್ತಿರ ಸರಿದು ಅವಳನ್ನು ಬಳಸಿದ. ಏಕೋ ಅವಳಿಗೆ ಅಳು ಬರುವಂತಾಯಿತು. ಅವನೆದೆಯಲ್ಲಿ ಮುಖವಿರಿಸಿ ಬಿಕ್ಕಿದಳು.

"ವರ್ಷ, ಡೋಂಟ್ ಬಿ ಟೂ ಸೆಂಟಿಮೆಂಟಲ್. ಟೇಕ್ ಇಟ್ ಈಸೀ. ನಾನೇನು ನಿನಗೆ ಪನಿಶ್‌ಮೆಂಟ್ ಕೊಡುತ್ತಿದ್ದೀನಾ?''

"ನೀವು ಬೇರೆ ಯಾರನ್ನಾದರೂ ಮದುವೆಯಾಗಿದ್ದರೆ ಚೆನ್ನಾಗಿತ್ತೇನೋ, ನಾನು ನಿಮಗೆ ತಕ್ಕವಳಲ್ಲ.''

"ನಾನು ನಿನ್ನನ್ನು ಇಷ್ಟಪಟ್ಟು ಮದುವೆ ಯಾಗಿದ್ದೇನೆ. ನೀನು ನನಗೆ ತಕ್ಕವಳಲ್ಲ ಎಂದು ಚಿಂತಿಸುವ ಬದಲು ನನಗೆ ತಕ್ಕವಳಾಗಿ ಇರಲು ಪ್ರಯತ್ನಪಡು.'' ಕಡಾಖಂಡಿತವಾಗಿ ನುಡಿದ.

ಅವನ ಬಲವಂತಕ್ಕೆ ಆ ಸಂಜೆ ಬ್ಯೂಟಿ ಪಾರ್ಲರ್‌ಗೆ ಹೋದಳು. ಬ್ಯೂಟಿಶಿಯನ್ ಅವಳಿಗೆ ಒಪ್ಪುವ ಹೇರ್ ಸ್ಟೈಲ್ ಮಾಡಿ ಅಲಂಕಾರ ಮಾಡಿದಳು.

ಅವಳಿಗೆ ಆ ಅಲಂಕಾರ ಹಿಂಸೆಯಾಗುತ್ತಿತ್ತು. ಆದಷ್ಟು ಬೇಗ ತೆಗೆದರೆ ಸಾಕು ಎನಿಸುತ್ತಿತ್ತು. ಅವಳು ಸೀರೆ ಉಡಿಸಿದ್ದ ರೀತಿ ದೇಹಕ್ಕೆ ಹಿತವಾಗಿರಲಿಲ್ಲ. ಬಂಧಿತ ಹಕ್ಕಿಯಂತೆ ಒದ್ದಾಡುತ್ತಿದ್ದಳು.

(ಸಶೇಷ)

ರಾಗಸಂಗಮ

ಲಾಟರಿ

ಬಹುಮಾನ ರೂ. 200

* ಓದುಗರಿಗಾಗಿ 'ರಾಗಸಂಗಮ' ನಡೆಸುವ ಒಂದು ನೂತನ 'ಲಾಟರಿ ಡ್ರಾ' ಇದು.

* ಈ ಲಾಟರಿಗಾಗಿ ನೀವು ಒಂದು ಪೈಸೆ ಕೂಡ ಹಣ ಕೊಡುವ ಅಗತ್ಯವಿಲ್ಲ.

* 'ರಾಗಸಂಗಮ' ಪತ್ರಿಕೆಯನ್ನು ಕೊಂಡು ಓದುವ ಪ್ರತಿಯೊಬ್ಬರೂ ಈ 'ಲಾಟರಿ ಡ್ರಾ' ನಲ್ಲಿ ಭಾಗವಹಿಸಬಹುದು.

* 'ಪದರಂಗ' 'ಚಾತ್ಯ ಸ್ಪರ್ಧೆ' ಮುಂತಾದುವುಗಳನ್ನು ನಡೆಸಿದರೆ ಒಂದು ವರ್ಗದ ಓದುಗರು ಮಾತ್ರ ಅದರಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.

* ಆದರೆ 'ರಾಗಸಂಗಮ' ಓದುಗರೆಲ್ಲರೂ ಆಸಕ್ತಿಯಿಂದ ಭಾಗವಹಿಸಬೇಕೆಂಬ ಉದ್ದೇಶದಿಂದ, ಅವರ ವಯಸ್ಸು, ವಿದ್ಯಾಭ್ಯಾಸ, ಬುದ್ಧಿವಂತಿಕೆ, ಇವುಗಳನ್ನು ಆಧಾರವಾಗಿಟ್ಟು ಸ್ಪರ್ಧೆಯನ್ನು ನಡೆಸದೆ ಬಹಳ ಸುಲಭವಾದ ಈ 'ಲಾಟರಿ ಡ್ರಾ'ವನ್ನು ನಡೆಸುತ್ತೇವೆ.

* ನೀವು ಮಾಡಬೇಕಾದ್ದು ಬಹಳ ಸುಲಭವಾದದ್ದು ಹಾಗೂ ಶ್ರಮವಿಲ್ಲದ್ದು.

* ನಿಮಗಾಗಿ ಈ ಪುಟದಲ್ಲಿ 'ಲಾಟರಿ ಡ್ರಾ ಸಂಖ್ಯೆ'ಯೊಂದಿಗೆ ಕೂಡಿದ ನಮ್ಮ ವಿಳಾಸವನ್ನು ಮುದ್ರಿಸಿದ್ದೇವೆ. ಇದನ್ನು ಕತ್ತರಿಸಿ ತೆಗೆದು ಅಂಚೆ ಕಾರ್ಡಿನ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಿ, ಹಾಗೂ ಅದೇ ಮಗ್ಗುಲಿನ, ಬರಹಕ್ಕೆ ಮೀಸಲಾಗಿರುವ ಖಾಲಿ ಜಾಗದಲ್ಲಿ ಇದೇ ಪುಟದಲ್ಲಿ ಸೂಚಿಸಿರುವ ವಿವರಗಳನ್ನು ಬರೆದು ಕೊನೆಯ ತಾರೀಖು ಮತ್ತು ಸಮಯದೊಳಗೆ ನಮ್ಮ ಕೈ ಸೇರುವಂತೆ ಕಳುಹಿಸಿ.

ನೆನಪಿಡಿ : ನಮ್ಮ ವಿಳಾಸವನ್ನು ಮಾತ್ರ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಬಹುದೇ ವಿನಾ ಬೇರೆ ಏನನ್ನೂ ಅಂಟಿಸಬಾರದು. ಇತರ ವಿವರಗಳನ್ನೆಲ್ಲಾ ಕೈಯಲ್ಲೇ ಬರೆದು ಕಳುಹಿಸಬೇಕು.

* ಪ್ರತಿ ವಾರವೂ ಲಾಟರಿ ಟಿಕೆಟ್ಟುಗಳನ್ನು 'ಡ್ರಾ' ಪದ್ಧತಿಯಲ್ಲಿ ಆಯ್ಕೆ ಮಾಡಿ, ನಾಲ್ವರು ಅದೃಷ್ಟಶಾಲಿ ಓದುಗರಿಗೆ ತಲಾ ರೂ. 50 ರಂತೆ ರೂ. 200 ಬಹುಮಾನ ನೀಡಲಾಗುವುದು.

* 'ಡ್ರಾ'ನಲ್ಲಿ ಯಶಸ್ವಿಯಾದವರ ಹೆಸರು ಮತ್ತು ವಿಳಾಸ ಪ್ರಕಟವಾಗುವ 'ರಾಗಸಂಗಮ'ದ ಸಂಚಿಕೆ : 12–6–92.

* ನಿಮ್ಮ 'ಲಾಟರಿ ಟಿಕೇಟ್' ಅಂಚೆ ಕಾರ್ಡುಗಳು ನಮ್ಮ ಕಚೇರಿಗೆ ಬಂದು ಸೇರಬೇಕಾದ ಕೊನೆಯ ತಾರೀಖು ಮತ್ತು ಸಮಯ : ಶುಕ್ರವಾರ 19–6–92 ಸಂಜೆ 5 ಗಂಟೆ.

ಅಂಚೆ ಕಾರ್ಡಿನ ವಿಳಾಸದ ಸ್ಥಳದಲ್ಲಿ ಇದನ್ನು ಕತ್ತರಿಸಿ ಅಂಟಿಸಿ.

ರಾಗಸಂಗಮ ಲಾಟರಿ ಡ್ರಾ – ೧೩೦

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646
41, ಕೋಟೆ 'ಬಿ' ಬೀದಿ
ಬೆಂಗಳೂರು – 560 002
BANGALORE - 560 002

ಅಂಚೆ ಕಾರ್ಡಿನ ವಿಳಾಸದ ಮಗ್ಗುಲಲ್ಲಿರುವ ಖಾಲಿ ಸ್ಥಳದಲ್ಲಿ ಈ ಕೆಳಕಂಡಂತೆ ಬರೆದು ಅದರ ಕೆಳಗೆ ತಾರೀಕಿನೊಂದಿಗೆ ಕೂಡಿದ ನಿಮ್ಮ ಸಹಿಯನ್ನು ಮಾಡಬೇಕಾದದ್ದು ಅವಶ್ಯ.

ಶುಲ್ಕವೇ ಇಲ್ಲದ ಈ 'ರಾಗಸಂಗಮ ಲಾಟರಿ ಡ್ರಾ' ನಲ್ಲಿ ನಾನು ಭಾಗವಹಿಸಲು ಇಚ್ಛಿಸುತ್ತೇನೆ. ಇದರಲ್ಲಿ ಸಂಪಾದಕರ ತೀರ್ಪೇ ಅಂತಿಮ ಹಾಗೂ ಕಾನೂನುಬದ್ಧವಾದದ್ದು ಎಂದು ಅರಿತಿದ್ದೇನೆ.

ಅಂಚೆ ಕಾರ್ಡಿನ ಪೂರ್ಣ ಖಾಲಿ ಇರುವ ಮುಂಬದಿಯಲ್ಲಿ ಈ ಕೆಳಗೆ ಕೇಳಿರುವ ವಿವರಗಳನ್ನು ಓದಲು ಸಾಧ್ಯವಾಗುವಂತೆ ಸ್ಪಷ್ಟವಾಗಿ ಬರೆಯಿರಿ.

ನಿಮ್ಮ ಹೆಸರು ; ಸಂಪೂರ್ಣ ವಿಳಾಸ ; ಅಂಚೆ ; ಪಿನ್‌ಕೋಡ್ ; ಹೋಬಳಿ ; ತಾಲ್ಲೂಕ್ ; ಜಿಲ್ಲೆ ; ರಾಜ್ಯ.

ಒಂದು ಪುಟದ ಮಿನಿ ಕಥೆ

ಏಯ್ಡ್ಸ್ ಉಳಿಸಿತು

ಬಿ. ಜಯತೀರ್ಥ

ಅರೆ, ಏಯ್ಡ್ಸ್ ಉಳಿಸಿತು ಪ್ರಾಣ. ಆಶ್ಚರ್ಯವಲ್ಲವೆ? ಪ್ರಾಣವನ್ನೇ ತೆಗೆಯುವಂತಹ ಭಯಂಕರ ಕಾಯಿಲೆ ಏಯ್ಡ್ಸ್, ಜೀವ ಉಳಿಸಿತು ಅಂದ್ರೆ ಆಶ್ಚರ್ಯವಲ್ಲದೆ ಮತ್ತೇನು?

ಆದರೆ ನಮ್ಮ ಮನೆಯ ಬೀದಿಯ ಪಕ್ಕದ ಬೀದಿಯಲ್ಲಿರೋ ಕಿರಣಳ ವಿಷಯ ತಿಳಿದರೆ ನಿಮಗೆ ಕೊಂಚ ಆಶ್ಚರ್ಯವಾಗಬಹುದಷ್ಟೆ.

ಬಿ. ಇ. ಮುಗಿಸಿದ್ದ ಕಿರಣಳು ಪ್ರೈವೇಟ್ ಕಂಪೆನಿಯೊಂದರಲ್ಲಿನ ಉದ್ಯೋಗಿ. ಬೆಂಗಳೂರಿನಂತಹ ನಗರದಲ್ಲಿ ತಿಂಗಳಿಗೆ ರೂ. 2000 ಸಂಬಳದಿಂದ ತಂದೆ ತಾಯಿಯನ್ನೂ ನೋಡಿಕೊಂಡು ಸಂಸಾರ ನಡೆಸುತ್ತಿದ್ದುದು ಆಶ್ಚರ್ಯವೆನಿಸಬಹುದೇನೋ?

ಆದಿನ ಪ್ರೈವೇಟ್ ಕಂಪೆನಿಯ ಮ್ಯಾನೇಜರ್‌ರವರ ಆದೇಶದಂತೆ ಒಂದು ವಾರದ ಟ್ರೈನಿಂಗ್‌ಗಾಗಿ ಬಾಂಬೆಗೆ ಹೋಗಬೇಕಿತ್ತು ಕಿರಣ.

ತಂದೆ ತಾಯಿಗೆ ಸಮಾಧಾನ ಹೇಳಿದ ಕಿರಣ ಬಾಂಬೆಯ ಟ್ರೈನನ್ನು ಹತ್ತಿದಳು. ಬೆಳಿಗ್ಗೆ 5 ಗಂಟೆಗೆ ಟ್ರೈನಿಂಗ್ ಸೆಂಟರ್ ತಲುಪಿದ ಆಕೆ 9 ಗಂಟೆಯ ಸುಮಾರಿಗೆ ಟ್ರೈನಿಂಗ್‌ಗೆ ಹಾಜರಾಗಬೇಕಿತ್ತು.

ಹೀಗೆ ಸುಮಾರು 1 ವಾರದ ಟ್ರೈನಿಂಗ್ ಮುಗಿಸಿದ ಕಿರಣ ಏಳನೇ ದಿನದ ಟ್ರೈನಿಂಗನ್ನೂ ಮುಗಿಸಿ ವಾಪಸ್ ಕ್ವಾರ್ಟರ್ಸ್‌ಗೆ ಹೊರಟು ಬರುವ ಹೊತ್ತಿಗೆ ಸಂಜೆ 7 ಗಂಟೆಯಾಗಿ ಹೋಗಿತ್ತು.

ದಾರಿಯಲ್ಲಿ ನಿರ್ಜನ ಪ್ರದೇಶದಲ್ಲಿ ಒಂಟಿಯಾಗಿ ಹೋಗುತ್ತಿದ್ದ ಕಿರಣಳಿಗೆ ಮೂವರು ದಾಂಡಿಗರು ಎದುರಾದರು. ಅವರಲ್ಲೊಬ್ಬ ಮತ್ತೊಬ್ಬನಿಗೆ "ಲೋ, ಹಕ್ಕಿ ಪಸಂದಾಗೈತೆ ಕಣೋ" ಅಂದರೆ ಮತ್ತೊಬ್ಬ "ಹಕ್ಕಿ ಹಾರಲು ಬಿಡಬಾರ್ದು ಬಾರೋ" ಎಂದ. ಮತ್ತೊಬ್ಬ ಹೋಗಿ ಅವಳ ಕೈಯನ್ನು ಗಟ್ಟಿಯಾಗಿ ಹಿಡಿದ. ಮೂವರೂ ಗಹಗಹಿಸಿ ನಗತೊಡಗಿದರು. ಸಹಾಯಕ್ಕಾಗಿ ಅತ್ತಿತ್ತ ನೋಡಿದಳು ಕಿರಣ ಯಾರೂ ಕಾಣಲಿಲ್ಲ.

ಒಬ್ಬ ಆಕೆಯ ಕೆನ್ನೆಯನ್ನು ಚಿವುಟಿದರೆ ಮತ್ತೊಬ್ಬ ಆಕೆಗೆ ಮುತ್ತಿಡಲು ಬಾಗಿದ ಅಷ್ಟೆ. ಅದೇನು ಕಿರಣಳ ಮನಸ್ಸಿಗೆ ಹೊಳೆಯಿತೋ ಏನೋ? ನಿಧಾನವಾಗಿ ಆಕೆ ಆ ದಾಂಡಿಗರಿಗೆ ನಿಧಾನವಾಗಿ, "ನನಗೆ ಏಯ್ಡ್ಸ್ ಏಯ್ಡ್ಸ್ ಇದೆ" ಎಂದಳು ಅಷ್ಟೆ.

ಇದನ್ನು ಕೇಳಿಸಿಕೊಂಡ ದಾಂಡಿಗರ ಪೈಕಿ ಆಕೆಯ ಕೈ ಹಿಡಿದಿದ್ದವನು ಆಕೆಯ ಕೈಯನ್ನು ಬಿಟ್ಟ. ಆಕೆಯ ಕೆನ್ನೆಗೆ ಮುತ್ತಿಡಲು ಬಾಗಿದ್ದವನು ಶಾಕ್ ಹೊಡೆದಂತೆ ಹಿಂದೆ ಸರಿದ. ಇನ್ನೊಬ್ಬ ಮತ್ತಿಬ್ಬರ ಮುಖವನ್ನೇ ನೋಡತೊಡಗಿದ. ಎದ್ದೆವೋ ಬಿದ್ದೆವೋ ಎಂದು ಅಲ್ಲಿಂದ ಪರಾರಿಯಾದರು ಅತ್ಯಾಚಾರ ಮಾಡಲು ಬಂದಿದ್ದ ದಾಂಡಿಗರು.

ಅವರು ಓಡಿ ಹೋಗುತ್ತಿದ್ದುದನ್ನೇ ಶಾಕ್‌ನಿಂದ ನೋಡುತ್ತಿದ್ದ ಕಿರಣ ತತ್‌ಕ್ಷಣವೇ ಅಲ್ಲಿಂದ ಓಡಿ ಹೋಗಿ ಕ್ವಾರ್ಟರ್ಸ್ ತಲುಪಿದಳು. ತನ್ನ ಬಟ್ಟೆಯನ್ನು ಬೇಕಾದ ಡಾಕ್ಯುಮೆಂಟ್ಸನ್ನು ಸೂಟ್‌ಕೇಸ್‌ಗೆ ತುಂಬಿದ ಕಿರಣ ಬೆಂಗಳೂರಿಗೆ ಹೊರಡಲು ರೈಲ್ವೆ ಸ್ಟೇಶನ್ ಕಡೆ ಹೆಜ್ಜೆ ಹಾಕಿದಳು.

ಹಾಂ, ಈಗ ಹೇಳಿ ಪ್ರಿಯ ಓದುಗರೆ ಏಯ್ಡ್ಸ್ ಅಲ್ಲವೇ ಈಗ ಅವಳ ಪ್ರಾಣ, ಮಾನ ಕಾಪಾಡಿದ್ದು.

ನಲ್ಲೆಯ ಮುನಿಸು



ಒಲವಾ ತೋರುತ ನಲ್ಲೇ ಬಳಿಯಿರೇ
ಸುಖವು, ಸ್ವರ್ಗವು ಜೀವನ
ಮುನಿದು ಮುಳಿದು ದೂರವಾದರೆ
ಸೊರಗಿದಂತೇ ಕಾಮನೆ

ನಲ್ಲೆ ತೋರುವ ಮುನಿಸು ಎಂದರೆ
ಮೋಡ ಮುಸುಕಿದ ತಿಂಗಳು
ಮುನಿಸು ಮುಗಿಯಲು ಮತ್ತೆ ಅದೇ
ಪ್ರೇಮಪೂರಿತ ಕಂಗಳು

ನಲ್ಲೆಯಾಡುವ ನಲುಮೆ ಮಾತೇ
ಬೆಂದ ಹೃದಯಕ್ಕೆ ಲೇಪನ
ಒಲವ ತೊರೆದೂ ದೂರ ಹೋದರೆ
ಎರೆವರಾರೂ ತಂಪನು

ಕೋಪಗೊಂಡರೆ ಪೂರ್ಣಚಂದಿರ
ನನ್ನ ನಲ್ಲೆಯ ವದನವು
ನಗುವ ಸೂಸುತ ತುಟಿಯು ಅರಳಲು
ಜೇನು ತುಂಬಿದ ಸದನವು

ನಲ್ಲೆ ಒಮ್ಮೆ ಕಣ್ಣು ಮಿಟುಕಿಸೆ
ಎಲ್ಲ ನೋವೂ ಸರಿವುದು
ಒಂದು ಮುತ್ತನು ನಲ್ಲೆ ನೀಡಲು
ಪ್ರೇಮ ಪೂರವೇ ಹರಿವುದು.

ಸ. ಜಗನ್ನಾಥ

ಸ್ವಚ್ಛಂದ ಸ್ವಪ್ನಗಳು

ಧಾರಾವಾಹಿ—೨೧

ತಮಿಳು ಮೂಲ :
ಪಿ. ಕೆ. ಪ್ರಭಾಕರ್

ಕನ್ನಡಕ್ಕೆ :
ಕಲ್ಯಾಣಿ ಮೂರ್ತಿ
ರಾಮನಾಥಪುರ

"ಅದೇ ಮತ್ತೆ, ಅವರ ನೋಟ, ತಕ್ಷಣ ಅವರು ಪೇಪರ್ ಹಿಡಿದ ಸ್ಟೈಲು, ಅವರೊಂದಿಗೆ ಸಹಜವಾಗಿ ಮಾತನಾಡಲು ಅವಕಾಶ ಕೊಡಲಿಲ್ಲ ವಿಜಯ್. ಹೆದರಿಕೆಯೂ ಆಯ್ತು ಬಂದುಬಿಟ್ಟೆ"

"ಇದೇ ಭಯ, ಅಂಜಿಕೆಯೇ ನಮಗೆ ಬಹಳ ಕಾಲದಿಂದಲೂ ಬಂದಿರುವುದು. ಮಕ್ಕಳನ್ನು ಮುದ್ದು ಮಾಡಿ, ಸಲಿಗೆಯಿಂದ ಬೆಳೆಸಿದರೆ ಅವರು ತಲೆಯ ಮೇಲೆ ಕೂರುತ್ತಾರೆಂದು, ಇದರಿಂದ ಬಾಧಿತರಾದವರೊಬ್ಬರು ಹೇಳಿದ್ದಾರಲ್ಲ. ಏನೋ ಈಗ ನಾವು ಬಂದ ಕೆಲಸದ ಮೇಲೆ ಗಮನ ಸಾಗಲಿ."

ವಿಜಯ್‌ಕುಮಾರ್ ಪದ್ಮಿನಿಯನ್ನು ತನ್ನತ್ತ ಎಳೆದು ಆಲಂಗಿಸಿಕೊಳ್ಳಲು ನಾಚಿ ಅತ್ತ ಸರಿದಳು.

"ಸ್ನಾನ ಮಾಡಬೇಕು, ತಿಂಡಿ ತಿನ್ನಬೇಕು, ಅನಂತರ ಸ್ವಲ್ಪ ಊರು ಸುತ್ತಿ ಬರಬೇಕು. ಆಮೇಲೆ ನಿಮ್ಮ ಮುದ್ದಾಟ" ಎನ್ನುತ್ತ ಅವನ ಶೇವಿಂಗ್ ಸೆಟ್ ರೆಡಿ ಮಾಡಿದಳು.

ಒಂದೇ ಗಂಟೆಯಲ್ಲಿ ಎಲ್ಲವನ್ನೂ ಮುಗಿಸಿ ಹೋಟೆಲಿನಿಂದ ಹೊರಟರು. ಇಬ್ಬರ ಡ್ರೆಸ್ಸೂ ಬಹಳ ನೀಟಾಗಿತ್ತು. ಪದ್ಮಿನಿ ಸ್ವೆಟರ್ ಹಾಕಿದ್ದಳು.

ಹಚ್ಚ ಹಸಿರಾದ ಆ ತೋಟದಲ್ಲಿ ಕೈಗಳೆರಡನ್ನೂ ಜೋಡಿಸಿಕೊಂಡು ನಿಧಾನವಾಗಿ ಮೌನವಾಗಿ ನಡೆಯುತ್ತಿದ್ದರು. ಕೇವಲ ಇಪ್ಪತ್ತ ಅಡಿ ದೂರದಲ್ಲಿ ಮಳೆ, ತಾವಿರುವ ಕಡೆ ಬಿಸಿಲ ಎಂಬ ಪ್ರಕೃತಿಯ ಸೌಂದರ್ಯವನ್ನು ಕೆಲ ನಿಮಿಷ ಅನುಭವಿಸಿದರು. ಎಲ್ಲೆಡೆಯಲ್ಲೂ ಮಂಜು ಹ ದಟ್ಟವಾಗಿ ಹಬ್ಬಿತ್ತು. ಒದ್ದೆಯಾದ ಹುಲ್ಲ ಗಾವಲಿನಲ್ಲಿ ಕುಳಿತು ಬಿಸ್ಕೆಟ್ ತಿಂದರು. ಬೋಟಿಂಗ ಹೋದಾಗ ಒಬ್ಬರ ಮೇಲೊಬ್ಬರು ನೀರೆರಚುತ್ತ ಆಟವಾಡಿದರು. ವಿಧವಿಧವಾದ ಬ್ಯಾಕ್‌ಗ್ರೌಂಡ ನಲ್ಲಿ ಫೋಟೋ ತೆಗೆಸಿಕೊಂಡರು. ಬಹು ಸಮಯ ಸುತ್ತಾಡಿ, ಕತ್ತಲಾಗುತ್ತ ಬರುತ್ತಿದ್ದಂತೆಯೇ ಗೂಡು ಸೇರಿದರು. ದಟ್ಟವಾದ ಕಂಬಳಿಯಲ್ಲಿ ತೂರಿ ಕಣ್ಣಗಳನ್ನು ಮುಚ್ಚಿದರು.

ಒಬ್ಬರನ್ನೊಬ್ಬರು ಇನ್ನೂ ಸಮೀಪದಲ್ಲಿ ಅರ್ಥಮಾಡಿಕೊಳ್ಳುವಂತಹ ಒಂದು ವಾರ ಕಳೆಯುತ್ತ ಬಂತು. ತಾವು ಬೆಳೆದದ್ದು, ಕುಟುಂಬದ ಪರಿಸ್ಥಿತಿ, ಮನೆಯವರ ಗುಣಗಳು, ಬಂಧು ಬಳಗದವರ ಪರಿಸ್ಥಿತಿ, ಚಿಕ್ಕ ವಯಸ್ಸಿನ ಸ್ವಾರಸ್ಯಕರವಾದ ಘಟನೆಗಳು ಎಂದು ಎಡಬಿಡದೆ ಮಾತಾಡಿ ಆಯಾಸವೇ ಆಗದಿದ್ದ ದಿನಗಳು. ಒಂದೊಂದು ಕ್ಷಣದಲ್ಲೂ ಸಿಹಿ ಇಂಪು ತುಂಬಿದ ದಿನಗಳು. ಬಾಳಿನ ಉನ್ನತವಾದ ಸಂತೋಷದ ಘಟ್ಟ

ಉತ್ಸಾಹದ ನೆನಪಿನಲ್ಲೇ ಊರಿಗೆ ಹಿಂದಿರುಗಿದರು.

ಮಾರನೆಯ ದಿನ ಬೆಳಿಗ್ಗೆ ಸಾನ ಮಾಡ್ತಿ ಡ್ರೆಸ್ ಚೇಂಜ್ ಮಾಡಿ ಮಂಚದತ್ತ ನೋಡಿದಳು ಪದ್ಮಿನಿ. ತಲೆದಿಂಬನ್ನು ಬಿಗಿಯಾಗಿ ಅಪ್ಪಿ ನಿದ್ರಿಸಿದ್ದ ವಿಜಯ್.

ಮೇಜಿನ ಮೇಲಿದ್ದ ಡೆಸ್ಕ್ ಕ್ಯಾಲೆಂಡರಿನಲ್ಲಿ ತಾರೀಖು ಬದಲಿಸಿ, ರೂಮಿನಿಂದ ಹೊರಗೆ ಬಂದಳು. ಮನೆಯ ಮುಂದೆ ಸೆಗಣಿ ನೀರು ಹಾಕುತ್ತಿದ್ದಳು ಕೆಲಸದಾಕೆ. ಹಾಲ್‌ನಲ್ಲಿ ರೇಡಿಯೋ ಗ್ರಾಂನೊಂದಿಗೆ ಸೇರಿದಂತೆ ಇದ್ದ ರೇಡಿಯೋ ಭಕ್ತಿಗೀತೆಗಳನ್ನು ಧ್ವನಿಸುತ್ತಿತ್ತು. ರಾಜಗೋಪಲ್ ಪಕ್ಕದಲ್ಲಿದ್ದ ಬುಕ್ ಶೆಲ್ಫನ್ನು ಬಟ್ಟೆಯ ತುಂಡಿನಿಂದ ತಟ್ಟುತ್ತಿದ್ದರು. ಗೆಜ್ಜೆಯ ಶಬ್ದದಿಂದ ಪದ್ಮಿನಿಯ ಬರುವಿಕೆಯನ್ನು ಅರಿತು ತಲೆ ಎತ್ತಿ ನೋಡಿದರು. ಮತ್ತೆ ತಮ್ಮ ಕೆಲಸದಲ್ಲಿ ತೊಡಗಿದರು.

ಪದ್ಮಿನಿ ಅಡುಗೆ ಮನೆಗೆ ಬಂದಳು. ವಿಜಯಾ ಸ್ನಾನ ಮಾಡಿ ಉತ್ಸಾಹದಿಂದ ಅಡುಗೆ ಕೆಲಸದಲ್ಲಿ ನಿರತಳಾಗಿದದಳು. ಈಕೆಯನ್ನು ಕಂಡು "ಇಷ್ಟು ಬೇಗ ಏತಕ್ಕೆ ಕೆಳಗಿಳಿದು ಬಂದೆ, ನಿನ್ನೆ ರಾತ್ರಿಯಷ್ಟೇ ಊರಿಂದ ಬಂದಿದ್ದೀರಿ, ಇನ್ನೂ ಸ್ವಲ್ಪ ಹೊತ್ತು ಮಲಗಿರಬಹುದಿತ್ತಲ್ಲ ಪದ್ಮಿನಿ." ಧ್ವನಿಯಲ್ಲಿ ಅಕ್ಕರೆ ಇತ್ತು.

"ಎಷ್ಟು ಹೊತ್ತಿಗೆ ಮಲಗಿದರೂ ಬೆಳಿಗ್ಗೆ 5–30ಕ್ಕೆ ಏಳುವ ಅಭ್ಯಾಸ. ಹೇಳಿ ಅಕ್ಕ ನಾನೇನು ಮಾಡಬೇಕು, ಇವತ್ತಿನ ಟಿಫನ್ ಏನು?"

"ನೀನು ಏನೂ ಮಾಡಬೇಡ ಪದ್ಮಿನಿ. ನಾನು ಮಾಡ್ತೇನೆ, ಇನ್ನೂ ಸ್ವಲ್ಪ ದಿನ ಆಗ್ಲಿ ಹೇಳು ಟೂರ್ ಹೇಗಿತ್ತು?"

"ಚೆನ್ನಾಗಿತ್ತು ಅಕ್ಕಾ, ಮದುವೆಯಾದ ತಕ್ಷಣ ಊರು ಸುತ್ತಿ ಬಂದಾಯ್ತು. ಇವತ್ತಿನಿಂದ ಈ ಮನೆಯ ಪ್ರತಿ ನಿತ್ಯದ ವಿಷಯಗಳನ್ನು ತಿಳಿಯಬೇಕು. ಬೆಂಡೇಕಾಯಿ ಇಟ್ಟಿದ್ದೀರಲ್ಲ ಸಾಂಬಾರಿಗಾ, ನಾನು ಹೆಚ್ಚಲೆ?"

ಪದ್ಮಿನಿ ಅಕ್ಕರೆಯಿಂದ ಅಡುಗೆ ಕೆಲಸದಲ್ಲಿ ತೊಡಗಿದಳು. ಭರಣಿ ಸ್ನಾನ ಮಾಡಿ ಬಂದು ನಿಲ್ಲಲು, ಅವಳನ್ನು ಎತ್ತಿಕೊಂಡು ಹೋಗಿ ಬಟ್ಟೆ ಹಾಕಿ, ತಲೆ ಬಾಚಿ, ತನ್ನ ಪತಿಯನ್ನು ಎಬ್ಬಿಸಿ ಸ್ನಾನಕ್ಕೆ ಕಳುಹಿಸಿದಳು. ಎಲ್ಲರೂ ಟಿಫನ್‌ಗಾಗಿ ಡೈನಿಂಗ್ ಟೇಬಲ್ ಸುತ್ತ ಕುಳಿತಿದ್ದಾಗ. ವಿಜಯಾಳೊಂದಿಗೆ ತಾನೂ ಬಡಿಸಿದಳು. ಅನಂತರ ತಾನೂ ತಿಂದು ತನ್ನ ರೂಮಿಗೆ ಬಂದಳು.

ಸರಸರನೆ ತುರುಬು ಹಾಕಲಾರಂಭಿಸಿದಳು.

ವಿಜಯಕುಮಾರ್ ಶರ್ಟ್ ಹಾಕಿಕೊಳ್ಳುತ್ತಲೇ "ನಿನಗೆ ಹತ್ತು ಗಂಟೆಗಲ್ಲವೆ ಆಫೀಸು, ಆಗ್ಲೆ ಹೊತ್ತಾಯ್ತು?"

"ಇವತ್ತು ಕಾರ್‌ನಲ್ಲಿ ಡ್ರಾಪ್ ಮಾಡ್ತೇನಂದ್ರಲ್ಲ ವಿಜಯ್."

"ಸಾರಿ, ಮರೆತೇ ಹೋಯ್ತು. ನಾಳೆಯಿಂದ ಯಾವ ಏರ್ಪಾಡು ಪದ್ಮಿನಿ?"

"ಬಸ್ಸು ಇದೆಯಲ್ಲ, ರಾಯಪೇಟೆಯಿಂದ ಪ್ಯಾರೀಸ್ ಕಾರ್ನಾರ್‌ಗೇನು ಬೇಕಾದಷ್ಟು ಬಸ್ಸಿವೆ."

"ಇದುವರೆಗೂ ಎಲೆಕ್ಟ್ರಿಕ್ ಟ್ರೈನಿನಲ್ಲಿ ಹೋಗುತ್ತಿದ್ದೆ. ಅದೊಂದು ರೀತಿ, ಇದೊಂದು ರೀತಿ. ಟ್ರೈನಿಗಿಂತ ಬಸ್ಸಿನಲ್ಲಿ ರಶ್ ಜಾಸ್ತಿ. ಲೋಫರ್ರೂ ಜಾಸ್ತಿ."

"ಹಾಗಾದ್ರೆ ಒಂದು ಮಾಡಿ."

"ಏನು?"

"ನನ್ನ ಹೆಂಡತಿ ಬಾಡದೆ, ಬತ್ತದೆ, ನೀಟಾಗಿ

ಇಲ್ಲಿಯವರೆಗೆ...

ಪದ್ಮಿನಿ ಆಧುನಿಕ ಮನೋಭಾವದ ಹೆಣ್ಣು. ತಾನು ಮೆಚ್ಚಿದ ವಿಜಯಕುಮಾರ್ ಜೊತೆಗೆ ಮದುವೆ ಆಗುತ್ತಾಳೆ. ಅಲ್ಲಿ ಎಲ್ಲರೂ ಕಟ್ಟಾ ಸಂಪ್ರದಾಯವಾದಿಗಳು. ಪದ್ಮಿನಿ ಹೊಂದಿಕೊಳ್ಳಲೆತ್ನಿಸುತ್ತಾಳೆ.

...ಮುಂದೆ ಓದಿ

ಆಯಾಸವಿಲ್ಲದೇ ಆಫೀಸಿಗೆ ಹೋಗಬೇಕು. ಅದಕ್ಕೆಂದೇ ರಾಯಪೇಟೆಯಿಂದ ಪ್ಯಾರೀಸ್ ಕಾರ್ನರ್‌ಗೆ ಒಂದು ಟ್ರೈನ್ ಏರ್ಪಡಿಸಿ ಎಂದು ರೈಲ್ವೆ ಮಂತ್ರಿಗಳಿಗೆ ಮನವಿ ಪತ್ರ ಹಾಕಿ.''

"ಬೆಳಿಗ್ಗೆಯಷ್ಟೇ ಯೋಚಿಸಿ ನನಗೆ 9-30ಕ್ಕೇ ಆಫೀಸು. ಸಂಜೆಯಾದರೆ ನನ್ನ ಆಫೀಸು ಮುಗಿಸಿ ನಿನ್ನನ್ನು ಕರೆದುಕೊಂಡು ಬರಬಹುದು.''

"ಅದು ಸರಿ. ಮನೆಯಲ್ಲಿ ಪೆಟ್ರೋಲ್ ಬಂಕ್ ಇದೆಯೇನು? ಗಿಂಡಿಯಿಂದ ಪ್ಯಾರಿಸ್‌ಗೆ ಬಂದು ಪ್ರತಿನಿತ್ಯ ನನ್ನನ್ನು ಕರೆತಂದರೆ ಅದು ಸಾಧ್ಯವೇ? ನಾನು ಬಸ್‌ಪಾಸ್ ಮಾಡಿಸುತ್ತೇನೆ. ಏನೂ ತೊಂದರೆ ಇಲ್ಲ. ಹೌದು ಅಣ್ಣಾ, ಅಪ್ಪ, ಅಂಗಡಿಗೆ ಹೇಗೆ ಹೋಗಿ ಬರ್ತಾರೆ?''

"ಬೆಳಿಗ್ಗೆ ಟಿಫನ್ ಮಾಡಿಕೊಂಡು ಮೋಟಾರ್ ಬೈಕ್‌ನಲ್ಲಿ ಅಣ್ಣ ಅಪ್ಪನನ್ನು ಕರೆದುಕೊಂಡು ಹೊರಟು ಹೋಗುತ್ತಾರೆ. ಮಧ್ಯಾಹ್ನ ಎರಡರ ವೇಳೆಗೆ ಇಬ್ಬರೂ ಬೈಕ್‌ನಲ್ಲೇ ಬರ್ತಾರೆ. ಅಪ್ಪಾ ಮತ್ತೆ ಹೋಗುವುದಿಲ್ಲ. ಅಣ್ಣ ಮಾತ್ರ ಸ್ವಲ್ಪ ರೆಸ್ಟ್ ತೆಗೆದುಕೊಂಡು ಹೊರಟರೆ ರಾತ್ರಿ 9ರ ವೇಳೆಗೆ ಹಿಂದಿರುಗುತ್ತಾರೆ.''

"ಓಹೋ ತಾವು ಮಾತ್ರ ಮಜವಾಗಿ ಕಾರ್ನಲ್ಲಿ ಆಫೀಸಿಗೆ ಹೋಗ್ತೀರೋ.''

"ಕಂಪೆನಿಯವರು ಕಾರು ಕೊಡುವುದಕ್ಕೆ ಮುಂಚೆ ಸ್ಕೂಟರ್ ಇಟ್ಟುಕೊಂಡಿದ್ದೆ. ಕಾರನ್ನು ಅಪ್ಪಾ, ಅಣ್ಣನಿಗೆ ಉಪಯೋಗಿಸಿಕೊಳ್ಳಿ ಎಂದೆ. ಇಬ್ಬರಿಗೂ ಡ್ರೈವಿಂಗ್ ಗೊತ್ತಿಲ್ಲ. ಡ್ರೈವರ್ ಇಟ್ಟುಕೊಳ್ಳೋಣವೆಂದರೆ ಅಪ್ಪಾ ಅದೂ ಬೇಡಾಂದ್ರು. ಆದ್ದರಿಂದ ಈ ಕಾರು ನನ್ನ ಕಸ್ಟಡಿಯಲ್ಲೇ ಇದೆ.''

"ಆದರೆ ಬೇರೆ ಊರಿಗೆ ತೆಗೆದುಕೊಂಡು ಹೋಗಬೇಕಾದರೆ ಅನುಮತಿ ಮಾತ್ರ ನಿಮ್ಮ ಅಪ್ಪನ ಹತ್ತಿರವಿದೆ'' ಎಂದು ನಕ್ಕ ಪದ್ಮಿನಿ ವಿಜಯ್‌ನ ಮುಖ ನೋಡಿದಾಗ ನಗುವಿಗೆ ಬದಲು ಸೀರಿಯಸ್‌ನೆಸ್ ಕಂಡು ತಕ್ಷಣ "ವಿಜಯ್, ನಾನು ಸುಮ್ಮನೆ ತಮಾಷೆ ಮಾಡಿದ್ದು ಅಷ್ಟೇ'' ಅಂದಳು.

ವಿಜಯ್ ಉತ್ತರಿಸದೆ ಪ್ಯಾಂಟಿನ ಲೂಪ್‌ಗಳಿಗೆ ಬೆಲ್ಟ್ ತೂರಿಸುತ್ತಿದ್ದ. ಪದ್ಮಿನಿ ಅವನ ಹತ್ತಿರಕ್ಕೆ ಬಂದು, ಅವನ ಕೆನ್ನೆಯನ್ನು ತನ್ನತ್ತ ತಿರುಗಿಸಿ "ನನ್ನನ್ನು ನೋಡಿ, ಕೋಪಾನ? ಏಯ್ ಅರೆ ನನ್ನ ಮುಖ ನೋಡಿ ವಿಜಯ್ ಕೋಪಾನ?'

"ಇಲ್ಲ ಬಿಡು.''

"ನಿಮಗೆ ಕೋಪಾನೆ, ಸಾರೀರಿ. ಸುಮ್ಮನೆ ಜೋಕ್ ಮಾಡಿದ ಅಷ್ಟೆ ಹಾಟ್ ಆಗಿದ್ದೀರ ಅಯ್ಯೋ ಪ್ಲೀಸ್ ಹೇಳೀಪ್ಪಾ.''

"ನಾನು ಮೊದಲೇ ಹೇಳಲಿಲ್ಲವೇ ಚಿಕ್ಕ ವಯಸ್ಸಿನಿಂದಲೂ ನಮ್ಮ ತಂದೆಯ ಮಾತಿಗೆ ಎದುರಾಡಿ ಅಭ್ಯಾಸವಿಲ್ಲಾಂತ. ಮತ್ತೇಕೆ ನನಗೆ ಚುಚ್ಚು ಮಾತು.''

"ವಿಜಯ್ ಸುಮ್ಮನೆ ತಮಾಷೆ ಮಾಡಿದೆ.''

"ಕೆಲ ವಿಷಯಗಳಲ್ಲಿ ಮಾತ್ರ ತಮಾಷೆ ಯಾಗಿರಬೇಕು ಪದ್ಮಿನಿ'' ಎಂದ ವಿಜಯ್ ಕುಮಾರ್‌ನ ಧ್ವನಿಯಲ್ಲಿದ್ದ ಕಠೋರತೆ ಯನ್ನರಿತಳು ಪದ್ಮಿನಿ. ಇದೇ ಮೊತ್ತ ಮೊದಲಾಗಿತ್ತು.

ವಿಜಯಕುಮಾರ್‌ನ ಧ್ವನಿಯ ಆ ಕಠೋರತೆ ಪದ್ಮಿನಿಗೆ ಚುರುಕ್ಕನೆ ಚುಚ್ಚಿತು. 'ಕೆಲ ವಿಷಯಗಳಲ್ಲಿ ಮಾತ್ರ ತಮಾಷೆ ಇರಬೇಕು ಪದ್ಮಿನಿ' ಎಂದವ ಮುಂದೇನೂ ಮಾತನಾಡಲು ಏನೂ ಇಲ್ಲವೆಂಬಂತೆ ತನ್ನ ಆಫೀಸ್ ಬ್ರೀಫ್‌ಕೇಸನ್ನು ತೆರೆದಿಟ್ಟು ಕೊಂಡು, ಮೇಜಿನ ಮೇಲಿದ್ದ ಕೆಲವು ಕಾಗದ ಪತ್ರಗಳು, ಪೆನ್ನು ಪೆನ್ಸಿಲನ್ನು ತೆಗೆದು ಒಳಗಿಡುತ್ತಿದ್ದ.

ವಿಜಯ್‌ಕುಮಾರ್‌ನ ಈ ದಿಢೀರ್ ಕೋಪ ಪದ್ಮಿನಿಯನ್ನು ತಾಕಿತು. ತಮಾಷೆಯ ಮಾತು ಗಳನ್ನು ಅರ್ಥಮಾಡಿಕೊಳ್ಳದವರೇನಲ್ಲ? ಪತ್ನಿಗೆ



ತನ್ನ ಪತಿಯನ್ನು ಸ್ವಲ್ಪ ಕೀಟಲೆ ಮಾಡುವ ಹಕ್ಕಿಲ್ಲವೇ? ಇದಕ್ಕೆ ಪಟೀರನೆ ಮುಖಕ್ಕೆ ಹೊಡೆದಂತೆ ಬಾಗಿಲು ಹಾಕುದಂತೆ ಬಾಗಿಲು ಹಾಕುವ ಒಂದು ಬಿಸಿ ಉತ್ತರದ ಅವಶ್ಯಕತೆಯೆ? ಹೇಳಿದ ಮಾತುಗಳಿಂದ ಗಂಟಾದ ಆತನ ಮುಖ ಕಂಡೊಡನೇ ಸಾರಿ ಎಂದು ಕ್ಷಮೆ ಕೇಳಿದೆನಲ್ಲ. ಆದರೂ ಏಕೆ ಬೆಂಕಿಯಲ್ಲಿ ಅದ್ದಿದ ಮಾತುಗಳು? ಈ ಕೋಪ ಹೊಸತರನಾದದ್ದು, ಸ್ವಲ್ಪ ಹೆಚ್ಚಿನದೆ. ಅವಶ್ಯಕತೆ ಮೀರಿದ್ದು. ಇವರೊಂದಿಗೆ ನನ್ನ ಪರಿಚಯದಿಂದ ಆರಂಭಿಸಿ, ಇಷ್ಟು ಹತ್ತಿರವಾದ ಮೇಲೂ ಕೇಳುವ ಕಟು ಮಾತುಗಳಿವು. ಈಗ ನಾನು ಏನು ಮಾಡಲಿ? ಸಾರಿ ಎಂದಾಯ್ತು ತಮಾಷೆಗಾಗಿ ಹೇಳಿದ್ದು ಎಂದಿದ್ದೂ ಆಯ್ತು. ಮುಂದೆ ನಿಂತು ಅಳಬೇಕೆ?

ಪದ್ಮಿನಿ ಮೌನವಾಗಿ ನಿಂತಿದ್ದಳು.

ತನ್ನ ಬ್ರೀಫ್‌ಕೇಸನ್ನು ಮುಚ್ಚುತ್ತ ಅವಳತ್ತ ತಿರುಗಿ "ಹೊರಡಲಿಲ್ಲವೆ?" ಎಂದ ಮುಖವನ್ನು ನೋಡದೆ.

"ಆಯ್ತು" ಎಂದು ತನ್ನ ಹ್ಯಾಂಡ್‌ಬ್ಯಾಗ್ ತೆಗೆದುಕೊಂಡಳು.

"ಈ ಮನೆಯಿಂದ ಮೊದಮೊದಲು ಆಫೀಸಿಗೆ ಹೋಗುತ್ತಿದ್ದೀಯ. ಅಪ್ಪಾ ಅಮ್ಮನ ಹತ್ತಿರ ಹೇಳಿ ಬಾ" ಎಂದು ಹೇಳಿ ಮೊಳೆಗೆ ತೂಗುಹಾಕಿದ್ದ ಕಾರಿನ ಕೀಯನ್ನು ತೆಗೆದುಕೊಂಡು ರೂಮಿಂದ ಹೊರಗೆ ಬಂದ.

ಪದ್ಮಿನಿ ಹ್ಯಾಂಡ್‌ಬ್ಯಾಗ್ ಹಿಡಿದು ನಡೆದಳು. ಅತ್ತೆ ತಮ್ಮ ರೂಮಿನಲ್ಲಿ ಮಂಚಕ್ಕೆ ಒರಗಿ ಕುಳಿತು ಅಂದಿನ ಪತ್ರಿಕೆಯನ್ನು ಓದುತ್ತಿದ್ದರು. ಪಕ್ಕದಲ್ಲಿ ಟೀಪಾಯಿಯ ಮೇಲೆ ವಿಧ ವಿಧವಾದ ಟಾನಿಕ್ ಬಾಟಲ್‌ಗಳು, ಮಾತ್ರೆಯ ಸೀಸೆಗಳು, ಫ್ಲವರ್ ವಾಸಿನಲ್ಲಿ ಫ್ರೆಶ್ ಫ್ಲವರ್ಸನ್ನು ಇಡಲಾಗಿತ್ತು. ಮಂಚದ ಮೇಲೆ ಟೇಪ್ ರೆಕಾರ್ಡರ್, ಹಲವಾರು ಕ್ಯಾಸೆಟ್ಟುಗಳಿದ್ದವು.

"ಅತ್ತೆ." ಕರೆದಳು ಪದ್ಮಿನಿ.

ತಲೆ ಎತ್ತಿ "ಬಾಮ್ಮಾ ಆಫೀಸಿಗೆ ಹೊರಟಿರುವೆಯಾ?"

"ಹೌದು ಹೋಗಿ ಬರ್ತೇನೆ."

"ಮಧ್ಯಾಹ್ನಕ್ಕೆ ಊಟ?"

"ಇವತ್ತು ತೆಗೆದುಕೊಂಡಿಲ್ಲ. ನಾಳೆಯಿಂ[...] ತೆಗೆದುಕೊಂಡು ಹೋಗುತ್ತೇನೆ."

"ನಿನ್ನ ಮಾವ, ಶೆಲ್ವಪಾಂಡು ಇಬ್ಬ[...] ಊಟಕ್ಕೆ ಮನೆಗೆ ಬಂದು ಬಿಡುತ್ತಾರೆ. ನಿನ್ನ ಗಂ[...] ಏನೂ ತೆಗೆದುಕೊಂಡು ಹೋಗುವುದಿಲ್ಲ ಊಟ[...] ಬರುವುದೂ ಇಲ್ಲ. ಅಲ್ಲೇ ಊಟ ಮಾಡಿಬಿಡುತ್ತಾ[...] ಇಲ್ಲಿ ನಮ್ಮ ಮನೆಯಲ್ಲಿ ಅಡು[...] ಮುಗಿಯಬೇಕಾದರೆ 12 ಗಂಟೆಯಾದರೂ ಆಗು[...] ನಾನೋ ಕೆಲಸಕ್ಕೆ ಬಾರದವಳಾಗಿದ್ದೇನೆ. [...] ಪುಟ್ಟ ಕೆಲಸ ಮಾಡಿದರೂ ಏದುಸಿ[...] ಬಿಡುವಂತಾಗುತ್ತದೆ. ವಿಜಯಾಳಿಗೂ ಭರಣಿ[...] ನ್ನಿಟ್ಟುಕೊಂಡು, ಬೇಗನೆ ಅಡುಗೆ ಮಾಡಲ[...] ಆಗುತ್ತಿಲ್ಲ. ಪಾಪ 5–30ಕ್ಕೆ ಎದ್ದು ಬರುತ್ತಾ[...] ಆದ್ದರಿಂದ ಬೆಳಿಗ್ಗೇನೆ ಊಟ ತೆಗೆದುಕೊಂ[...] ಹೋಗುವುದಕ್ಕೆ ತೊಂದರೆ."

"ಅಕ್ಕಾ ಎಲ್ಲ ಹೇಳಿದರು ಅತ್ತೆ. ನ[...] ಆಫೀಸಿನ ಪಕ್ಕದಲ್ಲಿ ಕ್ಯಾಂಟೀನು ಇ[...] ನಾನು ಅಲ್ಲಿ ಊಟದ ವ್ಯವಸ್ಥೆ ಮಾ[...] ಕೊಳ್ಳಲೆ?"

"ಚೆನ್ನಾಗಿದೆಯೇನಮ್ಮ, ಮನೆ[...] ಊಟದಂತೆ ಇರುವುದೆ? ನನ್ನಿಂದೇನಾದರ[...] ಮಾಡಲು ಸಾಧ್ಯವಾಗಿದ್ದಿದ್ದರೆ ಅಡುಗೆ ಬೇ[...] ಮಾಡಬಹುದಿತ್ತು."

"ಅಯ್ಯೋ ಅದಕ್ಕೇನಂತೆ ಅತ್ತೆ, ನಿಮ[...] ಆರೋಗ್ಯದ ಬಗ್ಗೆ ಅವರು ಎಲ್ಲವನ್ನೂ ಹೇಳಿದ್ದಾ[...] ನಿಮಗೆ ರೆಸ್ಟ್ ಅವಶ್ಯಕ, ನಾನು ಬಂದಾಯ್ತಲ್ಲ[...] ನನಗೆ ಹತ್ತುಗಂಟೆಗೆ ಆಫೀಸು. 9–30ಕ್ಕೆ ಹೊರಟ[...] ಸಾಕು. ನಮ್ಮ ಮನೆಯಲ್ಲಿ ನಾನು ಅಮ್ಮಾ ಸೇ[...] ಅಷ್ಟರೊಳಗೆ ಎಲ್ಲ ಕೆಲಸವನ್ನೂ ಮಾ[...] ಮುಗಿಸುತ್ತಿದ್ದೆವು."

(ಸಶೇ[...]

'ರಾಗಸಂಗಮ' ಲಾಟರಿ ಡ್ರಾ–೧೨೭

ಬಹುಮಾನ ರೂ. 200 ಇದ್ದ ಈ ಲಾಟರಿ ಡ್ರಾನಲ್ಲಿ ಒಟ್ಟು 1013 ಜನ ಭಾಗವಹಿಸಿದ್ದು ಈ ಕೆಳಕಂಡ ನಾಲ್ಕು ಜನ ಡ್ರಾನಲ್ಲಿ ವಿಜೇತರಾಗಿದ್ದಾರೆ. ವಿಜೇತರುಗಳಿಗೆ ಬಹುಮಾನದ ಹಣ ತಲಾ ರೂ. 50ರಂತೆ 3 ದಿನಗಳೊಳಗಾಗಿ ಕಳುಹಿಸಿ ಕೊಡಲಾಗುವುದು. ವಿಜೇತರಿಗೆ ಶುಭಾಶಯಗಳು.

ವಿಜೇತರ ಹೆಸರು ಮತ್ತು ವಿಳಾಸ :

1. **ನಾಗಲಕ್ಷ್ಮಿ,** D/o ಹೆಚ್. ಎನ್. ಸುಬ್ಬರಾಜು, ಛತ್ರದ ಬೀದಿ, **ಕಡೂರು,** ಚಿಕ್ಕಮಗಳೂರು ಜಿಲ್ಲೆ.
2. **ಕಮಲಾಕ್ಷಿ,** ಮನೆ ನಂ. 238, 9ನೇ ವಾರ್ಡ್ ಗಾಂಧೀ ಪಾರ್ಕ್‌ನ ಪೂರ್ವ, **ಕುಂದಾಪುರ–576 201,** ದಕ್ಷಿಣ ಕನ್ನಡ ಜಿಲ್ಲೆ.
3. **ಸುನೀತಾ ಪ. ಪ್ರಭು,** ಮನೆ ನಂ. 59, ವೀರೇಶ ಬಿಲ್ಡಿಂಗ್, ಅಧ್ಯಾಪಕ ನಗರ, **ಹುಬ್ಬಳ್ಳಿ–580 032.**
4. **ಬಿ. ಎಸ್. ತನುಜಲಕ್ಷ್ಮಿ,** D/o ಬಿ. ಟಿ. ಸತ್ಯನಾರಾಯಣ ಶೆಟ್ಟಿ, **ಬಟ್ಲಹಳ್ಳಿ ಅಂಚೆ,** ಚಿಂತಾಮಣಿ ತಾಲ್ಲೂಕು, ಕೋಲಾರ ಜಿಲ್ಲೆ.

ವಿ.ಸೂ. : **'ರಾಗಸಂಗಮ'**ದ ಮುಂಬರುವ ಸಂಚಿಕೆಯಲ್ಲಿ ವಿಜೇತರುಗಳ ಭಾವಚಿತ್ರವನ್ನು ಪ್ರಕಟಿಸಲಿರುವುದರಿಂದ ವಿಜೇತರುಗಳು ತಮ್ಮ ಕಪ್ಪುಬಿಳುಪು ಪಾಸ್‌ಪೋರ್ಟ್ ಆಕಾರದ ಭಾವಚಿತ್ರವನ್ನು ಈ ಕೂಡಲೇ (ಎಂದರೆ ಒಂದು ವಾರದೊಳಗಾಗಿ) ನಮ್ಮ ಕೈ ಸೇರುವಂತೆ ಕಳುಹಿಸಿ ಕೊಡಬೇಕಾಗಿ ಕೋರುತ್ತೇವೆ.

ಮುಂದಿನ ಸಂಚಿಕೆ

ಶುಕ್ರವಾರ 19–6–92ರಂದು ಎಲ್ಲೆಡೆ ಲಭ್ಯ

ಈ ಸಂಚಿಕೆಯಲ್ಲಿ

ಶಿವಶಂಕರಿ / ಕಲ್ಯಾಣಿ ಮೂರ್ತಿ ರಾಮನಾಥಪುರ ಅವರ

ಸ್ನೇಹ ತಪಸ್ಸು

ಸಂಪೂರ್ಣ ಕಾದಂಬರಿ ಪ್ರಕಟವಾಗುತ್ತದೆ

‘ಕೆಎಸ್ಸಾರ್’ರವರಿಂದ ಉತ್ತರಕ್ಕೆ ಅರ್ಹವೆನಿಸಿಕೊಂಡ ಈ ಕೆಳಗಿನ ಎಲ್ಲ

ಪ್ರಶ್ನೋತ್ತರ

‘ಕೆಎಸ್ಸಾರ್’

* ಮಂಜುನಾಥ ಆರ್. ಉಪ್ಪುಂದ, ಲಕ್ಷ್ಮೀಪುರ

ನಿಮ್ಮನ್ನು ನಾನು ಫ್ರೆಂಡ್ ಮಾಡಿಕೊಳ್ಳೋಣ ಎಂದುಕೊಂಡಿದ್ದೇನೆ. ಆದರೆ ನೀವು ಗಂಡೋ, ಹೆಣ್ಣೋ ಗೊತ್ತಾಗುತ್ತಿಲ್ಲ. ಏನು ಮಾಡಲಿ ಸಾರ್/ ಮೇಡಂ?

– ಸ್ನೇಹವನ್ನು ಬೆಳೆಸಿಕೊಳ್ಳಲು ಲಿಂಗ ಅಡ್ಡಿಯಾಗಬಾರದು.

* ಶ್ವೇತಾಶ್ವ,
ಬೆಂಗಳೂರು

ದೇವರು ಪ್ರತ್ಯಕ್ಷನಾದರೆ ಏನು ವರ ಕೇಳುವುದು?

– ಸರ್ವೇಜನೋ ಸುಖಿನೋಭವಂತು.

* ಸಿ. ಆರ್. ವಿಜಯಕುಮಾರ್, ಚಂದಾಪುರ

ಗಂಗಾ ನದಿಯಲ್ಲಿ ಮಿಂದರೆ ಪುಣ್ಯ ಬರುವುದಂತಲ್ಲ?

– ಮನುಷ್ಯನ ಅನೇಕ ನಂಬಿಕೆಗಳಲ್ಲಿ ಇದೂ ಒಂದು.

* ಬಿ. ಎ. ಮೋಹನ್, ಸೋಮವಾರಪೇಟೆ

ತಾಯಿಯಾಗಿ ಮಮತಾಮಯಿಯಾದ ಹೆಣ್ಣು ಅತ್ತೆಯಾಗಿ ಬದಲಾಗುವುದೇಕೆ?

– ಹತ್ತು ತಿಂಗಳು ಹೊತ್ತು ಹೆತ್ತ ಮಗ ದೂರವಾಗಿ ಬಿಡುವನೋ ಎಂಬ ಅನಾವಶ್ಯಕ ಚಿಂತೆಯಿಂದ.

* ಭೀಮರಾಯ,
ಬೇವಿನಹಳ್ಳಿ

ವರದಕ್ಷಿಣೆ ಬೇಡವೆಂದರೆ ಹೆಣ್ಣ
ಕಡೆಯವರು ಅನುಮಾನಿಸುವುದೇಕೆ?

– ವಿಶಾಲ ಹೃದಯವನ್ನು ಅರಿತುಕೊಳ್ಳು
ಚೈತನ್ಯವಿಲ್ಲದವರು.

* ಗಣೇಶ ಬಿ. ಹೊನ್ನಾನಿ, ಸೀಬಿನಕೆರೆ

ರಾಜಕಾರಣಿಗಳು ಜೈಲಿಗೆ ಹೋದರೆ ಅವ
ಗೌರವ ಹೆಚ್ಚಾಗುತ್ತದೆ. ಅದೇ ಸಾಮಾನ್ಯ ಪ್ರಜ
ಜೈಲಿಗೆ ಹೋದರೆ ಆತನ ಗೌರವಕ್ಕೆ ಕಳಂ
ಬರುತ್ತದೆ ಏಕೆ?

– ಸಾಹುಕಾರನಾಗಿದ್ದರೆ ಇವನಿಗೂ
ಕಳಂಕವಿರುವುದಿಲ್ಲ.

* ಎಸ್. ಹರ್ಷ ವೀರನಾಯಕ,
ಅಂಬಲಗೆರೆ

ಅಂಕಲ್, ಚಿಂತೆ ಮತ್ತು ಚಿಂತನೆಗೆ ಇರು
ವ್ಯತ್ಯಾಸವೇನು?

– [illegible]
ವರು.

* ಶಶಿಕಲಾ, ಮುಂಬಯಿ

ನಾವು ಕಟ್ಟಿದ ಕನಸೆಲ್ಲ ನಿಜವಾಗ
ವಂತಿದ್ದರೆ?

– ಪ್ರಪಂಚ ಸಾಗುತ್ತಿರಲಿಲ್ಲ.

* ನವೀನ,
ಶಿವಮೊಗ್ಗ

ಕೃಷ್ಣನ ಕೈಯಲ್ಲಿ ಕೊಳಲು ಇರುವ ಬದಲು
ಸಿಗರೆಟ್ ಇದ್ದರೆ ಏನಾಗುತ್ತಿತ್ತು ಸ್ವಾಮಿ?

– ನನಗೆ ತಿಳಿದ ಎಷ್ಟೋ ಕೃಷ್ಣರ ಕೈಯಲ್ಲಿ
ಸಿಗರೆಟ್ ಇದೆ.

* ಮಂಗಳ, ಮೈಸೂರು

ಹೆಂಡತಿಯು ಗಂಡನನ್ನು ಏಕವಚನದಲ್ಲಿ ಮಾತನಾಡಿಸುವುದು ಸರಿಯೋ ಅಥವಾ ಬಹು ವಚನದಲ್ಲಿ ಮಾತನಾಡಿಸುವುದು ಸರಿಯೋ?

— ಎರಡೂ ಸರಿಯೇ.

* ಸಿ. ಸುಧಾಕರ್, ಕಂಬ್ಳಕಟ್ಟ

ದೇವರನ್ನು ಬೈಯುವವನು(ಳು) ದೇವರ ಗುಡಿ ಕಂಡಾಗ ಭಕ್ತಿಯಿಂದ ಕೈ ಮುಗಿಯುತ್ತಾರಲ್ಲ ಏಕೆ?

— ಬಾಯಿ ಬೊಗಳಬಹುದು, ಆದರೆ ಆತ್ಮ ಅದನ್ನು ಮಾಡಲಾರದು.

* ಕೆ. ಟಿ. ಶ್ರೀನಿವಾಸ,

ಕುಣಿಗಲ್


ಮನುಷ್ಯ ಮನುಷ್ಯನಾಗೇ ಇರಬೇಕಾದರೆ ಏನು ಮಾಡಬೇಕು ಗುರುವೇ?

— ಆತ್ಮಕ್ಕೆ ದ್ರೋಹ ಬಗೆಯದೆ ಬಾಳಬೇಕು.

* ಕಣತೂರು ಕೆಂಪರಾಜ್,

ಚಿಕ್ಕಬಳ್ಳಾಪುರ

ಬಡವರಿಗೆ ಬರುವ ನಿದ್ದೆ, ಶ್ರೀಮಂತರಿಗೆ ಬರುವುದಿಲ್ಲವಲ್ಲ?



— ಕಾಪಾಡುವ ಯೋಚನೆ ಮಿದುಳಿನಲ್ಲಿ ಸದಾ ಕೆಲಸ ಮಾಡುತ್ತಿರುತ್ತದೆ.

* ಹನುಮೇಶ ಜನಾದ್ರಿ, ಕನಕಗಿರಿ

ಪ್ರತಿವರ್ಷ ನಡೆಸುತ್ತಿರುವ ಸಾಹಿತ್ಯ ಸಮ್ಮೇಳನಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ಸ್ವಲ್ಪವಾದರೂ ಪ್ರಗತಿಯನ್ನು ಸಾಧಿಸಲು ಸಾಧ್ಯವೇ ಹೇಳಿ ಅಂಕಲ್?



— ಇತ್ತೀಚಿನ ಸಾಹಿತ್ಯ ಸಮ್ಮೇಳನಗಳು ಗುಂಪುಗಾರಿಕೆಯಲ್ಲಿ ನಡೆಯುತ್ತಿರುವುದು ನಿಮ್ಮ ಅಪೇಕ್ಷೆಗೆ ಅಡ್ಡಿಯಾಗಿದೆ.

* ಬಿರಾದಾರ ಎ. ಐ;

ಬಿಜಾಪುರ

ಒಬ್ಬ ಸರಕಾರಿ ನೌಕರ ತನ್ನ 57ನೇ ವಯಸ್ಸಿಗೆ ನಿವೃತ್ತನಾಗುವನು, ಆದರೆ ಒಬ್ಬ ರೈತ ಯಾವ ವಯಸ್ಸಿನಲ್ಲಿ ನಿವೃತ್ತಿ ಹೊಂದುವನು?

— ದುಡಿಯುವವರಿಗೆ ನಿವೃತ್ತಿ ಎಂಬ ಪ್ರಶ್ನೆಯೇ ಇರುವುದಿಲ್ಲ.

* ಎಸ್. ದಿನೇಶ್,

ಮೈಸೂರು

ನಿಜವಾದ ಟೀಕೆಯನ್ನು ಒಪ್ಪದ ಸ್ನೇಹಿತರು ಸುಳ್ಳು ಹೊಗಳಿಕೆಗೆ ತಲೆದೂಗುತ್ತಾರಲ್ಲ ಏಕೆ?

— ಮಾನವನ ದೌರ್ಬಲ್ಯಗಳಲ್ಲಿ ಇದೂ ಒಂದು. ಅತೀ ಅಪಾಯಕಾರಿ.

* ಮಕ್ಕಳ ಕಥೆ

ಕಹಿ ಔಷಧಿ

ಎಂ. ಶಿವಾಜಿರಾವ್

ಶಿವುಗೆ ನೆಗಡಿ ಬಂದಿತ್ತು. ಅವನಿಗೆ ಯಾವಾಗಲೂ ನೆಗಡಿ. ಬೇಸಿಗೆಯಲ್ಲೂ ನೆಗಡಿ. ಫ್ಯಾನ್ ಹಾಕಿದರಂತೂ ನೆಗಡಿ ಗ್ಯಾರಂಟಿ. ಆದ್ದರಿಂದ ಅವನು ಯಾವಾಗಲೂ ನೆಗಡಿಯ ಔಷಧಿಯನ್ನು ತೆಗೆದುಕೊಳ್ಳುತ್ತಿದ್ದ. ರಾತ್ರಿ ಹೊತ್ತು ನಿದ್ರೆ ಬರಬೇಕಾದರೆ ನೆಗಡಿ ಮಾತ್ರ ಆವಶ್ಯಕ. ಈ ಮಾತ್ರೆ ತಿನ್ನಿಸುವುದು ಅವನ ಅಮ್ಮನಿಗೆ ಅಭ್ಯಾಸವಾಗಿ ಹೋಗಿತ್ತು.

ಆ ರಾತ್ರಿ ಮಲಗುವ ಹೊತ್ತಿನಲ್ಲಿ ಶಿವುಗೆ ಎಂದಿನಂತೆ ನೆಗಡಿ ಶುರುವಾಯಿತು. ಶಿವುನ ಅಮ್ಮನು ಡಾಕ್ಟರ್ ಬರೆದುಕೊಟ್ಟ ಔಷಧಿಯನ್ನು ತಂದು "ಶಿವು, ಈ ಮಾತ್ರೇನ ತಿಂದು ಮಲಗು. ಇಲ್ಲದಿದ್ದರೆ ನೆಗಡಿಯಿಂದ ನಿದ್ರೆ ಬರುವುದಿಲ್ಲ. ನೆಗಡಿಯಿಂದ ಸುಸ್ತಾಗಿ ಹೋಗುತ್ತೆ'' ಎಂದು ಹೇಳಿದಳು.

"ಊಹುಂ ಅದು ಕಹಿ, ನನಗೆ ಬೇಡ.'' ಶಿವು ಪಕ್ಕಕ್ಕೆ ಹೊರಳಿ ಮಲಗಿದ.

"ಔಷಧಿ ಕಹಿಯಾದರೇನು, ಆರೋಗ್ಯಕ್ಕೆ ಒಳ್ಳೆಯದು. ಔಷಧಿ ಬೇಡ ಅನ್ನಬಾರದು. ಡಾಕ್ಟರು ಬರೆದುಕೊಡುವುದು ನಮ್ಮ ಒಳ್ಳೆಯದಕ್ಕಾಗಿ ತಾನೆ?'' ಅಮ್ಮ ನುಡಿದಳು.

"ಬೇಡ ಔಷಧಿ ತಗೊಂಡು ನನಗೆ ಬೇಜಾರಾಗಿ ಹೋಗಿದೆ.''

ಶಿವು ಮುಸುಕು ಹೊದ್ದುಕೊಂಡ. ಅಮ್ಮ ಬೇಸರದಿಂದ ಎದ್ದು ಹೋದಳು.

ಶಿವುಗೆ ನಿದ್ರೆ ಹತ್ತಲಿಲ್ಲ. ಅತ್ತ ಇತ್ತ ಹೊರಳಿದ. ದಿಂಬು ಆಚೆ ಈಚೆಗೆ ಇಟ್ಟುಕೊಂಡ ನಿದ್ರಿಸಲು ಯತ್ನಿಸಿದ. ಬಹಳ ಒದ್ದಾಡಿ ಮೇಲೆ ಸ್ವಲ್ಪ ನಿದ್ರೆ ಹತ್ತಿತು.

ಕನಸುಗಳು ಪ್ರಾರಂಭವಾದವು. ಏನೇನೋ ವಿಚಿತ್ರ ಕನಸುಗಳು. ಶಿವು ಯಾವುದೋ ಒಂದು ಪ್ರದರ್ಶನಾಲಯಕ್ಕೆ ಹೋಗಿದ್ದಾನೆ ಅಲ್ಲಿ ಸರ್ಕಸ್ಸು ನಡೆಯುತ್ತಿದೆ. ಶಿವು ಖುರ್ಚಿಯಲ್ಲಿ ಕೆಳಿತಿದ್ದಾನೆ. ಸರ್ಕಸ್ಸು ಪ್ರಾರಂಭವಾಯಿತು ಹುಲಿಗಳು ಬಂದವು, ಶಿವುವಿನ ಸುತ್ತ ಕುಣಿದವು ಸಿಂಹಗಳು ಬಂದವು. ಶಿವುವನ್ನು ಸುತ್ತ ಗಟ್ಟಿದವು, ಶಿವು ಬೆದರಿದ. ಇದ್ದಕ್ಕಿದ್ದಂತೆಯೆ ಸಿಂಹಗಳು ಮಾಯವಾದವು ಆನೆಗಳು ಕುದುರೆಗಳು ಕಾಣಿಸಿಕೊಂಡವು.

ಒಬ್ಬ ಬಫೂನು ಬಂದ. ಅವನು ಮೂರ ಅಡಿ ಎತ್ತರವಿದ್ದ. ಅವನ ನಿಕ್ಕರು ಪ್ಯಾಂಟಿ ಅರ್ಧವಿತ್ತು. ಶರಟು ಮೊಳಕಾಲಿನವರೆ ಬಂದಿತ್ತು. ಅವನು ಶಿವುವಿನ ಬಳಿಗೆ ಬಂದ ಶಿವುವಿಗೆ ಸಂತೋಷವಾಯಿತು.

"ಶಿವು, ನಿನ್ನ ವರ್ತನೆ ನನಗೆ ಹಿಡಿಸಲಿಲ್ಲ. ಬಫೂನು ರೇಗಿ ಹೇಳಿದ.

"ನಾನು ನಿನಗೇನು ಮಾಡಿದೆ?'' ಶಿವು ಆಶ್ಚರ್ಯದಿಂದ ಕೇಳಿದ.

"ಹೇಳಿದ ಮಾತನ್ನು ನೀನ ಕೇಳುವುದಿಲ್ಲ.''

"ನೀನೇನು ಹೇಳಿದೆ ನನಗೆ?''

"ನಾನು ಹೇಳಲಿಲ್ಲ. ನಿನ್ನಮ್ಮ ಹೇಳಿದ ಮಾತನ್ನು ಕೇಳಲಿಲ್ಲ. ಅದಕ್ಕೆ ನನಗೆ ಭಾರಿ ಕೋಪ ಬಂದಿದೆ.''

"ಅದಕ್ಕೆ?'' ಶಿವು ಕೇಳಿದ.

"ನಿನ್ನನ್ನೇನು ಮಾಡುತ್ತೇನೆ ಗೊತ್ತೆ?'' ಅವನ ಧ್ವನಿಯಲ್ಲಿ ಕೋಪವಿತ್ತು.

"ಏನು ಮಾಡುತ್ತೀ?''

"ಅಲ್ಲೇನು ಇವೆ ಗೊತ್ತೆ?''

ಶಿವು ಅತ್ತ ನೋಡಿದ. ಸಾಲುಸಾಲಾಗಿ ಸಿಂಹ, ಹುಲಿ, ಆನೆಗಳು ನಿಂತು ಶಿವುವನ್ನೇ ಕೆಕ್ಕರಿಸಿ ನೋಡುತ್ತಿದ್ದವು.

"ಔಷಧಿ ತಿನ್ನೆಂದು ನಿನ್ನಮ್ಮ ಹೇಳಲಿಲ್ಲವೆ?'' ಬಫೂನು ಕೇಳಿದ.

"ಹೌದು, ಹೇಳಿದಳು.''

"ಮತ್ತೇಕೆ ತಿನ್ನಲಿಲ್ಲ?''



"ಔಷಧಿ ಬಹಳ ಕಹಿ.''

"ಆದರೆ ದೇಹಕ್ಕೆ ಒಳ್ಳೆಯದು. ನಿನ್ನ ಒಳ್ಳೆಯದಕ್ಕಲ್ಲವೆ ತಾಯಿ ಹೇಳಿದ್ದು?''

ಶಿವು ತಲೆ ತಗ್ಗಿಸಿದ.

"ಹಿರಿಯರು ಹೇಳಿದ ಮಾತನ್ನು ಕೇಳಬೇಕು.'' ಭಫೂನು ಹೇಳತೊಡಗಿದ. "ಇಲ್ಲದಿದ್ದರೆ ಅನುಭವಿಸಬೇಕಾಗುತ್ತದೆ. ಔಷಧಿ ಕಹಿ ಎಂದು ನೀನು ತಿನ್ನಲಿಲ್ಲ. ಆದ್ದರಿಂದ ನೆಗಡಿ ಜಾಸ್ತಿಯಾಗಿ ನಿದ್ರೆ ಬರಲಿಲ್ಲ. ಕನಸುಗಳು ಬಿದ್ದವು. ಕನಸಿನಲ್ಲಿ ಹುಲಿ, ಸಿಂಹಗಳು ಬಂದವು. ಔಷಧಿ ತಿಂದಿದ್ದರೆ ಆರಾಮವಾಗಿ ನಿದ್ರಿಸುತ್ತಿದ್ದೆ.''

"ತಿನ್ನುತ್ತೇನೆ, ತಿನ್ನುತ್ತೇನೆ.'' ಶಿವು ಗಟ್ಟಿಯಾಗಿ ಹೇಳಿದ.

ಅವನ ಕೂಗನ್ನು ಕೇಳಿ ಶಿವುವಿನ ತಾಯಿ ಓಡಿ ಬಂದು "ಯಾಕೋ ಶಿವು, ನಿದ್ರೆ ಬರಲಿಲ್ಲವೆ?'' ಎಂದು ಕೇಳಿದಳು.

"ಇಲ್ಲ'' ಎಂದು ಹೇಳಿದ ಎಚ್ಚರಗೊಂಡ ಶಿವು.''

"ನೆಗಡಿಯಿಂದಾಗಿ ನಿದ್ರೆ ಬರಲಿಲ್ಲ. ಇಗೋ, ಈ ಔಷಧಿ ತಿನ್ನು ನೆಗಡಿ ಕಳೆದು ನಿದ್ರೆ ಬರುತ್ತದೆ'' ಎಂದು ಮಾತ್ರೆಯನ್ನೂ, ನೀರನ್ನೂ ನೀಡಿದಳು.

ಮರುಮಾತನಾಡದೆ ಮಾತ್ರೆ ನುಂಗಿ, ನೀರು ಕುಡಿದ. ನೆಗಡಿ ಕಡಿಮೆಯಾಯಿತು; ನಿದ್ರೆ ಹತ್ತಿತ್ತು. ಬೆಳಗಿನವರೆಗೂ ಆರಾಮವಾಗಿ ನಿದ್ರೆ ಮಾಡಿದ.

ರಾಗಸಂಗಮ' ಚಿತ್ರ ವಿಮರ್ಶೆ

ಎದುರು ಮನೇಲಿ ಗಂಡ ಪಕ್ಕದ ಮನೇಲಿ ಹೆಂಡ್ತಿ

ಲಾಂಛನ : ಅನುಪಮ್ ಮೂವೀಸ್
ನಿರ್ಮಾಪಕ : ಪಿ. ಬಲರಾಂ
ಚಿತ್ರಕಥೆ–ನಿರ್ದೇಶನ : ರೇಲಂಗಿ ನರಸಿಂಹರಾವ್
ಸಂಗೀತ : ರಾಜ್–ಕೋಟಿ
ಛಾಯಾಗ್ರಹಣ : ಶರತ್
ಸಂಭಾಷಣೆ : ಕುಣಿಗಲ್ ನಾಗಭೂಷಣ್
ತಾರಾಗಣ : ಶಶಿಕುಮಾರ್, ಶೃತಿ, ಮಾಸ್ಟರ್ ಆದಿತ್ಯ, ಮುಖ್ಯಮಂತ್ರಿ ಚಂದ್ರು, ಉಮಾಶ್ರೀ, ಉಮೇಶ್, ಮೈಸೂರು ಲೋಕೇಶ್, ಬೆಂಗಳೂರು ನಾಗೇಶ್ ಮತ್ತು ರೇಖಾದಾಸ್ ಹಾಗೂ ಇತರರು.

ಪ್ಲಸ್ ಅಂಶ :

1) ರಾಜ್–ಕೋಟಿ ಸಂಗೀತ ನಿರ್ದೇಶನದಲ್ಲಿ ಒಂದು ಹಾಡು.

ಮೈನಸ್ ಅಂಶಗಳು :

1) ಬೋರು ಹೊಡೆಸುವ ನಿರೂಪಣೆ.

2) ದ್ವಂದ್ವಾರ್ಥದ ಸಂಭಾಷಣೆ.

3) ಕಲಾವಿದರ ಬೇಕಾಬಿಟ್ಟಿ ಅಭಿನಯ.

ವಿಮರ್ಶೆ :

ಅನುಪಮ್ ಮೂವೀಸ್ ಅವರ '**ಎದುರು ಮನೇಲಿ ಗಂಡ, ಪಕ್ಕದ ಮನೇಲಿ ಹೆಂಡತಿ**' ಕನ್ನಡಿಗರ ಮುಂದಿರುವ ಲೇಟೆಸ್ಟ್ ರೀಮೇಕ್ ಚಿತ್ರ. ಈ ಚಿತ್ರದ ಹೆಸರು ಕೇಳಿದರೆ ಸಾಕು, ಯಾರಾದರೂ ಇದು ತೆಲುಗಿನಿಂದ ರೀಮೇಕ್ ಆಗಿರುವ ಚಿತ್ರ ಎಂದು ಯಾವುದೇ ಅನುಮಾನವಿಲ್ಲದೆ ಹೇಳಬಲ್ಲರು. ಈ ಚಿತ್ರದ ನಿರ್ದೇಶಕ ರೇಲಂಗಿ ನರಸಿಂಹರಾಯರು ತೆಲುಗಿನಲ್ಲಿ ಕಳೆದ ವರ್ಷವಷ್ಟೇ ನಿರ್ದೇಶಿಸಿದ '**ಎದುರಿಂಟಿ ಮಗುಡು, ಪಕ್ಕಿಂಟಿ ಪೆಳ್ಳಾಂ**' ಚಿತ್ರದ ಯಥಾವತ್ ನಕಲಾಗಿರುವ '**ಎದುರು ಮನೇಲಿ ಗಂಡ, ಪಕ್ಕದ ಮನೇಲಿ ಹೆಂಡ್ತಿ**' ಚಿತ್ರದಲ್ಲಿ ದುರ್ಬೀನು ಹಾಕಿ ಹುಡುಕಿದರೂ ನಮ್ಮ ನಾಡಿನ 'ನೇಟಿವಿಟಿ' ಸಿಗುವುದಿಲ್ಲ. ಜೊತೆಗೆ 'ನವರಸವಿಶಾರದ' ಎನ್ನುವ ಬಿರುದು ಸೇರಿಸಿಕೊಂಡಿರುವ ಕುಣಿಗಲ್ ನಾಗಭೂಷಣ್ ತಮ್ಮ ಭಯಂಕರ ಭಾಷಾ ಪಾಂಡಿತ್ಯವನ್ನು ಇಲ್ಲಿ ಹರಿಬಿಟ್ಟಿದ್ದಾರೆ. ಅವರ ಅಭಿಪ್ರಾಯದಲ್ಲಿ ಪ್ರಸ್ತಾಪನೆ ಎಂದರೆ ಚರ್ಚೆ ಅಂತೆ. (ಹಾಗೆ ಒಂದು ಡೈಲಾಗ್ ಇದೆ). ತೆಲುಗಿನಲ್ಲಿ ಏನು ಡೈಲಾಗ್ ಇದೆಯೋ ಅದನ್ನು ಕನ್ನಡದಲ್ಲಿ ತಮ್ಮ ಅರಿವಿಗೆ ತಕ್ಕಂತೆ ಭಟ್ಟಿ ಇಳಿಸುವ ಈ ಮಹಾನುಭಾವರು ಒಂದು ಕನ್ನಡ–ಕನ್ನಡ ನಿಘಂಟನ್ನು ಬದಿಗಿಟ್ಟುಕೊಂಡರೆ ಕ್ಷೇಮ. ಸಂಭಾಷಣೆಗಳೆಲ್ಲ ಬೈರಿಗೆಯ ರೂಪದಲ್ಲಿರುವ ಈ ಚಿತ್ರದಲ್ಲಿ ಮೊದಲಿನಿಂದ ಕಡೆಯುವರೆಗೂ ನಾಟಕೀಯ ನಿರೂಪಣೆ ಬೇರೆ. ಯಾವ ಕಲಾವಿದರಿಗೂ ಈ ಚಿತ್ರದಲ್ಲಿ ತಾವು ಕ್ಯಾಮರಾ ಮುಂದೆ ನಿಂತು ಅಭಿನಯಿಸುತ್ತಿದ್ದೇವೆ ಎನ್ನುವ ಕಲ್ಪನೆ ಇದ್ದಂತಿಲ್ಲ. ಎಲ್ಲರೂ ರಂಗಭೂಮಿಯ ಅನುಭವ ಪಡೆದು ಸ್ಟೇಜ್‌ನಲ್ಲಿ ಅಭಿನಯಿಸಿರುವವರ ರೀತಿಯಲ್ಲಿ ನಟಿಸುತ್ತಾರೆ. ಹೀಗಾಗಿ ಚಿತ್ರ ಪ್ರಾರಂಭವಾದ ಅರ್ಧ ಗಂಟೆಯೊಳಗಾಗಿ ಚಿತ್ರದ ಯೋಗ್ಯತೆ ಏನು ಎನ್ನುವುದು ಗೊತ್ತಾಗಿ ಬಿಡುತ್ತದೆ.

· ನಿರ್ದೇಶಕ ರೇಲಂಗಿ ನರಸಿಂಹರಾಯರ ಈ ಹಿಂದಿನ ಚಿತ್ರ '**ಇಬ್ಬರು ಹೆಂಡಿರ ಮುದ್ದಿನ ಪೊಲೀಸ್**' ಸಹನೀಯವಾಗಿಯಾದರೂ ಇತ್ತು.

ಆ ಚಿತ್ರದಲ್ಲಿ ಮುಖ್ಯ ಕಥೆಯ ಜೊತೆಗೆ ಸಬ್‌ಪ್ಲಾಟ್‌ನ ಕಥೆಯೂ ರಂಜನೀಯವಾಗಿದ್ದು ಉಮಾಶ್ರೀ, ಮೈಸೂರು ಲೋಕೇಶ್ ಹಾಗೂ ರೇಖಾದಾಸ್ 'ಸ್ಕೋರ್'ಮಾಡಿದ್ದರು. ಆದರೆ ಈ ಚಿತ್ರದಲ್ಲಿ ಉಮಾಶ್ರೀ ಹಾಗೂ ರೇಖಾದಾಸ್ ಅವರನ್ನು ಬಳಸಿಕೊಂಡಿರುವ ರೀತಿ ನೋಡಿದರೆ ನಿರ್ದೇಶಕರಿಗೆ ಹಾಸ್ಯದ ಬಗ್ಗೆ ವಿಕೃತ ಕಲ್ಪನೆ ಇದ್ದಗೆ ತೋರುತ್ತದೆ. ಈ ಎರಡು ಪಾತ್ರಗಳಿಂದ ಪ್ರೇಕ್ಷಕರಿಗೆ ಬೇರೆಯದೆ ಅರ್ಥ ಬರುವ ರೀತಿಯಲ್ಲಿ ಸಂಭಾಷಣೆಗಳನ್ನಾಡಿಸಿದ್ದಾರೆ. ಜೊತೆಗೆ ಬೇರೆಯ ರಾಜ್ಯದಿಂದ ಇಲ್ಲಿಂದ ವರ್ಗಾವಣೆಯಾಗಿ ಬರುವ ರೇಖಾದಾಸ್ ಬಾಯಲ್ಲಿ ಅಪಭ್ರಂಶ ಬೇರೆ. ಅಂದ ಹಾಗೆ ಒಬ್ಬ ಸರ್ಕಾರಿ ಹಿರಿಯ ಅಧಿಕಾರಿಯನ್ನು ಅಷ್ಟು ಬಾಲಿಶವಾಗಿ ಚಿತ್ರೀಕರಿಸುವ ಆಗತ್ಯವಿತ್ತೇ? ನಾಯಕನ ಜಿಪುಣತನವನ್ನು ಕಂಡು ಆತನ ಮನೆಯಲ್ಲಿದ್ದ ಕೆಲಸಗಾರ ಹುಚ್ಚನಾಗುವ ಒಂದು ಕಲ್ಪನೆ ಮಾತ್ರ ಪರವಾಗಿಲ್ಲ ಎನ್ನಬಹುದು.

ಚಿತ್ರದ ಮುಖ್ಯ ಪಾತ್ರದಲ್ಲಿ ನಟಿಸಿರುವ ಶಶಿಕುಮಾರ್, ಶೃತಿ, ಮುಖ್ಯಮಂತ್ರಿ ಚಂದ್ರು ಮುಂತಾದವರೆಲ್ಲ ತಾವಭಿನಯಿಸುತ್ತಿರುವ ಚಿತ್ರಗಳ ಸಂಖ್ಯೆಗೆ ಒಂದನ್ನು ಸೇರಿಸಿಕೊಂಡಿದ್ದಾರೆ ಎನ್ನಬೇಕು ಅಷ್ಟೆ. ಇದ್ದುದರಲ್ಲಿ ಬಾಲನಟ ಮಾಸ್ಟರ್ ಆದಿತ್ಯ ಚುರುಕಾದ ಅಭಿನಯ ನೀಡಿದ್ದಾನೆ. ರಾಜ್–ಕೋಟಿಯವರ ಸಂಗೀತ ನಿರ್ದೇಶನದಲ್ಲಿ ಒಂದೆರಡು ಹಾಡುಗಳು ಇಂಪಾಗಿವೆ. ಶರತ್ ಛಾಯಾಗ್ರಹಣದಲ್ಲಾಗಲಿ, ಮುರುಳಿ ರಾಮಯ್ಯ ಸಂಕಲನದಲ್ಲಾಗಲಿ ವಿಶೇಷತೆ ಇಲ್ಲ. ಒಟ್ಟಿನಲ್ಲಿ 'ಎದುರು ಮನೇಲಿ ಗಂಡ,



ಪಕ್ಕದ ಮನೇಲಿ ಹೆಂಡ್ತಿ' ಚಿತ್ರವನ್ನು ನೋಡಿದರೆ ಇಂತಹ ಚಿತ್ರಗಳೂ ಕನ್ನಡದಲ್ಲಿ ರೀಮೇಕ್ ಆಗಬೇಕೆ ಅನಿಸುತ್ತದೆ.

● ಆರ್. ಜೆ. ವಿಜಯಸಾರಥಿ


24/100

ಅತಿ ಸಾಧಾರಣ: 40ರ ಕೆಳಗೆ ಸಾಧಾರಣ: 41–50
ಉತ್ತಮ: 51–60 ಅತ್ಯುತ್ತಮ: 61ರ ಮೇಲೆ

ಸಿನಿ ಬಿಟ್ಸ್

ಅಂಬರೀಶ್ : ಪಾತ್ರ ಆಯ್ಕೆಯತ್ತ ಗಮನ ಹರಿಸಲಿ

ಈಚಿನ 'ಸಪ್ತಪದಿ' ಚಿತ್ರದ ಯಶಸ್ಸಿನಿಂದಾಗಿ ಉದ್ಯಮದ ವಲಯದವರಲ್ಲಿದ್ದ ಒಂದು ನಂಬಿಕೆ ಹುಸಿಯಾದಂತಾಗಿದೆ. ಅಂಬರೀಶ್ ಅವರನ್ನು ನಾಯಕರನ್ನಾಗಿ ಆರಿಸಿಕೊಂಡ ಚಿತ್ರಗಳಲ್ಲಿ ಸಾಹಸ ದೃಶ್ಯಗಳಿಲ್ಲದಿದ್ದರೆ ಅಂತಹ ಚಿತ್ರಗಳು ವಿಫಲವಾಗುತ್ತದೆ ಎನ್ನುವುದೇ ಆ ನಂಬಿಕೆ. ಕಳೆದ ವರ್ಷ 'ಹೃದಯ ಹಾಡಿತು' ಹಾಗೂ ಈ ವರ್ಷ 'ಸಪ್ತಪದಿ' ಚಿತ್ರಗಳಲ್ಲಿ ಅಂಬಿಯನ್ನು ಸಂಪೂರ್ಣವಾಗಿ 'ಡಿಗ್ಲಾಮರೈಸ್' ಮಾಡಿ ಸಾಧಾರಣ ಮನುಷ್ಯರಂತೆ ತೋರಿಸಲಾಗಿದೆ. ಎರಡೂ ಕಾದಂಬರಿ ಆಧಾರಿತ ಚಿತ್ರಗಳಾಗಿವೆ. 'ಸಪ್ತಪದಿ' ಚಿತ್ರದ ನಿರೂಪಣೆಯಲ್ಲಂತೂ ಯಾವುದೇ ರೀತಿಯ ಗಿಮಿಕ್ಸ್ ಇಲ್ಲದೆ ಕಥೆಯನ್ನು ನೇರವಾಗಿ ಹೇಳುವ ಪ್ರಯತ್ನಕ್ಕೆ ಒತ್ತು ಕೊಡಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಅಂಬಿ ನಾಯಕತ್ವದ ಇತರ ಆ್ಯಕ್ಷನ್ ಚಿತ್ರಗಳಾದ ಮೈಸೂರು ಜಾಣ, ಸೋಲಿಲ್ಲದ ಸರದಾರ ಮುಂತಾದವುಗಳು ಅದ್ದೂರಿ ತಾರಾಗಣವಿದ್ದರೂ ಭಾರೀ ಖರ್ಚು ವೆಚ್ಚದಿಂದ ತಯಾರಾಗಿದ್ದರೂ ಹಾಗೂ ಪ್ರೇಕ್ಷಕರಿಗೆ ತಲೆ ಚಿಟ್ಟು ಹಿಡಿಸುವ ಮಟ್ಟಿಗೆ ಸಾಹಸ ದೃಶ್ಯಗಳನ್ನು ಹೊಂದಿದ್ದರೂ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ಸು ಕಾಣದೇ ಹೋದವು.



ಈಗ ಅಂಬರೀಶ್ ಅವರು ಟಿ. ಕೆ. ರಾಮರಾವ್ ಕಾದಂಬರಿ ಆಧಾರಿತ 'ಮಣ್ಣಿನ ದೋಣಿ' ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಸಂದೇಶ್ ನಾಗರಾಜ್ ನಿರ್ಮಿಸುತ್ತಿರುವ ಈ ಚಿತ್ರದ ನಿರ್ದೇಶಕರು ಎಂ. ಎಸ್. ರಾಜಶೇಕರ್. 'ಪ್ರೇಮ ಸಂಗಮ' ಹಾಗೂ 'ಮೇಘಮಂದಾರ' ಈಗಾಗಲೇ ಬಿಡುಗಡೆಗೆ ಸಿದ್ಧವಾಗಿರುವ ಅಂಬಿ ಅಭಿನಯದ ಚಿತ್ರಗಳು. ಈ ಎರಡೂ ಚಿತ್ರಗಳಲ್ಲೂ ಮಾಲಾಶ್ರೀ ಅಂಬಿಗೆ ನಾಯಕಿಯಾಗಿದ್ದಾರೆ. ○ ಸ್ವರ್ಣ

ಕ್ರೀಡಾಂಗಣ

ವಿಮಲ್‌ಕುಮಾರ್, ಮಧುಮಿತಾ ಹಾಗೂ ದೀಪಾಂಕರ್ ಭಟ್ಟಾಚಾರ್ಯ ಅವರಿಗೆ ಒಲಿಂಪಿಕ್ಸ್ ಅರ್ಹತೆ

ಪ್ರಕಾಶ್ ಪಡುಕೋಣೆಯವರು ಶಟಲ್ ಬ್ಯಾಡ್ಮಿಂಟನ್ ರಂಗದಿಂದ ನಿವೃತ್ತಿ ತೆಗೆದುಕೊಂಡ ನಂತರ ಈವರೆಗೂ ಭಾರತದ ಶಟಲ್ ಬ್ಯಾಡ್ಮಿಂಟನ್ ರಂಗದಲ್ಲಿ ಉತ್ಸಾಹ ಮೂಡಿಸುವಂತಹ ಯಾವುದೇ ಬೆಳವಣಿಗೆ ಆಗಿಲ್ಲ. ಸೈಯದ್ ಮೋದಿಯವರು ಅಂತರ್‍ರಾಷ್ಟ್ರೀಯ ಶಟಲ್ ಬ್ಯಾಡ್ಮಿಂಟನ್ ರಂಗದಲ್ಲಿ ಒಳ್ಳೆಯ ಸಾಧನೆ ಮಾಡಿದರೂ ಅವರ ಅಕಾಲ ಹತ್ಯೆ ಒಳ್ಳೆಯ ಆಟಗಾರನೊಬ್ಬನನ್ನು ಕಳೆದುಕೊಂಡಂತಹ ಶೂನ್ಯ ವಾತಾವರಣ ಸೃಷ್ಟಿಸಿತು. ಭಾರತದ ರಾಷ್ಟ್ರೀಯ ಚಾಂಪಿಯನ್‌ಶಿಪ್ ಸ್ಪರ್ಧೆಗಳಲ್ಲೂ ತೀವ್ರ ಪೈಪೋಟಿ ತಲೆದೋರದೆ ಸಾಧಾರಣವಾದ ಪ್ರದರ್ಶನಗಳೇ ಕಂಡು ಬರುತ್ತಿದ್ದವು. ಆದರೆ ಈಚೆಗೆ ಬ್ಯಾಡ್ಮಿಂಟನ್ ಕ್ರೀಡಾ ಪ್ರೇಮಿಗಳಿಗೆ ತೀವ್ರ ಉತ್ಸಾಹ ಹುಟ್ಟಿಸುವ ರೀತಿಯಲ್ಲಿ ರಾಷ್ಟ್ರೀಯ ಚಾಂಪಿಯನ್‌ಗಳಾದ ವಿಮಲ್‌ಕುಮಾರ್, ಮಧುಮಿತಾ ಬಿಷ್ಟ್ ಹಾಗೂ ದೀಪಾಂಕರ್ ಭಟ್ಟಾಚಾರ್ಯ ಅವರು ಬಾರ್ಸಿಲೋನಾ ಒಲಿಂಪಿಕ್ಸ್‌ನಲ್ಲಿ ಭಾರತದ ಪರವಾಗಿ ಭಾಗವಹಿಸಲು ಅರ್ಹತೆ ಪಡೆದಿದ್ದಾರೆ. ಪುರುಷರ ವಿಭಾಗದಲ್ಲಿ ವಿಮಲ್ ಕುಮಾರ್ ಹಾಗೂ ದೀಪಾಂಕರ್ ಭಟ್ಟಾಚಾರ್ಯ ಅವರು ಕ್ರಮವಾಗಿ ವಿಶ್ವ ಮಟ್ಟದಲ್ಲಿ 41 ಹಾಗೂ 42ನೆಯ ಶ್ರೇಯಾಂಕ ಗಳಿಸಿದ್ದು ಅವರ ಆಯ್ಕೆಗೆ ಕಾರಣವಾಗಿದೆ. ಈಗಾಗಲೇ ಎಂಟು ಬಾರಿ ಮಹಿಳೆಯರ ರಾಷ್ಟ್ರೀಯ ಚಾಂಪಿಯನ್ ಆಗಿರುವ ಮಧುಮಿತಾ ಬಿಷ್ಟ್ ಅವರು ಅರ್ಹತೆ ಪಡೆದು ಬಹಳ ದಿನಗಳೇ ಆಗಿವೆ. ಪ್ರಕಾಶ್ ಪಡುಕೋಣೆಯವರ ಅಭಿಪ್ರಾಯದಲ್ಲಿ ಭಾರತದ ಅತ್ಯಂತ ಪ್ರತಿಭಾನ್ವಿತ ಕ್ರೀಡಾಪಟುವಾಗಿರುವ ದೀಪಾಂಕರ ಭಟ್ಟಾಚಾರ್ಯ ಅವರೂ ರಾಷ್ಟ್ರೀಯ ಚಾಂಪಿಯನ್‌ಶಿಪ್ ಪಡೆಯುವುದಕ್ಕೆ ಮುಂಚೆಯೇ ಒಲಿಪಿಂಕ್ಸ್‌ನಲ್ಲಿ ಆಡುವ ಅರ್ಹತೆ ಪಡೆದು ಇತಿಹಾಸ ಸೃಷ್ಟಿಸಿದ್ದಾರೆ. ○ ಕ್ರೀಡಾಪ್ರಿಯ



ನಿಮ್ಮ ಭವಿಷ್ಯ

ಸ್ವಾಮಿ ನಿತ್ಯಾನಂದ

(ಭಾನುವಾರ 14–6–92ರಿಂದ ಶನಿವಾರ 20–6–92ರವರೆಗೆ)

ರಾಶಿ	ಹೆಸರಿನ ಪ್ರಥಮ ಅಕ್ಷರ
ಮೇಷ	ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ
ವೃಷಭ	ಇ, ಉ, ಎ, ಒ, ವ, ವಿ, ವು, ವೆ, ವೊ
ಮಿಥುನ	ಕ, ಕಿ, ಕು, ಘ, ಙ, ಚ, ಕೆ, ಕೊ, ಹ
ಕಟಕ	ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ
ಸಿಂಹ	ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ
ಕನ್ಯಾ	ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ
ತುಲಾ	ರ, ರಿ, ರು, ರೆ, ರೊ, ತ, ತಿ, ತು, ತೆ
ವೃಶ್ಚಿಕ	ತೊ, ನ, ನಿ, ನು, ನೆ, ನೊ, ಯ, ಯಿ, ಯು
ಧನುಸ್ಸು	ಯೆ, ಯೊ, ಬ, ಬಿ, ಬು, ಧಿ, ಭ, ಢ, ಬೆ
ಮಕರ	ಬೊ, ಜ, ಜಿ, ಶಿ, ಶು, ಶೆ, ಶೊ, ಗ, ಗಿ
ಕುಂಭ	ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ
ಮೀನ	ದಿ, ದು, ಖ, ಝು, ಥ, ದೆ, ದೊ, ಚ, ಚಿ

ಮೇಷ

ಕುಟುಂಬ ಜೀವನದಲ್ಲಿ ಸಾಧಾರಣವಾದ ಪರಿಸ್ಥಿತಿ ಇರುತ್ತದೆ. ಉದ್ಯೋಗದಲ್ಲಿ ಹೆಚ್ಚಿನ ಅಕ್ಕರೆ ಮೂಡುತ್ತದೆ. ತಪ್ಪನ್ನು ತಿದ್ದಿಕೊಂಡು ಮುನ್ನಡೆಯಬೇಕು, ವ್ಯಾಪಾರ ಮಂದವಾಗಿರುತ್ತದೆ. ಉದ್ಯಮದಲ್ಲಿ ಎದುರು ನೋಡಿರದ ತೊಂದರೆಗೆ ಸಿಕ್ಕಿಹಾಕಿಕೊಳ್ಳುವಿರಿ. ಹೆಣ್ಣುಗಳಿಗೆ ಅದೃಷ್ಟವಿದೆ. ದಾಂಪತ್ಯ ಜೀವನದಲ್ಲಿ ಅನಿರೀಕ್ಷಿತವಾದುದೇನೂ ಇಲ್ಲವೇ ಇಲ್ಲ.

ವೃಷಭ

ಕುಟುಂಬ ಜೀವನದಲ್ಲಿ ಭಾರೀ ಸಿಹಿ ಉಣ್ಣುವಿರಿ. ಉದ್ಯೋಗದಲ್ಲಿ ಎಲ್ಲರ ಸಹಕಾರ ಸಿಗುತ್ತದೆ. ವ್ಯಾಪಾರದಲ್ಲಿ ಒಳ್ಳೆಯ ಲಾಭವಿದೆ ಯಾದರೂ ನಡುನಡುವೆ ಅಡೆತಡೆಗಳು ಹೆಚ್ಚು. ಗಂಡ ಹೆಂಡಿರ ನಡುವೆ ಸಣ್ಣ ಮನಸ್ತಾಪ ತೋರಿ ಬರುತ್ತದಾದರೂ, ಮನೆಗೆ ಬೇಕಾದ ಅನುಕೂಲ ಗಳೆಲ್ಲವೂ ಕೂಡಿ ಬಂದು ಎಲ್ಲ ಸರಿ ಹೋಗುತ್ತದೆ. ಹಣಕಾಸು ಭದ್ರ.

ಮಿಥುನ

ಉದ್ಯೋಗ ರಂಗದಲ್ಲಿ ವರ್ಗಾವಣೆ, ಬಡ್ತಿಗೆ ಮುಕ್ತ ಅವಕಾಶವುಂಟು. ವ್ಯಾಪಾರದಲ್ಲಿ ಮುನ್ನಡೆ ಕಾಣುವಿರಿ. ಉದ್ಯಮದಲ್ಲಿ ಶ್ರಮವಿದ್ದರೂ ಹೆಚ್ಚಿನ ವರಮಾನ ದಕ್ಕುತ್ತದೆ. ವಸ್ತು, ವಾಹನ, ಮನೆ ಕೊಳ್ಳಲವಕಾಶವಿದೆ. ಸ್ತ್ರೀಯರಿಗೆ ಈ ವಾರ ಎಲ್ಲವೂ ಸರಾಸರಿ ಲಭ್ಯ. ಹಣಕಾಸು ಎಂದಿನಂತಿರುತ್ತದೆ. ಸಂಸಾರದಲ್ಲಿ ಶ್ರಮ ಹೆಚ್ಚಿದರೂ ತಿಳಿವಳಿಕೆ ಮೂಡುತ್ತದೆ.

ಕಟಕ

ಉದ್ಯೋಗದಲ್ಲಿದ್ದ ಅಡೆತಡೆಗಳೆಲ್ಲ ತೊಲಗಿ ಎಲ್ಲ ಒಳ್ಳೆಯದಾಗುತ್ತದೆ. ವ್ಯಾಪಾರೋದ್ಯಮದಲ್ಲಿ ಹಲವು ಪಯ್ಪೋಟಿಗಳನ್ನು ಕೆಳನೂಕಿ ಎದ್ದು ನಿಲ್ಲುವಿರಿ. ಹೆಣ್ಣುಗಳು ಎಲ್ಲ ರಂಗದಲ್ಲೂ ತಮ್ಮ ಛಾಪು ಒತ್ತುವರು. ಕುಟುಂಬದಲ್ಲಿ ಯಾವುದೇ ರೀತಿಯ ಕಷ್ಟ ಎದುರಾದರೂ ಸಹಕಾರದಿಂದ ತೊಲಗುತ್ತದೆ. ಎಲ್ಲರಿಗೂ ಒಳ್ಳೆಯದು ಮಾಡಲು ತೋರುತ್ತದೆ.

ಸಿಂಹ

ಉದ್ಯೋಗದಲ್ಲಿ ಸ್ವಲ್ಪ ಆಕಳಿಕೆ ಕಂಡು ಬರುತ್ತದೆ. ವ್ಯಾಪಾರೋದ್ಯಮ ರಂಗದಲ್ಲಿ ಹೊಸ ಪ್ರಯೋಗಗಳನ್ನು ಕಯ್ಗೊಂಡು ಯಶಸ್ಸಿನ ಏಣಿ ಏರುವಿರಿ. ಮಹಿಳೆ ಎಲ್ಲ ಸಿಹಿ ಕನಸುಗಳನ್ನೂ

ಕಂಡು ದಕ್ಕಿಸಿಕೊಳ್ಳುವಳು. ಹಣಕಾಸಿನ ಬಲ ಸ್ವಲ್ಪ ತಗ್ಗಿದಂತೆ ಕಂಡುಬರುತ್ತದೆ. ಹೊರ ವ್ಯವಹಾರದಲ್ಲಿ ಹೊಸ ವಿರೋಧ ಪಡೆಯುವಿರಿ. ಪ್ರಯತ್ನ ಹೆಚ್ಚು ಬೇಕು.

ಕನ್ಯಾ

ಹಣಕಾಸಿನ ಮುಗ್ಗಟ್ಟು ಉಂಟಾಗಬಹುದು. ಮನೆಯಲ್ಲಿ ಒಬ್ಬರ ಆರೋಗ್ಯ ಕೆಟ್ಟು ಖರ್ಚು ವೆಚ್ಚ ಹೆಚ್ಚಬಹುದು. ಉದ್ಯಮವು ಚೆನ್ನಾಗಿ ಕೂಡಿ ಬಂದು ಒಳ್ಳೆಯ ಆದಾಯ ತರುತ್ತದೆ. ವ್ಯಾಪಾರವು ಮಾಮೂಲಾಗಿರುತ್ತದೆ. ಉದ್ಯೋಗದಲ್ಲಿ ಕೆಲಸದ ಭಾರ ತಗ್ಗಿ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಸಂಸಾರ ಜೀವನವು ಹಿಂದಿಗಿಂತ ಸೊಗಸಾಗಿರುತ್ತದೆ.

ತುಲಾ

ಗುಡಿ ಕಯ್ಗಾರಿಕೆ, ಪ್ರಚಾರ ಉದ್ಯಮದಂತವುಗಳಲ್ಲಿ ಒಳ್ಳೆಯ ಆದಾಯ ಸಿಗುತ್ತದೆ. ಉದ್ಯೋಗದಲ್ಲಿ ಉನ್ನತಿ ಕಾಣಲವಕಾಶ ಮುಕ್ತವಾಗಿದೆ. ಕೊಡುಕೊಳ್ಳುವುದು ಸರಳವಾಗಿರುತ್ತದೆ. ಹೊರಗೆ ನಿಮ್ಮ ಘನತೆ, ಗವುರವ ಹೆಚ್ಚುತ್ತದೆ. ಸ್ನೇಹಿತರ ವಲಯದಲ್ಲಿ ಸನ್ಮಾನಿಸಲ್ಪಡುವರು. ಕಲಾರಂಗದಲ್ಲಿರುವವರಿಗೆ ಹೊಸ ಒಪ್ಪಂದದಿಂದ ಲಾಭವಿದೆ.

ವೃಶ್ಚಿಕ

ವ್ಯಾಪಾರೋದ್ಯಮ ರಂಗದಲ್ಲಿ ಇದ್ದ ಸಮಸ್ಯೆಗಳು ತೊಲಗಿ ಒಳಿತಾಗುತ್ತದೆ. ಉದ್ಯೋಗದಲ್ಲಿ ಬಡ್ತಿ, ಸಂಬಳ ಹೆಚ್ಚಳ ಸಿಗುತ್ತದೆ. ದೊಡ್ಡ ಮನುಷ್ಯರ ಮೇಲಧಿಕಾರಿಗಳ ಸಹಾಯ, ಸಹಕಾರ ಸಿಗುತ್ತದೆ. ಕುಟುಂಬದಲ್ಲಿ ನೆಮ್ಮದಿ ಸಿಗುತ್ತದೆ. ಕಲಾವಿದರು ವಾರಾಂತ್ಯದಲ್ಲಿ ಮುನ್ನಡೆ ಕಾಣುತ್ತಾರೆ. ದಾಂಪತ್ಯದಲ್ಲಿನ ಮನಸ್ತಾಪ ಹಗಲಿಗೆ ಮಾತ್ರ ಸೀಮಿತವಾಗಿರುತ್ತದೆ.

ಧನುಸ್ಸು

ಹಣಕಾಸಿನ ಪರಿಸ್ಥಿತಿ ಚೆನ್ನಾಗಿರುತ್ತದೆ. ಉದ್ಯಮದಲ್ಲಿ ಮೇಲ್ಮೈ ಕಾಣುವಿರಿ. ವ್ಯಾಪಾರದಲ್ಲಿ ಮುನ್ನಡೆಯಿದ್ದರೂ ಒಂದು ನಿರ್ಬಂಧ ಸ್ಥಿತಿ ಕಾಣಬರುತ್ತದೆ. ಸಾಲದ ತೊಂದರೆಯೇನೂ ಇರಲಾರದು. ಕೆಲವರು ಹೊಸ ಉದ್ಯಮದಲ್ಲಿ ವಿಜಯ ಸಾಧಿಸುವರು. ಹೊರವ್ಯವಹಾರದಲ್ಲಿ ಒಳ್ಳೆಯ ಸಂಬಂಧವಿರುತ್ತದೆ. ಕುಟುಂಬ ಜೀವನದಲ್ಲಿ ಸಾಮಾನ್ಯ ಪಲವೇ ಸಿಗುತ್ತದೆ.

ಮಕರ

ಉದ್ಯೋಗದಲ್ಲಿ ಗವುರವ ಹೆಚ್ಚುತ್ತದೆ. ವರಮಾನ ಸಾಕಷ್ಟಿರುತ್ತದೆ. ಮಾನಸಿಕ ನೆಮ್ಮದಿ ಗಟ್ಟಿಗೊಳ್ಳುತ್ತದೆ. ಉದ್ಯಮದಲ್ಲಿ ಧನಪ್ರಾಪ್ತಿ ಹೆಚ್ಚುತ್ತದೆ. ವ್ಯಾಪಾರ ಚುರುಕಾಗಿ ನಡೆಯುತ್ತದೆ. ವ್ಯವಹಾರ ವ್ಯಾಜ್ಯ ನಿಮ್ಮಂತಾಗುತ್ತದೆ. ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಜಯಗಳಿಸುವರು. ಕುಟುಂಬ ಜೀವನ ಸರಳವಾಗಿರುತ್ತದೆ; ಅನಿರೀಕ್ಷಿತ ಸಹಾಯ ಸಿಗಲಿದೆ.

ಕುಂಭ

ವ್ಯಾಪಾರೋದ್ಯಮವು ಚೆನ್ನಾಗಿ ನಡೆದು ಒಳ್ಳೆಯ ಆದಾಯವನ್ನು ತಂದುಕೊಡುತ್ತದೆ. ಬಹುದಿನಗಳಿಂದ ಎದುರು ನೋಡಿರದ ಒಳ್ಳೆಯ ಪಲಗಳು ಉದ್ಯೋಗದಲ್ಲಿ ಈಗ ನಿಮ್ಮ ಕಯ್ಸೇರಲಿವೆ. ಕೊಡುಕೊಳ್ಳುವುದರಲ್ಲಿ ಹೊಸ ಪ್ರಯತ್ನ ಮಾಡಿನೋಡಿ. ಹಣಕಾಸಿನ ಪರಿಸ್ಥಿತಿ ಉತ್ತಮ. ಕುಟುಂಬ ಜೀವನದಲ್ಲಿ ವಿಶೇಷವೇನೂ ಇಲ್ಲ.

ಮೀನ

ಉದ್ಯೋಗದಲ್ಲಿ ಉನ್ನತಿ ನಿಮ್ಮದಾಗುತ್ತದೆ. ವ್ಯಾಪಾರವು ಒಳ್ಳೆಯ ಗತಿಯಲ್ಲಿ ನಡೆಯುತ್ತದೆ. ಉದ್ಯಮದಲ್ಲಿ ಕಾಡುತ್ತಿದ್ದ ಸಮಸ್ಯೆಗಳು ಮರೆಯಾಗುತ್ತವೆ. ಗಂಡ ಹೆಂಡಿರ ಸಂಬಂಧದಲ್ಲಿ ಹೊಸ ರಾಗ ಕಾಣಬಹುದು. ಹೊರ ಸ್ನೇಹವರ್ತುಲದಿಂದ ಲಾಭವಾಗಲಿದೆ. ಕಲಾವಿದರಿಗೆ ದುಡಿಮೆಯೇ ಹೆಚ್ಚೆನಿಸುತ್ತದೆ. ಹಣಕಾಸಿನ ಚೀಲ ಉಬ್ಬುತ್ತದೆ.

ನಿಮ್ಮ ಪತ್ರಗಳು

ಉ.ಕ.ರಾ. ಮಂಜುಲಕ್ಷ್ಮಿಪುರಂ, ಬೆಂಗಳೂರು–19

31–5–92ರ 'ರಾಗ ಸಂಗಮ'ದಲ್ಲಿ ಮೂಡಿಬಂದ '**ಓ ಗೆಳತಿ**' ಕವನ ಅಮೃತ ಧಾರೆಯಂತಿತ್ತು. ಮಿನಿಕಥೆ '**ಉದರ ನಿಮಿತ್ತಂ**'(ಡಬ್ಲ್ಯೂ ಶ್. ಕೆ. ವೆಂಕಟೇಶ್ ಮೂರ್ತಿ) ಹಿಂದೆ ಎಲ್ಲೋ ಪ್ರಕಟವಾಗಿದೆ. '**ಸರಿದ ಕಾರ್ಮುಗಿಲು**' ಕಾದಂಬರಿ ಬಹಳ ಚೆನ್ನಾಗಿತ್ತು.

ಜಿ. ಪಿ. ದಿಲೀಪರಾಜ್, ಶಿವಮೊಗ್ಗ

ತ್ರಿವೇಣಿಯವರ ಮುಖಪುಟದೊಂದಿಗೆ ಹೊರಬಂದ '**ರಾಗಸಂಗಮ**' ಆಕರ್ಷಕವಾಗಿತ್ತು. ಹಾಗೆಯೇ ಕೆ. ವಿ. ರಾಜೇಶ್ವರಿರವರ ಸಂಪೂರ್ಣ ಕಾದಂಬರಿ '**ಸರಿದ ಕಾರ್ಮುಗಿಲು**' ಚೆನ್ನಾಗಿತ್ತು.

ಬಾಬು ಬೆಟ್ಟದೂರು, ಬೆಟ್ಟದೂರು

ಈ ವಾರದ (31–5–92) ಸಂಚಿಕೆಯ ಮುಖಪುಟದಲ್ಲಿ ತ್ರಿವೇಣಿಯವರ ಫೋಟೋ ತುಂಬ ಚೆನ್ನಾಗಿ ಮೂಡಿಬಂದಿದೆ. ಅಲ್ಲದೆ ಕೊಂಡು ಓದದವರಿಗೆ, ಮುಖಪುಟದಿಂದ ಕೊಂಡುಕೊಳ್ಳುವಷ್ಟು ಅತ್ಯಾಕರ್ಷಕವಾಗಿತ್ತು. '**ಸಪ್ತಪದಿ**'ಯ ಚಿತ್ರ ವಿಮರ್ಶೆ ಮನದಟ್ಟಾಯಿತು. ಧನು ರ್ವಿದ್ಯಾಪಟು ಲಿಂಬಾರಾಮ್ ಬಗ್ಗೆ ತಿಳಿಸಿದ್ದಕ್ಕೆ ತುಂಬ ಧನ್ಯವಾದಗಳು. ಕಾದಂಬರಿ '**ಸರಿದ ಕಾರ್ಮುಗಿಲು**' (ಕೆ. ವಿ. ರಾಜೇಶ್ವರಿ) ಕಾದಂಬರಿಯಲ್ಲಿ ನೀರಿನ ಸಮಸ್ಯೆ ಕಾವೇರಿ ಸಮಸ್ಯೆಯಂತೆ ಆಗಿ ಮತ್ತೆ ಅದಕ್ಕೆ ಪಶ್ಚಾತ್ತಾಪ ಪಟ್ಟು ನೀರು ಬಿಡುವುದು ಅಲ್ಲದೆ ಸ್ನೇಹ ಬೆಳೆಸಿಕೊಂಡು ಹೋದ ಬಗ್ಗೆ ತುಂಬ ಚೆನ್ನಾಗಿತ್ತು. ಮಿನಿಕಥೆ '**ಉದರ ನಿಮಿತ್ತಂ**' ಈಗಿನ ಕಾಲದಲ್ಲಿ ಇಂಥ ಘಟನೆ ಒಂದಲ್ಲ ಒಂದು ನಡೆದೇ ಇರುತ್ತೆ.

ಬಿ. ಶಫಿವುಲ್ಲಾ ಖಾನ್, ಬಿ. ಸನಾವುಲ್ಲಾ ಖಾನ್, ಗೌರಿಬಿದನೂರು

ಕೆ. ವಿ. ರಾಜೇಶ್ವರಿ ಅವರ ಸಂಪೂರ್ಣ ಕಾದಂಬರಿ '**ಸರಿದ ಕಾರ್ಮುಗಿಲು**' ಬಹಳ ಚೆನ್ನಾಗಿತ್ತು. ಸಣ್ಣಕಥೆ '**ಬೇಲಿ**' ಚೆನ್ನಾಗಿತ್ತು. ಹಾಗೂ ಧಾರಾವಾಹಿ '**ಸ್ವಚ್ಛಂದ ಸ್ವಪ್ನಗಳು**' ಚೆನ್ನಾಗಿ ಮೂಡಿ ಬರುತ್ತಿದೆ.

ಬಿ. ಎ. ಮೋಹನ್ ಸಂತೋಷ್ ಲತೀಷ್, ಸೋಮವಾರಪೇಟೆ

ಸಣ್ಣಕಥೆ '**ಬೇಲಿ**' ಹಾಗೂ ಮಿನಿಕಥೆ 'ಉದರ ನಿಮಿತ್ತಂ' ಚೆನ್ನಾಗಿತ್ತು. '**ಸಪ್ತಪದಿ**' ಸಿನಿಮಾ ವಿಮರ್ಶೆ ಚಿತ್ರ ನೋಡಿದ ನಮಗ ಸಮಂಜಸ ಎನಿಸಿತು.


ಎನ್. ವೆಂಕಟೇಶಯ್ಯ, ಕೋಟಿಗುಡ್ಡಿ

31–5–92ರ 'ರಾ **ಸಂಗಮ**' ಮುಖಪುಟ ಚೆನ್ನಾಗಿದ ಮಿನಿಕಥೆ '**ಉದರ ನಿಮಿತ್ತಂ**' ಚೆನ್ನಾಗಿತ್ತು. ಕವನ '**ಓ ಗೆಳತಿ**' ಮತ್ತು ಮಕ್ಕಳ ಕಥೆ '**ಒಳ್ಳೆಯ ಮಾತು**', '**ಸಿನಿಬಿಟ್ಸ್**' '**ಕ್ರೀಡಾಂಗಣ**' ಚೆನ್ನಾಗಿ ಮೂಡಿ ಬಂದಿದೆ. '**ಹಾಸ್ಯ ಸಂಗಮ**' ಸೂಪರ್ಬ್.


ಮಾ. ಮಾಜಿ ಅರುಣ್ ಕಿರಣ್, ಅತ್ತಿಬೆಲೆ

31–5–92ರ ತ್ರಿವೇ ಯವರ ಚಿತ್ರ ಮೆಲಕು ಹಾಕ ವಂತಿದ್ದು, ಕೆ. ವಿ. ರಾಜೇಶ್ವ ಯವರ ಸಂಪೂರ್ಣ ಕಾದಂಬ '**ಸರಿದ ಕಾರ್ಮುಗಿಲು**' ಹೆಣ್ಣು ಹೆಣ್ಣಿಂದೇಕೆ ಬೀಳುಗಳೆವರ ಎಂಬ ವಾಕ್ಯಕ್ಕೆ ತದ್ರೂಪವಾಗಿ ಮೂಡಿಬಂದಿದೆ. ಇಂತಹ ಕಾದಂಬರಿ ಈಗಿನ ಸಮಾಜಕ ಅವಶ್ಯಕ.

ಸಂಪಾದಕಿ ಮತ್ತು ಪ್ರಕಾಶಕಿ : ಕಮಲಾ ಸುಂದರ್ ರಾಜನ್, ಸಂಗಮ ಪ್ರಕಾಶನ, ಅಂಚೆ ಪೆಟ್ಟಿಗೆ 6646, 41, ಕೋಟೆ 'ಬಿ' ಬೀದಿ, ಬೆಂಗಳೂರು–2; ದೂರವಾಣಿ : 625004; ಮುದ್ರಕರು : ವಿ. ರಾಮಯ್ಯ, ಶ್ರೀ ಸತ್ಯನಾರಾಯಣ ಪ್ರೆಸ್, 31, ಜೆ.ಬಿ.ಲೇನ್, ಕಾಟನ್‌ಪೇಟೆ, ಬೆಂಗಳೂರು–53



"ಕುಡಿತ ನಿಲ್ಲಿಸಿ ಅಂತ ನೀನು ಹೇಳ್ತಿ; ಅಗ್ಗದ ಸಾರಾಯಿ ತಯಾರಿಸಿ, ಹೆಚ್ಚೆಚ್ಚು ಕುಡೀರಿ ಅಂತ ಸರ್ಕಾರ ಹೇಳ್ತದೆ. ಹಹ್ಹಹ್ಹಾ."



"ಹೆದರಬೇಡಿ, ಬಾಂಬಲ್ಲ. ನಮ್ಮ ಹೋಟೇಲಿನ ಸ್ಪೆಶಲ್ ಇದು... ಬೋಂಡಾ."

ಹಾಸ್ಯ ಸಂಗಮ

ನೀರ್ನಳ್ಳಿಗಣಪತಿ.



"ಕಾವೇರಿ, ಕಾವೇರಿ. ಛೇ, ಮಗಳನ್ನು ಬೇರೆ ಹೆಸರಿನಿಂದ ಕೂಗು ಮಾರಾಯ್ತಿ."



"ಶಾಲೆಗೆ ಬರದಿದ್ರೆ ಪಾಲಕರ್ನ ಕರ್ಕೊಂಬಾಂತ ಹೇಳಿದ್ರಂತಲ್ಲ, ನನ್ಮಗ ಹದಿನೈದು ದಿನ ಶಾಲೆಗೆ ಬರಲಿಲ್ಲ. ಬದಲಿಗೆ ನಾನೇ ಬಂದು ಕೂರ್ತೀನಿ ಮಾಸ್ತ್ರೇ."

ಎಲ್ಲೆಡೆ ಮಾರಾಟವಾಗುತ್ತಿದೆ

ಜೂನ್ 21, 1992ರ ಸಂಚಿಕೆ

ಚುಟುಕ

ಸಮಗ್ರ ಸುದ್ದಿ ಸಾರಭರಿತ ಸಾಪ್ತಾಹಿಕ

- ಪೊಲೀಸ್ ಕಾವಲಿನಲ್ಲಿ ಪತ್ರಿಕೆ ಮಾರಾಟ
- ಯೂರೋಪಿನ ಬೈಪ್ಪ
- ಪ್ರಾಣಿಗಳ ವಿಚಿತ್ರ ತಂತ್ರಗಳು
- ದಿನ ತುಂಬದ ಹುಗೆ
- ಬಾಯಿ ಹೊಲಿದುಕೊಂಡ ಭೂಪ
- ಬೂದಿ ಬೆಟ್ಟದ ಸಮಸ್ಯೆ
- ಜಗತ್ತಿನ ಅತಿ ಗಿಡ್ಡ ತಾಯಿ
- ಬಾನಿನಲ್ಲಿ ಒಂದು ಮನೆ
- ಮರಕ್ಕಾಗಿ ತಲೆಕೊಟ್ಟ ಮಹಿಳೆ
- ಬರಲಿದೆ ಭೀಕರ ಬರ
- ಇಂಚುದ್ದದ ನಾಯಿಗಳು

ಇವುಗಳ ಬಗ್ಗೆ ಹೆಚ್ಚಿನ

ವಿವರಗಳು ಈ ಸಂಚಿಕೆಯಲ್ಲಿದೆ

ಬೆಲೆ ರೂ. 4–00 ಮಾತ್ರ

ಇದು 'ರಾಗಸಂಗಮ'ದ ಸೋದರ ಪತ್ರಿಕೆ